₹ 6 @vishwavaninews epaper.vishwavani.news vishwavani.news ಬೆಂಗಳೂರು | **ಹುಬ್ಬಳ್ಳಿ** | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಗುರುವಾರ 07.05.2026** **ಸಂಪುಟ:** 68 **ಸಂಚಿಕೆ:** 293 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಕ್ಲಾಸೆನ್ ಕ್ಲಾಸಿಕ್ ಬ್ಯಾಟಿಂಗ್ ಹೈದರಾಬಾದ್ ಉತ್ತಮ ಮೊತ್ತ

ಹೈದರಾಬಾದ್‌ನಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಹೆನ್ರಿಕ್ ಕ್ಲಾಸೆನ್ (69 ರನ್, 43 ಬಾಲ್) ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಸನ್ ರೈಸರ್ಸ್ ಹೈದರಾಬಾದ್ ತಂಡವು ಪಂಜಾಬ್ ವಿರುದ್ಧ 4 ವಿಕೆಟ್‌ಗೆ 235 ರನ್ ಗಳಿಸಿತು.

ಸೊಂಪಾದ ಪುಟಗಳು

ಪತ್ನಿಯ ಗೌರವಕ್ಕಾಗಿ ಹೊಡೆತ ತಿಂದ ನೊಬೆಲ್ ಪುರಸ್ಕೃತ ಸಾಹಿತಿ!

ನೂರೆಂಟು ವಿಶ್ವ — ವಿಶ್ವೇಶ್ವರ ಭಟ್ 6



ಹೊರಗೆ ಬಿಸಿಗಾಳಿ, ಒಳಗೆ ಹಿಮಕೆನೆಯ ತಂಗಾಳಿ

ಕಾಡುದಾರಿ — ಹರೀಶ್ ಕೇರ 7

ದಾರಿದೀಪೋಕ್ತಿ

ನೀವು ಯಾರನ್ನಾದರೂ ಕ್ಷಮಿಸಿದ್ದೀರಿ ಅಂದರೆ ಅವರು ಸರಿ ಅಥವಾ ತಪ್ಪು ಮಾಡಿಲ್ಲ ಎಂದರ್ಥವಲ್ಲ. ನೀವು ಆ ವ್ಯಕ್ತಿ ನಿಮ್ಮ ನೆಮ್ಮದಿಗೆಡಿಸಿದ ವಿಷಯದಿಂದ ಮುಕ್ತರಾಗಿದ್ದೀರಿ ಎಂದರ್ಥ.

ವಕ್ರತುಂಡೋಕ್ತಿ

ಮದುವೆ ಅನ್ನೋದು ಶಾಲೆಯಿದ್ದಂತೆ. ಅಲ್ಲಿ ನಮಗೆ ಗೊತ್ತಿಲ್ಲದ ವಿಷಯಗಳ ಬಗ್ಗೆ ಹೆಂಡತಿ ಪ್ರತಿದಿನ ಪಾಠ ಮಾಡುತ್ತಾಳೆ!

ಇಂದು ಜೋಸೆಫ್ ವಿಜಯ್ ಪ್ರಮಾಣ ಸ್ವೀಕಾರ ಅನುಮಾನ
ಬೆಂಬಲಿಗ ಶಾಸಕರ ಪಟ್ಟಿ ನೀಡಲು ರಾಜ್ಯಪಾಲರ ತಾಕೀತು
ಡಿಎಂಕೆ-ಎಡಿಎಂಕೆ ನಡುವೆಯೂ ಸರಕಾರ ರಚನೆ ಮಾತುಕತೆ

ತ.ನಾ ಶುರುವಲ್ಲೇ ತಿರುವು

ಚೆನ್ನೈ: ತಮಿಳುನಾಡಿನಲ್ಲಿ ನೂತನ ಸರಕಾರ ರಚನೆಗೆ ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಭರದಿಂದ ಸಿದ್ಧತೆ ನಡೆಸಿದೆ. ರಾಜ್ಯ

ಪಾಲ ರಾಜೇಂದ್ರ ಅರ್ಲೇಕರ್‌ರನ್ನು ಭೇಟಿ ಮಾಡಿ ಸರಕಾರ ರಚನೆಗೆ ವಿಜಯ್ ಹಕ್ಕು ಮಂಡಿಸಿದ್ದಾರೆ. ಆದರೆ ರಾಜ್ಯ ಪಾಲರು ಟಿವಿಕೆ ಬಳಿ, 118 ಶಾಸಕರ ಪಟ್ಟಿಯನ್ನಿಟ್ಟುಕೊಂಡು ಮರಳಿ ಬನ್ನಿ ಎಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಇದರ ಮಧ್ಯೆ ಅಸಾಧಾರಣ ರಾಜಕೀಯ ಬೆಳವಣಿಗೆಯೊಂದು ತಮಿಳುನಾಡಿನಲ್ಲಿ ನಡೆಯುತ್ತಿದೆ. 73 ಸ್ಥಾನ ಹೊಂದಿರುವ ಡಿಎಂಕೆ ಮೈತ್ರಿಕೂಟ, 52 ಸ್ಥಾನ ಹೊಂದಿರುವ ಎಡಿಎಂಕೆ ಮೈತ್ರಿಕೂಟದ ನಡುವೆಯೇ ಸರಕಾರ ರಚನೆಗೆ ಮಾತುಕತೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಗುರುವಾರ ಚೆನ್ನೈನ ನೆಹರೂ ಮೈದಾನದಲ್ಲಿ ಬೆಳಗ್ಗೆ ವಿಜಯ್ ಪ್ರಮಾಣವಚನ ತೆಗೆದುಕೊಳ್ಳಲಿದ್ದಾರೆಂದು ವರದಿಗಳಾಗಿದ್ದವು. ಆದರೆ ರಾಜ್ಯಪಾಲರ ಭೇಟಿ ಬೆನ್ನಲ್ಲೇ ವಿಜಯ್ ವಿಜಯಯಾತ್ರೆಗೆ ಆರಂಭಿಕ ವಿಘ್ನ ಎದುರಾಗಿದೆ. ಪ್ರಸ್ತುತ ವಿಜಯ್ ಪಕ್ಷಕ್ಕೆ 108 ಸ್ಥಾನಗಳಿವೆ. ಇದರಲ್ಲಿ ಎರಡು ಸ್ಥಾನಗಳನ್ನು ವಿಜಯ್ ಗೆದ್ದಿದ್ದಾರೆ. ಇನ್ನೂ ಹತ್ತು ಸ್ಥಾನಗಳು ಬಹುಮತಕ್ಕೆ ಅಗತ್ಯವಿದೆ. ಕಾಂಗ್ರೆಸ್ ಬೆಂಬಲ ಘೋಷಣೆ ಮಾಡಿರುವುದರಿಂದ ಒಟ್ಟು ಶಾಸಕರ ಸಂಖ್ಯೆ 113ಕ್ಕೆ ಹೋಗಿದೆ. ಇನ್ನೂ ಐದು ಸ್ಥಾನಗಳ ಅಗತ್ಯವಿದೆ.

ಪಿಎಂಕೆ ಬಳಿ 4, ಐಯುಎಂಎಲ್ ಬಳಿ 2, ಸಿಪಿಐ ಮತ್ತು ಸಿಪಿಎಂ ಬಳಿ ತಲಾ 2 ಸ್ಥಾನಗಳಿವೆ. ಈ ಪಕ್ಷಗಳು ಬೆಂಬಲಿಸಿದರೆ ವಿಜಯ್ ಸುಲಭವಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಈ ಪಕ್ಷಗಳು ಇನ್ನೂ ಲೆಕ್ಕಾಚಾರದಲ್ಲಿವೆ.

ಕಾಂಗ್ರೆಸ್ ಷರತ್ತು: ನೂತನ ಸರಕಾರ ರಚನೆಗೆ ಟಿವಿಕೆ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ವ್ಯಕ್ತಪಡಿಸಿದೆ. ಇಷ್ಟು ವರ್ಷ ಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿದ್ದ ಕಾಂಗ್ರೆಸ್ ಈಗ ಟಿವಿಕೆಗೆ ಬೆಂಬಲ ನೀಡಿದೆ. ಕೋಮುವಾದಿ ಶಕ್ತಿಗಳನ್ನು ದೂರವಿಡಬೇಕು ಎಂದಿರುವ ಕಾಂಗ್ರೆಸ್, ಸಂಪುಟದಲ್ಲಿ ಆಯಕಟ್ಟಿನ ಸ್ಥಾನ ಕೇಳಿದೆ ಎನ್ನಲಾಗಿದೆ. → 4

ಎಐಎಡಿಎಂಕೆ ಒಡೆದು ಹೋಳಾಗುವ ಭೀತಿ

ವಿಜಯ್ ಪಕ್ಷಕ್ಕೆ ಬೆಂಬಲ ಕೊಡಲ್ಲ ಎಂದು ಇ.ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ ಘೋಷಿಸಿದೆ. ಆದರೆ ಇದು ಪಕ್ಷದೊಳಗೇ ಒಳಜಗಳಕ್ಕೆ ಕಾರಣವಾಗಿದೆ. ಟಿವಿಕೆ ಪರ ಸಿ.ವಿ. ಷಣ್ಮುಗಂ ನೇತೃತ್ವದ 30ಕ್ಕೂ ಅಧಿಕ ಶಾಸಕರು ಬ್ಯಾಟಿಂಗ್ ಮಾಡಿದ್ದಾರೆ. 47 ಶಾಸಕರನ್ನು ಹೊಂದಿರುವ ಎಐಎಡಿಎಂಕೆಗೆ ಒಡೆದು ಹೋಳಾಗುವ ಭೀತಿ ಎದುರಾಗಿದೆ. ಒಂದು ವೇಳೆ ವಿಜಯ್‌ರನ್ನು ಬೆಂಬಲಿಸದಿದ್ದರೆ, 30 ಶಾಸಕರು ಹೊರಹೋಗುವ ಸಾಧ್ಯತೆಯಿದೆಯೆಂದು ವರದಿಗಳು ಹೇಳಿವೆ.

ಬಂಗಾಳ: ಹಿಂಸಾಚಾರಕ್ಕೆ 4 ಬಲಿ

ಚುನಾವಣೆ ಮುಗಿದ ಮೇಲೆ ಬಂಗಾಳದಲ್ಲಿ ಹಿಂಸಾಚರ ತೀವ್ರವಾಗಿದೆ. ಟಿಎಂಸಿ ಪ್ರಕಾರ ಅದರ ಇಬ್ಬರು ಕಾರ್ಯಕರ್ತರು ಹತ್ಯೆಗೀಡಾಗಿದ್ದಾರೆ. ಬಿಜೆಪಿ ತನ್ನಿಬ್ಬರು ಕಾರ್ಯಕರ್ತರು ಹಿಂಸಾಚಾರಕ್ಕೆ ಬಲಿಯಾಗಿದ್ದಾರೆಂದು ಹೇಳುತ್ತಿದೆ. ಉತ್ತರ 24 ಪರಗಣ ಜಿಲ್ಲೆ, ಉದಯನಾರಾಯಣಪುರದಲ್ಲಿ ಇಬ್ಬರು ಬಿಜೆಪಿ ಕಾರ್ಯಕರ್ತರು, ಕೋಲ್ಕತಾದ ಬೆಲೆಘಟದಲ್ಲಿ, ಬೀರ್ಭೂಮ್‌ನ ನಾನೂರ್‌ನಲ್ಲಿ ಟಿಎಂಸಿ ಕಾರ್ಯಕರ್ತರು ಮೃತಪಟ್ಟಿದ್ದಾರೆಂದು ಹೇಳಲಾಗಿದೆ.

ದೀದಿ ಹಠ: ಸಾಂವಿಧಾನಿಕ ಬಿಕ್ಕಟ್ಟು

ಪ.ಬಂಗಾಳದಲ್ಲಿ ಬರೀ 80 ಸ್ಥಾನಗಳನ್ನು ಗೆದ್ದು ಬಹುಮತ ಕಳೆದುಕೊಂಡಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಮಮತಾ ಬ್ಯಾನರ್ಜಿ ನಿರಾಕರಿಸಿದ್ದಾರೆ. ಇದು ಹಿಂದೆಂದೂ ನಡೆಯದ ಸಾಂವಿಧಾನಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಬಹುಮತ ಕಳೆದುಕೊಂಡ ಮುಖ್ಯಮಂತ್ರಿ ರಾಜೀನಾಮೆ ನೀಡಲು ನಿರಾಕರಿಸಿದರೆ ಏನು ಮಾಡಬೇಕೆಂದು ಸ್ಪಷ್ಟ ನಿಯಮಗಳೇನು ಸಂವಿಧಾನದಲ್ಲಿ ಇಲ್ಲ. ಅವರನ್ನು ವಜಾ ಮಾಡಲು ಅವಕಾಶವಿದೆ.

ಅಸ್ಸಾಂ ಸಿಎಂ ಪದಗ್ರಹಣ 12ಕ್ಕೆ

ಹಿಂದಿನ ಮಾಹಿತಿಗಳ ಪ್ರಕಾರ ಗುರುವಾರ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಪ್ರಮಾಣವಚನ ಸ್ವೀಕರಿಸಬೇಕಿತ್ತು. ಆದರೆ ಮೇ 11ರವರೆಗೆ ಪ್ರಧಾನಿ ನರೇಂದ್ರ ಮೋದಿಗೆ ಸಮಯವಿಲ್ಲ. ಆದ್ದರಿಂದ ಮೇ 12ಕ್ಕೆ ಪ್ರಮಾಣವಚನ ತೆಗೆದುಕೊಳ್ಳಲು ಹಿಮಂತ ಬಿಸ್ವಾ ನಿರ್ಧರಿಸಿದ್ದಾರೆಂದು ಹೇಳಲಾಗಿದೆ.

ಹೈಕಮಾಂಡ್ ಹೇಳಿದರಷ್ಟೇ ದೆಹಲಿಗೆ: ಡಿಕೆಶಿ
ನಾಯಕತ್ವ ಪ್ರಶ್ನೆ ಶೀಘ್ರ ಇತ್ಯರ್ಥವಾಗಲಿ: ಪರಂ

ವರಿಷ್ಠರ ನಿರ್ಧಾರಕ್ಕೆ ನಾವು ಬದ್ಧ: ಸಿಎಂ ಪುನರುಚ್ಚಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಉದ್ಭವಿಸಿರುವ ಮುಖ್ಯಮಂತ್ರಿ ಬದಲಾವಣೆ, ಸಚಿವ ಸಂಪುಟ ಪುನಾರಚನೆ ಪುಕಾರಿಗೆ ಸಂಬಂಧಿಸಿದಂತೆ ಚರ್ಚಿಸಲು

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ದೆಹಲಿಗೆ ತೆರಳಲಿದ್ದಾರೆ ಎನ್ನುವ ಗಾಳಿಸುದ್ದಿಯ ಬೆನ್ನಲ್ಲೇ, 'ವರಿಷ್ಠರು ಕರೆದರೆ ಹೋಗುವೆವು' ಎಂದು ಹೇಳುವ ಮೂಲಕ ಈ ಎಲ್ಲ ಗೊಂದಲಗಳಿಗೆ ತಾತ್ಕಾಲಿಕ ತಡೆಹಾಕುವ ಪ್ರಯತ್ನವನ್ನು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮಾಡಿದ್ದಾರೆ.

ಪಂಚರಾಜ್ಯ ಚುನಾವಣೆಯ ಬಳಿಕ ರಾಜ್ಯದಲ್ಲಿ ಸಂಪುಟ ಪುನಾರಚನೆ ಹಾಗೂ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಚರ್ಚೆಗಳು ಆರಂಭವಾಗಿದ್ದವು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಮೇ ಮೂರನೇ ವಾರ ದೆಹಲಿಗೆ ಪ್ರಯಾಣಿಸಿ ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆಯಲಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೀಗ, ದೆಹಲಿ ನಾಯಕರು ಕರೆದ ಬಳಿಕ ನಾವು ಹೋಗುತ್ತೇವೆ ಎನ್ನುವ ಮೂಲಕ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ದೆಹಲಿ ಪ್ರವಾಸದ ವಿಷಯದಲ್ಲಿದ್ದ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಇದೇ ಗೃಹಸಚಿವ ಪರಮೇಶ್ವರ ಪ್ರತಿಕ್ರಿಯಿಸಿ, ನಾಯಕತ್ವದ ಗೊಂದಲ ಶೀಘ್ರ ಇತ್ಯರ್ಥವಾಗಬೇಕು ಎಂದು ಹೇಳಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹೈಕಮಾಂಡ್ ಹೇಳಿದರೆ ಐದು ವರ್ಷ ಅಧಿಕಾರದಲ್ಲಿ ಇರುತ್ತೇನೆ. ಹೈಕಮಾಂಡ್ ಮಾತನ್ನು ಮಾತ್ರ ನಾನು ಕೇಳುವುದು. ಬೇರೆ ಯಾರೇ ಏನೇ ಮಾತನಾಡಿದರೂ ಅದು ಅವರ ವೈಯುಕ್ತಿಕ ಎನ್ನುವ ಮೂಲಕ ನಾಯಕತ್ವ ಬದಲಾವಣೆಯ ವಿಚಾರದ ಚರ್ಚೆಗಳಿಗೆ ಪರೋಕ್ಷ ಸಂದೇಶ ರವಾನಿಸಿದ್ದಾರೆ. ರಾಜ್ಯದಲ್ಲಿ ಐದು ವರ್ಷ ಕಾಂಗ್ರೆಸ್ ಸರಕಾರ ಇರುತ್ತದೆ. ಹೈಕಮಾಂಡ್ ನನ್ನನ್ನು ಇರಿ ಎಂದರೆ ಇರುತ್ತೇನೆ. ಎಲ್ಲ ತೀರ್ಮಾನ ಮಾಡುವುದು ಹೈಕಮಾಂಡ್ ಎಂದು ಸ್ಪಷ್ಟಪಡಿಸಿದ ಅವರು, ನೀವು ಎಷ್ಟೇ ಬಾರಿ ನಾಯಕತ್ವ ಬದಲಾವಣೆ ಪ್ರಶ್ನೆ ಕೇಳಿದರೂ ನನ್ನ ಉತ್ತರ ಹೈಕಮಾಂಡ್ ಅಷ್ಟೇ ಎಂದು ಹೇಳಿದರು.

ರಾಗಾ ಬರುವಂತೆ ಹೇಳಿಲ್ಲ: ನಾನು ಹೈಕಮಾಂಡ್ ಮಾತನ್ನು ಮಾತ್ರ ಕೇಳುತ್ತೇನೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧ. ರಾಹುಲ್ ಗಾಂಧಿ ಅವರು ನನ್ನನ್ನು ಇದುವರೆಗೂ ದೆಹಲಿಗೆ ಬರುವಂತೆ ಹೇಳಿಲ್ಲ. ನಾನು ಕೂಡಾ ರಾಹುಲ್ ಗಾಂಧಿ ಅವರ ಭೇಟಿಗೆ ಸಮಯ ಕೇಳಿಲ್ಲ. ರಾಹುಲ್ ಗಾಂಧಿ ಅವರು ನನ್ನನ್ನು ಕರೆದರೆ ನಾನು ದೆಹಲಿಗೆ ಹೋಗುತ್ತೇನೆ. ಅವರು ಕರೆದೇ ಇಲ್ಲ ಎಂದ ಮೇಲೆ ಸಂಪುಟ ಪುನಾರಚನೆ, ನಾಯಕತ್ವ ಬದಲಾವಣೆ ವಿಚಾರಗಳ ಸಭೆಯ ಅಜೆಂಡಾ ಹೇಗೆ ನಿಗದಿಯಾಗುತ್ತದೆ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರಕಾರ ಐದು ವರ್ಷ ಪೂರ್ಣಗೊಳಿಸಲಿದೆ. ಸಿಎಂ ಬದಲಾವಣೆ ವಿಷಯದಲ್ಲಿ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ. ಆ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ. ವರಿಷ್ಠರು ಕರೆದರೆ ದೆಹಲಿಗೆ ಹೋಗುತ್ತೇನೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪಕ್ಷದ ಹೈಕಮಾಂಡ್ ಕರೆದಾಗ ನಾವು ದೆಹಲಿಗೆ ಹೋಗುತ್ತೇವೆ. ಅವರು ಕರೆಯದೇ ಇದ್ದರೂ ನಾವು ಹೋಗುವುದು ಸರಿಯಲ್ಲ. ಅವರು ಮುಂದಿನ ದಿನಗಳಲ್ಲಿ ಕರೆಯುತ್ತಾರೆ. ಅವರು ಕರೆದಾಗಲೇ ನಾವು ಹೋಗುತ್ತೇವೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಡಿಜಿಪಿ ರಾಮಚಂದ್ರ ಅಮಾನತು ರದ್ದು

ಬೆಂಗಳೂರು: ರಾಜ್ಯ ಪೊಲೀಸ್ ಇಲಾಖೆಯಲ್ಲಿ ಭಾರೀ ಸಂಚಲನ ಮೂಡಿಸಿದ್ದ ರಾಸಲೀಲೆ ಪ್ರಕರಣದ

ಆರೋಪಿ, ಹಿರಿಯ ಐಪಿಎಸ್ ಅಧಿಕಾರಿ ಡಾ.ಕೆ. ರಾಮಚಂದ್ರ ರಾವ್ ಅವರ ಅಮಾನತು ಆದೇಶವನ್ನು ರಾಜ್ಯ ಸರಕಾರ ಹಿಂಪಡೆದಿದೆ. ಅವರ ರಾಸಲೀಲೆ ವಿಡಿಯೋ ವೈರಲ್ ಆದ ಬಳಿಕ ಸರಕಾರ ಜನವರಿ 19ರಂದು ಅವರನ್ನು ಸೇವೆಯಿಂದ ಅಮಾನತುಗೊಳಿಸಿತ್ತು. ಈ ತಿಂಗಳಲ್ಲಿ ರಾಮಚಂದ್ರರಾವ್ ಸೇವೆಯಿಂದ ನಿವೃತ್ತಿ ಹೊಂದಲಿದ್ದು, ನಿಯಮಗಳ ಅಡಿಯಲ್ಲಿ ಅವರ ಅಮಾನತು ಆದೇಶ ಹಿಂಪಡೆಯಲು ನಿರ್ಧರಿಸಲಾಗಿದೆ.

ಮೇ 10ಕ್ಕೆ ಪ್ರಧಾನಿ ಮೋದಿ ಬೆಂಗ್ಳೂರಿಗೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಮೇ 10ಕ್ಕೆ ಬೆಂಗಳೂರಿಗೆ ಆಗಮಿಸಲಿದ್ದಾರೆ. ನಗರದ ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ ಅವರೊಂದಿಗೆ ಪ್ರಧಾನಿ ಮೋದಿ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಮೇ 10ರಂದು ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರವಾಗಿರುವ ಆರ್ಟ್ ಆಫ್ ಲಿವಿಂಗ್‌ನ 45ನೇ ವರ್ಷಾಚರಣೆ ಹಾಗೂ ರವಿಶಂಕರ್ ಗುರೂಜಿಯವರ 70ನೇ ವರ್ಷದ ಹುಟ್ಟುಹಬ್ಬದ ನಿಮಿತ್ತ ಮೋದಿ ನಗರಕ್ಕೆ ಆಗಮಿಸಲಿದ್ದಾರೆ.

10ವರೆಗೆ ರಾಜ್ಯದಲ್ಲಿ ಗುಡುಗು, ಮಳೆ

ಬೆಂಗಳೂರು: ಮೇ 7ರಿಂದ 10ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಬರುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಸೂಚನೆ ನೀಡಿದೆ. ಉತ್ತರ ತೆಲಂಗಾಣ ಭಾಗದಲ್ಲಿ ಹಾಗೂ ಮನ್ನಾರ್ ಕೊಲ್ಲಿಯ ಪ್ರಭಾವದಿಂದ ಕರ್ನಾಟಕದಲ್ಲಿ ಜೋರು ಮಳೆಯಾಗಲಿದೆ. ರಾಜ್ಯದಲ್ಲಿ ಗುಡುಗು- ಮಳೆ ಅಬ್ಬರ ಹೆಚ್ಚಾಗುವ ಸಾಧ್ಯತೆ ಇದೆ.

ಶೃಂಗೇರಿ ಶಾಸಕರಾಗಿ ಜೀವರಾಜ್ ಪ್ರಮಾಣ

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಎಣಿಕೆಯಲ್ಲಿ ರೋಚಕ ಜಯ ಸಾಧಿಸಿದ ಬಿಜೆಪಿ ನಾಯಕ ಡಿ.ಎನ್.ಜೀವರಾಜ್ ಶಾಸಕರಾಗಿ ಅಧಿಕೃತವಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬೆಂಗಳೂರಿನ ವಿಧಾನಸಭೆಯಲ್ಲಿ ಸಭಾಧ್ಯಕ್ಷರಾದ ಯು.ಟಿ. ಖಾದರ್‌ರಿಂದ ಜೀವರಾಜ್ ಪ್ರಮಾಣವಚನ ಸ್ವೀಕರಿಸಿದರು. ವಿರೋಧ ಪಕ್ಷದ ನಾಯಕರಾದ ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಇದ್ದರು.

2 ಸ್ಫೋಟಗಳ ಹೊಣೆ ಹೊತ್ತ ಖಲಿಸ್ತಾನ್ ಉಗ್ರರು | ರಾಜ್ಯಾದ್ಯಂತ ಕಟ್ಟೆಚ್ಚರ

ಪಂಜಾಬ್ ಬಿಎಸ್‌ಎಫ್ ಕಚೇರಿ ಎದುರು ಸ್ಫೋಟ

ಚಂಡೀಗಢ: ಅಮೃತಸರ ಕಂಟೋನ್‌ಮೆಂಟ್ ಹಾಗೂ ಜಲಂಧರ್‌ನಲ್ಲಿರುವ ಗಡಿಭದ್ರತಾ ಪಡೆ ಪ್ರಧಾನ ಕಚೇರಿಯ ಬಳಿ ಭಾರೀ ಸ್ಫೋಟಗಳು ಸಂಭವಿಸಿವೆ. ಮಂಗಳವಾರ ರಾತ್ರಿ ಕೆಲವೇ ಗಂಟೆಗಳ ಅಂತರದಲ್ಲಿ 2 ಸ್ಫೋಟಗಳು ಸಂಭವಿಸಿ, ಜನರನ್ನು ಬೆಚ್ಚಿಬೀಳಿಸಿವೆ. ರಾತ್ರಿ 10:50ರ ಸುಮಾರಿಗೆ ಅಮೃತಸರದ ಖಾಸಾ ಕಂಟೋನ್‌ಮೆಂಟ್ ಮತ್ತು ಅದಕ್ಕೂ ಮುನ್ನ ಅಂದರೆ ರಾತ್ರಿ 8ರ ಹೊತ್ತಿಗೆ ಜಲಂಧರ್‌ನಲ್ಲಿರುವ ಗಡಿ ಭದ್ರತಾ ಪಡೆ ಪ್ರಧಾನ ಕಚೇರಿಯ ಹೊರಗೆ ಸ್ಫೋಟಗಳು ಸಂಭವಿಸಿವೆ. ಘಟನೆಯಲ್ಲಿ ಯಾವುದೇ ಸಾವು ನೋವು

ಸಂಭವಿಸಿಲ್ಲ. ಘಟನೆಯ ಹೊಣೆಯನ್ನು ಖಲಿಸ್ತಾನ ಲಿಬರೇಶನ್ ಆರ್ಮಿ ಹೊತ್ತುಕೊಂಡಿದೆ.

ಜಲಂಧರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಕೂಟರ್‌ಗೆ ಬೆಂಕಿ ಬಿದ್ದ ಕಾರಣ ಅದರ ಪೆಟ್ರೋಲ್ ಟ್ಯಾಂಕ್ ಸ್ಫೋಟಗೊಂಡಿದೆ ಎಂದು ಪೊಲೀಸರು ಆರಂಭದಲ್ಲಿ ಹೇಳಿದ್ದರು. ಬಳಿಕ ನಡೆದ ತನಿಖೆಯಲ್ಲಿ ಎರಡೂ ಕಡೆ ಉಂಟಾದ ಸ್ಫೋಟಗಳಲ್ಲಿ ಸುಧಾರಿತ ಸ್ಫೋಟಕಗಳನ್ನು ಬಳಕೆ ಮಾಡಿರುವುದು ಪತ್ತೆಯಾಗಿದೆ.

ಇರಾನ್‌ಗೆ ಮತ್ತೆ ಶಾಂತಿ ಒಪ್ಪಂದ ಕಳಿಸಿದ ಟ್ರಂಪ್, ಒಪ್ಪದಿದ್ದರೆ ದಾಳಿ ಬೆದರಿಕೆ
ಯುದ್ಧಾಂತ್ಯಕ್ಕೆ ಮಾತುಕತೆ: ಇರಾನ್ | ಭಾರತೀಯ ಷೇರುಪೇಟೆಯಲ್ಲಿ ಹರ್ಷ

ಹೊರ್ಮುಜ್ ಸಂಚಾರಕ್ಕೆ ಮುಕ್ತ: ಟ್ರಂಪ್

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಅನ್ನು

ಮಂಡಿಯೂರುವಂತೆ ಮಾಡಿರುವುದಾಗಿ ಹೇಳಿಕೊಳ್ಳುತ್ತಿದ್ದರೂ, ಇರಾನ್ ಬಗ್ಗುತ್ತಿಲ್ಲ. ಮತ್ತೆ ಯುದ್ಧ ಆರಂಭವಾದರೆ ಭೀಕರ ದಾಳಿ ಮಾಡುವುದಾಗಿ ಬೆದರಿಸುತ್ತಲೇ, ಇರಾನ್‌ಗೆ ಹೊಸ ಶಾಂತಿ ಒಪ್ಪಂದವನ್ನು ಕಳಿಸಿದ್ದಾರೆ. ಇದರಲ್ಲಿ ಯುದ್ಧವನ್ನು ಕೊನೆಗೊಳಿಸಲು ಮತ್ತು ಹೊರ್ಮುಜ್ ಜಲಸಂಧಿಯನ್ನು ತೆರೆಯಲು ಷರತ್ತುಗಳು ಸೇರಿವೆ. ಈ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಲು ಇರಾನ್‌ಗೆ 48 ಗಂಟೆಗಳ ಕಾಲಾವಕಾಶ ನೀಡಿದೆ.

ಇದರ ಬೆನ್ನಲ್ಲೇ ಟ್ರಂಪ್ ಹೊರ್ಮುಜ್‌ನಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ಕೊಡುವುದಾಗಿ ಹೇಳಿದ್ದಾರೆ. ಅಮೆರಿಕದ ಗೃಹ ಸಚಿವ ಮಾರ್ಕೋ ರುಬಿಯೋ, ಆಪರೇಶನ್ ಎಪಿಕ್ ಫ್ಯೂರಿ ಅಂತ್ಯಗೊಂಡಿದೆ ಎಂದಿದ್ದಾರೆ. ಈ ಮೂಲಕ ಯುದ್ಧಾಂತ್ಯವಾಗಿದೆ ಎಂದು ಖಚಿತಪಡಿಸಿದ್ದಾರೆ. → 4

ಏನೇನಾಯ್ತು?

- ಇರಾನ್‌ಗೆ 14 ಅಂಶಗಳ ಒಪ್ಪಂದ ರವಾನಿಸಿದ ಟ್ರಂಪ್
- ಹೊರ್ಮುಜ್‌ನಲ್ಲಿ ಅಮೆರಿಕದ ದಿಗ್ಬಂಧನ ಸದ್ಯ ಸ್ಥಗಿತ
- ಆಪರೇಶನ್ ಎಪಿಕ್ ಫ್ಯೂರಿ ಮುಗಿದಿದೆ: ಅಮೆರಿಕ ಹೇಳಿಕೆ
- ಇರಾನ್‌ನಿಂದಲೂ ಧನಾತ್ಮಕ ಪ್ರತಿಕ್ರಿಯೆ, ಎಲ್ಲೆಡೆ ಭರವಸೆ
- ಭಾರತ ಷೇರುಪೇಟೆಯಲ್ಲಿ ಉತ್ಸಾಹ, ಷೇರು ಬೆಲೆಯೇರಿಕೆ

ಬೆಂಗಳೂರಲ್ಲಿ ನಡೆಯಲ್ಲ ಐಪಿಎಲ್ ಫೈನಲ್ ಪಂದ್ಯ

ಮುಂಬೈ: ಐಪಿಎಲ್ ಪ್ಲೇಆಫ್ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದೆ. ಹಾಲಿ ಚಾಂಪಿಯನ್ ಆಗಿದ್ದರೂ ಆರ್‌ಸಿಬಿ ತವರು ನೆಲ ಬೆಂಗಳೂರಿಗೆ ಯಾವುದೇ ಪಂದ್ಯ ನೀಡಿಲ್ಲ. ಪಂಜಾಬ್‌ನ ಹೊಸ ಮೈದಾನ ಮುಲ್ಲಾಂಪುರಕ್ಕೆ 2 ಪ್ಲೇಆಫ್ ಪಂದ್ಯಗಳು ಸಿಕ್ಕಿವೆ. ನಿಯಮಗಳ ಪ್ರಕಾರ ಹಿಂದಿನ ಆವೃತ್ತಿಯ ಚಾಂಪಿಯನ್ ತಂಡದ ತವರು ಮೈದಾನದಲ್ಲೇ ಫೈನಲ್ ನಡೆಯಬೇಕು. ಫೈನಲ್ ಇರಲಿ, ನಾಲ್ಕು ಪ್ಲೇಆಫ್‌ಗಳಲ್ಲಿ ಒಂದು ಪಂದ್ಯವೂ ಬೆಂಗಳೂರಿಗೆ ಸಿಕ್ಕಿಲ್ಲ. ಇದಕ್ಕೆ ಕೆಎಸ್‌ಸಿಎ ಅಸಮಾಧಾನ ವ್ಯಕ್ತಪಡಿಸಿದೆ. ಡಿಸಿಎಂ ಶಿವಕುಮಾರ್ ಪ್ರತಿಕ್ರಿಯಿಸಿ, ರಾಜ್ಯದ ಶಾಸಕರ ಐಪಿಎಲ್ ಟಿಕೆಟ್ ಬೇಡಿಕೆಗೂ ಇದಕ್ಕೂ ಸಂಬಂಧವಿಲ್ಲ ಎಂದಿದ್ದಾರೆ. ಇನ್ನೊಂದು ಕಡೆ ಬಿಸಿಸಿಐ ಪ್ರತಿಕ್ರಿಯಿಸಿ, ಕೆಲ ಶಿಷ್ಟಾಚಾರ ಪಾಲನೆಯಾಗದಿರುವುದರಿಂದ ಈ ತೀರ್ಮಾನ ಮಾಡಲಾಗಿದೆ ಎಂದಿದೆ.

JSS ACADEMY OF HIGHER EDUCATION & RESEARCH (DEEMED TO BE UNIVERSITY) MYSURU

NAAC A++ Accredited

NIRF Top 25 University in India

ADMISSIONS OPEN 2026-27

APPLY @ www.jssuni.edu.in | admissions@jssuni.edu.in | +91 99808 41859 +91 821-2548014/416

MEDICINE
- MBBS
- MD/MS/Dip (24 Specializations)
- DM/M.Ch (8 Specializations)

Fellowship/Diploma:
- Psychosexual Medicine/ Neuroanaesthesia
- Neonatology/ Pain Medicine
- Critical Care Medicine/Head & Neck Surgery
- Otology & Neuro-Otology
- Arthroplasty/Arthroscopy
- Regional Anaesthesia/ Infectious Diseases
- Diploma in Psychosexual Health

BOT/B.Sc (Allied & Healthcare Education):
- Anesthesia & Operation Theatre Technology
- Medical Laboratory Technology
- Medical Imaging Technology
- Renal Dialysis Technology
- Respiratory Therapy
- Cardiac Care Technology
- Perfusion Technology
- Emergency Medicine Technology
- Optometry
- Forensic Sciences
- Physician Assistant
- Medical Genetics & Counseling (Hon's)
- Bachelor of Occupational Therapy (BOT)

MOT/MA/M.Sc (Medical / Allied & Healthcare Education):
- Medical Microbiology
- Medical Biochemistry
- Medical Physiology
- Medical Anatomy
- Medical Pharmacology
- Medical Genetics and Counseling
- Clinical Psychology
- Clinical Embryology
- Clinical Research
- Respiratory Therapy
- Forensic Odontology
- Echocardiography
- Health Technologies and Data Sciences
- Epidemiology (Spatial epidemiology)
- Masters in Occupational Therapy (MOT) in Paediatrics
- Masters in Occupational Therapy (MOT) in Neurology
- MA Clinical Psychology
- Prof. Diploma in Clinical Psychology

School of Public Health:
- Bachelor of Public Health (BPH)
- Masters in Public Health (MPH)
- Masters in Public Health in Biostatistics

Certificate:
- Geriatric Emergency Medicine
- Dermatopathology
- Clinical Immunology and Rheumatology
- Antimicrobial Stewardship
- ICU Point of Care Ultrasound (POCUS)

PHARMACY (Mysuru & Ooty Campus)
- B Pharm
- B Pharm - Lateral Entry
- Pharm D
- Pharm D (PB)
- D Pharm

M.Pharm
- Pharmaceutics
- Industrial Pharmacy
- Pharmaceutical Regulatory Affairs
- Pharmaceutical Chemistry
- Pharmaceutical Analysis
- Pharmaceutical Quality Assurance
- Pharmacology
- Pharmacy Practice
- Pharmacognosy
- Pharmaceutical Biotechnology

Clinical Pharmacy Residency
- Infectious Diseases/ Oncology/ Nephrology/ Geriatrics Pharmacy/ Community Pharmacy/ Cardiology

Diploma/Certificate
- Pharma Diploma (17 Programs)
- Certificate Program in (GxP)
- Clinical Research/ Telepharmacy
- Medicine Information
- Herbal Drug Standardization
- Pharmaceutical Quality Assurance

DENTISTRY
- BDS
- MDS (9 Specializations)

Diploma
- Dental Mechatronics
- Dental Operating Room Assistant

Certificate Programs:
- Dental Certificate (7 Programs)

HEALTH SYSTEM MANAGEMENT STUDIES
- BBA Hospital & Health System Management (Hon's)
- MBA Hospital Administration
- MBA (HR/Finance/Marketing)
- MBA Pharmacy Administration

YOGA
- B.Sc Yoga
- M.Sc Yoga
- Yoga Teachers Course (YTC) 3 Months

Ph.D
- Medicine/ Dentistry/ Pharmacy Management Studies / Yoga Life Sciences/ Allied & Healthcare Education/ Occupational therapy

LIFE SCIENCES

B.Sc (3Yrs Degree/4Yrs Hon's)
- Biotechnology
- Microbiology
- Environmental Sciences
- Food, Nutrition & Dietetics
- Psychology
- Biochemistry
- Computational Biology & Bioinformatics
- Statistics & Data Analytics
- Artificial Intelligence & Data Science

M.Sc (2 Years)
- Biochemistry
- Geoinformatics
- Microbiology
- Cognitive Neuroscience
- Environmental Sciences
- Molecular Biology
- Nano Science & Technology
- Nutrition & Dietetics
- Medical Statistics
- Bioinformatics
- Medical Physics
- Cosmetic Science
- Biotechnology
- Sports, Nutrition & Management
- Master of Library and Information Science (M.Lib & Info. Sci.)
- Clinical Psychology (Ooty Campus)

M.Sc (1 Year - NEP)
- Psychology
- Nutrition and Dietetics
- Biochemistry
- Microbiology
- Biotechnology
- Environmental Sciences

Diploma
- Tissue Culture
- Nutraceutical Technology
- Environment Health & Safety Management/ Industrial Safety

Online Learning Programs
- BBA Hospital and Health System Management
- MBA Hospital Administration
- MBA Pharmacy Administration

Certificate Programs
- Dental Ethics & Jurisprudence/
- Yoga Instructor/ Pharmacoinformatics
- Immunoinformatics & Vaccine Design

Diploma
- Bioinformatics/ Medical Devices
- Pharmacovigilance/ Pharmacuitical Quality Control/ Regulatory Affairs

JSS ACADEMY OF HIGHER EDUCATION & RESEARCH

Sri Shivarathreeshwara Nagara, Bannimantap, Mysuru - 570015 Karnataka, India

ಸಮಾಚಾರ ಸಣ್ಣದಲ್ಲ

ಇಂದು ವಿದ್ಯುತ್ ಪೂರೈಕೆ ವ್ಯತ್ಯಯ

ಕಾರವಾರ: ದಾಂಡೇಲಿ ಉಪ ವಿಭಾಗ ವ್ಯಾಪ್ತಿಯ11 ಕೆ.ವಿ ವಿದ್ಯುತ್ ಮಾರ್ಗದ ತುರ್ತು ನಿರ್ವಹಣಾ ಕಾಮಗಾರಿ ಇರುವುದರಿಂದ ಮೇ.7 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೆಹಳಿಯಾಳ ರೋಡ್, ಅಂಬೇವಾಡಿ, ಬಾರ್ಚಿ ರೋಡ್, ನಿರ್ಮಲ್ ನಗರ, ಎಸ್‌ಆರ್‌ಟಿ-ಟಿಆರ್‌ಟಿ, ಹಸನಮಾಲ್, ಸುದರ್ಶನ ನಗರ, ಡಬ್ಲ್ಯುಐಸಿಪಿಎಂ ಕ್ವಾಟರ್ಸ್, ಕೆ.ಸಿ ಸರ್ಕಲ್, ಅಲೈಡ್ ಏರಿಯಾ, ವಿನಾಯಕ ನಗರ ಹಾಗೂ 3ನೇ ನಂಬರ್‌ಗೇಟ್ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು. ಗ್ರಾಹಕರು ಸಹಕರಿಸು ವಂತೆ ದಾಂಡೇಲಿ ಹೆಸ್ಕಾಂ, ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನೀಯರ್(ವಿ) ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಜಿಟಿಟಿಸಿಯಲ್ಲಿ ವೃತ್ತಿಪರ ತರಬೇತಿಗೆ ಅರ್ಜಿ

ಕಾರವಾರ: ಗದಗದ ನರಗುಂದ ಅಳಗವಾಡಿ ರಸ್ತೆಯಲ್ಲಿರುವ ಜಿಟಿಟಿಸಿ ಕೇಂದ್ರದಲ್ಲಿ ವೃತ್ತಿಪರ ತರಬೇತಿಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಟೂಲರೂಮ್ ಮಶಿನಿಸ್ಟ್, ವೆಹಿಕಲ್ ಅಸೆಂಬ್ಲಿ ಫಿಟ್ಟರ್‌ಮತ್ತು ಅಟೊಮೊಬೈಲ್ ವೆಲ್ಡರ್ ವೃತ್ತಿ ತರಬೇತಿಗಳಿಗೆ ಹತ್ತನೇ ತರಗತಿ ಅಥವಾ ಪಿಯುಸಿ ಉತ್ತೀರ್ಣರಾದ ಮತ್ತು ಅನುತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಒಂದು ವರ್ಷ ಅವಧಿಯ ಟೂಲರೂಮ್ ಮಶಿನಿಸ್ಟ್ ತರಬೇತಿಯಲ್ಲಿ ಟರ್ನರ್, ಮಿಲ್ಲರ್, ಗ್ರೈಂಡರ್, ಸಿ.ಎನ್.ಸಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ವೆಹಿಕಲ್ ಅಸೆಂಬ್ಲಿ ಫಿಟ್ಟರ್ ಮತ್ತು ಅಟೊಮೊಬೈಲ್ ವೆಲ್ಡರ್ ವೃತ್ತಿಪರ ತರಬೇತಿಯಲ್ಲಿ ಫಿಟ್ಟರ್, ಕಾರು ಬಿಡಿ ಭಾಗಗಳ ಜೋಡಣೆ ಮತ್ತು ವೆಲ್ಡಿಂಗ್ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುವುದು. ಜತೆಗೆ ಅಟೊಕ್ಯಾಡ್, ಕನ್ನಡ ಮತ್ತು ಇಂಗ್ಲಿಷ್ ಭಾಷಾ ಕೌಶಲ್ಯಗಳನ್ನು ಹಾಗೂ ಉದ್ಯೋಗ ಕೌಶಲ್ಯಗಳನ್ನು ಕಲಿಸಲಾಗುತ್ತದೆ. ಒಂದು ವರ್ಷದ ತರಬೇತಿಯ ನಂತರ ಪ್ರತಿಷ್ಠಿತ ಟೂಲಿಂಗ್ ಮತ್ತು ವಿಮಾನ ತಯಾರಿಕೆ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸಿ ಕೊಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಟಿಟಿಸಿ, ಅರ್ಬನ ಗ್ರಾಮ, ಅಳಗವಾಡಿ ರಸ್ತೆ, ನರಗುಂದ, ದೂ.ಸಂ: 8088536896 ನ್ನು ಸಂಪರ್ಕಿಸುವಂತೆ ಜಿಟಿಟಿಸಿ ನರಗುಂದ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿವೇಗ, ಬೈಕ್ ಚಾಲನೆ : ಪ್ರಕರಣ

ಭಟ್ಕಳ: ಮೋಟಾರ್ ಸೈಕಲ್ ಅನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಎದುರಿನಿಂದ ಬರುತ್ತಿದ್ದ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆಸಿ ಸವಾರನಿಗೆ ಗಾಯಗೊಳಿಸಿದ ಘಟನೆ ತಾಲೂಕಿನ ಹೊನ್ನೆಮಡಿಯಲ್ಲಿ ಜರುಗಿದೆ. ಈ ಸಂಬಂಧ ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಕೆಯ ಹೊನ್ನಮಡಿಯ ನಿವಾಸಿ ಹರೀಶ್ ನರಸಿಂಹ ನಾಯ್ಕ (35) ಅವರು ನೀಡಿದ ದೂರಿನನ್ವಯ, ಯಲ್ವಡಿಕವೂರು ನಿವಾಸಿ ರಾಘವೇಂದ್ರ ಮಾದೇವ ನಾಯ್ಕ ಎಂಬುವವರ ವಿರುದ್ಧ ಎಫ್.ಐ.ಆರ್ ದಾಖಲಿಸಲಾಗಿದೆ. ಘಟನೆಯು ಮೇ 3 ರಂದು ಸಂಜೆ ಸುಮಾರು 6.50ಕ್ಕೆ ಹೊನ್ನೆಮಡಿ-ಗೊರಟೆ ರಸ್ತೆಯಲ್ಲಿ ನಡೆದಿದೆ. ದೂರಿನ ವಿವರದಂತೆ, ಆರೋಪಿ ರಾಘವೇಂದ್ರ ನಾಯ್ಕ ಅವರು ತಮ್ಮ ಮೋಟಾರ್ ಸೈಕಲ್ ಅನ್ನು ಗೊರಟೆ ಕ್ರಾಸ್ ಕಡೆಯಿಂದ ಹೊನ್ನೆಮಡಿ ಕಡೆಗೆ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದರು. ಡಿಕ್ಕಿಯ ರಭಸಕ್ಕೆ ಗೀತೇಶ್ ನಾಯ್ಕ ಅವರು ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದಿದ್ದು, ಅವರ ಬಲಗೈ ಬೆರಳು, ಬಲಗಾಲು ಹಾಗೂ ಬಲಗಾಲಿನ ಬೆರಳುಗಳಿಗೆ ತೀವ್ರ ರಕ್ತಗಾಯಗಳಾಗಿವೆ. ಅಪಘಾತಪಡಿಸಿದ ಆರೋಪಿ ರಾಘವೇಂದ್ರನಿಗೂ ಸಹ ಸಣ್ಣಪುಟ್ಟ ಗಾಯಗಳಾಗಿವೆ ಎಂದು ತಿಳಿದುಬಂದಿದೆ. ಈ ಘಟನೆಗೆ ಸಂಬಂಧಿಸಿದಂತೆ ಭಟ್ಕಳ ಗ್ರಾಮೀಣ ಪೊಲೀಸರು ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಧೂಳು-ಗುಂಡಿಗಳ ನಡುವೆ ಪ್ರಯಾಣಿಕರು ಹೈರಾಣು | ರಾಜಕೀಯ ಕೆಸರೆರಚಾಟಕ್ಕೆ ಸೀಮಿತವಾದ ಅಭಿವೃದ್ಧಿ

ಶಿರಸಿ-ಹಾವೇರಿ ಹೆದ್ದಾರಿ ಕಾಮಗಾರಿ ವಿಳಂಬ

ವಿನುತಾ ಹೆಗಡೆ ಶಿರಸಿ

ಶಿರಸಿ ಮತ್ತು ಹಾವೇರಿ ನಡುವಿನ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಯು ಕುಂಟುತ್ತಾ ಸಾಗುತ್ತಿರುವುದು ಈ ಭಾಗದ ಸಾರ್ವಜನಿಕರ ತಾಳ್ಮೆಯ ಕಟ್ಟೆ ಒಡೆಯುವಂತೆ ಮಾಡಿದೆ. ಮಲೆನಾಡು ಮತ್ತು ಬಯಲು ಸೀಮೆಯನ್ನು ಸಂಪರ್ಕಿಸುವ ಈ ಪ್ರಮುಖ ಕೊಂಡಿಯು ಕಳೆದ ಹಲವು ತಿಂಗಳುಗಳಿಂದ ಅಧ್ವಾನದ ಸ್ಥಿತಿಯಲ್ಲಿದ್ದು, ಪ್ರಯಾಣಿಕರು ಪ್ರತಿದಿನ ನರಕಯಾತನೆ ಅನುಭವಿಸುತ್ತಿದ್ದಾರೆ. ರಸ್ತೆಯ ಉದ್ದಕ್ಕೂ ಅಗೆದು ಹಾಕಲಾದ ಮಣ್ಣು, ಅರ್ಧಕ್ಕೆ ನಿಂತ ಸೇತುವೆ ಕಾಮಗಾರಿಗಳು ಹಾಗೂ ಹದಗೆಟ್ಟ ರಸ್ತೆಯಿಂದಾಗಿ ಅಪಘಾತಗಳ ಸರಣಿಯೇ ಮುಂದುವರಿಯುತ್ತಿದೆ. ಮಳೆಗಾಲದಲ್ಲಿ ಕೆಸರು ಗದ್ದೆಯಂತಾಗುವ ಈ ರಸ್ತೆ, ಬೇಸಿಗೆಯಲ್ಲಿ ದಟ್ಟವಾದ ಧೂಳಿನಿಂದ ಕೂಡಿ ವಾಹನ ಸವಾರರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಕಾಮಗಾರಿ ಮುಗಿಯದ ಕಾರಣ ವ್ಯಾಪಾರ ವಹಿವಾಟು ಕುಂಠಿತಗೊಂಡಿದ್ದು, ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳುವ ರೋಗಿಗಳ ಸ್ಥಿತಿಯಂತೂ ಹೇಳತೀರದಾಗಿದೆ.

ಇತ್ತ ಅಭಿವೃದ್ಧಿಯ ಹೆಸರಿನಲ್ಲಿ ಆಗಬೇಕಾದ ಕೆಲಸಗಳು ರಾಜಕೀಯ ಕೆಸರೆರಚಾಟಕ್ಕೆ ಬಲಿಯಾಗುತ್ತಿವೆ. ಆಡಳಿತ ಮತ್ತು ವಿರೋಧ ಪಕ್ಷದ ನಾಯಕರು ಕಾಮಗಾರಿ ವಿಳಂಬಕ್ಕೆ ಪರಸ್ಪರ ಆರೋಪ-ಪ್ರತ್ಯಾರೋಪಗಳನ್ನು ಮಾಡುತ್ತಾ ಕಾಲಹರಣ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ಅನುದಾನದ ಕೊರತೆ ಎಂದು ಒಂದು ಕಡೆಯಾದರೆ, ರಾಜ್ಯ ಸರಕಾರದ ಇಚ್ಛಾಶಕ್ತಿಯ ಕೊರತೆ ಮತ್ತು ಭೂಸ್ವಾಧೀನ ಪ್ರಕ್ರಿಯೆಯ ವಿಳಂಬವೇ ಕಾರಣ ಎಂಬುದು ಇನ್ನೊಂದು ಬಣದ ವಾದ. ಗುತ್ತಿಗೆದಾರರ ನಿರ್ಲಕ್ಷ್ಯ ಮತ್ತು ಸಮರ್ಪಕ ಉಸ್ತುವಾರಿಯ ಕೊರತೆಯಿಂದಾಗಿ ಕಾಮಗಾರಿ ಸ್ಥಗಿತಗೊಂಡಿದ್ದರೂ, ಜನಪ್ರತಿನಿಧಿಗಳು ಮಾತ್ರ ಸಮರ್ಥನೆಯಲ್ಲಿ ತೊಡಗಿದ್ದಾರೆ. ಈ ರಾಜಕೀಯ ಜಿದ್ದಾಜಿದ್ದಿನ ನಡುವೆ ಸಾಮಾನ್ಯ ಜನರ ಬದುಕು ಹೈರಾಣಾಗುತ್ತಿದ್ದು, 'ನಮಗೆ ಬೇಕಿರುವುದು ರಾಜಕೀಯ ಭಾಷಣವಲ್ಲ, ಸುಗಮ ಸಂಚಾರಕ್ಕೆ ಯೋಗ್ಯವಾದ ರಸ್ತೆ' ಎಂಬ ಆಕ್ರೋಶ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ತಕ್ಷಣ ಎಚ್ಚೆತ್ತುಕೊಂಡು ಸಮರೋಪಾದಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಎದುರಿಸುವುದು ಅನಿವಾರ್ಯವಾಗಲಿದೆ.

ಇಸಳೂರಿನಿಂದ ದಿನವೂ ಬೆಟಗೇರಿ ಹೋಗುತ್ತೇನೆ. ದಿನವೂ ಈ ರಸ್ತೆಯ ಅವ್ಯವಸ್ಥೆಯಿಂದ ನಾನು ಬಳಲಿದ್ದೇನೆ. ನಾನು ಹ್ಯಾಂಡಿಕ್ಯಾಪ್ಟ್ ಇರುವ ಕಾರಣ ಇದು ಕಷ್ಟವಾಗುತ್ತಿದೆ. ಪೆಟ್ರೋಲ್ ಪಂಪ್‌ನಲ್ಲಿ ಕೆಲಸ ಮಾಡುವ ಕಾರಣ ವರ್ಕ್ ಫ್ರಂ ಹೋಮ್ ಸಾಧ್ಯವಿಲ್ಲ.

- ಹೆಸರು ಹೇಳದ, ಸ್ಥಳೀಯ ನಿವಾಸಿ

ಅಗಾಗ ನಡೆಯುತ್ತಲೇ ಇರುವ ಪ್ರತಿಭಟನೆಗಳು

ಶಿರಸಿ-ಹಾವೇರಿ ಹೆದ್ದಾರಿಯ ಅವ್ಯವಸ್ಥೆಯ ವಿರುದ್ಧ ಈ ಭಾಗದ ಜನತೆ ಈಗಾಗಲೇ ಹತ್ತಾರು ಬಾರಿ ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ವಿವಿಧ ಸಂಘಟನೆಗಳು, ಚಾಲಕರ ಸಂಘಗಳು ಮತ್ತು ಸ್ಥಳೀಯ ಗ್ರಾಮಸ್ಥರು ಸಾಲು ಸಾಲು ಪ್ರತಿಭಟನೆಗಳನ್ನು ನಡೆಸುತ್ತಲೇ ಬಂದಿದ್ದಾರೆ. ರಸ್ತೆಯಲ್ಲಿ ಗಿಡ ನೆಡುವುದು, ಕೆಸರು ಗದ್ದೆಯಂತಾದ ಗುಂಡಿಗಳಲ್ಲಿ ಕಾಗದದ ದೋಣಿ ಬಿಡುವುದು ಹಾಗೂ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ವಿನೂತನವಾಗಿ ಆಕ್ರೋಶ ಹೊರಹಾಕಲಾಗಿದೆ. ಈ ಹಿಂದೆ ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ನೂರಾರು ಮನವಿ ಪತ್ರಗಳನ್ನು ಸಲ್ಲಿಸಲಾಗಿದ್ದರೂ, ಕೇವಲ 'ಶೀಘ್ರದಲ್ಲೇ ಕಾಮಗಾರಿ ಮುಗಿಯಲಿದೆ' ಎಂಬ ಹಾರಿಕೆ ಉತ್ತರವಷ್ಟೇ ದೊರೆತಿದೆ ಹೊರತು ಪ್ರಾಯೋಗಿಕವಾಗಿ ಯಾವುದೇ ಪ್ರಗತಿ ಕಂಡುಬಂದಿಲ್ಲ. ಹಲವು ಬಾರಿ ನಡೆದ ಸಂಘಟಿತ ಪ್ರತಿಭಟನೆಗಳ ಫಲವಾಗಿ ಅಧಿಕಾರಿಗಳು ಸ್ಥಳಕ್ಕೆ ಬಂದು ಭರವಸೆ ನೀಡಿ ಹೋಗಿದ್ದಾರೆಯೇ ಹೊರತು, ರಸ್ತೆಯ ಸ್ಥಿತಿ ಮಾತ್ರ ಸುಧಾರಿಸಿಲ್ಲ. ಇದರಿಂದ ರೊಚ್ಚಿಗೆದ್ದಿರುವ ಸಾರ್ವಜನಿಕರು ಮತ್ತು ಹೋರಾಟಗಾರರು ಇದೀಗ ಸರ್ಕಾರಕ್ಕೆ ಅಂತಿಮ ಗಡುವು ನೀಡಿದ್ದಾರೆ. 'ನಮ್ಮ ತಾಳ್ಮೆಯನ್ನು ಪರೀಕ್ಷಿಸಬೇಡಿ, ಕೇವಲ ಭರವಸೆಗಳಿಂದ ಹೊಟ್ಟೆ ತುಂಬುವುದಿಲ್ಲ' ಎಂದು ಗುಡುಗಿರುವ ಸ್ಥಳೀಯರು, ಬರುವ ದಿನಗಳಲ್ಲಿ ಹೆದ್ದಾರಿ ಬಂದ್ ಮಾಡಿ ಅನಿರ್ದಿಷ್ಟಾವಧಿ ಧರಣಿ ನಡೆಸುವ ಎಚ್ಚರಿಕೆ ನೀಡಿದ್ದಾರೆ. ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆಯಿಂದಾಗಿ ಈ ಭಾಗದ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವುದನ್ನು ಸಹಿಸಲು ಸಾಧ್ಯವಿಲ್ಲ ಎಂದು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದು, ಕಾಮಗಾರಿ ತಕ್ಷಣ ಆರಂಭವಾಗದಿದ್ದರೆ ಬೃಹತ್ ಮಟ್ಟದ ಜನತಾ ಚಳವಳಿ ರೂಪಿಸುವುದು ಖಚಿತ ಎಂದು ಎಚ್ಚರಿಸಿದ್ದಾರೆ.

ಬೇಸಿಗೆ ಶಿಬಿರದಿಂದ ಬೌದ್ಧಿಕ ಸಾಮರ್ಥ್ಯ ವೃದ್ಧಿ

ಕಾರವಾರ: ರಾಜ್ಯ ಬಾಲಭವನ ಸೊಸೈಟಿ(ರಿ) ಬೆಂಗಳೂರು, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸೊಸೈಟಿ ಉತ್ತರ ಕನ್ನಡ ಇವರ ಸಯೋಗದಲ್ಲಿ ಪ್ರಸಕ್ತ ಸಾಲಿನ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವು ಜಿಲ್ಲಾ ಸ್ತ್ರೀಶಕ್ತಿ ಭವನದಲ್ಲಿ ಇತ್ತಿಚಿಗೆ ನಡೆಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಪ್ರಕಾಶ ಹಾಲಮ್ಮನವರ ಮಾತನಾಡಿ, ಮಕ್ಕಳು ಮೊಬೈಲ್ ಬಳಕೆ ಕಡಿಮೆ ಮಾಡಿ ವಿದ್ಯಾರ್ಜನೆ ಕಡೆಗೆ ಗಮನ ಹರಿಸುವಂತೆ ಮತ್ತು ಸೃಜನಾತ್ಮಕ ಚಟುವಟಿಕೆಗಳಾದ ಯೋಗ, ಕರಾಟೆ, ಚಿತ್ರಕಲೆ, ಕರಕುಶಲ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಸ್ತ್ರೀಶಕ್ತಿ ಭವನದಲ್ಲಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವು ನಡೆಯಿತು.

ಶಿಕ್ಷಣಾಧಿಕಾರಿ ಎನ್.ಟಿ.ನಾಯಕ ಮಾತನಾಡಿ, ಮಕ್ಕಳು ಇಂತಹ ಬೇಸಿಗೆ ಶಿಬಿರಗಳಲ್ಲಿ ಹೆಚ್ಚಾಗಿ ತೊಡಗಿಕೊಳ್ಳುವ ಮೂಲಕ ತಮ್ಮ ಪ್ರತಿಭೆ, ಸಾಮರ್ಥ್ಯ ಹಾಗೂ ದೈಹಿಕ, ಮಾನಸಿಕ ಸದೃಢತೆ ಹೆಚ್ಚಿಸಿಕೊಂಡು, ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಾಗಿ ಭಾಗವಹಿಸುವಂತಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಭಾರ ಉಪ ನಿರ್ದೇಶಕ ಕುಮಾರ್ ಎನ್., ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಸುನೀಲ್ ಅಂಕೋಲೇಕರ, ಕಲ್ಪನಾ ರಶ್ಮಿ ಕಲಾ ಲೋಕದ ಅಧ್ಯಕ್ಷ ಸೂರ್ಯಪ್ರಕಾಶ ಮತ್ತಿತರರು ಉಪಸ್ಥಿತರಿದ್ದರು.

21 ದಿನಗಳ ಧ್ಯಾನ ತರಬೇತಿ | ತಾಲೂಕು ವೈದ್ಯಾಧಿಕಾರಿ ಡಾ. ಜಗದೀಶ ನಾಯ್ಕ ಅಭಿಮತ

ಧ್ಯಾನ ಎಲ್ಲ ರೋಗಗಳಿಗೆ ಉತ್ತಮ ಮದ್ದು

ಅಂಕೋಲಾ: ಧ್ಯಾನ ಎಲ್ಲ ರೋಗಗಳಿಗೂ ಶ್ರೇಷ್ಠ ಚಿಕಿತ್ಸೆ ಯಾಗಬಲ್ಲುದು. ಒತ್ತಡದ ಇಂದಿನ ಬದುಕಿನ ನಡುವೆ ದಿನದಲ್ಲಿ ಒಂದು ಗಂಟೆಯಾದರೂ ಪ್ರತಿಯೊಬ್ಬರೂ ಧ್ಯಾನ ಮಾಡಬೇಕು ಎಂದು ತಾಲೂಕು ವೈದ್ಯಾಧಿಕಾರಿಗಳಾದ ಡಾ. ಜಗದೀಶ ನಾಯ್ಕ ಕರೆ ನೀಡಿದರು.

ಕಲಾಭಾರತಿ ಟ್ರಸ್ಟ್ (ರಿ) ಅಂಕೋಲಾ ಆಶ್ರಯದಲ್ಲಿ ಹಮ್ಮಿಕೊಂಡ 21 ದಿನಗಳ ಧ್ಯಾನ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾತನಾಡಿದ ಅವರು ಮೆಡಿಕೇಶನ್ ಬದಲು ಮೆಡಿಟೇಶನ್ ಮಾಡಿ ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ ವಿಠ್ಠಲದಾಸ್ ಕಾಮತ್ ಮಾತನಾಡಿ ಧ್ಯಾನ ಪ್ರತಿನಿತ್ಯ ನನಗೆ ಸಹಕಾರಿಯಾಗಿದೆ. ಇದರ ಸದುಪಯೋಗ ಎಲ್ಲರೂ ಮಾಡಿಕೊಳ್ಳಬೇಕು ಎಂದರು. ಅಧ್ಯಕ್ಷತೆ ವಹಿಸಿದ ನಿವೃತ್ತ ಶಿಕ್ಷಕ ಎಂ.ಎಂ. ಕರ್ಕಿಕರ್ ಕಲಾಭಾರತಿ ಟ್ರಸ್ಟ್ ಇವರು ಮಾಡುತ್ತಿರುವ ಕಾರ್ಯ ಶ್ಲಾಘನೀಯ ಹಾಗೂ ಅವರ ಕಾರ್ಯ ಕ್ಕೆ ನನ್ನ ಸಹಕಾರ ಸದಾ ಇರುತ್ತದೆ ಎಂದರು. ವರ್ಷಿಣಿ ಶೆಟ್ಟಿ ಇವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಆಗಮಿಸಿದ ಸರ್ವರನ್ನೂ ಟ್ರಸ್ಟ್‌ನ ಅಧ್ಯಕ್ಷ ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಧ್ಯಾನ ಸಾಧಕಿ ಸುಧಾ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ನಿತೀನ್ ನಾಯ್ಕ ಅಂಕೋಲಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ನಂತರದಲ್ಲಿ ಅಂಕೋಲಾದ ಪಿರಮಿಡ್ ಮಾಸ್ಟರ್ ಸುಧಾ ಶೆಟ್ಟಿ ಧ್ಯಾನ ತರಬೇತಿಯನ್ನು ನೀಡಿದರು.

21 ದಿನಗಳ ಧ್ಯಾನ ತರಬೇತಿ ಕಾರ್ಯಕ್ರಮದಲ್ಲಿ ತಾಲೂಕು ವೈದ್ಯಾಧಿಕಾರಿ ಗಳಾದ ಡಾ. ಜಗದೀಶ ನಾಯ್ಕ ಮಾತನಾಡಿದರು.

ಇಸಳೂರಿನಲ್ಲಿ ಧಾರ್ಮಿಕ ಸಭೆಯ | ಆಶೀರ್ವಚನ ನೀಡಿದ ರಾಘವೇಶ್ವರ ಶ್ರೀ

ಸಂಕಷ್ಟಿಯಂದು ಗುರು-ಗಣಪನ ಆಗಮನ ಅಪರೂಪದ ಸಂಗತಿ

ಶಿರಸಿ: ಅಂಗಾರಕ ಸಂಕಷ್ಟಿಯ ಪುಣ್ಯ ದಿನದಂದು ಗುರು ಹಾಗೂ ಗಣಪನ ಆಗಮನ ಏಕಕಾಲಕ್ಕೆ ಸಂಭವಿಸಿರುವುದು ಅತ್ಯಂತ ಅಪರೂಪದ ಹಾಗೂ ಪವಿತ್ರವಾದ ಸಂಗತಿಯಾಗಿದೆ ಎಂದು ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಯವರು ಅಭಿಪ್ರಾಯಪಟ್ಟರು.

ತಾಲೂಕಿನ ಇಸಳೂರಿನಲ್ಲಿ ಆಯೋಜಿಸಲಾಗಿದ್ದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಅಂಗಾರಕ ಸಂಕಷ್ಟಿಯ ಆಚರಣೆಯಿಂದ ಸಕಲ ಸಂಕಷ್ಟಗಳು ನಿವಾರಣೆ ಯಾಗುತ್ತವೆ. ಗಣಹವನದಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವು ದರಿಂದ ಭಕ್ತರ ಬದುಕು ಧನ್ಯವಾಗುತ್ತದೆ ಎಂದರು. ಇಂದಿನ ಯಾಂತ್ರಿಕ ಜೀವನಶೈಲಿ ಹಾಗೂ ನಕಾರಾತ್ಮಕ ಭಾವನೆಗಳಿಂದಾಗಿ ಮನುಷ್ಯ ಮಾನಸಿಕ ಶಾಂತಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಸ್ತೋತ್ರ ಪಠಣ ಹಾಗೂ ದೈವಿಕ ಪಾರಾಯಣಗಳ ಮೂಲಕ ಅನಿಷ್ಟಗಳನ್ನು ದೂರಮಾಡಿ ನೆಮ್ಮದಿ ಕಂಡುಕೊಳ್ಳಬಹುದು ಎಂದು ಮಾರ್ಗದರ್ಶನ ನೀಡಿದರು.

ನಮ್ಮ ಪೂರ್ವಜರು ವೇದ ಮತ್ತು ಧಾರ್ಮಿಕ ಆಚರಣೆಗಳಿಗೆ ಅತ್ಯಂತ ಸಮೀಪ 'ವಾಗಿದ್ದರು. ಇಂದು ನಮ್ಮ ವೇದಗಳು ಹಾಗೂ ಶಂಕರಾಚಾರ್ಯರ ತತ್ವಗಳು ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆಯುತ್ತಿವೆ. ಈ ಜ್ಞಾನದ ಪರಂಪರೆಯಿಂದಲೇ ಭಾರತವು ವಿಶ್ವಗುರು ಸ್ಥಾನವನ್ನು ಅಲಂಕರಿಸಿ ಗೌರವಕ್ಕೆ ಪಾತ್ರವಾಗಿದೆ ಎಂದು ಶ್ರೀಗಳು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿದ್ವಾನ್ ಸಿ. ಎಚ್. ಗುರು ಶರ್ಮ ಅವರು, ಅಂಗಾರಕ ಸಂಕಷ್ಟಿಯ ಇಂತಹ ವಿಶೇಷ ದಿನದಂದು ಗುರುಗಳು ನಮ್ಮಲ್ಲಿಗೆ ಆಗಮಿಸಿ, ಗಣಹವನದಲ್ಲಿ ಪಾಲ್ಗೊಂಡು ಆಶೀರ್ವದಿಸಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಸಮಾರಂಭದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡು ಶ್ರೀಗಳ ದರ್ಶನ ಪಡೆದರು.

ಭೂಮಿ ಅಕ್ರಮ ಒತ್ತುವರಿ ಆರೋಪ ಸತ್ಯಕ್ಕೆ ದೂರ

ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದ ಹೆಗಡೆ | ಸಹಾಯಮಾಡಿದ್ದು ತಪ್ಪಲ್ಲ ಎಂದು ಸಮರ್ಥನೆ

ಕುಮಟಾ: ಮೂರೂರು ಗ್ರಾಮದ ಸರ್ವೆ ನಂಬರ್ 191ರಲ್ಲಿನ 3 ಎಕ್ರೆ ಸರಕಾರಿ ಅರಣ್ಯ ಭೂಮಿಯನ್ನು ರಾಜಕೀಯ ಪ್ರಭಾವ ಬಳಿಸಿ ಒತ್ತುವರಿಗೆ ಯತ್ನಿಸಿದ್ದಾಗಿ ನನ್ನ ವಿರುದ್ಧ ಹರ್ಷ ಹೆಗಡೆ ನೇತೃತ್ವದಲ್ಲಿ ಕೆಲವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಕುಮಟಾ ಬಿಜೆಪಿ ಮಂಡಲ ಅಧ್ಯಕ್ಷ ಜಿ.ಐ. ಹೆಗಡೆ ಹೇಳಿದ್ದಾರೆ.

ಈ ಕುರಿತು ಬುಧವಾರ ಇಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಆರೋಪವನ್ನು ನಿರಾಕರಿಸಿ ಮಾತನಾಡುತ್ತ, ನಾನು ಬಿಜೆಪಿ ಕಾರ್ಯಕರ್ತನಾಗಿ ಅತಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತ ಬಂದಿದ್ದೇನೆ. ದತ್ತಾತ್ರೇಯ ಈಶ್ವರ ಭಟ್ಟ ಅವರು 191/ಅ1 ಸರ್ವೆಗೆ ಸಂಬಂಧಿಸಿ 3 ಎಕರೆ ಪ್ರದೇಶವನ್ನು ಅಧಿಕೃತವಾಗಿ ಖರೀದಿಸಿದ್ದರೂ ಸಹ ಅರಣ್ಯ ಇಲಾಖೆ ತಮ್ಮ ಈ ಜಾಗಕ್ಕೆ ಪಾಗಾರ ಹಾಕಲು ತೊಂದರೆ ಕೊಡುತ್ತಿರುವ ಸಂಗತಿಯನ್ನು ನನ್ನ ಗಮನಕ್ಕೆ ತಂದಿದ್ದರು. ಈ ಕುರಿತು ಸಹಾಯ ಮಾಡುವಂತೆ ಕೋರಿಕೊಂಡಿದ್ದರು.

ಅವರ ಈ ಕೋರಿಕೆಯಂತೆ ಈ ಜಾಗದ ಖರೀದಿಗೆ ಸಂಬಂಧಿಸಿದ ಎಲ್ಲ ಕಾಗದ ಪತ್ರ ಪರಿಶೀಲಿಸಿ ಎಲ್ಲವು ಅಧಿಕೃತವಾಗಿರುವುದನ್ನು ಖಚಿತಪಡಿಸಿಕೊಂಡು ನಾನು ಸಹಾಯಕ್ಕೆ ಮುಂದಾಗಿದ್ದೆ. ಹೀಗಾಗಿ ಹರ್ಷ ಹೆಗಡೆ ನೇತೃತ್ವದಲ್ಲಿ ಕೆಲವರು 191 ಸರ್ವೆ ನಂಬರನಲ್ಲಿ ಸುಮಾರು 3 ಎಕರೆ ಅರಣ್ಯ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಲು ಯತ್ನಿಸಿದ್ದಾಗಿ ನನ್ನ ವಿರುದ್ಧ ಮಾಡಿರುವ ಆರೋಪಕ್ಕು ನನಗೂ ಯಾವುದೇ ಸಂಬಂಧವಿಲ್ಲ. ಜತೆಗೆ 191/ಅ1 ಕ್ಕೆ ಸಂಬಂಧಿಸಿದ ಸ್ಥಳದಲ್ಲಿ ಆರೋಪ ಮಾಡಿದವರು ಹೇಳುವಂತೆ ಯಾವುದೇ ದೇವಸ್ಥಾನವಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಮಟಾ ಬಿಜೆಪಿ ಮಂಡಲ ಅಧ್ಯಕ್ಷ ಜಿ.ಐ. ಹೆಗಡೆ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದ ದತ್ತಾತ್ರೇಯ ಈಶ್ವರ ಭಟ್ಟ ಮಾತನಾಡಿ, ಮೂರೂರು ಗ್ರಾಮದ 191 ಸರ್ವೆ ನಂಬರಿಗೆ ಸಂಬಂಧಿಸಿ ಇದ್ದ 175 ಎಕರೆ ಅರಣ್ಯ ಪ್ರದೇಶದಲ್ಲಿನ 3 ಎಕರೆ ಪ್ರದೇಶವನ್ನು ನನ್ನ ಸೋದರಮಾವ ಶ್ರೀಧರ ಮಹಾಬಲೇಶ್ವರ ಹೆಗಡೆ ಅವರಿಗೆ 1995-96ರಲ್ಲಿ ಜಿಲ್ಲಾಧಿಕಾರಿಗಳು ಮಂಜೂರಿ ಮಾಡಿದ್ದರಲ್ಲದೆ, ಈ 3 ಎಕರೆ 189 ಸರ್ವೆ ನಂಬರ ಚಕ್ ಬಂಧಿಯ ಲಗ್ತ ಇರುವ 191/ಅ1 ಪ್ರದೇಶ ಎಂದು ಸೂಚಿಸಿದ್ದರು.

ಈ ರೀತಿ ಮಂಜೂರಾದ ಹಾಗೂ ಸೂಚಿತ 3 ಎಕರೆ ಜಾಗವನ್ನು ನಾನು ಹಾಗೂ ಮಂಜುನಾಥ ವೆಂಕಟ್ರಮಣ ಹೆಗಡೆ ಜಂಟಿಯಾಗಿ 2014ರಲ್ಲಿ ನನ್ನ ಸೋದರ ಮಾವನಿಂದ ಖರೀದಿಸಿದ್ದೇವೆ. ಈ ಸ್ಥಳದ ಕುರಿತು ಅರಣ್ಯ ಹಾಗೂ ಸರ್ವೆ ಇಲಾಖೆಯಿಂದ ಜಂಟಿ ಸರ್ವೆ ನಡೆದು ಗಡಿ ಗುರುತು ಸಹ ಹಾಕಿ ನಮಗೆ ನೀಡಲಾಗಿದೆ. ನಾವು ಖರೀದಿಸಿದ ಈ ಜಾಗದಲ್ಲಿ ಜಟಕ ದೇವರಿಲ್ಲ. ಆರೋಪ ಮಾಡಿದವರು ಹೇಳಿರುವ ಜಟಕ ದೇವರು ನಮ್ಮ ಜಾಗದಿಂದ ತುಂಬಾ ದೂರದಲ್ಲಿದೆ ಎಂದ ದತ್ತಾತ್ರೇಯ ಈಶ್ವರ ಭಟ್ಟ, ಅಧಿಕೃತವಾಗಿ ಖರೀದಿಸಿರುವ ಹಾಗೂ ಜಂಟಿ ಸರ್ವೆ ಮೂಲಕ ನಮ್ಮ ಜಾಗದ ಸುತ್ತ ನಾವು ಕಾಂಪೌಂಡ್ ಹಾಕಲು ಮುಂದಾದಾಗಲೆಲ್ಲ ಅರಣ್ಯ ಇಲಾಖೆ ತಡೆಯುತ್ತಿರುವು ಏಕೆ ಎಂಬುದೇ ನಮಗೆ ಗೊತ್ತಾಗುತ್ತಿಲ್ಲ. ಹಾಗಾಗೀ ಈ ಸಮಸ್ಯೆ ನಿವಾರಣೆಗಾಗಿ ನಾವು ಜಿ.ಐ.ಹೆಗಡೆ ಅವರನ್ನು ಕೋರಿಕೊಂಡಿದ್ದರಿಂದ ಅವರು ನಮ್ಮ ಸಹಾಯಕ್ಕೆ ಬಂದಿದ್ದಾರೆ ಎಂದು ನುಡಿದರು.

ಈ ಸಂದರ್ಭದಲ್ಲಿ 191/ಅ1 ಮೂಲಕ ಮಾಲಕ ಶ್ರೀಧರ ಮಹಾಬಲೇಶ್ವರ ಹೆಗಡೆ, ಅವರ ಮಗ ಕೃಷ್ಣಮೂರ್ತಿ ಹೆಗಡೆ ಹಾಗೂ ಮಂಜುನಾಥ ವೆಂಕಟ್ರಮಣ ಹೆಗಡೆ ಉಪಸ್ಥಿತರಿದ್ದರು.

ಪಿ. & ಎಸ್.ಸಿ.ನಂ: 52/2026

ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯ ಧಾರವಾಡ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀ ಅನೀಲ ಕುಮಾರ ತಂದೆ ಹನುಮಂತರಾವ್ ಪಾಟೀಲ ಹಾಗೂ ಇತರರು

ವಿರುದ್ಧ

ಎದುರುಗಾರರು : ಯಾರೂ ಇಲ್ಲ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ಸಹ ಕಲಂ 20 ಮತ್ತು 151 ನೇದ್ದರ ಅಡಿಯಲ್ಲಿ ಕೊಟ್ಟ ನೋಟೀಸು

ಇದರಲ್ಲಿ ಅರ್ಜಿದಾರರು ಮಾನ್ಯ ನ್ಯಾಯಾಲಯದಲ್ಲಿ ಮೃತ್ಯು ಪತ್ರದ ದಿನಾಂಕ: 01-07-2025 ರ ಪ್ರಕಾರ ಪ್ರೋಬೆಟ್ ಪಡೆಯುವ ಸಲುವಾಗಿ ಈ ಪ್ರಕರಣವನ್ನು ದಾಖಲ ಮಾಡಿದ್ದು ಇರುತ್ತದೆ. ಸದರಿ ಪ್ರಕರಣದ ದಾವಾ ಆಸ್ತಿಗಳಾದ ಶೆಡ್ಯೂಲ-ಅ ವಾಸದ ಮನೆ ವ ಖುಲ್ಲಾ ಜಾಗೆ ಆಸ್ತಿಗಳು 1] ಧಾರವಾಡ ಶಹರದ, ಕಲ್ಯಾಣ ನಗರ ಹದ್ದಿಯಲ್ಲಿರುವ ಆಸ್ತಿ ಇದರ ಸಿ.ಟಿ.ಎಸ್. ನಂ: 1/A2A/1A, ಕ್ಷೇತ್ರ: 17.364 ಚ.ಮೀ. 2] ಸವದತ್ತಿ ಶಹರದ ರಾಮಾಪೂರ ಬಡಾವಣೆಯಲ್ಲಿರುವ ಆಸ್ತಿ ನಂ: 3145/1, ಪ್ಲಾಟ ನಂ: 53 ಹಾಗೂ ಆಸ್ತಿ ನಂ: 3145/2, ಪ್ಲಾಟ ನಂ:54 ಮತ್ತು 3] ಸವದತ್ತಿ ತಾಲೂಕಿನ ಹೂಲಿ ಗ್ರಾಮದ ಹದ್ದಿಯಲ್ಲಿರುವ ಮನೆ ವ ಖುಲ್ಲಾ ಜಾಗೆಯು ಆಸ್ತಿ ಅದರ ಗ್ರಾಮ ಪಂಚಾಯತಿ ಆಸ್ತಿ ಸಂಖ್ಯೆ: 327 ಮತ್ತು ಶೆಡ್ಯೂಲ-ಬ ಶೇತ್ಕಿ ಜಮೀನು ಅಸ್ತಿಗಳು ಬೆಳಗಾವಿ ಜಿಲ್ಲಾ, ಸವದತ್ತಿ ತಾಲೂಕ ಹೂಲಿ ಗ್ರಾಮದ ಹದ್ದಿಯಲ್ಲಿರುವ 1] ಸರ್ವೆ ನಂ: 306. ಕ್ಷೇತ್ರ 08 ಎಕರೆ 33 ಗುಂಟೆ, 2] ಸರ್ವೆ ನಂ: 288/3+4/1. ಕ್ಷೇತ್ರ 04 ಎಕರೆ 21 ಗುಂಟೆ, 3] ಸರ್ವೆ ನಂ: 289/2 ಕ್ಷೇತ್ರ 04 ಎಕರೆ 21 ಗುಂಟೆ, 4] ಸರ್ವೆ ನಂ: 312/2 ಕ್ಷೇತ್ರ 09 ಎಕರೆ 39 ಗುಂಟೆ, ಹಾಗೂ ಶೆಡ್ಯೂಲ-ಕ ಆಸ್ತಿಗಳಾದ ಕುಟುಂಬದ ಬಂಗಾರ, ಬೆಳ್ಳಿ ಹಾಗೂ ವಜ್ರದ ಆಭರಣಗಳು ಇದ್ದು, ಸದರಿ ಆಸ್ತಿಗಳು ಈ ಪ್ರಕರಣದ ದಾವಾ ಆಸ್ತಿಗಳು ಇರುತ್ತವೆ. ಈ ಕುರಿತು 'ವಿಶ್ವವಾಣಿ' ದೈನಂದಿನ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಲಾಗಿದೆ.

ಸದರಿ ಮೇಲ್ಕಂಡ ಪ್ರಕರಣದ ವಿಚಾರಣೆ ದಿನಾಂಕ; 12-06-2026 ರಂದು ನಿಗದಿಪಡಿಸಿದ್ದು, ಸದರಿ ಪ್ರಕರಣದ ವಸ್ತುವಿಷಯ ಕುರಿತು ಯಾರಾದರೂ ತಕರಾರು ವ ಅಭ್ಯಂತರಗಳನ್ನು ಹೊಂದಿದ್ದಲ್ಲಿ ಸದರಿ ದಿನಾಂಕದಂದು ಮುಂಜಾನೆ 11.00 ಗಂಟೆಗೆ ಮಾನ್ಯ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಿ ಮುಂದಿನ ಆದೇಶ ಮಾಡಲಾಗುವುದು ತಿಳಿಯಿರಿ.

ಇಂದು ದಿನಾಂಕ; 05-05-2026 ರಂದು ನನ್ನ ಸಹಿಂದೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಕೊಡಲಾಗಿದೆ.

ಧಾರವಾಡ ನ್ಯಾಯಾಲಯದ ಆದೇಶದ ಮೇರೆಗೆ
02/05/2026 **ಮುಖ್ಯ ಆಡಳಿತಾಧಿಕಾರಿಗಳು**
ಮಾನ್ಯ ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರ ನ್ಯಾಯಾಲಯ, ಧಾರವಾಡ

ಅಕ್ಷಯ ಜೋಶಿ
ಅರ್ಜಿದಾರರ ಪರ ವಕೀಲರು

ಚುನಾವಣೆಯನ್ನು ಅಸಿಂಧು ಗೊಳಿಸಿ

ಕುಮಟಾ: ಕುಮಟಾದ ಫಿಶರೀಸ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ನಡೆದ ಚುನಾವಣೆಯ ಮತ ಏಣಿಕೆಯಲ್ಲಿ ಕುಮಟಾದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹೈ ಕೋರ್ಟ್ ಆದೇಶವನ್ನು ಉಲ್ಲಂಘಿಸಿರುವ ಆರೋಪ ಕೇಳಿಬಂದಿದ್ದು, ಈ ಸಂಬಂಧ ಮೀನುಗಾರರ ಮುಖಂಡರು ಕುಮಟಾದ ಸಹಾಯಕ ನಿಬಂಧಕರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕುಮಟಾದ ಫಿಶರೀಸ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್‌ನ ಆಡಳಿತ ಮಂಡಳಿಯ 12 ನಿರ್ದೇಶಕ ಸ್ಥಾನಗಳಿಗೆ 2025ರ ಆ.17ರಂದು ಚುನಾವಣೆ ನಡೆದಿತ್ತು. 303 ಅರ್ಹ ಮತದಾರರ ಪೈಕಿ ಕೇವಲ 268 ಮಂದಿ ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ್ದರು. 111 ಅರ್ಹ ಸದಸ್ಯರು, 11 ಮತ್ತು 250 ಅನರ್ಹ ಸದಸ್ಯರು ಧಾರವಾಡ ಹೈಕೋರ್ಟ್‌ಗೆ ಹೋಗಿ ಮತದಾನದ ಹಕ್ಕನ್ನು ಪಡೆದು ಮತದಾನ ಮಾಡಿದ್ದಾರೆ. ಆದರೆ ಮತ ಏಣಿಕೆ ಮಾಡುವಾಗ 111 ಮತಗಳಿರುವ ಪೆಟ್ಟಿಗೆಯನ್ನು ಹೊರತು ಪಡಿಸಿ, ಉಳಿದ 250 ಮತ್ತು 11 ಮತದಾರರ ಮತಗಳನ್ನು ಮಾತ್ರ ಪರಿಗಣಿಸಿ, ಚುನಾವಣಾ ಫಲಿತಾಂಶ ಪ್ರಕಟಿಸಲಾಗಿದೆ.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸುಧಾಕರ ತಾರಿ ಮತ್ತು ಕೃಷ್ಣ ಹರಿಕಂತ್ರ, ನೇತೃತ್ವದಲ್ಲಿ ಮೀನುಗಾರ ಮುಖಂಡರು ಕುಮಟಾದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಚೇರಿಗೆ ತೆರಳಿ 250 ಸದಸ್ಯರ ಮತಗಳನ್ನು ಏಣಿಕೆ ಮಾಡಲು ಕೋರ್ಟ್ ಆರ್ಡರ್ ಇದೆಯೇ ಎಂದು ಪ್ರಶ್ನಿಸಿದ್ದಾರೆ. ಅಲ್ಲದೇ 250 ಮತಗಳನ್ನು ಏಣಿಕೆ ಪ್ರಕ್ರಿಯೆಯಲ್ಲಿ ಪರಿಗಣಿಸಿದಂತೆ ನಮ್ಮ 111 ಮತದಾರರ ಮತಗಳನ್ನು ಏಣಿಕೆಯಲ್ಲಿ ಯಾಕೆ ಪರಿಗಣಿಸಿಲ್ಲ ಎಂದು ಪ್ರಶ್ನಿಸಿ, ಇದಕ್ಕೆ ಸಂಬಂಧಿಸಿದ ಅಗತ್ಯ ಅಧಿಕೃತ ದಾಖಲೆಗಳನ್ನು ನೀಡುವಂತೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮತ್ತು ಚುನಾವಣಾ ಅಧಿಕಾರಿಯಾದ ಶಾರದಾ ಕವರಿಯವರ ಬಳಿ ಪಟ್ಟು ಹಿಡಿದಿದ್ದಾರೆ. ಅಲ್ಲದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಮತ ಏಣಿಕೆ ಪ್ರಕ್ರಿಯೆ ನಡೆಸಿ, ಫಲಿತಾಂಶ ಪ್ರಕಟಿಸಿ ಕೋರ್ಟ್ ಆದೇಶದ ಉಲ್ಲಂಘನೆ ಮಾಡಲಾಗಿದೆ ಎಂದು ಆರೋಪಿಸಿದರು. ತುರ್ತಾಗಿ ಮಾಹಿತಿ ನೀಡುವುದಿಲ್ಲ ಎಂದಿದಕ್ಕೆ ಆಕ್ರೋಶಗೊಂಡ ಮೀನುಗಾರ ಮುಖಂಡರು ಮಾಹಿತಿ ನೀಡುವ ವರೆಗೆ ಕಚೇರಿ ಬಿಟ್ಟು ತೆರಳುವುದಿಲ್ಲ ಎಂದು ಪಟ್ಟುಹಿಡಿದು ಕುಳಿತರು.

ಈ ಸಂದರ್ಭದಲ್ಲಿ ಮಾತನಾಡಿದ ಮೀನುಗಾರರ ಮುಖಂಡ ಮತ್ತು ಈ ಸೊಸೈಟಿ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದ ಸುಧಾಕರ ತಾರಿ ಅವರು. ಒಂದು ಗುಂಪಿನ ಗೆಲುವಿಗೆ ಸಹಾಯಕ ನಿಬಂಧಕರು ಸಹಕರಿಸಿದ್ದಾರೆ. ವಜಾಗೊಂಡ ಮತಗಳನ್ನು ಏಣಿಕೆಯಲ್ಲಿ ಪರಿಗಣಿಸಿದ್ದು, ನಮ್ಮ 111 ಮತಗಳನ್ನು ಏಣಿಕೆಯಲ್ಲಿ ಪರಿಗಣಿಸದೇ ಮೋಸ ಮಾಡಿದ್ದಾರೆ. ಹಾಗಾಗಿ ಈ ಚುನಾವಣೆಯನ್ನು ಅಸಿಂಧುಗೊಳಿಸಿ, ಹೊಸದಾಗಿ ಚುನಾವಣೆ ನಡೆಸಬೇಕು. ಅಲ್ಲಿಯ ವರೆಗೆ ಈ ಫಲಿತಾಂಶದ ಆಧಾರದ ಮೇಲೆ ಯಾವುದೇ ಕಾರಣಕ್ಕೂ ಆಡಳಿತ ಮಂಡಳಿಯನ್ನು ರಚಿಸಬಾರದು. ಆ ಸಂಬಂಧ ನಾವು ತಕರಾರು ಅರ್ಜಿಯನ್ನು ಕೂಡ ಕೊಟ್ಟಿದ್ದೇವೆ. ಒಂದು ವೇಳೆ ಕೋರ್ಟ್ ಆದೇಶವನ್ನು ಉಲ್ಲಂಘಿಸಿ, ಮುಂದಿನ ಪ್ರಕ್ರಿಯೆ ನಡೆಸಿದರೆ, ಸಹಾಯಕ ನಿಬಂಧಕರ ವಿರುದ್ಧ ಕಾನೂನು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

ಮೀನುಗಾರರ ಮುಖಂಡರು ಕುಮಟಾದ ಸಹಾಯಕ ನಿಬಂಧಕರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಆರ್.ಎಚ್ ನಾಯ್ಕ ಮಾತನಾಡಿ, ಕುಮಟಾದ ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಚೇರಿಯಲ್ಲಿ ಕೋರ್ಟ್ ಆದೇಶ ಪಾಲನೆ ಮಾಡದೇ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಲಾಗಿದೆ. 250 ಮತ ಏಣಿಕೆ ಮಾಡಿ ತಪ್ಪು ಚುನಾವಣೆ ಫಲಿತಾಂಶ ಪ್ರಕಟ ಮಾಡಿ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿದರು. ಈ ಪ್ರತಿಭಟನೆಯಲ್ಲಿ ಮೀನುಗಾರ ಮುಖಂಡ ಮನೋಹರ ಏರಾಗಿ, ವಿಜಯಾನಂದ ತೋರಸ್ಕರ್, ಆನಂದ ಹರಿಕಂತ್ರ, ಗಜಾನನ ಏರಾಗಿ, ಸಂತೋಷ ಏರಾಗಿ, ಮಧುಕರ ತಾರಿ, ಅಂಕುಶ ಕೌಣೇಕರ್, ದರ್ಶನ ತಾರಿ, ಇತರರು ಇದ್ದರು.

ಕೊಳಗಿಬೀಸ್‌ನಲ್ಲಿ ನಡೆದ ವೇದ ಶಿಬಿರದ ಸಮಾರೋಪ | ಕುಮಾರ ಭಟ್ಟ ಅಭಿಮತ

ವೇದಗಳು ಬದುಕಿನ ದಾರಿ ದೀಪಗಳು

ಶಿರಸಿ: ವೇದಗಳು ನಮ್ಮ ಬದುಕಿಗೆ ದಾರಿದೀಪವಾಗಿವೆ ಎಂದು ಕೊಳಗಿಬೀಸ್ ಮಾರುತಿ ದೇವಸ್ಥಾನದ ಮುಖ್ಯ ಅರ್ಚಕ ವೇ. ಮೂ. ಕುಮಾರ ಭಟ್ಟ ಅವರು ಹೇಳಿದ್ದಾರೆ.

ದೇವಸ್ಥಾನದಲ್ಲಿ ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿದ್ದ ಇಪ್ಪತ್ತೇಳನೆ ಹವ್ಯಕ ವೇದ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ವೇದ ಶಿಬಿರ ಕಳೆದ ಇಪ್ಪತ್ತಾರು ವರ್ಷಗಳಿಂದ ದೇವಸ್ಥಾನದಲ್ಲಿ ನಡೆಯುತ್ತಿದೆ. ಇದು ಸಾವಿರಾರು ಬಾಲಕರಿಗೆ ನಮ್ಮ ಪರಂಪರೆಯ ಕುರಿತು, ವೇದಗಳ ಕುರಿತು ಅರಿವನ್ನು ಮೂಡಿಸಿದೆ. ಅವರು ಅದೇ ಹಾದಿಯಲ್ಲಿ ಮುಂದುವರಿದಿದ್ದಾರೆ. ಇದು ಸಹಜಾನಂದ ಅವದೂತ ಗುರುಗಳು ಹಾಕಿಕೊಟ್ಟ ಮಾರ್ಗವಾಗಿದೆ. ಬಾಲಕರಿಗೆ ಮಾರ್ಗದರ್ಶನ ನೀಡುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಸ್ವರ್ಣಮಠದ ಸೀಮಾಧ್ಯಕ್ಷ ಉಮಾಪತಿ ಭಟ್ಟ ಮಾತನಾಡಿ, ನಮ್ಮ ಮಠದ ಮುಖ್ಯ ಕಾರ್ಯಕ್ರಮಗಳಲ್ಲಿ ವೇದ ಶಿಬಿರ ಪ್ರಮುಖವಾದುದು. ಮಾರುತಿ ದೇವಸ್ಥಾನದಲ್ಲಿ ಹಲವು ವರ್ಷಗಳಿಂದ ಇದು ತಪ್ಪದೇ ನಡೆಯುತ್ತಿರುವುದು ಶ್ಲಾಘನೀಯ. ಸರ್ವರ ಸಹಕಾರದಿಂದ ಇದು ನಡೆಯುತ್ತಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀಧರ ಹೆಗಡೆ ಎಳುಮನೆ ಅವರು ಸರ್ವರ ಸಹಕಾರಕ್ಕೆ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಶಿಬಿರದಲ್ಲಿ ಬಾಲಕರು ತೋರಿಸಿದ ಆಸಕ್ತಿ, ಹಾಗೂ ಅಭ್ಯಾಸಕ್ಕಾಗಿ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಯಿತು. ಪಿಯುಸಿಯಲ್ಲಿ ರಾಜ್ಯಕ್ಕೆ ಐದನೇ ಸ್ಥಾನ ಗಳಿಸಿ ಸಾಧನೆ ಮಾಡಿದ ಚೈತನ್ಯ ರವಿ ಹೆಗಡೆ ಹೊಸಮನೆಯವರನ್ನು ದೇವಸ್ಥಾನದ ವತಿಯಿಂದ ಸನ್ಮಾನಿಸಲಾಯಿತು.

ಒಂದು ಸಾವಿರದ ಒಂದು ಅಥರ್ವಶೀರ್ಷ ಪಾರಾಯಣ, ದೇವರಿಗೆ ಸಾವಿರದ ಎಂಟು ಮೋದಕ ಸಮರ್ಪಣೆ ನಡೆಯಿತು. ವೇ.ಮೂ ಕುಮಾರ ಭಟ್ಟ ಅವರು ಸ್ವಾಗತಿಸಿ, ವಂದಿಸಿದರು. ನಂದನ ಭಟ್ಟ ನಿರ್ವಹಿಸಿದರು. ಸಮಿತಿಯ ಪದಾಧಿಕಾರಿಗಳು, ಊರಿನ ಜನರು, ಶಿಬಿರಾರ್ಥಿಗಳ ಪಾಲಕರು ಉಪಸ್ಥಿತರಿದ್ದರು.



ದೇವಸ್ಥಾನದಲ್ಲಿ ಕಳೆದ ನಾಲ್ಕು ವಾರಗಳಿಂದ ನಡೆಯುತ್ತಿದ್ದ ಇಪ್ಪತ್ತೇಳನೆ ಹವ್ಯಕ ವೇದ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಕೊಳಗಿಬೀಸ್ ಮಾರುತಿ ದೇವಸ್ಥಾನದ ಮುಖ್ಯ ಅರ್ಚಕ ವೇ.ಮೂ. ಕುಮಾರ ಭಟ್ಟ ಮಾತನಾಡಿದರು.

ಸಮಾಚಾರ ಸಣ್ಣದಲ್ಲ

ಅಭಿಮಾನೋತ್ಸವಕ್ಕೆ ಅವಳಿ ನಗರದ ಜನ

ಹುಬ್ಬಳ್ಳಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜಕೀಯ ಹಾಗೂ ಜನಸೇವೆಯಲ್ಲಿ ಸಾರ್ಥಕ 50 ವರ್ಷ ಪೂರೈಸಿದ್ದು ಮೇ 9ರಂದು ಚಿತ್ರದುರ್ಗದಲ್ಲಿ ''ಬಿ.ಎಸ್.ವೈ ಅಭಿಮಾನೋತ್ಸವ'' ಆಯೋಜಿಸಿದೆ. ಅವಳಿ ನಗರದಿಂದ ಸಾವಿರಾರು ಜನ ಸಮಾವೇಶಕ್ಕೆ ತೆರಳಲಿದ್ದೇವೆ ಎಂದು ಶಾಸಕ ಮಹೇಶ್ ಟೆಂಗಿನಕಾಯಿ ತಿಳಿಸಿದರು. ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪನವರು ಕರ್ನಾಟಕದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದಾರೆ. ರೈತಪರ, ಮಹಿಳೆಯರ ಪರ, ಜನರ ಯೋಜನೆಗಳನ್ನು ರೂಪಿಸಿ ಮನೆ ಮಾತಾಗಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯದ ಕೇಂದ್ರ ಸಚಿವರು, ಸಂಸದರು ಹಾಗೂ 500ಕ್ಕೂ ಹೆಚ್ಚು ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು. ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಮಾತನಾಡಿ, ಮಾಜಿ ಸಿಎಂ ಬಿ.ಎಸ್.ವೈ ಅವರು ತಮ್ಮ ಜೀವನವನ್ನೇ ರಾಜ್ಯ ಬಿಜೆಪಿಗೆ ಕೊಡುಗೆಯಾಗಿ ನೀಡಿದ್ದಾರೆ ಎಂದರು. ಬಿಜೆಪಿ ಜಿಲ್ಲಾ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾತನಾಡಿ, ಚಿತ್ರದುರ್ಗದ ಸಮಾವೇಶಕ್ಕೆ ಹುಬ್ಬಳ್ಳಿಯಿಂದ ಸಾವಿರಾರು ಜನ ಅಭಿಮಾನಿಗಳು, ಕಾರ್ಯಕರ್ತರು, ಮುಖಂಡರು ತೆರಳಲಿದ್ದೇವೆ ಎಂದರು. ಮುಖಂಡರಾದ ಲಿಂಗರಾಜ ಪಾಟೀಲ್, ಜಯತೀರ್ಥ ಕಟ್ಟಿ, ಮಹೇಂದ್ರ ಕೌತಾಳ, ವಸಂತ ನಾಡಜೋಶಿ ಇದ್ದರು.

ರಂಭಾಪುರಿಶ್ರೀ, ಕಾಶಿ ಪೀಠ ಶ್ರೀ ನಾಳೆ ಭೇಟಿ

ಕುಂದಗೋಳ: ಪಟ್ಟಣದ ಪಂಚಗ್ರಹ ಹಿರೇಮಠ ಕಾಶಿ ಮಠದಷ್ಟೇ ಇತಿಹಾಸ ಹೊಂದಿದ್ದು,ಇದರ ಆಸ್ತಿ ಉಳಿಯ ಬೇಕು ಎನ್ನುವುದು ಭಕ್ತಾದಿಗಳ ಅಭಿಲಾಷೆ ಎಂದು ಮಾಜಿ ಶಾಸಕ ಎಂ.ಎಸ್. ಅಕ್ಕಿ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇಂದು ಮಠದ ಶ್ರೀ ಶಿಥಿಕಂಠೇಶ್ವರ ಶ್ರೀಗಳು ಮಠದ 52 ಎಕರೆ ಭೂಮಿಯನ್ನು ಇತರೆ ಉದ್ದೇಶಗಳಿಗೆ ಪರಿವರ್ತನೆ ಮಾಡುತ್ತಿದ್ದಾರೆ ಎನ್ನುವ ವಿಷಯವಾಗಿ ಇದೇ ಮೇ 8 ರಂದು ಮಠಕ್ಕೆ ಕಾಶಿ ಮಠದ ಶ್ರೀ ಜಗದ್ಗುರುಗಳು ಹಾಗೂ ರಂಭಾಪುರಿ ಮಠದ ಶ್ರೀ ಜಗದ್ಗುರುಗಳು ಬೆಳಗ್ಗೆ 11 ಗಂಟೆಗೆ ಆಗಮಿಸುತ್ತಿದ್ದು ಅವರು ಶ್ರೀಗಳ ಸಮ್ಮುಖದಲ್ಲಿ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. ಮುಖಂಡ ಸೋಮರಾವ್ ದೇಸಾಯಿ ಮಠದ ಬೆಲೆಬಾಳುವ ಆಸ್ತಿಯನ್ನು ಸ್ಥಳೀಯ ಭಕ್ತರಿಗಾಗಲಿ, ಜಗದ್ಗುರುಗಳಿಗಾಗಲಿ ಗಮನಕ್ಕೆ ತರದೆ ಏಕ ಪಕ್ಷೀಯವಾಗಿ ನಿರ್ಣಯ ಕೈಗೊಳ್ಳುತ್ತಿರುವುದನ್ನು ತಿಳಿದು ಜಗದ್ಗುರು ಆಗಮಿಸುವ ಸಂದರ್ಭ ಬಂತು ಎಂದರು. ಎ.ಬಿ. ಉಪ್ಪಿನ ಮಾತನಾಡಿ, ಸಮಾಜದಲ್ಲಿ ಮಠದ ಬಿಲೆಬಾಳುವ ಆಸ್ತಿಗಳು ಮಠದ ಯಾವುದೇ ಅಭಿವೃದ್ಧಿ ಕಾಣದೆ ಇದೇ ರೀತಿ ಪರಿವರ್ತನೆ ಆದರೆ ಸಮಾಜ ಅವನತಿ ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು. ಶಿವಾನಂದ ಬೆಂತೂರ, ನಾಗರಾಜ ದೇಶಪಾಂಡೆ, ಸಿದ್ದಪ್ಪ ಇಂಗಳಹಳ್ಳಿ, ಫಕ್ಕೀರೇಶ ನಾವಳ್ಳಿಮಠ, ರಮೇಶ್ ಕೊಪ್ಪದ, ಸುರೇಶ್ ಸವಣೂರ, ಶಂಕರಗೌಡ ದೂಡ್ಡಮನಿ ಇದ್ದರು.

ಮೆಣಸು ಖರೀದಿ ಹಣ: 50 ಲಕ್ಷ ರು. ವಂಚನೆ

ಹಾವೇರಿ: ಬ್ಯಾಡಗಿ ಒಣ ಮೆನಸಿನಕಾಯಿ ಮಾರುಕಟ್ಟೆಯ ತಿಪ್ಪೇಸ್ವಾಮಿ ಟ್ರೇಡರ್ಸ್‌ನ ಮಾಲೀಕ ನಾಗಪ್ಪ ಹಡಗಲಿ ರೈತನಿಂದ 127 ಕ್ವಿಂಟಾಲ್ ಒಣ ಮೆಣನಸಿನಕಾಯಿ ಖರೀದಿಸಿ ಹಣ ಕೊಡದೆ ಮೋಸ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಶಿರಗುಪ್ಪ ತಾಲೂಕಿನ ಬಡ್ರಹಾಳ ಗ್ರಾಮದ ರೈತನಾದ ಕೆ. ಮಹದೇವಪ್ಪ,ಪತ್ನಿ ಲಕ್ಷ್ಮಿ ಮಗ ಪಂಪಾಪತಿ, ಇವರಿಂದ ದಲ್ಲಾಳಿ ನಾಗಪ್ಪ ಹಡಗಲಿ 2023 ರಲ್ಲಿ 363 ಚೀಲ ಒಣ ಮೆಣಸಿನಕಾಯಿ ಪಡೆದುಕೊಂಡು ಒಳ್ಳೆಯ ದರಕ್ಕೆ ಮಾರಾಟ ಮಾಡಿಸಿ ಹಣ ಕೊಡಿಸುವೆ ಎಂದು ನಂಬಿಸಿ ಮೋಸ ಮಾಡಿದ್ದಾನೆ. ಹಣ ಕೇಳಿದರೆ ಜೀವ ಬೆದರಿಕೆ ಹಾಕುತ್ತಿದ್ದಾನೆ ಎಂದು ರೈತ ಗಂಭೀರ ಆರೋಪ ಮಾಡಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಬ್ಯಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ಯಾಡಗಿ ಪೊಲೀಸ್ ಇಲಾಖೆ ಐಪಿಎಸ್ ಅವರು ಪ್ರಕರಣ ದಾಖಲಿಸಿಕೊಂಡು ದಲ್ಲಾಳಿ ಜೊತೆ ಶ್ಯಾಮಲ್ ಆಗಿದ್ದಾರೆ ಎಂದು ರೈತ ದೂರಿದ್ದಾನೆ. ನನಗೆ ಮೋಸ ಮಾಡಿದ ದಲ್ಲಾಳಿ ಹಾಗೂ ಪಿಎಸೈ ವಿರುದ್ಧ ತನಿಖೆ ಆಗಬೇಕು. ನಮ್ಮ ಮಣಸಿಕಾಯಿ ಮಾರಿ ಹಣ ಕೊಡದೇ ನಮ್ಮ ಮೇಲೇನೆ ದೌರ್ಜನ್ಯ ಮಾಡುತ್ತಿದ್ದಾನೆ. ನಂಬಿ ಬೆಳೆ ನೀಡಿದ್ದ ಹಣ ಕೊಡಿ ಎಂದು ಕೇಳಲು ಹೋದರೆ ಜೀವ ಬೆದರಿಕೆ ಹಾಕುತ್ತಿದ್ದಾನೆ. ದಲ್ಲಾಳಿ ನಾಗಪ್ಪ ಹಡಗಲಿಯನ್ನು ಕೂಡಲೇ ಬಂಧಿಸಿ ನ್ಯಾಯ ಕೊಡಿಸಿ ಇಲ್ಲದಿದ್ದರೆ ಅಮರಣ ಉಪವಾಸ ಮಾಡುವುದಾಗಿ ರೈತ ಕೆ. ಮಹಾದೇವಪ್ಪ ಎಚ್ಚರಿಕೆ ನೀಡಿದ್ದಾನೆ.

ವಿರಾಮ
ಪ್ರತಿ ಭಾನುವಾರ

ರಾಜಭವನ ಚಲೋ ಚಳವಳಿ | ಧಾರವಾಡ ಬಂದ್ ಕರೆಗೆ ಹೋರಾಟಗಾರರ ನಿರ್ಧಾರ

ಪ್ರತ್ಯೇಕ ಪಾಲಿಕೆ ನಿರ್ಣಯ: ರಾಜ್ಯಪಾಲರಿಗೆ ಗಡುವು

ಶ್ರೀಕಾಂತ ಬೆಟಗೇರಿ, ಧಾರವಾಡ:

ಪ್ರತ್ಯೇಕ ಮಹಾನಗರ ಪಾಲಿಕೆ ವಿಷಯ ಕುರಿತಂತೆ ರಾಜ್ಯಪಾಲರು ಮೂರು ದಿನಗಳಲ್ಲಿ ಚರ್ಚೆಗೆ ಅವಕಾಶ ನೀಡದೇ ಹೋದರೇ, ರಾಜಭವನ ಚಲೋ ಚಳವಳಿಗೂ ಸ್ಪಂದಿಸದಿದ್ದರೇ, ಧಾರವಾಡ ಬಂದ್ಗೆ ಕರೆ ಕೊಡುವುದಕ್ಕೂ ಹೋರಾಟಗಾರರ ಸಭೆ ಒಮ್ಮತದ ನಿರ್ಧಾರ ಕೈಗೊಂಡಿತು.

ಬೃಹತ್ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನಾಗಿಸಲು ಏ. 30ರಂದು ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಯಾವುದೇ ರೀತಿ ಚರ್ಚೆಗೆ ಅವಕಾಶ ನೀಡದೇ ಏಕಪಕ್ಷೀಯವಾಗಿ ಬಿಜೆಪಿ ಸದಸ್ಯರು ಠರಾವು ಪಾಸು ಮಾಡಿದ ವಿಷಯವೇ ಈಗ ಹೋರಾಟಕ್ಕೆ ನಾಂದಿ ಹಾಡಿದೆ.

> ಬೃಹತ್ ಮಹಾನಗರ ಪಾಲಿಕೆ ಎನ್ನುವುದು ತಪ್ಪು. ಒತ್ತಡ ಹಾಕುವ ಕೆಲಸವಾಗಬೇಕು. ಮೊನ್ನೆ ತೆಗೆದುಕೊಂಡ ಠರಾವು ಸರಕಾರಕ್ಕೆ ಕಳುಹಿಸಿಕೊಡುವ ಕೆಲಸವಾಗುತ್ತಿದೆ. ಅಷ್ಟರಲ್ಲಿಯೇ ಎಚ್ಚೆತ್ತುಕೊಳ್ಳಬೇಕು.
> -ವೀರಣ್ಣ ರಾಜೂರ

ಈ ವಿಷಯವಾಗಿ 'ವಿಶ್ವವಾಣಿ' ಪತ್ರಿಕೆಯು ಕಳೆದ ಐದು ದಿನಗಳಿಂದ ಸರಣಿ ಸುದ್ದಿ ಪ್ರಕಟಿಸುವ ಮೂಲಕ ಹೋರಾಟಗಾರರನ್ನು ಎಚ್ಚರಿಸುವ, ಕಣ್ತೆರೆಸುವ ಕೆಲಸ ಮಾಡುತ್ತಾ ಬಂದಿದೆ. ಇದರಿಂದಾಗಿ ಎಲ್ಲಾ ಸಂಘಟನೆ ಹೋರಾಟಗಾರರು ಒಂದೆಡೆ ಸೇರುವ ಮೂಲಕ ಧಾರವಾಡ ಪ್ರತ್ಯೇಕ ಪಾಲಿಕೆಯ ವಿರೋಧಿಗಳ ವಿರುದ್ಧ ಹರಿಹಾಯ್ದರು. ರಾಜ್ಯಪಾಲರ ನಡೆಗೂ ತೀವ್ರ ಆಕ್ರೋಶ ವ್ಯಕ್ತವಾಯಿತು.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಬುಧವಾರ ಧಾರವಾಡ ಸ್ವಾಭಿಮಾನಿ ಹೋರಾಟಗಾರರ ಚಿಂತನ-ಮಂಥನ ಸಭೆಯಲ್ಲಿ ಬಿಜೆಪಿ ನಾಯಕರನ್ನು ಹೊರತು ಪಡಿಸಿ, ಎಲ್ಲಾ

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಭವನದಲ್ಲಿ ಬುಧವಾರ ಧಾರವಾಡ ಸ್ವಾಭಿಮಾನಿ ಹೋರಾಟಗಾರರ ಚಿಂತನ-ಮಂಥನ ಸಭೆ ನಡೆಯಿತು.

> ಈ ಮೊದಲು ಪಾಲಿಕೆಗೆ ಪ್ರಹ್ಲಾದ ಜೋಶಿಯವರು ಧಾರವಾಡ ಪ್ರತ್ಯೇಕ ಪಾಲಿಕೆಯಾಗಬೇಕು ಎಂದು ಪತ್ರ ನೀಡಿದ್ದಾರೆ. ಈ ಮೊದಲಿನ ಹೋರಾಟದ ವೇಳೆ ಬಿಜೆಪಿ ಪಾಲಿಕೆ ಸದಸ್ಯರು ರಾಜೀನಾಮೆ ನೀಡುತ್ತೇವೆ ಎಂದವರು ಸಹಿ ಹಾಕಿದ್ದಾರೆ. ಆದರೆ, ಈಗ ಅವರೇ ಉಲ್ಟಾ ಹೊಡೆದಿದ್ದಾರೆ. ಧಾರವಾಡದ ಸ್ವಾಭಿಮಾನದ ಪ್ರಶ್ನೆ.
> -ಮನೋಜ ಪಾಟೀಲ

ಹೋರಾಟಗಾರರು ಭಾಗವಹಿಸಿದ್ದರು. ಧಾರವಾಡ ಪ್ರತ್ಯೇಕ ಪಾಲಿಕೆಗೆ ವಿರೋಧ ವ್ಯಕ್ತಪಡಿಸಿದವರ ವಿರುದ್ಧ ತಕ್ಕ ಪಾಠ ಕಲಿಸುವ ಎಚ್ಚರಿಕೆಯನ್ನು ಸಹ ನೀಡಿದರು.

ಜಿಲ್ಲಾಧಿಕಾರಿಗೆ ಮನವಿ:

ಸುಮಾರು ನಾಲ್ಕು ಗಂಟೆಗಳ ಕಾಲ ಗಂಭೀರ ಚಿಂತನೆ, ಚರ್ಚೆ ನಡೆಸಿ ತೀರ್ಮಾನದ ಬಳಿಕ ನೂರಾರು ಸಂಖ್ಯೆಯಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ

> ಗೋಕಾಕ ಚಳುವಳಿ ಪ್ರಾರಂಭದ ಪೂರ್ವದಲ್ಲಿಯೇ ವಿದ್ಯಾವರ್ಧಕ ಸಂಘದಲ್ಲಿ ಸಭೆ ನಡೆದಿತ್ತು. ಈಗ ಮತ್ತೊಂದು ಮಹತ್ವದ ಹೋರಾಟಕ್ಕೆ ಸನ್ನದ್ಧವಾಗಿದೆ. ಈಗ ಮತ್ತೆ ದೊಡ್ಡ ಪ್ರಮಾಣದ ಜಾಥಾ, ಧಾರವಾಡ ಬಂದ್ ಮಾಡುವುದು ಅಗತ್ಯ.
> -ಶಂಕರ ಹಲಗತ್ತಿ

ಧಾರವಾಡ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ರಾಜ್ಯಪಾಲರ ವಿಳಂಬ ನೀತಿಗೆ ಹಾಗೂ ಪ್ರತ್ಯೇಕ ಪಾಲಿಕೆ ವಿರೋಧಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ನಂತರ ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಧಾರವಾಡ ಬಂದ್‌ಗೆ ಕರೆ :

ರಾಜ್ಯಪಾಲರು ಕೂಡಲೇ ತಮ್ಮನ್ನು ಕಂಡು ಮುಕ್ತವಾಗಿ ಚರ್ಚಿಸಲು ಎರಡು ಮೂರು ದಿನದಲ್ಲಿ

> ರಾಜ್ಯಪಾಲರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಭೇಟಿ ಮಾಡಲು ಹೇಳಿದರು. ಆದರೆ, ಕಡತ ಇಟ್ಟುಕೊಂಡು ಕುಳಿತರು. ಆರು ತಿಂಗಳ ಬಳಿಕ ಮತ್ತೆ ಸಚಿವ ಸಂಪುಟದ ಮುಂದೆ ಹೋಗಿ ಅನುಮೋದನೆ ಪಡೆಯಬೇಕಾಗುತ್ತದೆ. ಇದರಲ್ಲಿ ರಾಜಕೀಯ ಹಿತಾಸಕ್ತಿಯೇ ಹೆಚ್ಚು ಕಂಡು ಬರುತ್ತಿದೆ.
> -ವೆಂಕಟೇಶ ಮಾಚಕನೂರ, ಧಾರವಾಡ

ಕಾಲ ಅವಕಾಶ ಕೊಡಬೇಕು. ಧಾರವಾಡ ಪ್ರತ್ಯೇಕ ಪಾಲಿಕೆಯ ರಾಜ್ಯ ಸರಕಾರದ ನಿರ್ಧಾರವನ್ನು ಅನುಮೋದಿಸಿ ಕಳಿಸಬೇಕು. ಒಂದು ವೇಳೆ ಅನುಮೋದನೆ ಕೊಡದಿದ್ದಲ್ಲಿ ರಾಜಭವನ ಚಲೋ ಸತ್ಯ ಪ್ರತಿಪಾದನಾ ಸತ್ಯಾಗ್ರಹವನ್ನು ರಾಜ್ಯಪಾಲರ ಕಚೇರಿಯ ಮುಂದೆ ಮಾಡಲಾಗುವುದು. ಇಲ್ಲವಾದಲ್ಲಿ ಸಮಗ್ರ ಧಾರವಾಡ ಜನತೆ ಕೂಡಿ ಧಾರವಾಡ ಬಂದ್ಗೆ ಕರೆ ನೀಡಲು ನಿರ್ಣಯ ಕೈಗೊಳ್ಳಲಾಯಿತು.

ಮನವಿಯಲ್ಲಿ ಎಚ್ಚರಿಕೆ :

ಧಾರವಾಡದ ನಾಗರಿಕರ ದಶಕಗಳ ಬೇಡಿಕೆಯಾದ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಸರಕಾರ ಜನವರಿ 2025ರಲ್ಲಿ ಅಧಿಕೃತವಾಗಿ ಸಚಿವ ಸಂಪುಟದ ಅನುಮೋದನೆ ನೀಡಿದೆ. ಈ ಪ್ರಸ್ತಾವನೆ ಕಳೆದ ಹಲವು ತಿಂಗಳುಗಳಿಂದ ತಮ್ಮ ಅಂಕಿತಕ್ಕಾಗಿ ಬಾಕಿ ಉಳಿದಿರುವುದು ಕಳವಳಕಾರಿ ಸಂಗತಿ. ಸರಕಾರ ಕಳುಹಿಸಿದ ಮಸೂದೆಗಳ ಮೇಲೆ ರಾಜ್ಯಪಾಲರು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಿರ್ಧಾರ ತೆಗೆದುಕೊಳ್ಳಬೇಕು. ಅದರೆ ಮಸೂದೆಗಳನ್ನು ಅನಗತ್ಯ ತಡೆ ಹಿಡಿಯುವುದು ಸಂವಿಧಾನ ಬಾಹಿರ ಎಂದು ಸುಪ್ರಿಂ ಕೋರ್ಟ್ ಈಗಾಗಲೇ ಅನೇಕ ಬಾರಿ ಎಚ್ಚರಿಸಿದೆ.

ಪಿಐಎಲ್ ಬಗ್ಗೆಯೂ ಚರ್ಚೆ:

ಸರಕಾರ ಸಂಪುಟದಲ್ಲಿ ನಿರ್ಧಾರ ತೆಗೆದುಕೊಂಡು ತಿಂಗಳುಗಳೇ ಕಳೆದಿದ್ದರೂ ರಾಜ್ಯಪಾಲರು ಯಾವುದೇ

> ಈ ವಿಷಯದಲ್ಲಿ ರಾಜಕಾರಣ ಬರಬಾರದು. ಧಾರವಾಡ ಪಾಲಿಕೆ ಪ್ರತ್ಯೇಕತೆಗೆ ಅಂತಿಮ ಘಟ್ಟಕ್ಕೆ ಬಂದಿದೆ. ರಾಜ್ಯಪಾಲರಿಗೆ ಒತ್ತಾಯ ಮಾಡಬೇಕು. ರಾಜ್ಯಪಾಲರು ರಾಜಕೀಯಕ್ಕೆ ಒಳಗಾಗಿದ್ದಾರೆ. ಮೂರು ದಿನ ಗಡುವು ನೀಡಿ, ರಾಜ್ಯಪಾಲರ ಕಚೇರಿ ಮುಂದೆ ಧರಣಿ ಮಾಡೋಣ, ಅದಕ್ಕೂ ಮಣಿಯದಿದ್ದರೆ ಧಾರವಾಡ ಬಂದ್ ಮಾಡಿ ಒತ್ತಡ ಹೇರೋಣ.
> -ಬಿ.ಡಿ. ಹಿರೇಮಠ, ಧಾರವಾಡ

ಕ್ರಮ ಕೈಗೊಂಡಿಲ್ಲ ಎಂದು ಜನ ಆಕ್ರೋಶಗೊಂಡಿದ್ದಾರೆ. ರಾಜ್ಯಪಾಲರು ಮಂತ್ರಿಮಂಡಳಿಯ ಸಲಹೆಯಂತೆ ನಡೆಯಬೇಕು ಮತ್ತು ವಿಧಿ 200ರ ಅಡಿಯಲ್ಲಿ ವಿಳಂಬ ಮಾಡುವಂತಿಲ್ಲ ಎಂಬ ಸುಪ್ರೀಂ ಕೋರ್ಟ್ ಹೇಳಿದೆ. ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಬೇಕೆಂದು ಸಭೆಯಲ್ಲಿ ಸಲಹೆ ಕೇಳಿ ಬಂದವು.

ಸಭೆಯಲ್ಲಿದ್ದ ಗಣ್ಯರು :

ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿ ಸಾನಿಧ್ಯ ವಹಿಸಿದ್ದರು.ವಿಧಾನ ಪರಿಷತ್ ಮಾಜಿ ಸಭಾಪತಿ ವೀರಣ್ಣ ಮತ್ತಿಕಟ್ಟಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮೇಯರ್‌ದಾನಪ್ಪ ಕಬ್ಬೇರ, ಪ್ರಮುಖರಾದ ಮಹಾದೇವ ಹೊರಟ್ಟಿ, ಮೋಹನ ಮೋರೆ, ನಾಗರಾಜ ಗೌರಿ, ಈಶ್ವರ ಶಿವಳ್ಳಿ, ಶಿವಶಂಕರ ಹಂಪಣ್ಣನವರ, ಪರಮೇಶ್ವರ ಕಾಳೆ, ಬಸವರಾಜ ಜಾಧವ, ಅರವಿಂದ ಏಗನಗೌಡರ, ಶಿವಾನಂದ ಕವಳಿ, ವೀರಣ್ಣ ಶೆಟ್ಟರ್,ಮನೋಜ ಕರ್ಜಗಿ, ವಸಂತ ಅರ್ಕಾಚಾರಿ, ಸಂತೋಷ ನೀರಲಕಟ್ಟಿ, ಗೌರಮ್ಮ ಬಲೋಗಿ, ಬಿ.ಎಲ್. ಪಾಟೀಲ ಹಾಗೂ ಪಾಲಿಕೆ ಸದಸ್ಯರಾದ ರಾಜಶೇಖರ ಕಮತಿ, ಕವಿತಾ ಕಬ್ಬೇರ, ಶಂಭು ಸಾಲಿಮನಿ, ತುಳಜಪ್ಪ ಪೂಜಾರ, ಲಕ್ಷ್ಮೀ ಹಿಂಡಸಗೇರಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡಿದರು. ಹಿರಿಯ ಮುಖಂಡ ಗುರುರಾಜ ಹುಣಸಿಮರದ ಸಭೆ ನಿರ್ವಹಿಸಿದರು.

ಡೆಂಘಿ ಕ್ರಮಗಳ ಕುರಿತು ಜಾಗೃತಿ ಮೂಡಿಸಿ

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಡಿಸಿ ಕಚೇರಿ ಸಭಾಂಗಣದಲ್ಲಿ ಅಂತರ್‌ಇಲಾಖಾ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹಾವೇರಿ: ನಿಂತ ನೀರಿನಲ್ಲಿ ಈಡೀಸ್ ಈಜಿಪ್ತಿ ಸೊಳ್ಳೆ ಉತ್ಪಾದನೆಯಿಂದ ಡೆಂಘಿ ಹರಡುವ ಸಾಧ್ಯತೆ ಇದ್ದು, ಮುಂಜಾಗ್ರತಾ ಕ್ರಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಆರೋಗ್ಯ ಇಲಾಖೆ ಜೊತೆ ಎಲ್ಲ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಅಂತರ್ ಇಲಾಖಾ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಗಟಾರುಗಳಲ್ಲಿ ನೀರು ಸರಿಯಾಗಿ ಹರಿದು ಹೋಗುವಂತೆ ಕ್ರಮವಹಿಸಬೇಕು ಎಂದು ತಿಳಿಸಿದರು.

ಕೃಷಿ ಹೊಂಡಗಳಲ್ಲಿ, ಕೆ.ಎಸ್.ಆರ್.ಟಿ.ಸಿ. ಡಿಪೋಗಳ ಟೈಯರ್ನಲ್ಲಿ ನೀರು ನಿಂತು ಅಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಡೆಂಘಿ ತಡೆಗೆ ಆರೋಗ್ಯ ಇಲಾಖೆಯೊಂದಿಗೆ ಸಾರಿಗೆ ಇಲಾಖೆ, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೀನುಗಾರಿಕೆ ಇಲಾಖೆ ಕೈಜೋಡಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ರೋಗಗಳ ನಿಯಂತ್ರಣಾಧಿಕಾರಿ ಡಾ. ಜಗದೀಶ್ ಪಾಟೀಲ ಅವರು ಮಾತನಾಡಿ, ಜಿಲ್ಲೆಯಲ್ಲಿ ಆರು ಡೆಂಘಿ ಪ್ರಕರಣ ಹಾಗೂ ಮೂರು ಚಿಕುನ್ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. ಈಡೀಸ್ ಈಜಿಪ್ತಿ ಸೊಳ್ಳೆ ಹಗಲು ಹೊತ್ತು ಕಚ್ಚುವುದರಿಂದ ಡೆಂಘಿ ಜ್ವರ ಬರುತ್ತದೆ. ಇದು ಸಂಗ್ರಹಿಸಿದ ಸ್ವಚ್ಛ ನೀರಿನಲ್ಲಿ ಉತ್ಪತ್ತಿಯಾಗುತ್ತದೆ. ಹಾಗಾಗಿ ಸಾರ್ವಜನಿಕ ಸ್ಥಳಗಳು, ಕಚೇರಿ ಹಾಗೂ ಮನೆ ಸುತ್ತಮುತ್ತ ನೀರು ನಿಲ್ಲದಂತೆ ಕ್ರಮವಹಿಸಬೇಕು ಎಂದರು.

ಜಿಲ್ಲೆಯಲ್ಲಿರುವ ಕೆರೆ, ಹೊಂಡ, ಬಾವಿ ಹಳ್ಳ, ಜಲ ಮೂಲಗಳಿಗೆ ಲಾರ್ವಾಹಾರಿ ಗಪ್ಪಿ ಮತ್ತು ಗಂಬೂಸಿಯಾ ಮೀನುಗಳನ್ನು ಬಿಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೊಲ, ಗದ್ದೆ ಕಟ್ಟಡ ನಿರ್ಮಾಣ ಪ್ರದೇಶ ಮತ್ತು ಇತರೆ ಹೊರಾಂಗಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವವರಿಗೆ, ಅಂಗನವಾಡಿ ಹಾಗೂ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಆರೋಗ್ಯ ಶಿಕ್ಷಣ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಜಯಾನಂದ, ಡಾ. ಚನ್ನಬಸಯ್ಯ ವಿರಕ್ತ ಮಠ, ಡಾ.ಸರಿತಾ, ಡಾ. ನೀಲೇಶ, ತಾಲೂಕಾ ಆರೋಗ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಸರಕಾರಿ ಆಸ್ಪತ್ರೆ ಉತ್ತಮ ಸೇವೆ ನೀಡಲಿ

ಹಾವೇರಿ: ಸರಕಾರಿ ಆಸ್ಪತ್ರೆಗಳಿಗೆ ಬರುವ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡಬೇಕು. ಸ್ಥಳೀಯ ಮಟ್ಟದಲ್ಲೇ ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗುವಂತಾಗಬೇಕು ಎಂದು ತಾಲೂಕಾ ಆರೋಗ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಅವರು ಸೂಚನೆ ನೀಡಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಅಭಿಯಾನದ ಪ್ರಗತಿ ಪರಿಶೀಲನಾ ಸಭೆ ಹಾಗೂ ಜಿಲ್ಲಾ ಕಣ್ಗಾವಲು ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿವಿಧ ತಾಲೂಕಾ ಆರೋಗ್ಯಾಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಗರ್ಭಿಣಿಯರು ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ತಿಳುವಳಿಕೆ ನೀಡಬೇಕು. ಗರ್ಭಿಣಿ, ಬಾಣಂತಿಯರ ಮಾಹಿತಿಯನ್ನು ವಿಳಂಬ ಮಾಡದೇ ನೋಂದಣಿ ಮಾಡಬೇಕು, ಸಮಸ್ಯೆ ಇರುವ ಗರ್ಭಿಣಿಯರ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು, ನಿಗಾವಹಿಸಬೇಕು. ಸಮಸ್ಯೆ ಇದ್ದರೆ ಆಸ್ಪತ್ರೆಯಲ್ಲಿ ಒಳರೋಗಿ ವಿಭಾಗಕ್ಕೆ ದಾಖಲಿಸಿಕೊಂಡು ಅಗತ್ಯ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಣ್ಣಪುಟ್ಟ ಸಮಸ್ಯೆ ತಮ್ಮ ಹಂತದಲ್ಲೇ ಬಗೆಹರಿಸಿಕೊಳ್ಳಬೇಕು. ತಂತ್ರಜ್ಞಾನ ಬಹಳ ಬೆಳೆದಿದೆ, ಅಸಾಧ್ಯವಾಗದ ಕೆಲಸ ಯಾವುದೂ ಇಲ್ಲ. ಕೆಲಸ ಮಾಡುವ ಮನಸ್ಸು ಬೇಕು, ಕಾರಣ ಹೇಳುವುದು ಬಿಟ್ಟು ಕೆಲಸಮಾಡುವ ಮನೋಭಾವ ಬೆಳೆಸಿಕೊಳ್ಳಿ, ವೈದ್ಯಕೀಯ ಸೌಲಭ್ಯಗಳ ಸದ್ಬಳಕೆಯಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಜಯಾನಂದ ಅವರು ಮಾತನಾಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ.75 ರಷ್ಟು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಶೇ.25 ರಷ್ಟು ಹೆರಿಗೆಗಳು ಆಗುತ್ತಿವೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಡಾ. ಚನ್ನಬಸಯ್ಯ ವಿರಕ್ತಮಠ, ಡಾ.ಸರಿತಾ, ಡಾ.ಜಗದೀಶ ಪಾಟೀಲ, ಡಾ. ನೀಲೇಶ, ತಾಲೂಕಾ ಆರೋಗ್ಯಾಧಿಕಾರಿಗಳು, ಉಪಸ್ಥಿತರಿದ್ದರು.

ಶ್ರೀ ಪಂಚಗ್ರಹ ಹಿರೇಮಠದ ಆಸ್ತಿ ಉಳಿಯಲಿ

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಂ.ಎಸ್.ಅಕ್ಕಿ ಮಾತನಾಡಿದರು.

ಕುಂದಗೋಳ: ಪಟ್ಟಣದ ಶ್ರೀ ಪಂಚಗ್ರಹ ಹಿರೇಮಠವು ಕಾಶಿ ಮಠದಷ್ಟೇ ಇತಿಹಾಸ ಹಿನ್ನೆಲೆಯನ್ನು ಹೊಂದಿದ್ದು,ಇದರ ಆಸ್ತಿ ಉಳಿಯ ಬೇಕು ಎನ್ನುವುದು ಭಕ್ತಾದಿಗಳ ಅಭಿಲಾಷೆ ಎಂದು ಮಾಜಿ ಶಾಸಕ ಎಂ.ಎಸ್.ಅಕ್ಕಿ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಂದು ಮಠದ ಶ್ರೀ ಶಿಥಿಕಂಠೇಶ್ವರ ಶ್ರೀಗಳು ಮಠದ 52 ಎಕರೆ ಭೂಮಿಯನ್ನು ಇತರೆ ಉದ್ದೇಶಗಳಿಗೆ ಪರಿವರ್ತನೆ ಮಾಡುತ್ತಿದ್ದಾರೆ ಎನ್ನುವ ವಿಷಯವಾಗಿ ಇದೇ ಮೇ 8 ರಂದು ಮಠಕ್ಕೆ ಕಾಶಿ ಮಠದ ಶ್ರೀ ಜಗದ್ಗುರುಗಳು ಹಾಗೂ ರಂಭಾಪುರಿ ಮಠದ ಶ್ರೀ ಜಗದ್ಗುರುಗಳು ಬೆಳಗ್ಗೆ 11 ಗಂಟೆಗೆ ಆಗಮಿಸುತ್ತಿದ್ದು ಅವರು ಶ್ರೀಗಳ ಸಮ್ಮುಖದಲ್ಲಿ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಮುಖಂಡ ಸೋಮರಾವ್ ದೇಸಾಯಿ ಮಠದ ಬೆಲೆಬಾಳುವ ಆಸ್ತಿಯನ್ನು ಸ್ಥಳೀಯ ಭಕ್ತರಿಗಾಗಲಿ, ಜಗದ್ಗುರುಗಳಿಗಾಗಲಿ ಗಮನಕ್ಕೆ ತರದೆ ಏಕ ಪಕ್ಷೀಯವಾಗಿ ನಿರ್ಣಯ ಕೈಗೊಳ್ಳುತ್ತಿರುವುದನ್ನು ತಿಳಿದು ಜಗದ್ಗುರುಗಳನ್ನು ಭೇಟಿಯ ಮೂಲಕ ಆಗಮಿಸುವ ಸಂದರ್ಭ ಬಂದಿತು ಎಂದರು.

ಎ.ಬಿ.ಉಪ್ಪಿನ ಮಾತನಾಡಿ, ಸಮಾಜದಲ್ಲಿ ಮಠದ ಬಿಲೆಬಾಳುವ ಆಸ್ತಿಗಳು ಮಠದ ಯಾವುದೇ ಅಭಿವೃದ್ಧಿ ಕಾಣದೆ ಇದೇ ರೀತಿ ಪರಿವರ್ತನೆ ಆದರೆ ಸಮಾಜ ಅವನತಿ ಕಾಣುವುದರಲ್ಲಿ ಯಾವುದೇ ಸಂದೇಹವಿಲ್ಲ ಅದಕ್ಕಾಗಿ ನಾವೆಲ್ಲರೂ ಕೂಡಿಕೊಂಡು ಮಠಗಳ ಆಸ್ತಿಗಳನ್ನು ಉಳಿಸಿಕೊಂಡು ಹೋಗಲು ಇಂಥ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಶಿವಾನಂದ ಬೆಂತೂರ,ನಾಗರಾಜ ದೇಶಪಾಂಡೆ, ಸಿದ್ದಪ್ಪ ಇಂಗಳಹಳ್ಳಿ, ಫಕ್ಕೀರೇಶ ನಾವಳ್ಳಿಮಠ, ರಮೇಶ್ ಕೊಪ್ಪದ, ಸುರೇಶ್ ಸವಣೂರ, ಶಂಕರಗೌಡ ದೂಡ್ಡಮನಿ ಇದ್ದರು.

ಆಧ್ಯಾತ್ಮ ಜ್ಯೋತಿ ಬೆಳಗುವ ಹಿರೇಮಠ

ನವಲಗುಂದ: ಪಂಚಗ್ರಹ ಹಿರೇಮಠದ ಗುರುಪಟ್ಟಾಧಿಕಾರ ಮಹೋತ್ಸವ ನಿಮಿತ್ತ 11 ದಿನಗಳ ಕಾಲ ಪ್ರವಚನ ಆಯೋಜಿಸುವ ಮೂಲಕ ಆಧ್ಯಾತ್ಮ ಜ್ಯೋತಿ ಬೆಳಗುತ್ತಿರುವುದು ಶ್ಲಾಘನೀಯ ಎಂದು ಮೂರುಸಾವಿರ ಮಠದ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಜಿ ಹೇಳಿದರು.

ಪ್ರವಚನ ಕಾರ್ಯಕ್ರಮದಲ್ಲಿ ಭೀಮರಾಶಿ ಹೂಗಾರ ರಚಿಸಿದ ಭಕ್ತಿ ಹಾಡುಗಳ ಸಿದ್ದೇಶ್ವರ ಶ್ರೀ ಧ್ವನಿ ಸುರುಳಿಯನ್ನು ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮಿಜಿ ಬಿಡುಗಡೆ ಮಾಡಿದರು.

ಪಟ್ಟಣದ ಹಿರೇಮಠದಲ್ಲಿ ಪಂಚಪೀಠಾಧೀಶ್ವರರ ನೇತೃತ್ವದಲ್ಲಿ ಜರುಗಲಿರುವ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವದ ಪ್ರವಚನ ಕಾರ್ಯಕ್ರಮದಲ್ಲಿ ಭೀಮರಾಶಿ ಹೂಗಾರ ರಚಿಸಿದ ಸಾಹಿತ್ಯದ ಹಾಡುಗಳ ಸಿದ್ದೇಶ್ವರ ಶ್ರೀ ಧ್ವನಿ ಸುರುಳಿ ಬಿಡುಗಡೆ ಮಾಡಿ ಮಾತನಾಡಿದರು.

ನಸಿಸಿ ಹೋಗುತ್ತಿರುವ ಭಕ್ತಿ ಸಂಗೀತಕ್ಕೆ ಮೆರಗು ನೀಡುವಂತೆ ಸಾವಿರ ವರ್ಷಗಳ ಇತಿಹಾಸ ಇರುವ ಹಿರೇಮಠದ ಕತೃ ಶ್ರೀ ಸಿದ್ದೇಶ್ವರ ಶ್ರೀಗಳ ಕುರಿತಾಗಿ ರಚಿತವಾದ ಭಕ್ತಿಗೀತೆಗಳು ಇಂದಿನ ಪೀಳಿಗೆಗೆ ಅವಶ್ಯ ಎಂದರು.

ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಮಾತನಾಡಿ, ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಆಚರಣೆಗೆ ವಿಜೃಂಭಣೆಯಿಂದ ಸಿದ್ದತೆ ನಡೆಸಿದ್ದು ಜಗದ್ಗುರು ಪಂಚಾಚಾರ್ಯರ ಸಮ್ಮುಖ ಪೀಠಾಧಿಕಾರ ಮಹೋತ್ಸವ ಹಾಗೂ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಸುವುದು ಈ ನೆಲದ ಹೆಮ್ಮೆ ಎಂದರು.

ಹಿರೇಮಠದ ಶ್ರೀ ಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಜಿ, ತುಪ್ಪದಕುರಟ್ಟಿಯ ಪಂಡಿತಾರಾಧ್ಯ ಸ್ವಾಮಿಜಿ, ಗವಿಮಠದ ಶ್ರೀ ಬಸವಲಿಂಗಸ್ವಾಮಿಜಿ, ನಿಯೋಜಿತ ಪೀಠಾಧಿಕಾರಿ ವೀರಬಸವದೇವರು, ಅಣ್ಣಪ್ಪ ಬಾಗಿ, ವರ್ತಕರ ಸಂಘದ ಅಧ್ಯಕ್ಷ ರಾಘವೇಂದ್ರ ಧಾರವಾಡ, ವಿರೇಶ ಕೂಗುಮಠ, ಶ್ರೀಶೈಲ ಮೂಲಿಮನಿ, ಪಾಂಡಪ್ಪ ಕೋನರಡ್ಡಿ, ಸಿದ್ದಲಿಂಗಯ್ಯ ಹಿರೇಮಠ, ಅಲ್ಲಾಸಾಬ ಕಲ್ಲಕುಟ್ರಿ, ಅಪ್ಪಣ್ಣ ಹಳ್ಳದ, ಅಡಿವೆಪ್ಪ ಶಿರಸಂಗಿ, ಯಲ್ಲಪ್ಪ ಭೋವಿ ಉಪಸ್ಥಿತರಿದ್ದರು.

{ಸಿದ್ದರಾಮಯ್ಯ} ಮುಖ್ಯಮಂತ್ರಿ
ಕಾಂಗ್ರೆಸ್ ಸರಕಾರದ ಯೋಜನೆಗಳು ಜನಮೆಚ್ಚುಗೆಗೆ ಪಾತ್ರವಾಗಿದ್ದು, ಜನಾಶೀರ್ವಾದದಿಂದ ರಾಜ್ಯದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಗೆಲುವು ಸಾಧಿಸಲು ಸಾಧ್ಯವಾಗಿದೆ. ಉಪಚುನಾವಣೆ ಗೆಲುವು ರಾಜ್ಯದ ಜನರು ಕಾಂಗ್ರೆಸ್ಸಿನ ಯೋಜನೆಗಳಿಗೆ ಮೆಚ್ಚಿಕೊಂಡಿರೋದನ್ನು ಸೂಚಿಸುತ್ತದೆ. ಬಿಜೆಪಿಯ ಯಾವುದೇ ತಂತ್ರಗಾರಿಕೆ ನಡೆಯಲ್ಲ. ಅವರು ಕೇವಲ ಕುತಂತ್ರ ಮಾಡುತ್ತಾರೆ.

ಹೋಂ ಸ್ಟೇ , ರೆಸಾರ್ಟ್ ನೋಂದಣಿಗೆ ಸೂಚನೆ

ಹಾವೇರಿ: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೋಂಸ್ಟೇ ಹಾಗೂ ರೇಸಾರ್ಟ್ ಗಳ ಮಾಲೀಕರು ನಿಯಮದನ್ವಯ ಅಗತ್ಯ ದಾಖಲೆಗಳೊಂದಿಗೆ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ. ಜಿಲ್ಲೆಯಲ್ಲಿ ಹಲವು ಹೋಂಸ್ಟೇಗಳು ಕಾಯ್ದೆಯ ಪ್ರಕಾರ ನೋಂದಣಿ ಮಾಡಿಕೊಳ್ಳದೇ ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದ್ದು, ಇದು ನಿಯಮ ಉಲ್ಲಂಘನೆಯಾಗಿರುತ್ತದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಅನೇಕ ಹೋಂಸ್ಟೇಗಳು ಹಾಗೂ ರೆಸಾರ್ಟ್ ಕಾರ್ಯ ನಿರ್ವಹಿಸುತ್ತಿವೆ. ಪ್ರವಾಸಿಗರ ಸುರಕ್ಷತೆ, ಗುಣಮಟ್ಟದ ಸೇವೆ, ಕಾನೂನುಬದ್ಧ ನಿರ್ವಹಣೆ ಹಾಗೂ ಪ್ರವಾಸೋದ್ಯಮ ಕ್ಷೇತ್ರದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ 'ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಅಧಿನಿಯಮದಡಿ ನೋಂದಾಯಿಸದೆ ಮಾನ್ಯತೆ ಪಡೆಯದೆ ಅಥವಾ ಶ್ರೇಣೀಕರಿಸದೆ ಹೊರತು ಹೋಂ ಸ್ಟೇ , ರೆಸಾರ್ಟ್ ನಡೆಸತಕ್ಕದ್ದಲ್ಲ. ಈ ಅನ್ವಯ ಎಲ್ಲಾ ಹೋಂಸ್ಟೇಗಳು ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಆದ್ದರಿಂದ ಅಗತ್ಯ ದಾಖಲೆಗಳಾದ ಗ್ರಾಮ ಪಂಚಾಯಿತಿ ನಿರಾಕ್ಷೇಪಣಾ ಪತ್ರ ಇ-ಖಾತಾ/ ಪಹಣಿ, ಪೊಲೀಸ್ ನಿರಾಕ್ಷೇಪಣಾ ಪತ್ರ ವಾಸಸ್ಥಳ ದೃಢೀಕರಣ ಪತ್ರ, ಆಧಾರ್‌ಕಾರ್ಡ್, ಮಾಲೀಕರ ಭಾವಚಿತ್ರ ಮತ್ತು ಹೋಂಸ್ಟೇ ಯೋಜನೆಯ ಛಾಯಾಚಿತ್ರಗಳನ್ನು 15 ದಿನಗಳೊಳಗೆ ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ''ಎ'' ಬ್ಲಾಕ್ ಎರಡನೇ ಮಹಡಿ ಜಿಲ್ಲಾಡಳಿತ ಭವನ, ದೇವಗಿರಿ,ಹಾವೇರಿ-581110 ನೋಂದಣಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಅಧಿನಿಯಮ ಉಲ್ಲಂಘಿಸಿರುವುದು ಕಂಡುಬಂದರೆ 10 ಸಾವಿರ ರು.ಗಳ ದಂಡಕ್ಕೆ ಗುರಿಯಾಗಬೇಕಾಗುತ್ತದೆ. ಮಾಹಿತಿಗಾಗಿ ದೂ: 08375-296033ನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಧಾರವಾಡ ಕೇಂದ್ರದಿಂದ ವರ್ಷ ಪೂರ್ತಿ ವೈವಿಧ್ಯಮಯ ಕಾರ್ಯಕ್ರಮ

ಆಕಾಶವಾಣಿಯ ಸಾರ್ಥಕ ಪಯಣ 90ನೇ ವರ್ಷಕ್ಕೆ

ಧಾರವಾಡ: ಭಾರತೀಯ ಪ್ರಸಾರ ಸೇವೆಯ ಧ್ವನಿವಾಹಿನಿ ''ಆಕಾಶವಾಣಿ'' ತನ್ನ ಸಾರ್ಥಕ ಸೇವೆಯ 90ನೇ ವರ್ಷಕ್ಕೆ ಕಾಲಿರಿಸಿದೆ. ಈ ಐತಿಹಾಸಿಕ ಮೈಲಿಗಲ್ಲನ್ನು ಸ್ಮರಿಸಲು ಧಾರವಾಡ ಆಕಾಶವಾಣಿ ಕೇಂದ್ರ ವರ್ಷಪೂರ್ತಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದು ಕೇಂದ್ರದ ಕಾರ್ಯಕ್ರಮ ಮುಖ್ಯಸ್ಥೆ ಮಂಜುಳಾ ಪುರಾಣಿಕ ಹೇಳಿದರು.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 1936 ಜೂನ್ 8 ರಂದು ಅಧಿಕೃತವಾಗಿ ''ಆಲ್ ಇಂಡಿಯಾ ರೇಡಿಯೋ'' ಎಂದು ನಾಮಕರಣಗೊಂಡ ಈ ಸಂಸ್ಥೆ, ''ಬಹುಜನ ಹಿತಾಯ: ಬಹುಜನ ಸುಖಾಯ'' ಎಂಬ ಧ್ಯೇಯದೊಂದಿಗೆ ದೇಶದ ಸಾಂಸ್ಕೃತಿಕ ರಾಯಭಾರಿಯಾಗಿ ಬೆಳೆದು ಬಂದಿದೆ. ಪ್ರಸ್ತುತ ಧಾರವಾಡ ಕೇಂದ್ರವು ತನ್ನ 76ನೇ ವರ್ಷದ ಪ್ರಸಾರ ಸೇವೆಯಲ್ಲಿದ್ದು, ಪ್ರಾದೇಶಿಕ ಸುದ್ದಿ ವಿಭಾಗವು 44ನೇ ವರ್ಷಕ್ಕೆ

ಪದಾರ್ಪಣೆ ಮಾಡಿದೆ ಎಂದರು.

ಮೇ 8ರಂದು ಬೆಳಗ್ಗೆ 7:30ಕ್ಕೆ ಆಕಾಶವಾಣಿ ಆವರಣದಿಂದ ಜ್ಯುಬಿಲಿ ಸರ್ಕಲ್‌ವರೆಗೆ ಬೃಹತ್ ವಾಕಥಾನ್ ನಡೆಯಲಿದೆ. ನಡೆಯುವ ಈ ಸಾರ್ವಜನಿಕರು ಮತ್ತು ಶ್ರೋತೃಗಳ ಸಹಭಾಗಿತ್ವದಲ್ಲಿ ನಡಿಗೆಗೆ ಅಭಿಯಾಂತ್ರಿಕ ವಿಭಾಗದ ಮಹಾನಿರ್ದೇಶಕ ಅರುಣ ಪ್ರಭಾಕರ ಚಾಲನೆ ನೀಡಲಿದ್ದಾರೆ.

ಮೇ 11ರಂದು ಸಂಜೆ 6:30ಕ್ಕೆ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ. ಎ ಶ್ರೇಣಿಯ ಗಾಯಕ ರಘುನಂದನ ಭಟ್ ಅವರ ಗಾಯನ ಹಾಗೂ ಕೃತಿಕಾ ಜಂಗಿನಮಠ ಅವರ ಕೊಳಲು ವಾದನ ಪ್ರಮುಖ ಆಕರ್ಷಣೆಯಾಗಿರಲಿದೆ. ಹಳಿಯಾಳದ ಕೆ.ಎಲ್.ಎಸ್ ವಿಐಟಿ ಪ್ರಾಚಾರ್ಯ ಡಾ. ವಾದಿರಾಜ ಕುಲಕರ್ಣಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಇಂದು ಪ್ರಸಾರ ಭಾರತಿಯಡಿ 591 ಕೇಂದ್ರಗಳನ್ನು ಹೊಂದಿರುವ ಆಕಾಶವಾಣಿ, ದೇಶದ ಶೇ. 98ರಷ್ಟು ಜನರನ್ನು ತಲುಪುತ್ತಿದೆ. 23 ಭಾಷೆ ಹಾಗೂ 146 ಉಪಭಾಷೆಗಳಲ್ಲಿ ಮಾಹಿತಿ ನೀಡುತ್ತಾ, ಡಿಜಿಟಲ್ ವೇದಿಕೆಗಳಲ್ಲೂ ತನ್ನ ವಿಶ್ವಾಸಾರ್ಹತೆ ಉಳಿಸಿಕೊಂಡಿದೆ. ತಂತ್ರಜ್ಞಾನ ಎಷ್ಟೇ ಬೆಳೆದರೂ ''ಆಕಾಶವಾಣಿ'' ಎಂಬ ಶಬ್ದ ಸಂಸ್ಕೃತಿ ಇಂದಿಗೂ ಜನ ಮನದಲ್ಲಿ ಅಮರವಾಗಿ ಉಳಿದಿದೆ ಎಂಬುದೇ ಈ 90ನೇ ವರ್ಷದ ಆಚರಣೆಯ ಹೆಮ್ಮೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕುಮಾರ ಅಗಡಿ, ಮಾಯಾ ರಾಮನ್, ಕೆ.ಅರುಣ ಪ್ರಭಾಕರ ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಬಿಜೆಪಿ ನಾಯಕ ಜೀವರಾಜ್ ಶಾಸಕರಾಗಿ ಅಧಿಕೃತ ಪ್ರಮಾಣ ವಚನ ಸ್ವೀಕಾರ

ಜೀವರಾಜ್ ಈಗ ಶೃಂಗೇರಿ ಶಾಸಕ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಎಣಿಕೆಯಲ್ಲಿ ರೋಚಕ ಜಯ ಸಾಧಿಸಿದ ಬಿಜೆಪಿ ನಾಯಕ ಡಿ.ಎನ್. ಜೀವರಾಜ್ ಶಾಸಕರಾಗಿ ಅಧಿಕೃತವಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆ ಮೂಲಕ ಹಲವು ತಿಂಗಳುಗಳ ಕಾನೂನು ಹೋರಾಟ ಸದ್ಯಕ್ಕೆ ಅಂತ್ಯಗೊಂಡಂತಾಗಿದೆ

ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ ಅವರಿಂದ ಜೀವರಾಜ್ ಪ್ರಮಾಣವಚನ ಸ್ವೀಕರಿಸಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಚಲವಾದಿ ನಾರಾಯಣಸ್ವಾಮಿ, ಶಾಸಕರಾದ ಎಸ್. ಮುನಿರಾಜು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

3:30ಕ್ಕೆ ಪ್ರಮಾಣ ವಚನಕ್ಕೆ ಸಮಯ ನಿಗದಿಯಾಗಿತ್ತು. ಅದರಂತೆ ಜೀವರಾಜ್ ಅವರು ವಿಧಾನಸೌಧಕ್ಕೆ ಆಗಮಿಸಿ ಕಾದು ಕುಳಿತಿದ್ದರು. ಆದರೆ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಬರುವುದು ಅರ್ಧ ಗಂಟೆ ವಿಳಂಬವಾದ ಕಾರಣ ರಾಜಕೀಯ ವಲಯದಲ್ಲಿ ಹಲವು ಚರ್ಚೆಗೆ ಕಾರಣವಾಯಿತು. ಕೊನೆಗೂ ಸಭಾಧ್ಯಕ್ಷರು ಆಗಮಿಸಿ ಪ್ರಮಾಣ ವಚನ ಬೋಧಿಸಿದರು.

ಸಿಬಿಐ ತನಿಖೆ ನಡೆಯಬೇಕಿದೆ: ಆರ್.ಅಶೋಕ

ಡಿ.ಎನ್.ಜೀವರಾಜ್ ಅವರ ಶಾಸಕ ಸ್ಥಾನದ ಫಲಿತಾಂಶ ಬಂದ ನಂತರವೂ ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸಲು ಒಂದು ದಿನ ತಡ ಮಾಡಿದ್ದಾರೆ. ಅಧಿಕಾರಿಗಳ ಮೇಲೆ ಒತ್ತಡ ಹಾಕಿದವರು ಯಾರೆಂದು ತಿಳಿಯಲು ಸಿಬಿಐ ತನಿಖೆ ಮಾಡಬೇಕಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ವಿಧಾನಸೌಧದಲ್ಲಿ ಪ್ರಮಾಣವಚನದ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಜೀವರಾಜ್ ಅಧಿಕೃತವಾಗಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ನಾಯಕರು ವೋಟ್ ಚೋರಿ ಬಗ್ಗೆ ಮಾತಾಡುತ್ತಾರೆ. ಶೃಂಗೇರಿಯಲ್ಲಿ ಕೊನೆಯಲ್ಲಿ ಅಂಚೆ ಮತಗಳನ್ನು ಎಣಿಸಲಾಗಿದೆ. ಇಲ್ಲಿ ಚುನಾವಣಾಧಿಕಾರಿಗಳಿಗೆ ಫೋನ್ ಕರೆ ಮಾಡಿ ಒತ್ತಡ ಹಾಕಿದವರು ಯಾರು ಎಂಬುದು ಸಿಬಿಐ ತನಿಖೆಯಿಂದ ಬಯಲಾಗಬೇಕಿದೆ. ಮರು ಎಣಿಕೆಯಲ್ಲಿ ಫಲಿತಾಂಶ ಗೊತ್ತಾದ ಕೂಡಲೇ ಚುನಾವಣಾ ಆಯೋಗದಿಂದ ಪ್ರಮಾಣಪತ್ರ ನೀಡಬೇಕೆಂದು ಕೋರ್ಟ್ ಆದೇಶದಲ್ಲಿ ತಿಳಿಸಲಾಗಿದೆ. ಆದರೂ ಒಂದು ದಿನ ತಡವಾಗಿ ಪ್ರಮಾಣಪತ್ರ ನೀಡಲಾಗಿದೆ. ಇಲ್ಲಿ ಅಧಿಕಾರಿಗಳ ಮೇಲೆ ಒತ್ತಡ ಹಾಕಿದವರು ಯಾರೆಂದು ಗೊತ್ತಾಗಬೇಕಿದೆ ಎಂದರು.

ಕಳೆದ ಮೂರು ವರ್ಷದಲ್ಲಿ ಎರಡು ಕ್ಷೇತ್ರಗಳಲ್ಲಿ ವೋಟ್ ಚೋರಿ ಆಗಿರುವುದು ತಿಳಿದುಬಂದಿದೆ. ಅದನ್ನು ಒಪ್ಪಿಕೊಳ್ಳದೆ ಕಾಂಗ್ರೆಸ್ ಆರೋಪಗಳನ್ನು ಮಾಡುತ್ತಿದೆ. ಸ್ಟ್ರಾಂಗ್ ರೂಮ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಇದ್ದು, ಅಲ್ಲಿ ಪೊಲೀಸರು ಕೂಡ ಇರುತ್ತಾರೆ. ಅವರ ಕಣ್ಣು ತಪ್ಪಿಸಿ ತಿದ್ದುಪಡಿ ಮಾಡಲು ಬಿಜೆಪಿಗೆ ಸಾಧ್ಯವಿಲ್ಲ. ಈ ರೀತಿ ಆರೋಪ ಮಾಡುವುದು ಕಾಂಗ್ರೆಸ್‌ನ ಹೇಡಿತನದ ಪರಮಾವಧಿ. ಜೀವರಾಜ್ ಅವರು ಪ್ರಕರಣದ ದಾಖಲಿಸಿ ವರ್ಷ ಕಳೆದಿದೆ. ಕೋರ್ಟ್ ನೀಡುವ ಆದೇಶವನ್ನು ನಾವು ಒಪ್ಪುತ್ತೇವೆಯೇ ಹೊರತು ವಿರೋಧ ಮಾಡುವುದಿಲ್ಲ ಎಂದರು.

ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ ಅವರಿಂದ ಜೀವರಾಜ್ ಪ್ರಮಾಣವಚನ ಸ್ವೀಕರಿಸಿದರು. ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಚಲವಾದಿ ನಾರಾಯಣಸ್ವಾಮಿ, ಶಾಸಕರಾದ ಎಸ್. ಮುನಿರಾಜು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

> **ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಸೋತ ಬಗ್ಗೆ ಪರಾಮರ್ಶೆ ಮಾಡುತ್ತೇವೆ. ಹಿಂದೆ ನಮ್ಮ ಸರಕಾರ ಇದ್ದಾಗಲೂ ಉಪಚುನಾವಣೆ ಗೆದ್ದಿದ್ದೆವು. ಈ ಎರಡು ಕ್ಷೇತ್ರಗಳ ಫಲಿತಾಂಶ ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗುವುದಿಲ್ಲ. 2028 ರಲ್ಲಿ ಎನ್‌ಡಿಎ ಸರಕಾರ ಅಧಿಕಾರಕ್ಕೆ ಬರಲಿದೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಗ್ಯಾರಂಟಿಯ ಆಧಾರದಲ್ಲಿ ಗೆದ್ದಿದೆ. ಆದರೆ ಜನರಿಗೆ ಈಗ ಗ್ಯಾರಂಟಿಯ ವಾಸ್ತವ ಗೊತ್ತಾಗಿದೆ. ನಾವು ಮುಳ್ಳನ್ನು ಮುಳ್ಳಿಂದಲೇ ತೆಗೆಯುತ್ತೇವೆ.**
>
> **– ಆರ್.ಅಶೋಕ ಪ್ರತಿಪಕ್ಷ ನಾಯಕ**

ಮೂವರು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಮೂವರು ಹಿರಿಯ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ರಾಜ್ಯ ಸರಕಾರ ಆದೇಶಿಸಿದೆ. ಹಿರಿಯ ಐಪಿಎಸ್ ಅಧಿಕಾರಿಗಳಾದ ಸಂದೀಪ್ ಪಾಟೀಲ್, ಡಾ. ಚೇತನ್ ಸಿಂಗ್ ರಾಥೋಡ್, ಅನುಪಮ್ ಅಗರ್ವಾಲ್ ಅವರನ್ನು ವರ್ಗಾವಣೆಗೊಳಿಸಿ ಆದೇಶಿಸಲಾಗಿದೆ. ಕರ್ನಾಟಕ ಮೀಸಲು ಪೊಲೀಸ್ ಪಡೆಯ ಐಜಿಪಿಯಾಗಿದ್ದ ಸಂದೀಪ್ ಪಾಟೀಲ್ ಅವರನ್ನು ರಾಜ್ಯ ಉತ್ತರ ವಲಯ (ಬೆಳಗಾವಿ) ಐಜಿಪಿಯಾಗಿ ವರ್ಗಾವಣೆಗೊಳಿಸಲಾಗಿದೆ. ಅವರಿಂದ ತೆರವಾದ ಸ್ಥಾನಕ್ಕೆ ಅನುಪಮ್ ಅಗರ್ವಾಲ್ ಅವರನ್ನು ನಿಯುಕ್ತಿಗೊಳಿಸಲಾಗಿದೆ. ರಾಜ್ಯ ಉತ್ತರ ವಲಯ (ಬೆಳಗಾವಿ)ದ ಐಜಿಪಿಯಾಗಿದ್ದ ಡಾ. ಚೇತನ್ ಸಿಂಗ್ ರಾಥೋಡ್ ಅವರನ್ನು ಸಿಐಡಿಯ ಆರ್ಥಿಕ ಅಪರಾಧಗಳ ವಿಭಾಗದ ಐಜಿಪಿಯಾಗಿ ವರ್ಗಾವಣೆಗೊಳಿಸಲಾಗಿದೆ.

ತ.ನಾ ಆರಂಭದಲ್ಲೇ ವಿಘ್ನ

← ಮೊದಲ ಪುಟದಿಂದ

ಕೈ ಶಾಸಕರು ಟಿವಿಕೆ ಶಾಸಕಾಂಗ ಪಕ್ಷದ ನಾಯಕ ವಿಜಯ್‌ರನ್ನು ಭೇಟಿ ಮಾಡಿ, ಐವರು ಶಾಸಕರು ಬೆಂಬಲಪತ್ರವನ್ನು ನೀಡಿದರು.

ಸ್ಟಾಲಿನ್ ಭೇಟಿ ಮಾಡಿದ ರಜನಿಕಾಂತ್: ವಿಜಯ್ ನೇತೃತ್ವದ ಟಿವಿಕೆ ಪಕ್ಷ ತಮಿಳುನಾಡಿನಲ್ಲಿ ನೂತನ ಸರಕಾರ ರಚನೆಗೆ ಸಿದ್ಧತೆ ನಡೆಸುತ್ತಿದ್ದರೆ, ಇತ್ತ ತಮಿಳುನಾಡಿನ ಹಂಗಾಮಿ ಸಿಎಂ ಎಂ.ಕೆ.ಸ್ಟಾಲಿನ್‌ರನ್ನು ನಟ ರಜನಿಕಾಂತ್ ಭೇಟಿಯಾಗಿದ್ದಾರೆ. ಮುಂಚೆಯಿಂದಲೂ ಡಿಎಂಕೆ ಪರ ರಜನಿಕಾಂತ್ ನಿಂತಿದ್ದರು. ಈ ಸಂಕಷ್ಟದ ಹೊತ್ತಿನಲ್ಲಿ ಸ್ಟಾಲಿನ್‌ಗೆ ರಜನಿ ಸಾಂತ್ವನ ಹೇಳಿದ್ದಾರೆ ಎನ್ನಲಾಗಿದೆ.

ಅರಣ್ಯ ಸಚಿವರಿಗೆ ಮುತ್ತಿಗೆ: ಬಿಜೆಪಿ ಕಾರ್ಯಕರ್ತರ ವಶ

ಮಡಿಕೇರಿ: ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಮುತ್ತಿಗೆ ಹಾಕಲು ಮುಂದಾದ ಬಿಜೆಪಿ ಕಾರ್ಯ ಕರ್ತರನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಗುಡ್ಡೆಹೊಸೂರು ಜಂಕ್ಷನ್‌ನಲ್ಲಿ ನಡೆದಿದೆ. ಅರಣ್ಯ ಸಚಿವರು, ಆನೆ ಮಾನವ ಸಂಘರ್ಷ ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆ. ಸಿಅಂಡ್‌ಡಿ ಲ್ಯಾಂಡ್ ಸಮಸ್ಯೆ ಬಗೆಹರಿದಿಲ್ಲ ಎಂದು ಆರೋಪಿಸಿ, ಸೋಮವಾರಪೇಟೆ ಮಂಡಲ ಬಿಜೆಪಿ ವತಿಯಿಂದ ಸಚಿವರು ದುಬಾರೆಗೆ ತೆರಳುವ ಮಾರ್ಗದ ಗುಡ್ಡೆಹೊಸೂರು ಬಳಿ ರಸ್ತೆ ತಡೆಗೆ ಮುಂದಾಗಿದ್ದರು.

ಗುಡ್ಡೆಹೊಸೂರು ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿ ಜಮಾಯಿಸಿದ ಸಂದರ್ಭ ಪೊಲೀಸ್ ಅಧಿಕಾರಿಗಳು ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಕೂಡಲೇ ಪೊಲೀಸರು ಪ್ರತಿಭಟನೆಗೆ ಮುಂದಾಗಿದ್ದವರನ್ನು ಎರಡು ವಾಹನಗಳಲ್ಲಿ ವಶಕ್ಕೆ ಪಡೆದು ಸ್ಥಳಾಂತರಿಸಿದರು. ವಾಹನದ ಒಳಗಿನಿಂದಲೇ ಬಿಜೆಪಿಗರು ಕಪ್ಪು ಬಾವುಟ ಪ್ರದರ್ಶಿಸಿ ಕಾಂಗ್ರೆಸ್ ಸರಕಾರ, ಅರಣ್ಯ ಸಚಿವರು ಹಾಗೂ ಪೊಲೀಸರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ, ಕಾರ್ಯದರ್ಶಿ ರಕ್ಷಿತ್ ಮಾವಜಿ, ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್, ಉಪಾಧ್ಯಕ್ಷ ಎಂ.ಡಿ.ಕೃಷ್ಣಪ್ಪ, ಮಹೇಶ್ ತಿಮ್ಮಯ್ಯ, ಮಂಡಲ ಉಪಾಧ್ಯಕ್ಷ ಕೃಷ್ಣಪ್ಪ, ಮಂಡಲ ಪ್ರಧಾನ ಕಾರ್ಯದರ್ಶಿ ದರ್ಶನ್ ಜೋಯಪ್ಪ, ಒಬಿಸಿ ಮೋರ್ಚಾ ಅಧ್ಯಕ್ಷ ಸುನಿಲ್, ಎಸ್ಟಿ ಮೋರ್ಚಾ ಅಧ್ಯಕ್ಷ ಪ್ರವೀಣ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಶರತ್, ಮಂಡಲ ವಕ್ತಾರ ಕಂಠಿ ಕಾರ್ಯಪ್ಪ, ಪ್ರವೀಣ್, ಸುಮನ್ ಮತ್ತಿತರರು ಪಾಲ್ಗೊಂಡಿದ್ದರು.

ಮಡಿಕೇರಿ ನಗರಕ್ಕೆ ಆಗಮಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಕಾರಿಗೆ ಬಿಜೆಪಿ ಕಾರ್ಯಕರ್ತರು ಮುತ್ತಿಗೆ ಹಾಕಲು ಯತ್ನಿಸಿದರು.

> **ಕೊಡಗು ಜಿಲ್ಲೆಯಲ್ಲಿ ವನಜೀವಿಗಳ ಹಾವಳಿ ಮಿತಿಮೀರಿದೆ. ಒಂದು ವರ್ಷದಲ್ಲಿ 32ಕ್ಕೂ ಅಧಿಕ ಮಂದಿ ವನ್ಯಜೀವಿ ದಾಳಿಯಿಂದ ಜೀವ ಕಳೆದುಕೊಂಡಿದ್ದಾರೆ. ಈ ಬಗ್ಗೆ ಗಮನ ಹರಿಸಬೇಕಿದ್ದ ಅರಣ್ಯ ಸಚಿವರು ಎರಡೂವರೆ ವರ್ಷಗಳ ಬಳಿಕ ಜಿಲ್ಲೆಗೆ ಆಗಮಿಸುತ್ತಿರುವುದು ಜಿಲ್ಲೆಯ ಜನತೆಗೆ ಮಾಡಿದ ದ್ರೋಹವಾಗಿದೆ.**
>
> **-ಬಿ.ಬಿ.ಭಾರತೀಶ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ**

ಫೈನಲ್ ಪಂದ್ಯ ತಪ್ಪಲು ಎಂಎಲ್‌ಎ ಕಾರಣರಲ್ಲ

ಬೆಂಗಳೂರು: ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದೆ. ಹೆಚ್ಚು ಜನರು ಸೇರುತ್ತಾರೆ ಎಂಬ ಉದ್ದೇಶದಿಂದ ಐಪಿಎಲ್ ಫೈನಲ್ ಪಂದ್ಯವನ್ನು ಸ್ಥಳಾಂತರ ಮಾಡಿರಬೇಕು. ಶಾಸಕರಿಗೆ ಉಚಿತ ಟಿಕೆಟ್ ವಿತರಣೆಗೂ ಅಂತಿಮ ಪಂದ್ಯ ಸ್ಥಳಾಂತರಕ್ಕೂ ಸಂಬಂಧವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಶಾಸಕರಿಗೆ ಉಚಿತ ಐಪಿಎಲ್ ಟಿಕೆಟ್ ಬೇಡಿಕೆ ಹಿನ್ನೆಲೆ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯವನ್ನು ಅಹಮದಾಬಾದಿಗೆ ಸ್ಥಳಾಂತರಿಸಲಾಗಿದೆಯಾ ಎಂಬ ವಿಚಾರವಾಗಿ ಕೇಳಿದಾಗ, ಬೇರೆ ಕಡೆ ಶೇ.50 ರಷ್ಟು ಮೀಸಲಿರುತ್ತದೆ. ಬಿಸಿಸಿಐ ಟಿಕೆಟ್ ವಿಚಾರಕ್ಕೆ ಸ್ಥಳಾಂತರ ನಿರ್ಧಾರ ಮಾಡಿದ್ದೇವೆ ಎಂದು ಹೇಳಿಕೆ ನೀಡಲಿ. ನಾನು ಅದಕ್ಕೆ ಸರಿಯಾದ ಉತ್ತರ ಕೊಡುತ್ತೇನೆ ಎಂದರು.

ದಾವಣಗೆರೆಯಲ್ಲಿ ಮುಸ್ಲಿಂ ನಾಯಕರ ಅಮಾನತನ್ನು ವಾಪಸ್ ಪಡೆಯುವ ಸಾಧ್ಯತೆ ಇದೆಯೇ ಎಂದು ಕೇಳಿದಾಗ, ನಾನು ಈ ಬಗ್ಗೆ ಏನೂ ಮಾತನಾಡುವುದಿಲ್ಲ. ಪಕ್ಷ ಈ ತೀರ್ಮಾನ ಮಾಡಿದೆ. ಸಿಎಂ ರಾಜಕೀಯ ಕಾರ್ಯದರ್ಶಿಯವರನ್ನು ಕೈಬಿಡಬೇಕಾದರೆ, ಆ ಬಗ್ಗೆ ಮುಖ್ಯಮಂತ್ರಿಯವರು ಮಾತನಾಡಿದ್ದರು. ಮುಖ್ಯಮಂತ್ರಿಗಳಿಗೆ ತಮ್ಮದೇ ಆದ ಮಾಹಿತಿ ಇರುತ್ತದೆ. ಪಕ್ಷದ ಪದಾಧಿಕಾರಿಗಳು ಮಾರ್ಗದರ್ಶನ ಮಾಡಿದ್ದಾರೆ. ಪಕ್ಷ ಅವರಿಗೆ ಕೆಲವು ಜವಾಬ್ದಾರಿಗಳನ್ನು ನೀಡಿತ್ತು. ಅದನ್ನು ಅವರು ಸರಿಯಾಗಿ ನಿಭಾಯಿಸಲಿಲ್ಲ. ಅದಕ್ಕೆ ಅವರನ್ನು ಆ ಸ್ಥಾನದಿಂದ ಇಳಿಸಲಾಯಿತು. ಜಬ್ಬಾರ್ ಅವರು ತಾವಾಗಿಯೇ ರಾಜೀನಾಮೆ ನೀಡಿದ್ದರು. ಅದನ್ನು ಸ್ವೀಕಾರ ಮಾಡಿದ್ದೇವೆ ಅಷ್ಟೇ ಎಂದು ತಿಳಿಸಿದರು.

> **ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು. ಜಾತ್ಯತೀತ ಶಕ್ತಿಗಳು ಒಂದಾಗಿ ಇರಬೇಕು ಎಂದು ಈ ತೀರ್ಮಾನ ಮಾಡಲಾಗಿದೆ. ಎಐಡಿಎಂಕೆ, ಬಿಜೆಪಿಯವರು ಎಷ್ಟೇ ಒತ್ತಡ ಹಾಕಿದರು ಟಿವಿಕೆಯವರು ಮೈತ್ರಿ ಮಾಡಿಕೊಳ್ಳಲಿಲ್ಲ. ಜಾತ್ಯತೀತ ಶಕ್ತಿ ಉಳಿಯಲು, ತಮಿಳುನಾಡಿನ ಹಿತಕ್ಕಾಗಿ ನಮ್ಮ ಪಕ್ಷ ತೀರ್ಮಾನ ಮಾಡಿದೆ.**
>
> **– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ**

ಶಾಸಕ ಬಿ.ಪಿ. ಹರೀಶ್ ಬಂಧನಕ್ಕೆ ವಾರೆಂಟ್

ಬೆಂಗಳೂರು/ದಾವಣಗೆರೆ: ಪೌರ ಕಾರ್ಮಿಕರ ಜಾತಿ ನಿಂದನೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಗೈರಾದ ಹರಿಹರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಬಿ.ಪಿ. ಹರೀಶ್ ಅವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಬಂಧನ ವಾರೆಂಟ್ ಜಾರಿ ಮಾಡಿದೆ. ಬಿ.ಪಿ. ಹರೀಶ್ ಅಥವಾ ಅವರ ಪರ ವಕೀಲರಾಗಲಿ ನ್ಯಾಯಾಲಯದ ಹಾಜರಾಗದ ಕಾರಣ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಶಾಸಕರ ವಿರುದ್ಧ ಬಂಧನ ವಾರೆಂಟ್ ಜಾರಿಗೊಳಿಸಿದ್ದಾರೆ. ಇಂದು ವಿಚಾರಣೆ ನಡೆಯಲಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಬಿ.ಪಿ.ಹರೀಶ್‌ರನ್ನು ಅಭಿನಂದಿಸಲು 2023ರ ಮೇ 16ರಂದು ಹರಿಹರ ನಗರಸಭೆಯ ಪೌರಕಾರ್ಮಿಕರು ಹಾಗೂ ಮಾದಿಗ ಸಮಾಜದ ಮುಖಂಡರು ತೆರಳಿದ್ದರು. ಈ ವೇಳೆ ಚುನಾವಣೆಯಲ್ಲಿ ತನಗೆ ಬೆಂಬಲ ನೀಡಿಲ್ಲ ಎಂದು ಶಾಸಕರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದು ಆರೋಪಿಸಲಾಗಿತ್ತು.

ಹೊರ್ಮುಜ್ ಸಂಚಾರಕ್ಕೆ ಮುಕ್ತ: ಟ್ರಂಪ್

← ಮೊದಲ ಪುಟದಿಂದ

ಇದಕ್ಕೆ ಪೂರಕವಾಗಿ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ, ಯುದ್ಧ ಕೊನೆಗೊಳಿಸಲು ಮಾತುಕತೆ ಪ್ರಗತಿಯಲ್ಲಿದೆ ಎಂದಿದ್ದಾರೆ. ಈ ಸುದ್ದಿಯನ್ನು ಕೇಳಿದ ನಂತರ ಭಾರತೀಯ ಷೇರು ಪೇಟೆಯಲ್ಲಿ ಉತ್ಸಾಹ ಕಂಡುಬಂದು ಬೆಲೆಗಳು ಏರಿವೆ.

ಶಾಂತಿ ಮಾತುಕತೆ ಆರಂಭವಾದಾಗಿನಿಂದ ಇರಾನ್ ತನ್ನ ಷರತ್ತುಗಳಿಂದ ಹಿಂದೆ ಸರಿದಿಲ್ಲ. ಇರಾನ್ ಅಮೆರಿಕದ ಹಿಂದಿನ ಪ್ರಸ್ತಾಪಗಳನ್ನು ಸ್ವೀಕರಿಸಲು ನಿರಾಕರಿಸಿರುವುದರಿಂದ ಎಲ್ಲರ ಕಣ್ಣುಗಳು ಈ ಪ್ರಸ್ತಾವನೆಯ ಮೇಲಿವೆ. ಮಧ್ಯಪ್ರಾಚ್ಯದಲ್ಲಿನ ಉದ್ವಿಗ್ನತೆಯ ನಡುವೆ, ಈ ಪ್ರದೇಶದಲ್ಲಿ ಯುದ್ಧವನ್ನು ಕೊನೆಗೊಳಿಸಲು ಅಮೆರಿಕದ 14 ಅಂಶಗಳ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದಾಗಿ ಇರಾನ್ ಹೇಳಿದೆ. ಇರಾನ್ ನ್ಯಾಯಯುತವಾದ ಷರತ್ತುಗಳನ್ನು ಮಾತ್ರ ಸ್ವೀಕರಿಸಲಾಗುವುದು ಎಂದು ಅದು ಹೇಳಿದೆ. ಮುಂದಿನ ಎರಡು ದಿನಗಳಲ್ಲಿ ಇರಾನ್ ಕುರಿತು ಪ್ರತಿಕ್ರಿಯಿಸುತ್ತದೆ ಎಂದು ಅಮೆರಿಕ ನಿರೀಕ್ಷಿಸುತ್ತಿದ್ದರೂ, ಎರಡೂ ಕಡೆಯವರ ನಡುವೆ ಇನ್ನೂ ಅಂತಿಮ ಒಪ್ಪಂದವಾಗಿಲ್ಲ. ಮೂಲಗಳ ಪ್ರಕಾರ, ಫೆ.28ರಂದು ಯುದ್ಧ ಪ್ರಾರಂಭವಾದ ನಂತರ ಎರಡೂ ದೇಶಗಳ ನಡುವೆ ನಡೆಯುತ್ತಿರುವ ಮಾತುಕತೆಗಳು ಇದೀಗ ಒಂದು ಹಂತಕ್ಕೆ ಬರುವಂತೆ ಕಾಣುತ್ತಿದೆ.

ಅಮೆರಿಕ ತಾನು ಹೊರ್ಮುಜ್ ಅನ್ನು ತೆರೆಯಲು ಸಿದ್ಧವಾಗಿದ್ದರೂ, ಇರಾನ್ ತನ್ನ ನಿರ್ಬಂಧವನ್ನು ತೆಗೆಯುವುದಾಗಿ ಘೋಷಿಸಿಲ್ಲ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿರುವ ಟ್ರಂಪ್, ಟೆಹರಾನ್ ಹೊರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಹೆಚ್ಚಿನ ಬಾಂಬ್ ದಾಳಿ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್‌ಗೆ ಬೆದರಿಕೆ ಹಾಕಿದ್ದಾರೆ. ಟ್ರುಥ್ ಸೋಶಿಯಲ್ ಮೂಲಕ ಪೋಸ್ಟ್ ಮಾಡಿರುವ ಅವರು, ಇರಾನ್ ಒಪ್ಪಂದವನ್ನು ಒಪ್ಪಿಕೊಳ್ಳುವುದನ್ನು ಅವಲಂಬಿಸಿ ಈ ಯುದ್ಧವು ಶೀಘ್ರದಲ್ಲೇ ಕೊನೆಗೊಳ್ಳಲಿದೆಯೇ ಇಲ್ಲವೇ ಎಂಬುದು ನಿರ್ಧಾರವಾಗುತ್ತದೆ ಎಂದು ಬರೆದಿದ್ದಾರೆ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ, ಎ.ಪಿ.ಎಂ.ಸಿ.ಬಿಲ್ಡಿಂಗ್ಸ್ ಒಳಾವರಣ, ಟಿ.ವಿ ಸರ್ಕಲ್–ಹತ್ತಿರ, ತುಮಕೂರು ಮೈನ್ ರೋಡ್, ದೊಡ್ಡಬಳ್ಳಾಪುರ–561203
ಸಂ/ಶಿಅಯೋ/ದೊಪುರ/ಹೊಗು/ಸಿಬ್ಬಂದಿ/2026–27 ದಿನಾಂಕ: 04.05.2026
ಟೆಂಡರ್ ಪ್ರಕಟಣೆ
ಶಿಶು ಅಭಿವೃದ್ಧಿಯೋಜನಾಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದೊಡ್ಡಬಳ್ಳಾಪುರ ಕಛೇರಿಯಲ್ಲಿ ಖಾಲಿಯಿರುವ ಗ್ರೂಪ್ ಡಿ 2 ಹಾಗೂ ವಾಹನ ಚಾಲಕ –1 ಹುದ್ದೆಗಳಿಗೆ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಉಲ್ಲೇಖ (2)ರ ಅನುಮತಿಯಂತೆ ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಅಡಿಯಲಿ ಗ್ರೂಪ್ ಡಿ 2 ಹಾಗೂ ವಾಹನ ಚಾಲಕ 1. ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಡಿಯಲ್ಲಿ ಕಾರ್ಮಿಕ ಇಲಾಖೆ ನಿಗಧಿ ಪಡಿಸಿದ ಕನಿಷ್ಠ ವೇತನ /ಡಿಎ ಮತ್ತು ಶಾಸನಬದ್ಧ ಕಡಿತಗಳಾದ ಇ.ಎಸ್.ಐ. ಇ.ಪಿ.ಎಫ್(ಎರಡು ಪ್ರಕಾರಗಳಡಿ) ಸೇವಾ ತೆರಿಗೆ ಮತ್ತು ಸೇವಾ ಶುಲ್ಕ ಪಾವತಿ ಆಧಾರದಂತೆ ಭರ್ತಿ ಮಾಡಿಕೊಳ್ಳಲು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in website ನಲ್ಲಿ ಪಡೆಯಬಹುದು.
1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ : 04.05.2026, 2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಅಂತಿಮ ದಿನಾಂಕ : 18.05.2026, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ : 19.05.2026, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ : 20.05.2026
ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿ
ದೊಡ್ಡಬಳ್ಳಾಪುರ
ವಾಸಾಸಂಇ/ವಾಪ್ರ/540/ಶಿರಡಿ ಸಾಯಿ/2026–27

ಜಿಲ್ಲಾ ಪಂಚಾಯಿತ್– ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ, ತಾಲ್ಲೂಕು ಪಂಚಾಯಿತಿ ಆವರಣ, ಮಾಲೂರು–563130.
ಸಂಖ್ಯೆ:ಎಂ.ವಿ.ಎಚ್/01/2026–27 ದಿನಾಂಕ:06.05.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
ದಿನಾಂಕ:01.07.2026 ರಿಂದ 30.06.2027 ಅಥವಾ ಮುಂದಿನ ಟೆಂಡರ್ ಪ್ರಕ್ರಿಯೆ ವಿಳಂಭವಾದ್ದಲ್ಲಿ ಮುಂದಿನ ಟೆಂಡರ್ ಆಯ್ಕೆಗೊಳ್ಳುವರೆಗೆ ಪಡೆಯಲು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಛೇರಿ ಮಾಲೂರು ಇಲ್ಲಿಗೆ ಹೊರಗುತ್ತಿಗೆ ಮೂಲಕ ತಿಂಗಳ ಬಾಡಿಗೆ ಆಧಾರದ ಮೇಲೆ ಸರ್ಕಾರದ ನಿಯಮಾನುಸಾರ ಹವಾನಿಯಂತ್ರಣ ರಹಿತ (ನಾನ್ ಎ.ಸಿ) ವಾಹನ ಒದಗಿಸಲು ಅರ್ಹ ಟ್ಯಾಕ್ಸಿ ಮಾಲೀಕರು/ ಸಂಸ್ಥೆಗಳಿಂದ ಮುಚ್ಚಿದ ಲಕೋಟೆಗಳಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಶುಲ್ಕ ರೂ.150/–(ತೆರಿಗೆ ಸೇರಿ) ಗಳನ್ನು ಡಿ.ಡಿ/ನಗದು ರೂಪದಲ್ಲಿ ಪಾವತಿಸಿ ಅರ್ಜಿ ಪಡೆದು, ದಿನಾಂಕ: 25.05.2026 ರಂದು ಸಂಜೆ. 5.00 ಗಂಟೆಯ ಒಳಗೆ ಭರ್ತಿ ಮಾಡಿದ ಅರ್ಜಿ, ನಿಗಧಿಪಡಿಸಿರುವ ಇ.ಎಂ.ಡಿ ಮೊತ್ತ ರೂ.9,912/–ಗಳನ್ನು ಡಿ.ಡಿ ರೂಪದಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾಲೂರು ರವರ ಹೆಸರಿನಲ್ಲಿ ಪಡೆದು ಸಂಬಂಧಿಸಿದ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಹಾಗೂ ಬಾಡಿಗೆ ವಾಹನ ಒದಗಿಸಲು ಅರ್ಜಿ, ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿ ವೇಳೆಯಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾಲೂರು ಕಛೇರಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಾಲೂರು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:61/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಉಪನಿರ್ದೇಶಕರ ಕಛೇರಿ, ಕೊಠಡಿ ಸಂಖ್ಯೆ: 206, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110
ಸಂಖ್ಯೆ:ಮಮಅಇ/ಉನಿಬೆಂಗ್ರಾ/ಆ/ವಾ.ಟೆಂ.ಪ್ರ/42/2025–26 ದಿನಾಂಕ: 05.05.2026
ಮರು ಇ–ಟೆಂಡರ್ ಪ್ರಕಟಣೆ
ಉಪ ನಿರ್ದೇಶಕರು ಹಾಗೂ ಜಿಲ್ಲಾ ನಿರೂಪಣಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಛೇರಿಯ ಉಪಯೋಗಕ್ಕಾಗಿ 02 ಎ.ಸಿ. ಕಾರುಗಳನ್ನು ಹಾಗೂ ಚಾಲಕರನ್ನು ಒಳಗೊಂಡಂತೆ ಬಾಹ್ಯಮೂಲದಿಂದ ಗುತ್ತಿಗೆ ಆಧಾರದ ಮೇಲೆ ಏಪ್ರಿಲ್–2026 ರಿಂದ ಮಾರ್ಚ್–2027 (ಒಂದು ವರ್ಷದ ಅವಧಿಗೆ)ರವರೆಗೆ ಅಥವಾ ಮುಂದಿನ ಆದೇಶದ ವರೆಗೆ ಒದಗಿಸಲು ಕರ್ನಾಟಕ ಆಡಳಿತ ಪಾರದರ್ಶಿಕ ನಿಯಮ–1999ರಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅರ್ಹ ವ್ಯಕ್ತಿ / ಸಂಸ್ಥೆಗಳಿಂದ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಆನ್‌ಲೈನ್‌ನಲ್ಲಿ ಅಪಲೋಡ್ ಮಾಡಲು ದಿನಾಂಕ 05.05.2026 ರಿಂದ 19.05.2026 ರ ಸಂಜೆ 3.00 ಗಂಟೆವರೆಗೆ ಅವಕಾಶವಿರುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಕಛೇರಿಯ ವೇಳೆಯಲ್ಲಿ ಖುದ್ದಾಗಿ ಅಥವಾ ವೆಬ್‌ಸೈಟ್ https://kppp.karnataka.gov.in ನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ವಾಪ್ರ/529/ಶಿರಡಿ ಸಾಯಿ/2026–27

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338–272131,
ಕ್ರ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2026–27/513 ದಿನಾಂಕ:28–04–2026.
(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿದ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.
1]Last date of request for issue of blank E-bid document through e-Procurment Date: Other works:28-04-2026 To 16-05-2026, 2]Bid Closing & submission Date: 16-05-2026 AT 04:00 PM, 3]Financial Bid Opening Date:18-05-2026 AT 11:00 AM, 4]Pre Bid Meeting Date: [KW-3 & 4 Works Only]:15-05-2026 AT 05:00 PM, 5]Techanical Bid Opening Date: [KW-3 & 4 Works Only]:18-05-2026 AT 11:00 AM, 6]Financial Bid Opening Date: [KW-3 & 4 Works Only]:20-05-2026 AT 11:00 AM.
General Works Indent No's:26063, 26061, 25638, 23623, 25399, 24861, 26313, 26312, 25677, 25675, 26222, 26211, 26204, 26192, 26198, 26202, 25808, 25819, 25822, 25821, 25903, 10729, 6590, 26318, 26412, 25897, 25543, 25690, 24412, 25938, 25535, 26307, 26317, 26308, 26306, 25155, 7996, 7986, 17487, 26558, 26267, 26259, 26244, 26265, 26421, 26424, 26415,SC Works Indent No's:25676, 25807, 26209, 26194, 25824, 25811, 24528, 26260, 26268, ST Works Indent No's:26315, 25820, 26413, 26316, Category 1 Works Indent No's:26207, 26199, 26263, Category 2A Works Indent No's:23665, 26343, 26212, 26196, 25898, 25555, 26457, 26262, 26264,
ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.
DIPR/BGM/RO-NO-200/KSMCA/2026-27

ಕರ್ನಾಟಕ ಸರ್ಕಾರ
ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ: ಸಅಸಂ/ಟೆಂಡರ್–ಕಾಂಪಾ/ಸಿಆರ್–3/25–26 ದಿನಾಂಕ: 05.05.2026
ಅಲ್ಪಾವದಿ ಇ–ಟೆಂಡರ್ ಪ್ರಕಟಣೆ.
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2026–27 ನೇ ಸಾಲಿನಲ್ಲಿ ಕಾಂಪಾ ಲೆಕ್ಕ ಶೀರ್ಷಿಕೆಯಡಿ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಅನುಬಂಧದಲ್ಲಿ ನಮೂದಿಸಲಾದ, ನೆಡುತೋಪು ರಚನೆ ಮತ್ತು ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000 ರ ಅನ್ವಯ 2026–27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರದಲ್ಲಿ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್–3 ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
1. ಇ–ಟೆಂಡರು ಸಲ್ಲಿಸಲು ಕೊನೆಯ ದಿ:13.05.2026 ಅಪರಾಹ್ನ 4.00 ಗಂಟೆಯವರೆಗೆ 2. ಟೆಂಡರು ತೆರೆಯುವ ದಿ:14.05.2026 ಅಪರಾಹ್ನ 4.30ಗಂಟೆ
ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/16/05/187

ಕರ್ನಾಟಕ ಸರ್ಕಾರ
ನಗರಸಭೆ ಕಾರ್ಯಾಲಯ, ಶಹಾಪುರ
ಜಿ: ಯಾದಗಿರಿ. ಕರ್ನಾಟಕ ರಾಜ್ಯ.
Website:www.shahapurcity.gov.in e-mail: itstaff_ulb_shahapur@yahoo.com,
ಕ್ರ.ಸಂ/ನಸಶ/ಟೆಂಡರ್/ಜಾ.ಪ್ರ./2026–27 ದಿನಾಂಕ:05.05.2026
ಇ–ಪ್ರೆಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಪಾರದರ್ಶಕತೆ ಕಾಯ್ದೆ–2000 ನಿಯಮದಂತೆ 2025–26ನೇ ಸಾಲಿನ ಅಮೃತ್ 2.0 ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಯ ಅರ್ಹ ಗುತ್ತಿಗೆದಾರರಿಗೆ/ ಏಜೇನ್ಸಿರವರು ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗೊಳಪಟ್ಟಂತೆ ಇ–ಪ್ರೆಕ್ಯೂರ್‌ಮೆಂಟ್ ಪೂರ್ಟಲ್ ಮೂಲಕ www.kppp.karnatak.gov.in ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.
1) Name of works: IMPROVEMENT OF NAGARKERE (LAKE) IN SHAHAPUR CMC LIMITS UNDER AMRUT 2.0. Indent Number: DMA/2026-27/OW/WORK_INDENT57633. Estimate cast (in lakhs): 234.24. E M D (in Rs): As per E-Portal. Class of contractor: Class 1 and Above.
1) ಟೆಂಡರ್ ಪ್ರಾರಂಭ ದಿನಾಂಕ: 05/05/2026 2) ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19/05/2026 ಸಾಯಂಕಾಲ 5:30 ಘಂಟೆಗೆ 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21/05/2026 ಬೆಳಿಗ್ಗೆ 11.00 ಘಂಟೆಗೆ 4) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 25/05/2026 ಬೆಳಿಗ್ಗೆ 11.00 ಘಂಟೆಗೆ 5) ವಿಳಾಸ: www.kppp.karnatak.gov.in
ಸಹಿ/– ಪೌರಾಯುಕ್ತರು
ನಗರಸಭೆ ಶಹಾಪುರ
ವಾ.ಸಾ.ಸಂ.ಇ/ಯಾದಗಿರಿ/53/ಕೆ.ಎಸ್.ಎಂ.ಸಿ.ಎ/2026–27

ಕರ್ನಾಟಕ ಸರ್ಕಾರ
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ದೂರವಾಣಿ ಸಂಖ್ಯೆ: 08352–276996, ಫ್ಯಾಕ್ಸ: 08352–276984, ವೆಬ್‌ಸೈಟ್:www.vijayapura.uda.gov.in
ನಂ: ನಪ್ರಾವಿ/ತಾಂತ್ರಿಕ/ಟೆಂಡರ/2026–27/2449 ದಿನಾಂಕ:27.04.2026
ಕೆ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ
ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ರನ್ವಯ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಕಚೇರಿ ಕೆಲಸದ ಅಧಿಕೃತ ಉಪಯೋಗಕ್ಕಾಗಿ ಸಿ.ಆ.ಸು ಇಲಾಖೆಯ ನಿಯಮಾವಳಿಗಳನ್ವಯ ಮಾಸಿಕ ಬಾಡಿಗೆ ಆಧಾರದ ಮೇಲೆ 1 ಹವಾನಿಯಂತ್ರಿತ ವಾಹನ ಬಾಡಿಗೆ ಆಧಾರದ ಮೇಲೆ ಪಡೆಯುವ ಕುರಿತು ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.
1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: 05.05.2026. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20.05.2026 ರಂದು ಸಾಯಂಕಾಲ 17.30 ಘಂಟೆಗೆ. 3)ಟೆಂಡರ್ ತೆರೆಯುವ ದಿನಾಂಕ: 22.05.2026 ರಂದು ಮುಂಜಾನೆ 11.00 ಘಂಟೆಗೆ.
ಹೆಚ್ಚಿನ ಮಾಹಿತಿ ಹಾಗೂ ಇತರೇ ಷರತ್ತುಗಳಿಗಾಗಿ (https://kppp.karnataka.gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಅ. ನಂ.	ಕಾಮಗಾರಿ ಹೆಸರು	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಕೆಲಸದ ಅವಧಿ
1	Invitation of Tender for Providing Private Vehicle (AC Vehicle) with Driver on Monthly Rental Basis to Commissioner Urban Development Authority, Vijayapur.	VUDA/2026-27/ SE0010	4.80	12,000/–	12 ತಿಂಗಳು

ಸಹಿ/–
(ರಾಜಶೇಖರ ಡಂಬಳ, ಕೆ.ಎ.ಎಸ್)
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ಸಹಿ/–
(ಡಾ॥ ಗಂಗಾಧರ ಎಸ್ ಸಂಬಣ್ಣಿ)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
ವಾಸಾಸಂಇ/ವಿಜಯಪುರ/81/ಕೆಎಸ್‌ಎಂಸಿಎ/2026–27

ಫನ್‌ತರಂಗ

– ರಘುಪತಿ ಶೃಂಗೇರಿ –

ವಿಧಾನಸಭಾ ಚುನಾವಣೆ 2026



ದಿನ ವಿಶೇಷ

07 ಮೇ 2026 ಗುರುವಾರ

» ಸೂರ್ಯೋದಯ	05-51
» ಸೂರ್ಯಾಸ್ತ	06-55
» ತಿಥಿ	ಪಂಚಮಿ
» ನಕ್ಷತ್ರ	ಪೂರ್ವಾಷಾಢ
» ಸಂವತ್ಸರ	ಪರಾಭವ
» ಅಯನ	ಉತ್ತರಾಯನ
» ಋತು	ಗ್ರೀಷ್ಮ
» ಮಾಸ	ವೈಶಾಖ
» ಪಕ್ಷ	ಕೃಷ್ಣಪಕ್ಷ

ನಾನು ಹೈಕಮಾಂಡ್ ಮಾತನ್ನು ಮಾತ್ರ ಕೇಳುವುದು, ಬೇರೆ ಯಾರ ಮಾತಿಗೂ ಬೆಲೆ ಇಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸಿಎಂ ಬದಲಾವಣೆ ವಿಚಾರ: ವರಿಷ್ಠರ ತೀರ್ಮಾನಕ್ಕೆ ಬದ್ಧ

ಮೈಸೂರು: ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಪಕ್ಷದ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಬದಲಾವಣೆ ಮಾಡುವ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ. ವರಿಷ್ಠರ ಕರೆ ಬಂದರೆ ದೆಹಲಿಗೆ ಹೋಗುತ್ತೇನೆ. ನಮ್ಮ ಪಕ್ಷದ ಹೈಕಮಾಂಡ್ ಹೇಳಿದರೆ 5 ವರ್ಷವೂ ನಾನೇ ಸಿಎಂ ಆಗಿ ಇರುತ್ತೇನೆ. ನಾನು ಹೈಕಮಾಂಡ್ ಮಾತನ್ನು ಮಾತ್ರ ಕೇಳುವುದು, ಬೇರೆ ಯಾರ ಮಾತಿಗೂ ಬೆಲೆ ಇಲ್ಲ. ನೀವು ಎಷ್ಟೇ ಸಲ ಈ ಪ್ರಶ್ನೆಯನ್ನು ಕೇಳಿದರೂ ನನ್ನ ಉತ್ತರ ಹೈಕಮಾಂಡ್ ಅಷ್ಟೇ ಎಂದರು.

ರಾಜ್ಯದಲ್ಲಿ 5 ವರ್ಷವೂ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿ ಇರುತ್ತದೆ. ನನ್ನನ್ನು ಇರಿ ಎಂದರೆ ಇರುತ್ತೇನೆ, ಎಲ್ಲವನ್ನೂ ತೀರ್ಮಾನ ಮಾಡುವುದು ಹೈಕಮಾಂಡ್. ಬೇರೆ ಯಾರೋ ಏನೇನೊ ಮಾತನಾಡಿದರೆ ಅದು ಅವರ ವೈಯಕ್ತಿಕ. ನಮಗೆ ಹೈಕಮಾಂಡ್ ಅಂತಿಮ ಎಂದು ಹೇಳಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸದ್ಯದಲ್ಲಿಯೇ ನಡೆಸಲಾಗುವುದು ಎಂದು ಇದೇ ವೇಳೆ ಹೇಳಿದರು.

ಬಿಜೆಪಿಯಿಂದ ಕ್ರಿಮಿನಲ್ ಸಂಚು: ಶೃಂಗೇರಿಯ ಚುನಾವಣಾ ಫಲಿತಾಂಶದ ಮತಎಣಿಕೆ ವಿಚಾರದಲ್ಲಿ ಬಿಜೆಪಿ ಕ್ರಿಮಿನಲ್ ಸಂಚು ನಡೆಸಿದೆ. ರಾಜೇಗೌಡರಿಗೆ ಬಿದ್ದಿದ್ದ 255 ಅರ್ಹವಾಗಿದ್ದ ಮತಗಳನ್ನು ಅನರ್ಹ ಮಾಡಲಾಗಿದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರಕಾರವಿತ್ತು. ಬಿಜೆಪಿಯವರು ಮತ್ತು ಸಿಬ್ಬಂದಿ ಮೂಲಕ ಮತಪತ್ರಗಳನ್ನು ತಿದ್ದಲಾಗಿದ್ದು, ಇದು ಕ್ರಿಮಿನಲ್ ಸಂಚು. ಆದ್ದರಿಂದ ಶೃಂಗೇರಿ ಫಲಿತಾಂಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು ಎಂದರು.

ರೈಲ್ವೆ ಇಲಾಖೆಯ ಹುದ್ದೆಗಳಿಗೆ ಕನ್ನಡಿಗರನ್ನು ಪರಿಗಣಿಸಲಾಗುತ್ತಿಲ್ಲ, ರಾಜ್ಯ ಸರಕಾರ ಇದರಲ್ಲಿ ಮಧ್ಯಪ್ರವೇಶಿಸಬಹುದೇ? ಎಂಬ ಪ್ರಶ್ನೆಗೆ ಉತ್ತರಿಸಿ, ಈ ಪರೀಕ್ಷೆಗಳನ್ನು ಕೇಂದ್ರ ಸರಕಾರ ನಡೆಸುತ್ತಿದ್ದು, ಈ ನಡವಳಿಕೆಯು ಕನ್ನಡಿಗರ ಪರ ಅವರ ಧೋರಣೆಯನ್ನು ಬಿಂಬಿಸುತ್ತದೆ ಎಂದು ಟೀಕಿಸಿದರು.

ಸರಕಾರಕ್ಕೆ ಜನಮೆಚ್ಚುಗೆ

ಕಾಂಗ್ರೆಸ್ ಸರಕಾರದ ಯೋಜನೆಗಳು ಜನಮೆಚ್ಚುಗೆಗೆ ಪಾತ್ರವಾಗಿದ್ದು, ಜನಾಶೀರ್ವಾದ ದಿಂದ ರಾಜ್ಯದ ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಗೆಲುವು ಸಾಧಿಸಲು ಸಾಧ್ಯವಾಗಿದೆ. ಉಪಚುನಾವಣೆ ಗೆಲುವು ರಾಜ್ಯದ ಜನರು ಕಾಂಗ್ರೆಸ್ ಸರಕಾರದ ಯೋಜನೆಗಳನ್ನು ಮೆಚ್ಚಿಕೊಂಡಿರುವುದನ್ನು ಸೂಚಿಸುತ್ತದೆ. ವಿಪಕ್ಷಗಳ ಯಾವುದೇ ತಂತ್ರಗಾರಿಕೆ ನಡೆಯುವುದಿಲ್ಲ. ಅವರು ಕೇವಲ ಕುತಂತ್ರಗಳನ್ನಷ್ಟೇ ಮಾಡುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ನನ್ನನ್ನು ರಾಹುಲ್ ಗಾಂಧಿ ಅವರು ಇದುವರೆಗೆ ದೆಹಲಿಗೆ ಕರೆದಿಲ್ಲ, ನಾನೂ ಕೂಡ ಅವರ ಅಪಾಯಿಂಟ್‌ಮೆಂಟ್ ಕೇಳಿಲ್ಲ, ಅವರು ತಾವಾಗಿಯೇ ನನ್ನನ್ನು ಕರೆದರೆ ನಾನು ಹೋಗುತ್ತೇನೆ. ಅಪಾಯಿಂಟ್‌ಮೆಂಟ್ ಫಿಕ್ಸ್ ಆದ ಮೇಲೆ ಸಂಪುಟ ಪುನಾರಚನೆಯಾ? ಸಂಪುಟ ವಿಸ್ತರಣೆಯಾ ಯಾವ ವಿಷಯದ ಚರ್ಚೆ ಎಂಬುದು ಆಗ ಗೊತ್ತಾಗಲಿದೆ. ಅವರು ನನ್ನನ್ನು ಕರೆದೇ ಇಲ್ಲ ಎಂದ ಮೇಲೆ ಸಭೆಯ ಅಜೆಂಡಾ ಹೇಗೆ ಫಿಕ್ಸ್ ಆಗುತ್ತದೆ?

-ಸಿದ್ದರಾಮಯ್ಯ ಸಿಎಂ

ಪಿಎಸ್‌ಐಗೆ ಮಹಿಳಾ ಪೇದೆ ಲವ್ ದೋಖಾ ಆರೋಪ

8 ವರ್ಷಗಳಿಂದ ಪ್ರೀತಿ, ಸಹಜೀವನ | ಬೇರೆ ಯುವಕನ ಜತೆ ಮದುವೆಗೆ ರೆಡಿ | ಪಿಎಸ್‌ಐ, ಎಸ್‌ಪಿ ಮೊರೆ

ಯಾದಗಿರಿ: ಸುಮಾರು 8 ವರ್ಷಗಳ ಕಾಲ ಪರಸ್ಪರ ಪ್ರೀತಿಸಿ, ಲಿವಿಂಗ್ ಟು ಗೆದರ್ ಸಂಬಂಧದಲ್ಲಿದ್ದ ಪಿಎಸ್‌ಐ ಹಾಗೂ ಮಹಿಳಾ ಪೇದೆ ಪ್ರೇಮ ಪ್ರಸಂಗ ಬೀದಿಗೆ ಬಂದಿದ್ದು, ಪೊಲೀಸ್ ಇಲಾಖೆ ಪೇಚಿಗೆ ಸಿಲುಕಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ನಗರದ ಗುಪ್ತಚರ ಇಲಾಖೆ ಯಲ್ಲಿ ಪಿಎಸ್‌ಐ ಆಗಿರುವ ವಿರೇಶ್, ರಾಯಚೂರು ಜಿಲ್ಲೆಯ ಮಹಿಳಾ ಪೇದೆ ಯೊಬ್ಬರು ಪ್ರೀತಿಸಿ ಮೋಸ ಮಾಡಿದ್ದಾರೆ ಎಂದು ಆರೋಪಿಸಿ ರಾಯಚೂರು ಎಸ್ಪಿ ಅವರಿಗೆ ದೂರು ನೀಡಿದ್ದಾರೆ ಎನ್ನಲಾಗಿದೆ.

ವೀರೇಶ್ ಆಲೂರು ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗುಬ್ಬೆವಾಡದ ಮೂಲ ನಿವಾಸಿಯಾಗಿದ್ದು, ಮಹಿಳಾ ಪೇದೆ ವಿಜಯಪುರ ಜಿಲ್ಲೆಯ ಆಲಮೇಲ ತಾಲೂಕಿನ ಬಳಗಾನೂರಿನವರು. ಸಿಂದಗಿಯ ಕೋಚಿಂಗ್ ಸೆಂಟರ್‌ವೊಂದರಲ್ಲಿನ ಇಬ್ಬರ ಪರಿಚಯ ಬಳಿಕ ಪ್ರೇಮಕ್ಕೆ ತಿರುಗಿತ್ತು ಎನ್ನಲಾಗಿದೆ. ವಿರೇಶ್ ಪಿಎಸ್‌ಐ ಆಗಿ ನೇಮಕಗೊಂಡ ಬಳಿಕ ಮಹಿಳೆ ಕಾನ್‌ಸ್ಟೇಬಲ್ ಆಗಿ ನೇಮಕಗೊಂಡರು.ರಾಯಚೂರು ಗ್ರಾಮೀಣ ಠಾಣೆಯಲ್ಲಿ ಕೆಲಸ ಮಾಡುವಾಗ ಇಬ್ಬರೂ ನಾಲ್ಕು ವರ್ಷಗಳ ಕಾಲ ಒಂದೇ ಮನೆಯಲ್ಲಿ ಒಟ್ಟಿಗೆ ವಾಸವಿದ್ದರು. ಅಷ್ಟೇ ಅಲ್ಲದೆ, ದೇವಸ್ಥಾನವೊಂದರಲ್ಲಿ ಹಾರ ಬದಲಾಯಿಸಿಕೊಂಡು ಮದುವೆಯಾಗಿದ್ದರು ಎಂದು ವಿರೇಶ ಆರೋಪಿಸಿದ್ದಾರೆ. ತನಗೆ ಮಹಿಳಾ ಪೇದೆಯಿಂದ ಮೋಸವಾಗಿದೆ ಎಂದು ಯಾದಗಿರಿ ಜಿಲ್ಲೆಯ ಶಹಾಪುರ ಠಾಣೆಯಲ್ಲಿ ಇಂಟಲಿಜೆನ್ಸ್ ಪಿಎಸ್‌ಐ ವಿರೇಶ್ ಆಲೂರು ಮಾಧ್ಯಮಗಳ ಮುಂದೆ ಗಂಭೀರ ಆರೋಪ ಮಾಡಿದ್ದಾರೆ. ನಾವಿಬ್ಬರು ಕಳೆದ ಎಂಟು ವರ್ಷಗಳಿಂದ ಸಂಬಂಧದಲ್ಲಿದ್ದು, ಇದೀಗ ಜಾತಿ ಕಾರಣ ನೀಡಿ ನನ್ನನ್ನು ದೂರ ಮಾಡ್ತಿದ್ದಾರೆ ಎಂದು ವಿರೇಶ್ ದೂರಿದ್ದಾರೆ.

ಮಹಿಳಾ ಪೇದೆ ಹಾಗೂ ಪಿಎಸ್‌ಐ ಜೊತೆಗಿರುವ ಫೋಟೋ.

ಮಹಿಳಾ ಪೇದೆಯ ಮದುವೆ ಇದೇ ಮೇ7 ರಂದು ರಾಯಚೂರಿನಲ್ಲಿ ನಿಶ್ಚಯವಾಗಿದೆ. ತನಗೆ ನ್ಯಾಯ ಸಿಗಬೇಕು ಮತ್ತು ಈ ಮದುವೆ ನಡೆಯಬಾರದು ಎಂದು ವಿರೇಶ್ ಈಗ ಆನ್‌ಲೈನ್ ಮೂಲಕ ದೂರು ಸಲ್ಲಿಸಿದ್ದಾರೆ . ಇಬ್ಬರೂ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಈ ಪ್ರೀತಿ ಮತ್ತು ವಂಚನೆಯ ಪ್ರಕರಣವು ಇಲಾಖೆಗೆ ಮುಜುಗರ ತಂದಿದೆ.

ಮೂರು ಬಾರಿ ಗರ್ಭಪಾತ

ಅಲ್ಲದೇ ನನ್ನಿಂದ ಸುಮಾರು 35 ಲಕ್ಷ ರು.ಹಣ ಪಡೆದಿದ್ದಾಳೆ. ಎರಡು ಬಾರಿ ಗರ್ಭಿಣಿಯಾಗಿದ್ದಾಗ ನನಗೆ ತಿಳಿಯದಂತೆ ಅಬಾರ್ಷನ್ ಮಾಡಿಸಿದ್ದಾಳೆ. ಈಗ ಅಧಿಕೃತವಾಗಿ ರಿಜಿಸ್ಟರ್ ಮ್ಯಾರೇಜ್ ಮಾಡಿಕೊಳ್ಳೋಣ ಅಂದಾಗ ಜಾತಿಯ ನೆಪ ಹೇಳಿ ಬೇರೆ ಯುವಕನ ಜತೆ ಮದುವೆಗೆ ಸಜ್ಜಾಗಿದ್ದಾಳೆ ಎಂದು ಪಿಎಸ್‌ಐ ಹೇಳಿಕೊಂಡಿದ್ದಾನೆ.

35 ಲಕ್ಷ ರು. ಆರ್ಥಿಕ ನೆರವು

ಮಹಿಳಾ ಪೇದೆಯ ಕುಟುಂಬಕ್ಕೆ 35 ಲಕ್ಷ ರು . ಆರ್ಥಿಕ ನೆರವು ನೀಡಿದ್ದು, ಈ ಹಣದಿಂದಲೇ ಮನೆ ಕಟ್ಟಿಸಿಕೊಂಡಿದ್ದಾರೆ. ಆಕೆಯ ತಮ್ಮನಿಗೂ ಟ್ರಾಕ್ಟರ್ ಕೊಡಿಸಿದ್ದೇನೆ. ಮದುವೆ ವಿಷಯ ಬಂದಾಗ ಜಾತಿ ಕಾರಣ ನೀಡಲಾಗುತ್ತಿದೆ. ನನಗೆ ಮಹಿಳೆ ಪೇದೆ ಬೇಕು ಎಂದು ವಿರೇಶ್ ಹೇಳುತ್ತಿದ್ದಾರೆ. ಇದಾಗ್ಯೂ ಮಹಿಳಾ ಪೇದೆಯಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ನಾಡಿನ ಸಮಸ್ತ ಹರಗುರು ಚರಮೂರ್ತಿಗಳಿಗೆ ಆಹ್ವಾನ

ಬದಲಾದ ಸಮಯ, ಮೇ 9 ಮಧ್ಯಾಹ್ನ 2 ಗಂಟೆಗೆ ಅಭಿಮಾನೋತ್ಸವ | 10 ಲಕ್ಷ ಜನರು ಸೇರುವ ನಿರೀಕ್ಷೆ

ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ವೇದಿಕೆ ಸಿದ್ಧತೆಯನ್ನು ಬುಧವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಗೋವಿಂದ ಕಾರಜೋಳ ಪರಿಶೀಲನೆ ನಡೆಸಿದರು.

ಚಿತ್ರದುರ್ಗ: ಮೇ 9ರಂದು ಬೆಳಗ್ಗೆ ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ನೂತನ ಮುಖ್ಯಮಂತ್ರಿಗಳ ಪ್ರಮಾಣವಚನ ನಡೆಯಲಿದೆ. ಆದ್ದರಿಂದ ಮಾಜಿ ಸಿಎಂ ಬಿಎಸ್‌ವೈ ಅಭಿಮಾನೋತ್ಸವವು ಬೆಳಗ್ಗೆ ಬದಲಾಗಿ ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಅಂದು ಪಶ್ಚಿಮ ಬಂಗಾಳದಲ್ಲಿ ಸಿಎಂ ಪ್ರಮಾಣ ವಚನ ಸ್ವೀಕಾರ ಆಗಲಿದೆ. ಆದ್ದರಿಂದ 3.45ರ ವೇಳೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಜೀ ಅವರು ಆಗಮಿಸಲಿದ್ದಾರೆ. ಈ ಕಾರಣದಿಂದ ಅಭಿಮಾನೋತ್ಸವ ಉದ್ಘಾಟನೆ ಸಮಯ ಬದಲಾವಣೆ ಮಾಡಲಾಗಿದೆ ಎಂದರು.

ಅಪ್ರತಿಮ ಹೋರಾಟಗಾರ, ರೈತ ನಾಯಕ, ಬಡವರ ಕಣ್ಮಣಿ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ರಾಜಕೀಯ ಜೀವನದ 50 ವರ್ಷಗಳ ಪಯಣ ಪೂರೈಸಿದ ಶುಭ ಘಳಿಗೆಯಲ್ಲಿ ಬಿ.ಎಸ್.ವೈ ಅವರ ಅಭಿಮಾನೋತ್ಸವವನ್ನು ನಡೆಸಲಾಗುತ್ತಿದೆ. ಈ ಸಂಬಂಧ ವ್ಯಾಪಕ ಸಿದ್ಧತೆ ನಡೆದಿದೆ. 10ಲಕ್ಷಕ್ಕೂ ಹೆಚ್ಚು ಅಭಿಮಾನಿಗಳು ಸೇರಲಿದ್ದಾರೆ. ಪ್ರತಿ ಜಿಲ್ಲೆಗೆ ಹೋಗಿ ಸ್ವಾಮೀಜಿಗಳಿಗೆ ಆಮಂತ್ರಣ ಪತ್ರ ನೀಡಲು ಯೋಜಿಸಿದ್ದೆವು. ಸಮಯದ ಅಭಾವದಿಂದ ಎಲ್ಲರ ಭೇಟಿ ಸಾಧ್ಯವಾಗಿಲ್ಲ. ನಾಡಿನ ಎಲ್ಲ ಹರಗುರು ಚರಮೂರ್ತಿಗಳು, ಮಠಾಧೀಶರು, ಸ್ವಾಮೀಜಿಗಳು 9ರಂದು ಐತಿಹಾಸಿಕ ಅಭಿಮಾನೋತ್ಸವದಲ್ಲಿ ಪಾಲ್ಗೊಳ್ಳಬೇಕು ಎಂದು ವಿನಂತಿಸಿದರು. ಎಲ್ಲ ಸಮಾಜದ ಗುರುಗಳು ಬಂದು ಆಶೀರ್ವದಿಸಬೇಕೆಂದು ಮನವಿ ಮಾಡಿದರು.

2 ಗ್ರಂಥಗಳ ಬಿಡುಗಡೆ- ಕಾರಜೋಳ: ಮಾಜಿ ಡಿಸಿಎಂ ಮತ್ತು ಸಂಸದ ಗೋವಿಂದ ಕಾರಜೋಳ ಅವರು ಮಾತನಾಡಿ, ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಮಾಜಸೇವೆ, ಜೀವನ ಚರಿತ್ರೆಯನ್ನು ನಾವು ಐತಿಹಾಸಿಕ ನಗರ ಚಿತ್ರದುರ್ಗದಲ್ಲಿ ಒಂದು ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಆಚರಿಸಲು ನಿರ್ಧರಿಸಿದ್ದೇವೆ. ಅವರ ಜೀವನಚರಿತ್ರೆ ಮತ್ತು ಸದನದಲ್ಲಿ ಯಡಿಯೂರಪ್ಪನವರು ಎಂಬ ಸಂಬಂಧ ಕೆಂದಾವರೆ- ಕಮಲದಲ್ಲಿ ಅರಳಿದ ಹೂ' ಸದನದಲ್ಲಿ ಶಿಕಾರಿ' ಎಂಬ 2 ಗ್ರಂಥಗಳನ್ನು ಅವತ್ತು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

8ರಂದು ಬಿಎಸ್‌ವೈ ಪುರಪ್ರವೇಶ

ಮೇ8ರಂದು ಸಂಜೆ ಯಡಿಯೂರಪ್ಪ ಅವರ ಚಿತ್ರದುರ್ಗ ಪುರಪ್ರವೇಶ ನಡೆಯಲಿದೆ. ಇದನ್ನು ನಾಡಿನ ಸಾಂಸ್ಕೃತಿಕ ಹಬ್ಬದ ರೀತಿಯಲ್ಲಿ ಮಾಡಲು ತಯಾರಿ ಮಾಡಿದ್ದೇವೆ. 24 ಜಾನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಎಲ್ಲರೂ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಮನವಿ ಮಾಡಿದರು.

ಹತ್ತು ಸಾವಿರ ಬಸ್‌ಗಳ ಬುಕಿಂಗ್

ರಾಜ್ಯದ ವಿವಿಧೆಡೆಯಿಂದ ಅಭಿಮಾನಿಗಳು ಆಗಮಿಸಲು 10 ಸಾವಿರ ಬಸ್‌ಗಳನ್ನು ಬುಕಿಂಗ್ ಮಾಡಲಾಗಿದೆ. 45ರಿಂದ 50 ಸಾವಿರ ಕಾರು ಮತ್ತಿತರ ವಾಹನಗಳು ವಾಹನಗಳು ಬರಲಿವೆ. ನಮ್ಮ ನಿರೀಕ್ಷೆಗೂ ಮೀರಿ ಸ್ಪಂದನೆ ಲಭಿಸುತ್ತಿದೆ. ಸ್ವಾಮೀಜಿಗಳು, ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು ಬರಲಿದ್ದಾರೆ ಎಂದು ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಹೊಂಡದಲ್ಲಿ ಮುಳುಗಿ 2 ಮಕ್ಕಳು ಸಾವು

ಕೋಲಾರ: ಕೃಷಿ ಹೊಂಡದಲ್ಲಿ ಆಟವಾಡಲು ಹೋಗಿ ಇಬ್ಬರು ಮಕ್ಕಳು ಮೃತಪಟ್ಟಿರುವ ಘಟನೆ ಕೋಲಾರ ಜಿಲ್ಲೆ ಬಂಗಾರಪೇಟೆ ತಾಲೂಕಿನ ಬೊಡೇನಹಳ್ಳಿಯಲ್ಲಿ ನಡೆದಿದೆ. ಕಾರ್ತಿಕ್ (8), ತನುಶ್ರೀ (15) ಮೃತಪಟ್ಟಿದ್ದಾರೆ. ಅಜ್ಜಿ-ತಾಯಿಯೊಂದಿಗೆ ತೋಟಕ್ಕೆ ತೆರಳಿದ್ದ ವೇಳೆ ಆಟವಾಡಲು ಹೋಗಿ ಪಕ್ಕದಲ್ಲಿದ್ದ ಕೃಷಿ ಹೊಂಡದಲ್ಲಿ ಬಿದ್ದು ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ. ತನುಶ್ರೀ ಇತ್ತೀಚೆಗೆ ಎಸ್‌ಎಸ್ ಎಲ್‌ಸಿಯಲ್ಲಿ ಶೇ.86 ರಷ್ಟು ಅಂಕ ಗಳಿಸಿದ್ದಳು. ಮೊದಲಿಗೆ ಕಾರ್ತಿಕ್ ಕಾಲು ಜಾರಿ ಹೊಂಡಕ್ಕೆ ಬಿದ್ದಿದ್ದು, ಬಳಿಕ ರಕ್ಷಣೆಗೆ ತೆರಳಿದ ತನುಶ್ರೀ ಮುಳುಗಿ ಮೃತಪಟ್ಟಿದ್ದಾಳೆ. ತಾಲೂಕಿನ ನಲ್ಲಗುಟ್ಟ ಹಳ್ಳಿಯ ಶಾಲೆಯಲ್ಲಿ 3ನೇ ತರಗತಿ ಓದುತ್ತಿದ್ದ ಕಾರ್ತಿಕ್ ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಕೃಷಿ ಹೊಂಡಕ್ಕೆ ಬಿದ್ದಿದ್ದಾನೆ. ಇದನ್ನು ಕಂಡ ತನುಶ್ರೀ, ಆತನನ್ನು ರಕ್ಷಿಸಲು ಹೊಂಡಕ್ಕೆ ಇಳಿದಿದ್ದಾಳೆ. ಆದರೆ ನೀರಿನ ಆಳ ಅರಿಯದ ಕಾರಣ ಇಬ್ಬರೂ ಜಲಸಮಾಧಿಯಾಗಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಯಡಿಯೂರಪ್ಪ ಹೋರಾಟ

ಹೋರಾಟದಿಂದಲೇ ಮುಖ್ಯಮಂತ್ರಿ ಗದ್ದುಗೆವರೆಗೆ ಬಿಎಸ್‌ವೈ ಪಯಣ | ತಳಮಟ್ಟದಿಂದ ಬಿಜೆಪಿ ಪಕ್ಷ ಕಟ್ಟಿ ಅಧಿಕಾರಕ್ಕೆ ತಂದ ಕೀರ್ತಿ

ಅರುಣ್ ಶಹಾಪೂರ

ವಿಧಾನಪರಿಷತ್ ಮಾಜಿ ಸದಸ್ಯರು

ಬಿ.ಎಸ್.ಯಡಿಯೂರಪ್ಪ ಅವರು ಫೆಬ್ರವರಿ 27, 1943ರಂದು ಮಂಡ್ಯ ಜಿಲ್ಲೆಯ ಬೂಕನಕೆರೆ ಗ್ರಾಮದಲ್ಲಿ ಜನಿಸಿದರು. ಅವರ ಕುಟುಂಬ ಕೃಷಿ ಹಿನ್ನೆಲೆಯದ್ದಾಗಿದ್ದು ಸರಳ ಜೀವನ ಶೈಲಿಯಿಂದ ಕೂಡಿತ್ತು. ತಂದೆ-ಸಿದ್ದಲಿಂಗಯ್ಯ, ತಾಯಿ- ಪುತ್ತತಾಯಮ್ಮ ಇವರು ಶ್ರಮ ಮತ್ತು ನೈತಿಕ ಮೌಲ್ಯಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಆರ್ಥಿಕವಾಗಿ ಸೀಮಿತ ಪರಿಸ್ಥಿತಿಯಲ್ಲೇ ಬೆಳೆದ ಯಡಿಯೂರಪ್ಪನವರು ಬಾಲ್ಯದಿಂದಲೇ ಓದು ಮತ್ತು ಶಿಸ್ತು ಇವರ ಜೀವನದ ಪ್ರಮುಖ ಅಂಶವಾಗಿತ್ತು. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಊರಲ್ಲೇ ಪೂರ್ಣಗೊಳಿಸಿ. ನಂತರ ತಮ್ಮ ಉನ್ನತ ಶಿಕ್ಷಣವನ್ನು ಶಿವಮೊಗ್ಗ ನಗರದ ಎಲ್.ವಿ.ಡಿ. ಕಾಲೇಜಿನಲ್ಲಿ ಪೂರೈಸಿ ಬಿ.ಎ. ಪದವಿಯನ್ನು ಪಡೆದರು.

ವಿದ್ಯಾರ್ಥಿ ದೆಸೆಯಿಂದಲೇ ಹೋರಾಟ: ವಿದ್ಯಾರ್ಥಿ ಜೀವನದಲ್ಲಿಯೇ ಸಮಾಜದ ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿದ್ದ ಅವರು ಹಲವು ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದರು. ನಂತರದ ದಿನಗಳಲ್ಲಿ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜತೆ ಸಂಪರ್ಕ ಹೊಂದಿದರು. ಇದು ಅವರ ಜೀವನದ ವ್ಯಕ್ತಿತ್ವ ಮತ್ತು ನಾಯಕತ್ವದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿತು. ನಂತರ ಭಾರತೀಯ ಜನತಾ ಪಕ್ಷದಲ್ಲಿ ಕಾರ್ಯಕರ್ತರಾಗಿ ತಮ್ಮ ರಾಜಕೀಯ ಪಯಣವನ್ನು ಆರಂಭಿಸಿದರು.

ಜೀತ ಪದ್ಧತಿ ವಿರುದ್ಧ ಧ್ವನಿ: ಯಡಿಯೂರಪ್ಪ ಅವರ ಜೀವನದಲ್ಲಿ ಜೀತ ಪದ್ಧತಿ ವಿರುದ್ಧದ ಹೋರಾಟ ಒಂದು ಮಹತ್ವದ ಅಧ್ಯಾಯವಾಗಿದೆ. ಅವರು ಸಾಮಾನ್ಯ ರೈತ ಕುಟುಂಬದಿಂದ ಬಂದವರು. ಬಾಲ್ಯದಿಂದಲೇ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ಅವರು ನೇರವಾಗಿ ಕಂಡಿದ್ದರು. ಬಡವರು ಶ್ರೀಮಂತರ ಮನೆಗಳಲ್ಲಿ ಅಥವಾ ಜಮೀನಿನಲ್ಲಿ ಕಡಿಮೆ ವೇತನಕ್ಕೆ ಅಥವಾ ವೇತನವಿಲ್ಲದೆ ಕೆಲಸ ಮಾಡುವ ದಾಸ್ಯ ವ್ಯವಸ್ಥೆಯ ವಿರುದ್ಧ ಅವರು ಹೋರಾಟ ಆರಂಭಿಸಿದರು.

ಕಾರ್ಮಿಕರಲ್ಲಿ ಜಾಗೃತಿ: ಗ್ರಾಮಗಳಲ್ಲಿನ ಜನರನ್ನು ಸಂಘಟಿಸಿ, ಜೀತಕ್ಕೆ ಒಳಗಾಗಿದ್ದ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿ ನಿಮ್ಮ ಹಕ್ಕುಗಳನ್ನು ಅರಿತುಕೊಳ್ಳಿ ಎಂಬ ಸಂದೇಶವನ್ನು ಸಾರಿದರು. ಬಡ ರೈತರು ಹಾಗೂ ಕಾರ್ಮಿಕರನ್ನು ಒಗ್ಗೂಡಿಸಿ ಸರಿಯಾದ ಕೂಲಿ ಮತ್ತು ಮಾನವೀಯ ಜೀವನದ ಹಕ್ಕಿಗಾಗಿ ಸಮಾಜದಲ್ಲಿ ಸಮಾನತೆ ಮತ್ತು ಗೌರವದ ಅರಿವು ಮೂಡಿಸುವ ಕಾರ್ಯವನ್ನು ಅವರು ಮುಂದುವರಿಸಿದರು. ಈ ಹೋರಾಟದಿಂದ ಗ್ರಾಮೀಣ ಪ್ರದೇಶಗಳಲ್ಲಿ ಜೀತ ಪದ್ಧತಿಯ ವಿರುದ್ಧ ಜಾಗೃತಿ ಹೆಚ್ಚಿತು. ಜನರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿದರು. ಇದು ಯಡಿಯೂರಪ್ಪನವರ ರಾಜಕೀಯ ಜೀವನಕ್ಕೂ ದಿಕ್ಕು ನೀಡಿತು ಮತ್ತು ಜನರು ಅವರನ್ನು ಜನನಾಯಕನನ್ನಾಗಿ ನೋಡಿದರು.

ಮೊದಲ ಸ್ಪರ್ಧೆಯಲ್ಲೇ ವಿಧಾನಸೌಧ ಪ್ರವೇಶ: ಬಿ.ಎಸ್ ಯಡಿಯೂರಪ್ಪನವರು 1983ರಲ್ಲಿ ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮೊದಲ ಬಾರಿಗೆ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದರು. ಪಕ್ಷದ ಸಂಘಟನೆಗೆ ತಳಮಟ್ಟದಿಂದ ಕೆಲಸ ಮಾಡಿ ಬಾರಿ ಜನ ಬೆಂಬಲವನ್ನು ಗಳಿಸಿದರು. ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಬಲಪಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ದಕ್ಷಿಣ ಭಾರತದಲ್ಲಿ ನ್ಯಾಷನಲ್ ಕಾಂಗ್ರೆಸ್ ಮತ್ತು ಇತರ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯವೂ ಹೆಚ್ಚಿತ್ತು. ಆದರೂ ಯಡಿಯೂರಪ್ಪನವರು ಗ್ರಾಮ ಮಟ್ಟದಿಂದ ಕೆಲಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾದರು. 2007 ರಲ್ಲಿ ಮೊದಲ ಬಾರಿ ಜೆಡಿಎಸ್ ಜೊತೆಗಿನ ಮೈತ್ರಿ ಸರಕಾರದ ಮುಖ್ಯಮಂತ್ರಿಯಾಗಿ ಅಧಿಕಾರ ಹಿಡಿದ ಅವರು ಮೈತ್ರಿ ಪಕ್ಷದ ಬೆಂಬಲ ಹಿಂಪಡೆಯುವಿಕೆ ಮತ್ತು ರಾಜಕೀಯ ಒಪ್ಪಂದ ಮುರಿದು ಹೋದ ಕಾರಣ ಅಲ್ಪ ಅವಧಿಯಲ್ಲೇ ಸ್ಥಾನ ತ್ಯಜಿಸಬೇಕಾಯಿತು. ನಂತರ 2008 ರಲ್ಲಿ ಮತ್ತೆ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ಎರಡನೆಯ ಬಾರಿ ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಆಡಳಿತ ನಡೆಸಿದರು. ನಂತರ 2018 ರಲ್ಲಿ ಮೂರನೇ ಬಾರಿ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕರಿಸಿದರು. ಈ ಹಂತದಲ್ಲಿ ರಾಜಕೀಯ ಒತ್ತಡ, ಆಂತರಿಕ ಕಲಹಗಳು, ಆರೋಪಗಳು, ಕಾನೂನು ಸವಾಲುಗಳ ಮಧ್ಯೆ ಕೆಲವೇ ದಿನಗಳಲ್ಲಿ ತಮ್ಮ ಸ್ಥಾನವನ್ನು ತ್ಯಜಿಸಬೇಕಾಯಿತು. ನಂತರ 2019 ರಲ್ಲಿ ನಾಲ್ಕನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಸ್ವೀಕರಿಸಿ 2021 ರವರೆಗೆ ಜನಪರ ಆಡಳಿತವನ್ನು ನಡೆಸಿದರು. ಪ್ರಸ್ತುತ ಬಿ.ಎಸ್ ಯಡಿಯೂರಪ್ಪನವರು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಭಾಗ್ಯಲಕ್ಷ್ಮಿ ಯೋಜನೆಯಿಂದ ಬದುಕ ಹಸನು: ಅಧಿಕಾರಕ್ಕೆ ಬಂದ ಬಳಿಕ ಭಾಗ್ಯಲಕ್ಷ್ಮಿ ಯೋಜನೆ, ರೈತರ ಸಾಲ ಮನ್ನಾ, ಕೃಷಿ ಬಜೆಟ್, ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಣೆ ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿದರು. ಭಾಗ್ಯಲಕ್ಷ್ಮಿ ಯೋಜನೆ ಕರ್ನಾಟಕ ಸರ್ಕಾರದ ಅತ್ಯಂತ ಪ್ರಮುಖ ಯೋಜನೆಗಳಲ್ಲಿ ಒಂದಾಗಿದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಒಳಪಟ್ಟಿರುತ್ತದೆ. ಇದು ವಿಶೇಷವಾಗಿ ಬಡ ಕುಟುಂಬಗಳ ಹೆಣ್ಣುಮಕ್ಕಳ ಭವಿಷ್ಯದ ಭದ್ರತೆಗಾಗಿ ರೂಪಿಸ ಲಾಗಿದೆ. ಈ ಯೋಜನೆ 2006 ರಲ್ಲಿ ಪ್ರಾರಂಭಗೊಳ್ಳುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ರೇಷನ್ ಕಾರ್ಡ್ ಹೊಂದಿರುವ ಕುಟುಂಬದ ಮೊದಲನೇ ಹೆಣ್ಣು ಮಗುವಿಗೆ 19,300 ರು. ಎರಡನೇ ಹೆಣ್ಣು ಮಗುವಿಗೆ 18,350 ರು.ರಂತೆ ಠೇವಣಿ ಮಾಡಿ ಮಗುವಿಗೆ 18 ವರ್ಷಗಳು ತುಂಬಿದ ನಂತರ ಒಂದು ಲಕ್ಷ ರೂಪಾಯಿ ನಗದು ಹಣ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಹೆಣ್ಣುಮಗುವಿನ ಜನನವನ್ನು ಉತ್ತೇಜಿಸುವುದು, ಹೆಣ್ಣು ಭ್ರೂಣಲಿಂಗ ಹತ್ಯೆಯನ್ನು ತಡೆಯುವುದು, ಬಾಲ್ಯ ವಿವಾಹವನ್ನು ನಿಲ್ಲಿಸುವುದು, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಭವಿಷ್ಯದ ಭದ್ರತೆಯನ್ನು ಒದಗಿಸುವುದು.

ರೈತರು ತೆಗೆದುಕೊಂಡಿರುವ ಕೃಷಿ ಸಾಲವನ್ನು ಭಾಗಶಃ ಅಥವಾ ಸಂಪೂರ್ಣವಾಗಿ ರದ್ದುಪಡಿಸುವ ಯೋಜನೆಯಾಗಿದೆ. ಇದು ವಿಶೇಷವಾಗಿ ಸಂಕಷ್ಟದಲ್ಲಿರುವ ರೈತರಿಗೆ ಆರ್ಥಿಕ ನೆರವನ್ನು ಒದಗಿಸಲು ರೂಪಿಸಲಾಗಿದೆ. ರೈತರು ಬ್ಯಾಂಕ್ ಅಥವಾ ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ಸರಕಾರವೇ ತೀರಿಸಿ, ರೈತನನ್ನು ಸಾಲಭಾರದಿಂದ ಮುಕ್ತಗೊಳಿಸಲಾಗುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶ ರೈತರ ಸಾಲಭಾರ ಕಡಿಮೆ ಮಾಡುವುದು, ಕೃಷಿ ಕ್ಷೇತ್ರದಲ್ಲಿ ಆರ್ಥಿಕ ಸ್ಥಿರತೆ ತರುವುದು, ರೈತರ ಆತ್ಮಹತ್ಯೆ ಮತ್ತು ಸಂಕಷ್ಟಗಳನ್ನು ಕಡಿಮೆ ಮಾಡುವುದು, ರೈತರ ಜೀವನಮಟ್ಟ ಸುಧಾರಿಸುವುದು.

ರೈತರಿಗೆ ಮನಮಿಡಿಯುವ ನಾಯಕ: ಯಡಿಯೂರಪ್ಪನವರ ಕೃಷಿ ಬಜೆಟ್ ಕರ್ನಾಟಕದಲ್ಲಿ ಬಹಳ ವಿಶೇಷವಾಗಿದೆ. ಅವರು ತಮ್ಮ ಬಜೆಟ್‌ಗಳಲ್ಲಿ ಕೃಷಿ ಕ್ಷೇತ್ರಕ್ಕೆ ಪ್ರತ್ಯೇಕ ಒತ್ತು ನೀಡಿ, ರೈತರ ಅಭಿವೃದ್ಧಿಯನ್ನು ಮುಖ್ಯಗುರಿಯನ್ನಾಗಿ ಮಾಡಿಕೊಂಡಿದ್ದರು. ಇದು ಕರ್ನಾಟಕದಲ್ಲಿ ಕೃಷಿಯ ಮಹತ್ವವನ್ನು ಹೆಚ್ಚಿಸುವುದರ ಜೊತೆಗೆ ದೇಶದೆಲ್ಲೆಡೆ ಮಾದರಿಯಾಯಿತು. 2011-12 ರ ಕೃಷಿ ಬಜೆಟ್ಟಿನಲ್ಲಿ ಸುಮಾರು 17,000 ಕೋಟಿ ಹಣವನ್ನು ಹಾಗೆ 2020-21 ರ ಬಜೆಟ್‌ನಲ್ಲಿ 25000 ಕೋಟಿ ಒಟ್ಟು 37000 ಕೋಟಿ ಮೀಸಲಿರಿಸಲಾಯಿತು. ತುಂಗಭದ್ರಾ, ಕಾವೇರಿ ಹೀಗೆ ಅನೇಕ ಪ್ರಮುಖ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಅನುದಾನವನ್ನು ನೀಡಲಾಯಿತು. ಇದರ ಮುಖ್ಯ ಉದ್ದೇಶ ರೈತರ ತಲಾ ಆದಾಯವನ್ನು ಹೆಚ್ಚಿಸುವುದು, ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿಸುವುದು, ಗ್ರಾಮೀಣ ಪ್ರದೇಶದ ಆರ್ಥಿಕತೆಯನ್ನು ಬಲಪಡಿಸುವುದು, ಕೃಷಿ ಹಾಗೂ ನೀರಾವರಿ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಉತ್ತೇಜಿಸುವುದು, ಪ್ರಕೃತಿ ವಿಪತ್ತುಗಳಿಂದ ರೈತರ ರಕ್ಷಣೆ ಮಾಡುವುದು.



ಬಿ.ಎಸ್.ಯಡಿಯೂರಪ್ಪನವರ ಆಡಳಿತ ಅವಧಿಯಲ್ಲಿ ಮುಖ್ಯವಾಗಿ 2008-2011 ಮತ್ತು 2019-2021 ಮಠ-ಮಂದಿರ ಮತ್ತು ಧಾರ್ಮಿಕ ಕ್ಷೇತ್ರಗಳಿಗೆ ವಿಶೇಷ ಅನುದಾನ ಹಾಗೂ ಪ್ರೋತ್ಸಾಹ ನೀಡುವ ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು. ಯಡಿಯೂರಪ್ಪನವರು ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ವಿಶಿಷ್ಟ ಗುರುತು ಮೂಡಿಸಿದ ನಾಯಕರಲ್ಲಿ ಪ್ರಮುಖರು. ಸಾಮಾನ್ಯ ರೈತ ಕುಟುಂಬದಿಂದ ಪ್ರಾರಂಭಿಸಿ ರಾಜ್ಯದ ಮುಖ್ಯಮಂತ್ರಿಯಾಗಿ ಏರಿದ ಅವರ ಜೀವನಯಾನ ಅನೇಕ ಜನರಿಗೆ ಪ್ರೇರಣೆಯಾಗಿದೆ. ಪರಿಶ್ರಮ, ಧೈರ್ಯ ಮತ್ತು ಜನಸೇವೆ ಎಂಬ ಮೌಲ್ಯಗಳನ್ನು ತಮ್ಮ ರಾಜಕೀಯ ಜೀವನದಲ್ಲಿ ಅಳವಡಿಸಿಕೊಂಡು ಅವರು ಜನರ ವಿಶ್ವಾಸವನ್ನು ಗಳಿಸಿದರು. ಅವರ ಆಡಳಿತಾವಧಿಯಲ್ಲಿ ಕೃಷಿ, ಗ್ರಾಮೀಣ ಅಭಿವೃದ್ಧಿ, ಮೂಲಸೌಕರ್ಯ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ಕ್ಷೇತ್ರಗಳಲ್ಲಿ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದರು. ರೈತರ ಸಾಲಮನ್ನಾ, ಭಾಗ್ಯಲಕ್ಷ್ಮಿ ಯೋಜನೆ, ಆಶ್ರಯ ಯೋಜನೆಗಳಂತಹ ಕ್ರಮಗಳು ಜನಜೀವನದ ಮೇಲೆ ಸ್ಪಷ್ಟ ಪರಿಣಾಮ ಬೀರಿವೆ. ವಿಶೇಷವಾಗಿ ರೈತರ ಸಮಸ್ಯೆಗಳ ಬಗ್ಗೆ ಅವರು ತೋರಿದ ಕಾಳಜಿ ಗಮನಾರ್ಹವಾಗಿದೆ.

ಇಂದಿಗೂ ನೆನಪು ಉಚಿತ ಬೈಸಿಕಲ್ ಯೋಜನೆ

ಉಚಿತ ಬೈಸಿಕಲ್ ವಿತರಣಾ ಯೋಜನೆ ಎಂಬುದು ಸರಕಾರ ವಿದ್ಯಾರ್ಥಿಗಳ ಶಿಕ್ಷಣವನ್ನು ಉತ್ತೇಜಿಸಲು ಮತ್ತು ಶಾಲೆಯನ್ನು ತೊರೆಯುವ ವಿದ್ಯಾರ್ಥಿಗಳ ಪ್ರಮಾಣವನ್ನು ಕಡಿಮೆ ಮಾಡಲು ಬಿ.ಎಸ್.ಯಡಿಯೂರಪ್ಪ ಅವರು ಜಾರಿಗೆ ತಂದ ಪ್ರಮುಖ ಯೋಜನೆಯಾಗಿದೆ. 8ನೇ ತರಗತಿಯಲ್ಲಿ ವ್ಯಾಸಾಂಗ ಮಾಡುವ ಬಿಪಿಎಲ್ ರೇಷನ್ ಕಾರ್ಡ್ ಹೊಂದಿರುವ ಹಾಗೂ ಆರ್ಥಿಕವಾಗಿ ಹಿಂದುಳಿದ ಸರಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆಂದೇ ವಿಶೇಷವಾಗಿ ರೂಪಿಸಿದ ಯೋಜನೆಯಾಗಿದೆ. ಇದರ ಮುಖ್ಯ ಉದ್ದೇಶ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಶಾಲೆಗೆ ಸುಲಭವಾಗಿ ಹೋಗಲು ಸಹಾಯ ಮಾಡುವುದು, ವಿಶೇಷವಾಗಿ ಹುಡುಗಿಯರ ಶಿಕ್ಷಣವನ್ನು ಉತ್ತೇಜಿಸುವುದು, ಶಾಲೆಗೆ ನಿರಂತರ ಹಾಜರಾತಿಯನ್ನು ಹೆಚ್ಚಿಸುವುದು, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಬೆಳೆಸುವುದು.

ಛಲ ಬಿಡದ ಧೈರ್ಯವಂತರು ಬಿ.ಎಸ್.ಯಡಿಯೂರಪ್ಪ

ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನದಲ್ಲಿ ವಿವಾದಗಳು ಮತ್ತು ಸವಾಲುಗಳೂ ಇದ್ದವು. ಆದರೆ ಅವುಗಳ ನಡುವೆಯೂ ಅವರು ತಮ್ಮ ನಾಯಕತ್ವವನ್ನು ಸ್ಥಿರವಾಗಿ ಮುಂದುವರಿಸಿಕೊಂಡು ಹೋಗಿದ್ದಾರೆ. ಇದು ಅವರ ಧೈರ್ಯ ಮತ್ತು ರಾಜಕೀಯ ಚಾತುರ್ಯವನ್ನು ತೋರಿಸುತ್ತದೆ. ಒಟ್ಟಿನಲ್ಲಿ, ಬಿ.ಎಸ್.ಯಡಿಯೂರಪ್ಪ ಅವರು ಕೇವಲ ಒಬ್ಬ ರಾಜಕಾರಣಿ ಮಾತ್ರವಲ್ಲ, ಜನಪರ ಆಡಳಿತದ ಮೂಲಕ ರಾಜ್ಯದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ ನಾಯಕ. ಅವರ ಸಾಧನೆಗಳು ಮತ್ತು ಹೋರಾಟಗಳು ಭವಿಷ್ಯದ ಪೀಳಿಗೆಗೆ ಮಾರ್ಗದರ್ಶನವಾಗುತ್ತವೆ.

ವಿಶ್ವವಾಣಿ

ಸಂಪಾದಕೀಯ

ನೀರಾಟ ನರಳಾಟವಾಗದಿರಲಿ

ಚಿಕ್ಕಮಗಳೂರಿನ ಅರಳಗುಪ್ಪೆಯಲ್ಲಿ ನೀರಿನಲ್ಲಿ ಆಟವಾಡಲು ಹೋದ ನಾಲ್ವರು ಬಾಲಕರು ಕೆರೆಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಭದ್ರಾ ನದಿಯಲ್ಲಿ ಒಬ್ಬ ಯುವಕ ಜಲಸಮಾಧಿಯಾಗಿದ್ದಾನೆ. ಕರಾವಳಿಯ ಸಮುದ್ರ ತೀರಗಳಲ್ಲಿ ಈಜಲು ಇಳಿದವರು ತೆರೆಗಳ ಹೊಡೆತಕ್ಕೆ ಸಿಲುಕಿ ಮುಳುಗುವುದು ಅಥವಾ ರಕ್ಷಣಾ ಪಡೆಯವರಿಂದಾಗಿ ಬದುಕುಳಿಯುವುದು ಆಗಾಗ ನಡೆಯುತ್ತಲೇ ಇದೆ. ಇದೀಗ ಬೇಸಿಗೆ ರಜೆ. ಮಕ್ಕಳು ತರಗತಿಗಳಿಂದ ಮುಕ್ತರಾಗಿ ನೀರಿನಲ್ಲಿ ಆಟವಾಡಲು ಬಯಸುವುದು ಸಹಜ. ಹಿರಿಯರು ಸಹಿತ ಮಕ್ಕಳೊಂದಿಗೆ ನೀರಿನ ತಾಣಗಳ ಕಡೆಗೆ ಪ್ರವಾಸ ಹೋಗುವುದು ಸಾಮಾನ್ಯ. ಇಂಥ ಹೊತ್ತಿನಲ್ಲಿ ತಂಪು ಬಯಸುವ ಎಲ್ಲರೂ ನೀರು ಸೇರುತ್ತಾರೆ. ಆದರೆ ಸ್ವಲ್ಪವೇ ನೀರಿನ ಆಳ ಅಥವಾ ರಭಸದ ಅರಿವಿಲ್ಲದೆ ಹಲವರು ದುರಂತ ಮರಣ ಕಾಣುತ್ತಾರೆ. ಹೇಮಾವತಿ, ಮಲ್ಪೆ, ಗೋಕರ್ಣ ಮೊದಲಾದ ಸಮುದ್ರ ತೀರಗಳು, ಬಲಮುರಿ ಮೊದಲಾದ ನೀರ್ದಾಣಗಳು ಇಂಥ ದುರ್ಘಟನೆಗಳಿಗೆ ಸಾಕ್ಷಿಯಾಗಿವೆ. ಇಂಥ ಸನ್ನಿವೇಶಗಳು ಬೇಸಿಗೆ ರಜೆಯ ಸಂದರ್ಭದಲ್ಲಿ ಹೆಚ್ಚು. ಹೀಗಾಗಿ ಜಲತಾಣಗಳ ಕಡೆಗೆ ಹೋಗುವ ಎಲ್ಲರೂ ಎಚ್ಚರ ವಹಿಸಬೇಕಾದ ಸಂದರ್ಭ ಇದಾಗಿದೆ. ಕೃಷಿಹೊಂಡಗಳಲ್ಲಿ ಅವುಗಳ ಮಾಲೀಕರು ಸುರಕ್ಷತೆ ವ್ಯವಸ್ಥೆ ನೋಡಿಕೊಳ್ಳಬೇಕು. ಆದರೆ ಸಾವಿರಾರು ಜನ ಸೇರುವ ಪ್ರವಾಸಿ ತಾಣಗಳಲ್ಲಿ ಮಾತ್ರ ಸರಕಾರ, ಸ್ಥಳೀಯಾಡಳಿತ ಮುಂದೆ ನಿಂತು ಇಂಥ ಸನ್ನಿವೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಬಲ್ಲ ಪರಿಣತರನ್ನು ನಿಯೋಜಿಸಬೇಕು. ಅಪಾಯಕಾರಿ ಬೀಚ್‌ಗಳಲ್ಲಿ ನೀರಿಗಿಳಿಯದಂತೆ, ಮುಂದೆ ಹೋಗದಂತೆ ಧ್ವನಿವರ್ಧಕದ ಮೂಲಕ ಎಚ್ಚರಿಸುವ ನಿರಂತರ ಕೆಲಸವನ್ನು ಮಾಡಬೇಕು. ಸ್ಥಳೀಯ ಹೋಂಸ್ಟೇಗಳು, ರೆಸಾರ್ಟ್‌ಗಳು ಕೂಡ ತಮ್ಮಲ್ಲಿ ತಂಗುವ ಅತಿಥಿಗಳಿಗೆ ಈ ಎಚ್ಚರ ಮೂಡಿಸುವ ಕೆಲಸ ಮಾಡುವುದು ಅಗತ್ಯ. ಎಲ್ಲ ಕಡೆಗಳಲ್ಲಿಯೂ ನುರಿತ ಈಜುಗಾರರು, ರಕ್ಷಣಾ ದಳದವರು ಇರುವುದು ಅಸಾಧ್ಯ. ಹೀಗಾಗಿ ಎಲ್ಲರೂ ಸ್ವಯಂ ನಿಯಂತ್ರಣ ಮಾಡಿಕೊಳ್ಳುವುದು ಅಗತ್ಯ. ಹೋದ ಪ್ರಾಣ ಮರಳಿ ಬಾರದು. ಒಂದು ಕ್ಷಣದ ವಿವೇಕವೇ ಅಮೂಲ್ಯವಾದ ಪ್ರಾಣವನ್ನು ಉಳಿಸಬಲ್ಲುದು. ಆನಂದ ಬೇಕು, ಆದರೆ ಅದಕ್ಕಾಗಿ ದುಡುಕು ತರವಲ್ಲ.

ಸೊಂಪಾದಕೀಯ

ಮೂತ್ರಕ್ಕೆ ಕನ್ನಡಿ ಹಿಡಿದರು

ಮೂತ್ರಬಾಧೆ ಅಮರಿಕೊಂಡ ಕೂಡಲೇ ಹತ್ತಿರವಿರುವ ಗೋಡೆ, ಕಂಪೌಂಡ್ ಕಡೆಗೆ ಧಾವಿಸಿ ಅಲ್ಲಿಗೆ ಮೂತ್ರ ದಾನ ಮಾಡುವ ಅಭ್ಯಾಸ ನಾಯಿಗಳದ್ದು ಮತ್ತು ಹಲವು ಮನುಷ್ಯರದ್ದು. ಇವರಿಗೆ ಅದು ಸಾರ್ವಜನಿಕ ಸ್ಥಳ, ಸ್ವಚ್ಛವಾಗಿರಬೇಕು, ಮನುಷ್ಯರು ಓಡಾಡುವರು ಎಂಬ ಯಾವ ಖಬರೂ ಇಲ್ಲ. ನಾಯಿಗಳು ಕಾಲೆತ್ತುತ್ತವೆ, ಮನುಷ್ಯರು ಎತ್ತುವುದಿಲ್ಲ ಅಷ್ಟೇ ವ್ಯತ್ಯಾಸ. ಮೈಸೂರಿನ ಅಧಿಕಾರಿಗಳು ಇಂಥ ಮೂತ್ರಪೀಡಿಗಳ ಕಾಟದಿಂದ ಪಾರಾಗಲು ನವನವೀನ ಆವಿಷ್ಕಾರವೊಂದನ್ನು ಮಾಡಿದ್ದಾರೆ. ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಕಂಪೌಂಡ್‌ಗೆ ಉದ್ದಕ್ಕೂ ಸ್ಟೀಲ್‌ನ ಕನ್ನಡಿ ಅಳವಡಿಸಿದ್ದಾರೆ. 'ಇದರಿಂದೇನಾಯಿತು?' ಎನ್ನಿ. ಆ ಮೂತ್ರವಾದಿ ಇನ್ನೇನು ಸ್ಥಲದ ಚಿಮ್ಮಿಸಬೇಕು ಅನ್ನುವಷ್ಟರಲ್ಲಿ ತನ್ನದೇ ವಿರೂಪದರ್ಶನವನ್ನು ಅಲ್ಲಿ ಕಂಡು, ಕಕ್ಕಾಬಿಕ್ಕಿಯಾಗಿ, ತನ್ನ ಕ್ರಿಯೆಯನ್ನು ನಿಲ್ಲಿಸಿ ಹಿಂದಿರುಗುತ್ತಾನೆ. ತನ್ನ ದರ್ಶನ ತಾನೇ ಮಾಡಿಕೊಂಡರೆ ಪರರಾಗ್ನಿ ಎಂದು ಮುಂದುವರಿಸುವುದು ಕಷ್ಟ; ಆದರೆ ಬೀದಿಯಲ್ಲಿ ಹೋಗುವ ಇತರರಿಗೂ ಈತನ ಕುರೂಪದರ್ಶನವಾಗುವುದರಿಂದ, ಅಂಥ ಭಂಡರು ಹಿಂಜರಿಯಲೇಬೇಕಾಗುತ್ತದೆ. ಈ ಐಡಿಯಾ ಯಾರ ಜೀನಿಯಸ್ ತಲೆಗೆ ಬಂತೋ ತಿಳಿಯದು. ಇದು ಬಹುತೇಕ ವರ್ಕ್‌ಔಟ್ ಆಗುವ ಸಾಧ್ಯತೆ ಇದೆ. ಯಾಕೆಂದರೆ ನಮ್ಮ ಸಾರ್ವಜನಿಕವಾಗಿ ಮೂತ್ರವಿಸರ್ಜಿಸುವವರು ಬಯಸುವುದಿಲ್ಲ, ಆದರೂ ಕೆಲವರು ಭಂಡರಿರುತ್ತಾರೆ. ಅವರಿಗೆ ಸಾರ್ವಜನಿಕ ಸಭ್ಯತೆಯ ನಿರ್ಯಾ ಇರುವುದಿಲ್ಲ. ಅಂಥವರಿಗೆ 'ತ್ರಿ ಈಡಿಯಟ್ಸ್ ಫಿಲಂ'ನಲ್ಲಿ ಅಮೀರ್ ಖಾನ್ ಮಾಡುವಂತೆ, ಮತ್ತ ಚಿಮ್ಮಿಸುವಾಗಲೇ ಶಾಕ್ ಹೊಡೆಯುವ ವ್ಯವಸ್ಥೆ ಮಾಡುವುದು ಒಳಿತು.

ಸಂಪಾದಕರ ಸದ್ಯಶೋಧನೆ

ಒಂದು ಫಲಕ ಮತ್ತು ಸಂದೇಶ

ಇತ್ತೀಚೆಗೆ ನಾನು ದಿಲ್ಲಿಯಲ್ಲಿ ನನ್ನ ಸ್ನೇಹಿತನ ಆಫೀಸಿಗೆ ಹೋಗಿದ್ದೆ. ಅವರ ಕೋಣೆಯೊಳಗೆ ಒಂದು ನೇತು ಹಾಕಲಾಗಿದ್ದ ಫಲಕದ ಮೇಲೆ ಹೀಗೆ ಬರೆಯಲಾಗಿತ್ತು – 'ಪ್ರತಿ ಜೀಬ್ರಾವನ್ನು ಬೆನ್ನಟ್ಟಿದ ಸಿಂಹಕ್ಕೆ ಅದನ್ನು ಹಿಡಿಯಲು ಸಾಧ್ಯವಾಗದಿರಬಹುದು, ಆದರೆ ಜೀಬ್ರಾವನ್ನು ಹಿಡಿದ ಪ್ರತಿಯೊಂದು ಸಿಂಹವೂ ಅದನ್ನು ಬೆನ್ನಟ್ಟಿಯೇ ಇರುತ್ತದೆ.' ಈ ಒಂದು ಸಾಲು ಜೀವನದ ಅತ್ಯಂತ ದೊಡ್ಡ ಸತ್ಯವನ್ನು ಅತ್ಯಂತ ಸರಳವಾಗಿ ಹೇಳುತ್ತದೆ. ಇದು ಕೇವಲ ಕಾಡಿನ ನಿಯಮವಲ್ಲ, ಇದು ಮನುಷ್ಯನ ಬದುಕಿನ ಯಶೋಗಾಥೆಯ ಮೂಲಮಂತ್ರ. ಜೀವನದಲ್ಲಿ ಯಶಸ್ಸು ಎಂಬುದು ಆಕಸ್ಮಿಕವಾಗಿ ಸಿಗುವ ಲಾಟರಿಯಲ್ಲ. ಅದು ನಿರಂತರ ಪ್ರಯತ್ನದ ಫಲ. ಸೋಲು ಮತ್ತು ಗೆಲುವಿನ ನಡುವೆ ಇರುವ ಏಕೈಕ ಸೇತುವೆ ಎಂದರೆ ಅದು 'ಪ್ರಯತ್ನ'. ನಾವು ಅನೇಕ ಬಾರಿ ಯಶಸ್ವಿ ವ್ಯಕ್ತಿಗಳನ್ನು ನೋಡಿ, 'ಅವರ ಅದೃಷ್ಟ ಚೆನ್ನಾಗಿತ್ತು, ಹಾಗಾಗಿ ಅವರಿಗೆ ಎಲ್ಲವೂ ಸುಲಭವಾಗಿ ಸಿಕ್ಕಿತು' ಎಂದು ಸುಮ್ಮನಾಗುತ್ತೇವೆ. ಆದರೆ ಅವರ ಯಶಸ್ಸಿನ ಹಿಂದೆ ಅವರು ನಡೆಸಿದ 'ಬೆನ್ನಟ್ಟುವಿಕೆ' ನಮಗೆ ಕಾಣಿಸುವುದಿಲ್ಲ. ಸಿಂಹವು ಜೀಬ್ರಾವನ್ನು ಹಿಡಿಯಬೇಕಾದರೆ ಮೊದಲು ತನ್ನ ಗುಹೆಯನ್ನು ಬಿಟ್ಟು ಹೊರಬರಬೇಕು, ಹಸಿದ ಹೊಟ್ಟೆಯಲ್ಲೇ ಓಡಬೇಕು, ಕಾದು ಕುಳಿತುಕೊಳ್ಳಬೇಕು ಮತ್ತು ಶಕ್ತಿಯನ್ನೆಲ್ಲಾ ವ್ಯಯಿಸಿ ಓಡಬೇಕು. ಒಂದು ವೇಳೆ ಸಿಂಹವು, 'ನಾನು ಓಡಿದರೆ ಜೀಬ್ರಾ ಸಿಗುತ್ತದೋ ಇಲ್ಲವೋ ಎಂಬ ಖಾತರಿ ಇಲ್ಲ, ಹಾಗಾಗಿ ನಾನು ಓಡುವುದೇ ಇಲ್ಲ' ಎಂದು ಕುಳಿತಿದ್ದರೆ, ಅದು ಹಸಿವಿನಿಂದ ಸಾಯುವುದು ಖಚಿತ. ಇಲ್ಲಿ ಓಡುವುದು (ಪ್ರಯತ್ನ) ಮುಖ್ಯವೇ ಹೊರತು, ಪ್ರತಿ ಬಾರಿಯೂ ಫಲ ಸಿಗಲೇಬೇಕು ಎಂಬ ಹಠವಲ್ಲ. 'ಜೀಬ್ರಾವನ್ನು ಬೆನ್ನಟ್ಟಿದ ಪ್ರತಿಯೊಂದು ಸಿಂಹವೂ ಅದನ್ನು ಹಿಡಿಯಲಾರದು.' ಇದು ನಮಗೆ ಸೋಲನ್ನು ಹೇಗೆ ಸ್ವೀಕರಿಸಬೇಕು ಎಂದು ಕಲಿಸುತ್ತದೆ. ಹತ್ತು ಬಾರಿ ಓಡಿದ ಸಿಂಹಕ್ಕೆ ಎಂಟು ಬಾರಿ ಜೀಬ್ರಾ ಕೈತಪ್ಪಿ ಹೋಗಿರಬಹುದು. ಆದರೆ ಆ ಎಂಟು ಸೋಲುಗಳು ಸಿಂಹಕ್ಕೆ 'ಹೇಗೆ ಓಡಬಾರದು' ಅಥವಾ 'ಮುಂದಿನ ಬಾರಿ ಹೇಗೆ ಜಾಣ್ಮೆಯಿಂದ ಹೊಂಚು ಹಾಕಬೇಕು' ಎಂಬ ಪಾಠವನ್ನು ಕಲಿಸಿರುತ್ತವೆ. ನಮ್ಮ ಜೀವನದಲ್ಲೂ ಅಷ್ಟೇ, ನೂರಾರು ಪ್ರಯತ್ನಗಳಲ್ಲಿ ಕೆಲವು ವಿಫಲವಾಗಬಹುದು. ಪರೀಕ್ಷೆಯಲ್ಲಿ ಫೇಲ್ ಆಗಬಹುದು, ಉದ್ಯೋಗ ಸಿಗದೇ ಇರಬಹುದು ಅಥವಾ ಹೂಡಿಕೆಯಲ್ಲಿ ನಷ್ಟವಾಗಬಹುದು. ಇವೆಲ್ಲವೂ ಜೀಬ್ರಾವನ್ನು ಬೆನ್ನಟ್ಟಿದಾಗ ಅದು ಕೈತಪ್ಪಿ ಹೋದಂತೆ. ಆದರೆ ಈ ಸೋಲುಗಳು ನಾವು ಪ್ರಯತ್ನವನ್ನೇ ಬಿಡಬೇಕು ಎಂದು ಹೇಳುವುದಿಲ್ಲ, ಬದಲಿಗೆ ನಮ್ಮ ವೇಗವನ್ನು ಅಥವಾ ದಿಕ್ಕನ್ನು ಬದಲಿಸಬೇಕು ಎಂದು ಸೂಚಿಸುತ್ತವೆ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಉಳ್ಳವರು ನಿರಂತರವಾಗಿ ತಮ್ಮ ಗುರಿಯನ್ನು ಬೆನ್ನಟ್ಟುತ್ತಲೇ ಇರುತ್ತಾರೆ. ಸಾಧಕರ ಇತಿಹಾಸವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಸಾವಿರ ಬಾರಿ ವಿಫಲರಾದರೂ ಥಾಮಸ್ ಆಲ್ವಾ ಎಡಿಸನ್ ಬಲ್ಬ್ ಕಂಡುಹಿಡಿಯುವ ಪ್ರಯತ್ನ ಬಿಡಲಿಲ್ಲ. ಅವರು ಬೆನ್ನಟ್ಟಿದ್ದರಿಂದಲೇ ಇಂದು ಜಗತ್ತು ಬೆಳಗುತ್ತಿದೆ. ಒಬ್ಬ ಒಲಿಂಪಿಕ್ ಓಟಗಾರ ನಾಲ್ಕು ವರ್ಷಗಳ ಕಾಲ ಪ್ರತಿದಿನ ಬೆವರಿನ ಹನಿ ಹರಿಸುತ್ತಾನೆ. ಆತ ಓಡಿದ ಪ್ರತಿ ರೇಸ್‌ನಲ್ಲೂ ಚಿನ್ನದ ಪದಕ ಸಿಗದಿರಬಹುದು, ಆದರೆ ಪದಕ ಸಿಕ್ಕ ಪ್ರತಿಯೊಬ್ಬನೂ ಓಡಿಯೇ ಇರುತ್ತಾನೆ. ಬದುಕು ಕ್ರಿಯಾಶೀಲವಾಗಿರಬೇಕು. ಕುಳಿತಲ್ಲೇ ಕುಳಿತು 'ಎಲ್ಲವೂ ವಿಧಿಯ ಆಟ' ಎಂದು ನಂಬುವುದು ಸೋಮಾರಿತನ. 'ಬೆನ್ನಟ್ಟುವುದು' ಎಂದರೆ ನಮಗೆ ನಾವೇ ಕೊಟ್ಟುಕೊಳ್ಳುವ ಸವಾಲು. ನಾವು ಯಾವುದೋ ಒಂದು ಕನಸು ಕಾಣುತ್ತೇವೆ. ಆ ಕನಸನ್ನು ನನಸು ಮಾಡಿಕೊಳ್ಳಲು ಹೊರಟಾಗ ನೂರಾರು ಅಡೆತಡೆಗಳು ಬರುತ್ತವೆ. ಕೆಲವು ಸಂದರ್ಭಗಳಲ್ಲಿ ನಮ್ಮ ಶ್ರಮ ವ್ಯರ್ಥವಾಯಿತು ಎನಿಸಬಹುದು. ಆದರೆ ನೆನಪಿಡಿ, ಆ ಶ್ರಮ ಎಂದಿಗೂ ವ್ಯರ್ಥವಾಗುವುದಿಲ್ಲ. ಅದು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ, ನಮ್ಮ ಸಹನೆ ಮತ್ತು ಧೈರ್ಯವನ್ನು ಪರೀಕ್ಷಿಸುತ್ತದೆ. ಬೆನ್ನಟ್ಟದವನಿಗೆ ಗುರಿ ತಲುಪುವ ಅವಕಾಶವೇ ಇರುವುದಿಲ್ಲ. ಅಂದರೆ, ನೀವು ಪ್ರಯತ್ನವನ್ನೇ ಮಾಡದಿದ್ದರೆ ನಿಮ್ಮ ಗೆಲುವಿನ ಸಾಧ್ಯತೆ ಶೂನ್ಯ. ಆದರೆ ನೀವು ಪ್ರಯತ್ನಪಟ್ಟರೆ, ಗೆಲ್ಲುವ ಸಾಧ್ಯತೆ ಕನಿಷ್ಠ ಶೇ.50 ಆದರೂ ಇರುತ್ತದೆ. ಸಿಂಹವು ಹಸಿವಿನಿಂದ ಇರಲಿ ಅಥವಾ ಇರದಿರಲಿ, ಬದುಕಬೇಕಾದರೆ ಅದು ಓಡಲೇಬೇಕು. ಜೀಬ್ರಾವೂ ಸಹ ಬದುಕಬೇಕಾದರೆ ಸಿಂಹಕ್ಕಿಂತ ವೇಗವಾಗಿ ಓಡಬೇಕು. ಇಲ್ಲಿ ಯಾರು ಯಾರನ್ನು ಬೆನ್ನಟ್ಟುತ್ತಾರೆ ಎನ್ನುವುದಕ್ಕಿಂತ, ಯಾರು ನಿರಂತರವಾಗಿ ಪ್ರಯತ್ನಶೀಲರಾಗಿರುತ್ತಾರೆ ಎಂಬುದು ಮುಖ್ಯವಾಗುತ್ತದೆ. ನಿಮ್ಮ ಗುರಿ ಯಾವುದಾದರೂ ಇರಲಿ ಅದನ್ನು ಬೆನ್ನಟ್ಟುವುದನ್ನು ನಿಲ್ಲಿಸಬೇಡಿ. ಫಲಿತಾಂಶದ ಬಗ್ಗೆ ಚಿಂತಿಸುವ ಬದಲು, 'ನಾನು ಇಂದು ನನ್ನ ಗುರಿಯನ್ನು ಬೆನ್ನಟ್ಟಿದ್ದೇನೆಯೇ?' ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ.

ಪತ್ನಿಯ ಗೌರವಕ್ಕಾಗಿ ಹೊಡೆತ ತಿಂದ ನೊಬೆಲ್ ಪುರಸ್ಕೃತ ಸಾಹಿತಿ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಮೊನ್ನೆ ನಾವು ನಾಲ್ಕಾರು ಸ್ನೇಹಿತರು ಸೇರಿದಾಗ ನಮ್ಮ ಮಾತುಕತೆಯಲ್ಲಿ ಅತಿ ಹೆಚ್ಚು ರಾಜಕಾರಣ ಇರುವ ಕ್ಷೇತ್ರ ಯಾವುದು ಎಂಬ ಬಗ್ಗೆ ಚರ್ಚೆ ನಡೆದಿತ್ತು. ಒಬ್ಬರು 'ರಾಜಕೀಯ ಕ್ಷೇತ್ರ' ಅಂದರು. ಮತ್ತೊಬ್ಬರು, 'ಕಾರ್ಪೊರೇಟ್ ಕಂಪನಿಗಳು' ಎಂದರು. ಇನ್ನೊಬ್ಬರು, 'ಸರಕಾರಿ ಕಚೇರಿಗಳು' ಎಂದರು. ಅಲ್ಲಿದ್ದ ಮತ್ತೊಬ್ಬರು, 'ಪತ್ರಿಕೋದ್ಯಮ ಕ್ಷೇತ್ರ' ಎಂದರು. 'ಸಂಗೀತ ಕ್ಷೇತ್ರದಲ್ಲಿ ಕಮ್ಮಿ ರಾಜಕೀಯವಿದೆಯಾ?' ಎಂದು ಮತ್ತೊಬ್ಬರು ರಾಗ ಎಳೆದರು. ಅದಕ್ಕೆ ನಾನು, 'ರಾಜಕೀಯ ಇಲ್ಲದ ಕ್ಷೇತ್ರ ಯಾವುದು ಎಂಬುದನ್ನು ಮೊದಲು ಪತ್ತೆ ಮಾಡೋಣ. ಸಾಹಿತ್ಯ ಕ್ಷೇತ್ರದಲ್ಲಿ ಇರುವಷ್ಟು ರಾಜಕೀಯ, ರಾಜಕೀಯ ಕ್ಷೇತ್ರದಲ್ಲೂ ಇಲ್ಲ' ಎಂದು ಹೇಳಿದೆ.

'ರಾಜಕೀಯದಲ್ಲಿ ರಾಜಕಾರಣಿಗಳು ರಾಜಕೀಯವನ್ನು ಮಾತ್ರ ಮಾಡುತ್ತಾರೆ. ಆದರೆ ಹೊಡೆದಾಟಕ್ಕಿಳಿಯುವುದಿಲ್ಲ. ಪರಸ್ಪರ ಭೇಟಿಯಾದಾಗ ಚೆನ್ನಾಗಿ ಮಾತಾಡುತ್ತಾರೆ. ವೇದಿಕೆಯಲ್ಲಿ ಅಕ್ಕಪಕ್ಕ ಕುಳಿತುಕೊಳ್ಳುತ್ತಾರೆ. ತಮ್ಮ ಮಧ್ಯೆ ಏನೂ ನಡೆದೇ ಇಲ್ಲ ಎಂಬಂತೆ ವರ್ತಿಸುತ್ತಾರೆ. ಈ ನಡತೆಯನ್ನು ಬೇರೆ ಯಾರಿಂದಲೂ ನಿರೀಕ್ಷಿಸಲು ಸಾಧ್ಯವಿಲ್ಲ' ಎಂಬ ಮಾತಿಗೆ ಎಲ್ಲರೂ ಸಹಮತ ವ್ಯಕ್ತಪಡಿಸಿದರು. ರಾಜಕಾರಣಿಗಳು ಪರಸ್ಪರ ಕೈ ಕೈ ಮಿಲಾಯಿಸಿ ಹೊಡೆದಾಡಿಕೊಳ್ಳುವುದು ಕಮ್ಮಿ. ಅನಿರೀಕ್ಷಿತವಾಗಿ ಎದುರುಬದುರಾದರೆ ಚೆನ್ನಾಗಿ ಮಾತಾಡುತ್ತಾರೆ. ಈ ಹೃದಯ ವೈಶಾಲ್ಯ ಗುಣ ಬೇರೆಯವರಲ್ಲಿ ಕಾಣುವುದು ಅಪರೂಪ.

ಈ ಚರ್ಚೆ ಆ ದಿನವಿಡೀ ನನ್ನ ಮನಸ್ಸಿನಲ್ಲಿ ಗಿರಗಿಟ್ಲೆ ಹೊಡೆಯುತ್ತಿತ್ತು. ಅಮೆರಿಕದ ಖ್ಯಾತ ಸಾಹಿತಿ ಸಿನ್ಕ್ಲೇರ್ ಲೂಯಿಸ್ ಮತ್ತು ಮತ್ತೊಬ್ಬ ಅಮೆರಿಕನ್ ಪ್ರಸಿದ್ಧ ಸಾಹಿತಿ ಥಿಯೋಡರ್ ಡ್ರೈಸರ್ ಅವರ ನಡುವಿನ ಆ ಐತಿಹಾಸಿಕ ಮುಖಾಮುಖಿ ಮತ್ತು ಹೊಡೆದಾಟ ಮತ್ತೆ ಮತ್ತೆ ನೆನಪಾಯಿತು. ಲೂಯಿಸ್ ಮತ್ತು ಡ್ರೈಸರ್ ಇಬ್ಬರೂ ದೈತ್ಯರೇ. ಇಬ್ಬರೂ ಅಪಾರ ಓದುಗ ವರ್ಗವನ್ನು ಹೊಂದಿದವರು. ಅದರಲ್ಲೂ ಲೂಯಿಸ್, ಸಾಹಿತ್ಯಕ್ಕೆ ನೊಬೆಲ್ ಪ್ರಶಸ್ತಿ ಪಡೆದ ಅಮೆರಿಕದ ಪ್ರಪ್ರಥಮ ಸಾಹಿತಿ ಎಂದು ಕರೆಯಿಸಿಕೊಂಡವರು. ಥಿಯೋಡರ್ ಡ್ರೈಸರ್ ಕೆಲ ಕಾಲ ಪತ್ರಕರ್ತರಾಗಿಯೂ ಹೆಸರು ಮಾಡಿದವರು. ಇವರಿಬ್ಬರ ರಾದ್ಧಾಂತ ಸಾಹಿತ್ಯ ಲೋಕದ ಅತ್ಯಂತ ವಿವಾದಾತ್ಮಕ ಮತ್ತು ಚರ್ಚಿತ ಘಟನೆಗಳಲ್ಲಿ ಒಂದು ಎಂದು ಈಗಲೂ ಪರಿಗಣಿಸುವುದುಂಟು. ಅಮೆರಿಕದ ಇಬ್ಬರು ದಿಗ್ಗಜ ಬರಹಗಾರರ ನಡುವಿನ ಈ ಸಂಘರ್ಷವು ಕೇವಲ ವೈಯಕ್ತಿಕ ದ್ವೇಷವಾಗಿರದೇ, ಕೃತಿಚೌರ್ಯದ ಆರೋಪ ಮತ್ತು ಸಾಹಿತ್ಯಿಕ ಅಹಂನ ಸಂಕೇತವಾಗಿತ್ತು. ತಮ್ಮ ಜಗಳವನ್ನು ಅಕ್ಷರಗಳ ಮೂಲಕ ಮಾಡಲು ಸಾಹಿತಿಗಳಿಗೆ ಬರುವುದಿಲ್ಲ ಎಂಬುದನ್ನೂ ಆ ಘಟನೆ ಬಹಿರಂಗಪಡಿಸಿತ್ತು.



1927ರಲ್ಲಿ ರಷ್ಯಾದ ಅಕ್ಟೋಬರ್ ಕ್ರಾಂತಿಯ ಹತ್ತನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ, ಜಗತ್ತಿನೆಲ್ಲೆಡೆಗಳಿಂದ ಅನೇಕ ಬುದ್ಧಿಜೀವಿಗಳನ್ನು ಸೋವಿಯತ್ ಒಕ್ಕೂಟಕ್ಕೆ ಆಹ್ವಾನಿಸಲಾಗಿತ್ತು. ಇವರಲ್ಲಿ ಅಮೆರಿಕದ ಖ್ಯಾತ ಪತ್ರಕರ್ತೆ ಹಾಗೂ ಸಿನ್ಕ್ಲೇರ್ ಲೂಯಿಸ್ ಅವರ ಪತ್ನಿ ಡೊರೊತಿ ಥಾಂಪ್ಸನ್ ಮತ್ತು ಕಾದಂಬರಿಕಾರ ಥಿಯೋಡರ್ ಡ್ರೈಸರ್ ಕೂಡ ಇದ್ದರು. ಡೊರೊತಿ ಅವರು ಆಗಲೇ ಒಬ್ಬ ಪ್ರಭಾವಿ ವಿದೇಶಿ ವರದಿಗಾರ್ತಿಯಾಗಿ ಗುರುತಿಸಿಕೊಂಡಿದ್ದರು. ಸಿನ್ಕ್ಲೇರ್ ಲೂಯಿಸ್ ಅವರ ಪತ್ನಿ ಎಂಬ ಕಾರಣಕ್ಕೆ ಅವರು ಎಲ್ಲೆಡೆ ವಿಶೇಷ ಮರ್ಯಾದೆಗೆ ಪಾತ್ರರಾಗುತ್ತಿದ್ದರು. ಈ ಪ್ರವಾಸದ ಉದ್ದೇಶ ಸೋವಿಯತ್ ಆಡಳಿತದ ಅಡಿಯಲ್ಲಿ ಬದಲಾಗುತ್ತಿರುವ ರಷ್ಯಾವನ್ನು ಅಭ್ಯಸಿಸುವುದಾಗಿತ್ತು. ಡೊರೊತಿ ಅವರು ಅತ್ಯಂತ ಶ್ರದ್ಧೆಯಿಂದ ಅಲ್ಲಿನ ಪ್ರತಿಯೊಂದು ಘಟನೆಗಳನ್ನು ಗಮನಿಸಿ, ಮಾಹಿತಿ ಸಂಗ್ರಹಿಸಿ ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು.

1928ರಲ್ಲಿ ಡೊರೊತಿ ತಮ್ಮ ರಷ್ಯಾ ಪ್ರವಾಸ ಮತ್ತು ಅಧ್ಯಯನವನ್ನು ಆಧರಿಸಿ, ಸಂಶೋಧನಾ ಕೃತಿ 'ದ ನ್ಯೂ ರಷ್ಯಾ' (The New Russia) ಎಂಬ ಕೃತಿಯನ್ನು ಪ್ರಕಟಿಸಿದರು. ಇದರಲ್ಲಿ ರಷ್ಯಾದ ಆರ್ಥಿಕತೆ, ಸಂಸ್ಕೃತಿ ಮತ್ತು ರಾಜಕೀಯದ ಬಗ್ಗೆ ಕೂಲಂಕಷವಾಗಿ ವಿವರಿಸಿದ್ದರು. ಇದರ ಬೆನ್ನಲ್ಲೇ ಡ್ರೈಸರ್ ಕೂಡ 'ಡ್ರೈಸರ್ ಲುಕ್ಸ್ ಅಟ್ ರಷ್ಯಾ' (Dreiser Looks at Russia) ಎಂಬ ಪುಸ್ತಕವನ್ನು ಹೊರ ತಂದರು. ಡ್ರೈಸರ್ ಕೃತಿ ಹೊರಬಂದಾಗ, ಲೂಯಿಸ್ ಮತ್ತು ಡೊರೊತಿ ತುಂಬಾ ಆಸಕ್ತಿಯಿಂದ ಓದಿದರು. ತಮ್ಮ ಕೃತಿಗಿಂತ ಈ ಕೃತಿ ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು. ಡೊರೊತಿ ಮತ್ತು ಲೂಯಿಸ್ ಇಬ್ಬರೂ ಡ್ರೈಸರ್ ಅವರ ಪುಸ್ತಕವನ್ನು ಓದಿದಾಗ ದಂಗಾದರು. ಡೊರೊತಿ ಅವರು ಶ್ರಮಪಟ್ಟು ಸಿದ್ಧಪಡಿಸಿದ್ದ ವರದಿಗಳು, ವಿಶಿಷ್ಟ ಪದಪ್ರಯೋಗಗಳು ಮತ್ತು ಸಂಶೋಧನಾ ಮಾಹಿತಿಗಳು, ಅಂಕಿ-ಅಂಶಗಳು ಡ್ರೈಸರ್ ಅವರ ಪುಸ್ತಕದಲ್ಲಿ ಯಥಾವತ್ತಾಗಿ ಬಳಕೆಯಾಗಿದ್ದವು.

ಡ್ರೈಸರ್ ತಮ್ಮ ಪುಸ್ತಕದಲ್ಲಿ ಡೊರೊತಿ ಬರೆದಿದ್ದ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಪದಗಳನ್ನು ಮಕ್ಕಿಕಾಮಕ್ಕಿ ಎಗರಿಸಿದ್ದು ಗಮನಕ್ಕೆ ಬಂದಿತು. ಲೂಯಿಸ್ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಡ್ರೈಸರ್ ಅವರ ಮೇಲೆ ಕೃತಿಚೌರ್ಯದ (Plagiarism) ಗಂಭೀರ ಆರೋಪ ಮಾಡಿದರು. ಡ್ರೈಸರ್ ಈ ಆರೋಪಗಳನ್ನು ಸುಲಭವಾಗಿ ಒಪ್ಪಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ಅವರು ಕೃತಿಚೌರ್ಯದ ಆರೋಪವನ್ನು ಸಂಪೂರ್ಣವಾಗಿ ನಿರಾಕರಿಸಿದ್ದಲ್ಲದೇ, ಒಂದು ವಿಚಿತ್ರ ವಾದ ಮಂಡಿಸಿದರು. 'ರಷ್ಯಾದಲ್ಲಿ ನಾವಿಬ್ಬರೂ ಜತೆಯಲ್ಲೇ ಇದ್ದೆವು, ಅಲ್ಲಿ ನಾನು ಮಾಡಿದ ಟಿಪ್ಪಣಿಗಳನ್ನೇ ಡೊರೊತಿ ತನ್ನ ಪುಸ್ತಕದಲ್ಲಿ ಬಳಸಿಕೊಂಡಿದ್ದಾಳೆ' ಎಂದು ಪ್ರತ್ಯಾರೋಪ ಮಾಡಿದರು. ಅಂದರೆ, ಆರೋಪಿಯನ್ನು ಹಿಡಿಯಲು ಹೋದ ಲೂಯಿಸ್ ಮತ್ತು ಡೊರೊತಿಗೆ, 'ನೀವೇ ಕಳ್ಳರು' ಎಂಬ ಹಣೆಪಟ್ಟಿಯನ್ನು ಡ್ರೈಸರ್ ಹಚ್ಚಲು ಪ್ರಯತ್ನಿಸಿದರು.

ಈ ದ್ವೇಷವು ಒಳಗೊಳಗೇ ಕುದಿಯುತ್ತಿತ್ತು. ಇಬ್ಬರೂ ತಮ್ಮ ಸ್ನೇಹಿತರ ಮುಂದೆ ಮತ್ತು ಸಾಹಿತ್ಯ ವಲಯಗಳಲ್ಲಿ ಪರಸ್ಪರ ಕೆಟ್ಟದಾಗಿ ಮಾತಾಡುತ್ತಿದ್ದರು. ಅದಾಗಿ ಮೂರು ವರ್ಷಗಳ ನಂತರ ಅಂದರೆ 1931ರ ಮಾರ್ಚ್ ತಿಂಗಳಲ್ಲಿ ನ್ಯೂಯಾರ್ಕ್‌ನ ಪ್ರತಿಷ್ಠಿತ 'ಮೆಟ್ರೊಪಾಲಿಟನ್ ಕ್ಲಬ್'ನಲ್ಲಿ ರಷ್ಯಾದ ಪ್ರಸಿದ್ಧ ಲೇಖಕ ಬೋರಿಸ್ ಪಿಲ್ನ್ಯಾಕ್ ಅವರ ಗೌರವಾರ್ಥ ಒಂದು ಔತಣಕೂಟವನ್ನು ಏರ್ಪಡಿಸಲಾಗಿತ್ತು. ಸಾಹಿತ್ಯ ಲೋಕದ ದಿಗ್ಗಜರೆಲ್ಲರೂ ಅಲ್ಲಿ ನೆರೆದಿದ್ದರು. ಸಿನ್ಕ್ಲೇರ್ ಲೂಯಿಸ್‌ಗೆ ಹಿಂದಿನ ವರ್ಷವಷ್ಟೇ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಬಂದಿತ್ತಲ್ಲ, ಆ ಪ್ರಶಸ್ತಿ ಪಡೆದ ಮೊದಲ ಅಮೆರಿಕನ್ ಎಂಬ ಕಾರಣದಿಂದ ಅವರು ಆ ಔತಣಕೂಟದ ಆಕರ್ಷಣೆಗಳಲ್ಲಿ ಒಬ್ಬರಾಗಿದ್ದರು. ಸಭಾಂಗಣದಲ್ಲಿ ತಮ್ಮ ಪರಮ ವೈರಿ ಡ್ರೈಸರ್ ಇರುವುದನ್ನು ಕಂಡ ಲೂಯಿಸ್ ಅವರ ಮನಸ್ಸಿನಲ್ಲಿ ಹಳೆಯ ದ್ವೇಷದ ಕಿಡಿ ಮತ್ತೆ ಹೊತ್ತಿಕೊಂಡಿತು. ತಮ್ಮ ಪತ್ನಿ ಡೊರೊತಿ ಕೃತಿಯಲ್ಲಿನ ಕೆಲವು ಅಂಶಗಳನ್ನು ಕದ್ದಿದ್ದಲ್ಲದೇ, ಉಲ್ಟಾ ತಮ್ಮ ಪತ್ನಿಯ ವಿರುದ್ಧವೇ ಕೃತಿಚೌರ್ಯದ ಆರೋಪ ಹೊರಿಸಿದ ಡ್ರೈಸರ್ ನಡೆಯಿಂದ ತೀವ್ರ ಆಕ್ರೋಶ ಅವರಲ್ಲಿ ಮಡುಗಟ್ಟಿತ್ತು.

ಕಾರ್ಯಕ್ರಮದ ಆಯೋಜಕರು ಲೂಯಿಸ್ ಅವರನ್ನು ವೇದಿಕೆಗೆ ಕರೆದು, ಅತಿಥಿಗಳನ್ನು ಸ್ವಾಗತಿಸಿ ಮಾತನಾಡಲು ವಿನಂತಿಸಿದರು. ಅಂದು ಲೂಯಿಸ್ ಸ್ವಲ್ಪ ಮಟ್ಟಿಗೆ ಮದ್ಯಪಾನ ಮಾಡಿದ್ದರು. ಇದು ಅವರಲ್ಲಿ ಮತ್ತಷ್ಟು ಆವೇಶವನ್ನು ಹೆಚ್ಚಿಸಿತ್ತು. ಮೈಕ್ ಮುಂದೆ ನಿಂತ ಲೂಯಿಸ್, ಔಪಚಾರಿಕ ಭಾಷಣ ಮಾಡುವ ಬದಲಿಗೆ ನೇರವಾಗಿ ಡ್ರೈಸರ್ ಅವರನ್ನು ಗುರಿಯಾಗಿಸಿ ದಾಳಿ ಆರಂಭಿಸಿದರು. ಏರಿದ ಧಾಟಿಯಲ್ಲಿ, 'ನನ್ನ ಹೆಂಡತಿಯ ಪುಸ್ತಕದಿಂದ ಮೂರು ಸಾವಿರ ಪದಗಳನ್ನು ಕದ್ದ ಆ ಸೂಳೆಮಗನ (Son of a bitch) ಸಮ್ಮುಖದಲ್ಲಿ ನಾನು ಏನನ್ನೂ ಮಾತನಾಡಲು ಇಷ್ಟಪಡುವುದಿಲ್ಲ ಮತ್ತು ಅವನನ್ನು ಈ ಕಾರ್ಯಕ್ರಮಕ್ಕೆ ಸ್ವಾಗತಿಸುವುದಿಲ್ಲ' ಎಂದು ಬಿಟ್ಟರು. ಹಾಗೆ ಹೇಳುವಾಗ ಅವರ ಮುಖ ಕೋಪದಲ್ಲಿ ಕುದಿಯುತ್ತಿತ್ತು. ಅವರನ್ನು ನಿಯಂತ್ರಿಸುವುದು ಕಷ್ಟವಾಗಿತ್ತು. ಅಲ್ಲಿದ್ದವರು ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರೂ, ಲೂಯಿಸ್ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ.

ಈ ಮಾತುಗಳು ಸಭಾಂಗಣದಲ್ಲಿ ಸಿಡಿಲು ಬಡಿದಂಥ ವಾತಾವರಣ ನಿರ್ಮಿಸಿದವು. ಅಲ್ಲಿ ನೆರೆದಿದ್ದ ಗಣ್ಯರು ದಿಗ್ಭ್ರಮೆಗೊಂಡರು. ಲೂಯಿಸ್ ಅಷ್ಟಕ್ಕೇ ನಿಲ್ಲದೇ ಭಾಷಣ ಮುಂದುವರಿಸಲು ನಿರಾಕರಿಸಿ ಕೆಳಗಿಳಿದು ಬಿಟ್ಟರು. ಇದು ಕೇವಲ ವೈಯಕ್ತಿಕ ನಿಂದನೆಯಾಗಿರದೇ, ಒಬ್ಬ ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಸಾರ್ವಜನಿಕವಾಗಿ ವರ್ತಿಸಿದ ಅತ್ಯಂತ ಅಸಭ್ಯ ನಡೆಯಾಗಿತ್ತು. ಡ್ರೈಸರ್ ಆ ಸಮಯದಲ್ಲಿ ಮೌನವಾಗಿಯೇ ಕುಳಿತಿದ್ದರು. ಆದರೆ ಅವರ ಒಳಗಿನ ಕ್ರೋಧ ಕಟ್ಟೆಯೊಡೆದಿತ್ತು.

ಔತಣಕೂಟ ಮುಗಿಯಿತು. ಇಡೀ ಸಮಾರಂಭದಲ್ಲಿ ಬಿಗಿ ವಾತಾವರಣವಿತ್ತು. ಮೆಟ್ರೊಪಾಲಿಟನ್ ಕ್ಲಬ್‌ನ ಆ ಸಭಾಂಗಣದಲ್ಲಿ ಲೂಯಿಸ್ ನೀಡಿದ ಆಘಾತಕಾರಿ ಭಾಷಣದ ನಂತರ, ಉದ್ವಿಗ್ನತೆ ಮಿತಿ ಮೀರಿತ್ತು. ಆದರೆ 'ಅಸಲಿ ನಾಟಕ' ಇನ್ನೂ ಬಾಕಿ ಇತ್ತು. ಸಭೆಯಲ್ಲಿ ಸಾರ್ವಜನಿಕವಾಗಿ ಅವಮಾನಕ್ಕೊಳಗಾಗಿದ್ದ ಡ್ರೈಸರ್, ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಲೇ ಲೂಯಿಸ್ ಅವರನ್ನೇ ಹಿಂಬಾಲಿಸಿದರು. ಲೂಯಿಸ್ ತಮ್ಮ ಕೋಟ್ ಧರಿಸಲು ಕ್ಲೋಕ್‌ರೂಮ್‌ಗೆ ಬಂದಾಗ, ಡ್ರೈಸರ್ ಅಲ್ಲಿಗೆ ಧಾವಿಸಿ, ಅವರನ್ನು ತಡೆದರು. ಡ್ರೈಸರ್ ಅವರ ದೃಢವಾದ ನಿಲುವು ಮತ್ತು ಕೆಂಪುಗಣ್ಣುಗಳು ಅಲ್ಲಿ ಮತ್ತೊಂದು ದೊಡ್ಡ ಗದ್ದಲ ನಡೆಯುವ ಸೂಚನೆ ನೀಡುತ್ತಿದ್ದವು. ಡ್ರೈಸರ್ ಗುಡುಗುತ್ತಾ, 'ವೇದಿಕೆಯ ಮೇಲೆ ಹೇಳಿದ ಮಾತನ್ನು ಧೈರ್ಯವಿದ್ದರೆ ಈಗ ನನ್ನ ಮುಖಕ್ಕೆ ನೇರವಾಗಿ ನೋಡಿ ಹೇಳು' ಎಂದು ಸವಾಲು ಹಾಕಿದರು. ಲೂಯಿಸ್ ಶಾರೀರಿಕವಾಗಿ ಬಲಶಾಲಿಯಾಗಿರಲಿಲ್ಲ. ಮದ್ಯದ ಅಮಲಿನಲ್ಲಿದ್ದ ಲೂಯಿಸ್ ಎಳ್ಳಷ್ಟೂ ಭಯಪಡಲಿಲ್ಲ. ತನ್ನ ಪತ್ನಿಯ ಕೃತಿಯನ್ನು ಕದ್ದಿದ್ದಾನೆ ಎಂಬ ಅಚಲ ನಂಬಿಕೆ ಅವರಲ್ಲಿತ್ತು. ಅವರು ಡ್ರೈಸರ್ ಅವರ ಕಣ್ಣುಗಳನ್ನೇ ನೇರವಾಗಿ ನೋಡುತ್ತಾ, ಸಭೆಯಲ್ಲಿ ಹೇಳಿದ್ದನ್ನೇ ಅತ್ಯಂತ ಸ್ಪಷ್ಟವಾಗಿ, ಮತ್ತಷ್ಟು ಗಟ್ಟಿಯಾಗಿ ಪುನರುಚ್ಚರಿಸಿದರು– 'ಹೌದು, ನೀನು ನನ್ನ ಹೆಂಡತಿಯ ಪುಸ್ತಕದಿಂದ ಮೂರು ಸಾವಿರ ಪದಗಳನ್ನು ಕದ್ದ ಕಳ್ಳ. ನೀನೊಬ್ಬ ನೀತಿಗೆಟ್ಟ ಬರಹಗಾರ.'

ಈ ಮಾತನ್ನು ಕೇಳುತ್ತಿದ್ದಂತೆಯೇ ಡ್ರೈಸರ್ ಅವರ ತಾಳ್ಮೆ ಕಟ್ಟೆಯೊಡೆಯಿತು. ಅವರು ತಮ್ಮ ಬಲಾಢ್ಯ ಕೈಯಿಂದ ಲೂಯಿಸ್ ಅವರ ಕೆನ್ನೆಗೆ 'ಫಟೀರ್' ಎಂದು ಜೋರಾಗಿ ಹೊಡೆದರು. ಆ ಹೊಡೆತದ ಶಬ್ದ ಇಡೀ ಕೊಠಡಿಯಲ್ಲಿ ಪ್ರತಿಧ್ವನಿಸಿತು. ಆದರೆ ವಿಚಿತ್ರವೆಂದರೆ, ಲೂಯಿಸ್ ಅಳಲಿಲ್ಲ ಅಥವಾ ತಿರುಗಿ ಹೊಡೆಯಲು ಹೋಗಲಿಲ್ಲ. ಬದಲಿಗೆ ಅವರು ಮತ್ತಷ್ಟು ಹಠಕ್ಕೆ ಬಿದ್ದವರಂತೆ ಕಂಡರು. ಡ್ರೈಸರ್ ಮತ್ತಷ್ಟು ಕೆರಳಿದವರಂತೆ, 'ಧೈರ್ಯವಿದ್ದರೆ ಇನ್ನೊಮ್ಮೆ ಹೇಳು ನೋಡೋಣ' ಎಂದು ಕೆಣಕಿದರು. ಲೂಯಿಸ್ ಮತ್ತೆ ಅಷ್ಟೇ ದೃಢವಾಗಿ ಕೃತಿಚೌರ್ಯದ ಆರೋಪವನ್ನು ಮಾಡಿದರು. ತಕ್ಷಣವೇ ಎರಡನೇ ಸಲ ಡ್ರೈಸರ್ ಬಲವಾಗಿ ಲೂಯಿಸ್ ಕೆನ್ನೆಗೆ ಬಾರಿಸಿದರು. ಆದರೂ ಲೂಯಿಸ್ ಶರಣಾಗಲಿಲ್ಲ, ಅವರು ಮೂರನೇ ಬಾರಿಗೆ ಆರೋಪ ಮಾಡಲು ಮುಂದಾದರು. ಅಲ್ಲಿ ನೆರೆದಿದ್ದ ಇತರ ಅತಿಥಿಗಳು ಮತ್ತು ಕ್ಲಬ್‌ನ ಸಿಬ್ಬಂದಿ ಕೂಡಲೇ ಓಡಿಬಂದು ಪರಿಸ್ಥಿತಿಯನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಡ್ರೈಸರ್ ಅವರನ್ನು ಲೂಯಿಸ್ ಅವರಿಂದ ದೂರಕ್ಕೆ ಎಳೆದುಕೊಂಡು ಹೋದರು. ಸಭಾಂಗಣದಿಂದ ಹೊರಬೀಳುವಾಗಲೂ ಡ್ರೈಸರ್ ಆಕ್ರೋಶದಿಂದ ಕಿರುಚುತ್ತಿದ್ದರು. ಕಪಾಳಮೋಕ್ಷಕ್ಕೊಳಗಾದ ಲೂಯಿಸ್ ಕೂಡ ಜೋರಾಗಿ ಕಿರುಚುತ್ತಿದ್ದರು. ಅದಕ್ಕೆ ಡ್ರೈಸರ್ ನೀಡಿದ ಅಂತಿಮ ಎಚ್ಚರಿಕೆ ಹೀಗಿತ್ತು – 'ನಾನು ನಿನ್ನನ್ನು ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಭೇಟಿಯಾಗಲು ಸಿದ್ಧ. ಈ ವಿಷಯ ಇಲ್ಲಿಗೆ ಮುಗಿದಿಲ್ಲ, ನೆನಪಿರಲಿ!'

ಮರುದಿನ ನ್ಯೂಯಾರ್ಕ್‌ನ ಪತ್ರಿಕೆಗಳು ಈ ಸುದ್ದಿಯನ್ನು ಆಪೋಶನ ತೆಗೆದುಕೊಂಡವು. 'ನೊಬೆಲ್ ವಿಜೇತನಿಗೆ ಕಪಾಳಮೋಕ್ಷ', 'ಸಾಹಿತ್ಯಿಕ ದೈತ್ಯರ ಮುಷ್ಟಿಯುದ್ಧ' ಎಂಬ ರೋಚಕ ತಲೆಬರಹಗಳು ಮುಖಪುಟದಲ್ಲಿ ರಾರಾಜಿಸಿದವು. ಅಮೆರಿಕಕ್ಕೆ ಮೊದಲ ನೊಬೆಲ್ ತಂದುಕೊಟ್ಟ ವ್ಯಕ್ತಿಯ ಮೇಲೆ ಈ ರೀತಿ ಹಲ್ಲೆ ನಡೆದಿದ್ದು ದೇಶಾದ್ಯಂತ ಚರ್ಚೆಗೆ ಗ್ರಾಸವಾಯಿತು. ಮಾಧ್ಯಮಗಳು ಇದನ್ನು 'ಜಗತ್ತಿನಾದ್ಯಂತ ಕೇಳಿಸಿದ ಕಪಾಳಮೋಕ್ಷ' (The Slap Heard Round the World) ಎಂದು ಬಣ್ಣಿಸಿದವು. ಈ ವಿವಾದದಲ್ಲಿ ಸಾರ್ವಜನಿಕ ಸಹಾನುಭೂತಿ ಹೆಚ್ಚಾಗಿ ಲೂಯಿಸ್ ಪರವಾಗಿಯೇ ಇತ್ತು. ಲೂಯಿಸ್ ಅವರು ಶಾರೀರಿಕವಾಗಿ ಬಲಿಷ್ಠರಾಗಿರಲಿಲ್ಲ. ಅಂಥ ಸೂಕ್ಷ್ಮ ಮತ್ತು ದೈಹಿಕವಾಗಿ ದುರ್ಬಲವಾಗಿದ್ದ ವ್ಯಕ್ತಿಯ ಮೇಲೆ, ಬಲಾಢ್ಯನಾಗಿದ್ದ ಡ್ರೈಸರ್ ಕೈ ಮಾಡಿದ್ದು ಜನರಿಗೆ ಅಸಹ್ಯ ಹುಟ್ಟಿಸಿತು. ಒಬ್ಬ ಲೇಖಕ ತನ್ನ ಮಾತಿನ ಮೂಲಕ ಪ್ರತಿಭಟಿಸಬೇಕೇ ಹೊರತು, ಮುಷ್ಟಿಯಿಂದಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಇಷ್ಟೆಲ್ಲ ಅವಮಾನ ಮತ್ತು ಹಲ್ಲೆಗೊಳಗಾದರೂ ಲೂಯಿಸ್ ಎದೆಗುಂದಲಿಲ್ಲ. ಅವರು ಮಾಧ್ಯಮಗಳ ಮುಂದೆ ಕ್ಷಮೆಯಾಚಿಸಲಿಲ್ಲ ಅಥವಾ ಘಟನೆಯನ್ನು ಮರೆಮಾಚಲು ಪ್ರಯತ್ನಿಸಲಿಲ್ಲ. ಅವರ ಪ್ರಕಾರ, ಡ್ರೈಸರ್ ಅವರ ಕೃತಿಚೌರ್ಯವು ಕಪಾಳಮೋಕ್ಷಕ್ಕಿಂತ ದೊಡ್ಡ ಅಪರಾಧವಾಗಿತ್ತು. ಅವರು ತಮ್ಮ ನಿಲುವಿಗೆ ಬದ್ಧರಾಗಿದ್ದರು. ಲೂಯಿಸ್ ಪದೇ ಪದೆ ಹೇಳಿದ್ದು ಒಂದೇ ಮಾತು – 'ಡ್ರೈಸರ್ ಒಬ್ಬ ಸಾಹಿತ್ಯಿಕ ಕಳ್ಳ.' ತನ್ನ ಪತ್ನಿ ಡೊರೊತಿ ಅವರ ಪರಿಶ್ರಮವನ್ನು ಕದ್ದ ವ್ಯಕ್ತಿಯನ್ನು ಸಾರ್ವಜನಿಕವಾಗಿ ಬಯಲಿಗೆಳೆಯುವುದು ತಮ್ಮ ನೈತಿಕ ಕರ್ತವ್ಯ ಎಂದು ಅವರು ಪ್ರತಿಪಾದಿಸಿದರು.

ಈ ಘಟನೆಯು ಸಾಹಿತ್ಯ ಲೋಕದಲ್ಲಿ ಒಂದು ದೊಡ್ಡ ವಿರೋಧಾಭಾಸವನ್ನು ಸೃಷ್ಟಿಸಿತು. ಲೂಯಿಸ್ ಅವರ ನೊಬೆಲ್ ಗೌರವದ ಬಗ್ಗೆ ಹೆಮ್ಮೆ ಪಡಬೇಕೋ ಅಥವಾ ಅವರ ಇಂಥ ವರ್ತನೆಯ ಬಗ್ಗೆ ಬೇಸರ ಪಡಬೇಕೋ ಎಂಬ ಗೊಂದಲ ಅನೇಕರಲ್ಲಿತ್ತು. ಆದರೆ, ಲೂಯಿಸ್ ಅವರು ತಿಂದ ಆ ಕಪಾಳಮೋಕ್ಷಗಳು ಅವರಿಗೆ ಸಮಾಜದಲ್ಲಿ ಒಬ್ಬ 'ಪ್ರಾಮಾಣಿಕ ಹೋರಾಟಗಾರ'ನ ಸ್ಥಾನವನ್ನು ತಂದುಕೊಟ್ಟವು. ಮಾಧ್ಯಮಗಳು ಈ ಘಟನೆಯನ್ನು ಕೇವಲ ಗದ್ದಲದಂತೆ ನೋಡಿದರೆ, ಲೂಯಿಸ್ ಅದನ್ನು ತಮ್ಮ ಸತ್ಯದ ಹಾದಿಯಲ್ಲಿ ಎದುರಾದ ಒಂದು ಸಣ್ಣ ಅಡ್ಡಿಯಂತೆ ಪರಿಗಣಿಸಿದರು. ಈ ಪ್ರಸಂಗ ಸಾಹಿತ್ಯ ಲೋಕದಲ್ಲಿ ಕೃತಿಚೌರ್ಯದ ವಿರುದ್ಧದ ಧ್ವನಿಯನ್ನು ಬಲಪಡಿಸಿತು ಮತ್ತು ಬರಹಗಾರರ ನಡುವಿನ ವೃತ್ತಿಪರ ಮತ್ಸರವು ಎಂಥ ಹಂತಕ್ಕೆ ತಲುಪಬಹುದು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿತು.

ಈ ಕಪಾಳಮೋಕ್ಷ ಘಟನೆ ಅಮೆರಿಕ ಸಾಹಿತ್ಯದ ಇತಿಹಾಸದಲ್ಲಿ ಇಂದಿಗೂ ಒಂದು ಕಪ್ಪು ಚುಕ್ಕೆಯಾಗಿ ಅಥವಾ ಒಂದು ರೋಚಕ ಅಧ್ಯಾಯವಾಗಿ ಉಳಿದುಬಿಟ್ಟಿತು.

ಮಂತ್ರಿಗಳ ಆಡಳಿತಾವಧಿ: ರಾಜ್ಯಪಾಲರ ಅಧಿಕಾರ ಔಪಚಾರಿಕವೇ?

ಕಾನೂನು ಸೆನ್ಸ್

ತಿಮ್ಮಣ್ಣ ಭಾಗವತ್
vveditoped@gmail.com

ಯಾವದೇ ರಾಜ್ಯದ ವಿಧಾನ ಸಭೆಗೆ ಐದು ವರ್ಷಕ್ಕೊಮ್ಮೆ ನಡೆಯುವ ಚುನಾವಣೆಯಲ್ಲಿ ಆಡಳಿತಾರೂಢ ಪಕ್ಷಕ್ಕೇ ಬಹುಮತ ಬಂದರೂ ಹಾಲಿ ಮುಖ್ಯಮಂತ್ರಿ ಹಾಗೂ ಮಂತ್ರಿಮಂಡಲ ರಾಜೀನಾಮೆ ನೀಡುವುದು ಕೇವಲ ಸಂಪ್ರದಾಯವಲ್ಲ. ಅದು ಅಲಿಖಿತ ನಿಯಮ ಕೂಡಾ. ಹೊಸದಾಗಿ ಚುನಾಯಿತರಾದ ಸದಸ್ಯರು ಆಯ್ಕೆ ಮಾಡಲಾಗುವ ನಾಯಕನನ್ನು ಹೊಸ ಅವಧಿಗೆ ಮುಖ್ಯಮಂತ್ರಿಯನ್ನಾಗಿ ನೇಮಿಸಲು ರಾಜ್ಯಪಾಲರಿಗೆ ಅನುವು ಮಾಡಿಕೊಡಲು ಇದು ಅನಿವಾರ್ಯ. ಹಿಂದಿನ ವಿಧಾನಸಭಾ ಸದಸ್ಯರೆಲ್ಲರ ಅವಧಿ ಕೂಡಾ ಮುಗಿಯುವುದರಿಂದ ಹೊಸ ಶಾಸಕಾಂಗಸಭೆ ಕಾರ್ಯ ನಿರ್ವಹಿಸುವಾಗ ಹೊಸ ಮಂತ್ರಿಮಂಡಲ ರಚನೆಯಾಗುತ್ತದೆ. ಶಾಸಕಾಂಗ ಸಭೆಯ ಅವಧಿ, ಅದು ಮೊದಲೇ ವಿಸರ್ಜನೆಯಾಗದಿದ್ದಲ್ಲಿ ಐದು ವರ್ಷಕ್ಕೆ ಕೊನೆಗೊಳ್ಳುತ್ತದೆ. ಹೀಗಾಗಿ ಹಿಂದಿನ ಶಾಸಕಾಂಗ ಸಭೆಯ ಸದಸ್ಯರು ಐದು ವರ್ಷ ಮುಗಿದ ತಕ್ಷಣ ಸದಸ್ಯರಾಗಿ ಉಳಿಯುವುದಿಲ್ಲ. ಇದು ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳಿಗೂ ಅನ್ವಯಿಸುತ್ತದೆ. ಇದು ಸಂವಿಧಾನದ ಕುರಿತು ಸಾಮಾನ್ಯ ಜ್ಞಾನವಿರುವವರೆಲ್ಲರಿಗೆ ತಿಳಿದಿರುವ ವಿಷಯ.

ಪಶ್ಚಿಮ ಬಂಗಾಳದ ವಿಧಾನ ಸಭೆಗೆ ಚುನಾವಣೆ ನಡೆದು ಆಡಳಿತಾರೂಢ ಟಿಎಂಸಿ ಪಕ್ಷಕ್ಕೆ ಬಹುಮತ ಲಭಿಸಿಲ್ಲ. ಹಾಲಿ ವಿಧಾನ ಸಭೆಯ ಅವಧಿ ಮೇ 7ಕ್ಕೆ ಮುಗಿಯುತ್ತದೆ. ಬಹುಮತ ಪಡೆಯದ ಕಾರಣಕ್ಕೆ ಹಾಲಿ ಮುಖ್ಯಮಂತ್ರಿ ಅಧಿಕಾರದಲ್ಲಿ ಮುಂದುವರೆಯಲು ಹಕ್ಕುದಾರರಲ್ಲ. ಅಲ್ಲದೆ ಅವರ ಪ್ರಸಕ್ತ ಅವಧಿ ಕೂಡಾ ಮೇ 7ಕ್ಕೆ ಮುಗಿಯುತ್ತದೆ. ಆದರೆ, ತಾನು ರಾಜೀನಾಮೆ ನೀಡುವುದಿಲ್ಲ ಎಂದು ಆ ಪಕ್ಷದ ಅಧಿನಾಯಕಿ ಅವರು ಹೇಳುತ್ತಿದ್ದಾರೆ. ಹಾಗೆ ಹೇಳಲು ಅವರು ನೀಡುವ ಕಾರಣ ರಾಜ್ಯದಲ್ಲಿ ನಡೆದ ಚುನಾವಣೆಯ ಮತ ಎಣಿಕೆಯಲ್ಲಿ ಮೋಸ ಮಾಡಿ ತಮ್ಮ ಪಕ್ಷಕ್ಕೆ ಸಿಗಬೇಕಾದ ಕನಿಷ್ಠ ನೂರು ಸೀಟುಗಳನ್ನು ಕಸಿದುಕೊಳ್ಳಲಾಗಿದೆ ಎಂಬುದು. ಅವರ ಈ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷ ಸೇರಿದಂತೆ ಕೆಲವು ವಿರೋಧ ಪಕ್ಷಗಳು ಸಮರ್ಥಿಸಿವೆ.

ಆದರೆ, ಸುದೀರ್ಘ ಅವಧಿಗೆ ರಾಜಕಾರಣದಲ್ಲಿರುವ ಅವರು ರಾಜತಾಂತ್ರಿಕ ವ್ಯವಸ್ಥೆಯ ಮೂಲ ಅಂಶಗಳನ್ನೇ ಅನುಸರಿಸದಿರುವುದು ಖೇದದ ಸಂಗತಿ. ಕಾನೂನು ಪದವೀಧರರೆಂದು ಹೇಳಿಕೊಂಡು ಸುಪ್ರೀಂ ಕೋರ್ಟಿಗೆ ತಮ್ಮ ವಾದ ಮಂಡಿಸಲು ತೆರಳಿದ ಅವರಿಗೆ ಈ ಸಾಮಾನ್ಯ ಅಂಶ ತಿಳಿಯದ್ದೆಂದು ಹೇಳಲಾಗದು. ಯಾವುದೇ ರಾಜ್ಯದ ಶಾಸಕಾಂಗದ ಚುನಾವಣೆ ನಡೆದ ನಂತರ ಆಡಳಿತಾರೂಢ ಪಕ್ಷವೇ ಪುನಃ ಅಧಿಕಾರಕ್ಕೆ ಬಂದರೂ ಹಾಲಿ ಮುಖ್ಯಮಂತ್ರಿ ಮತ್ತು ಅವರ ಮಂತ್ರಿಮಂಡಲದ ಇತರ ಸದಸ್ಯರು ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಸಬೇಕಾಗುತ್ತದೆ. ಯಾಕೆಂದರೆ ಹೊಸ ಶಾಸಕಾಂಗ ಪಕ್ಷ ಸಭೆ ಸೇರಿ ಹೊಸ ನಾಯಕನನ್ನು ಆಯ್ಕೆ ಮಾಡಬೇಕಾಗುತ್ತದೆ ಮತ್ತು ಅಂಥ ನಾಯಕರು ರಾಜ್ಯಪಾಲರಿಗೆ ಸರಕಾರ ರಚಿಸುವ ಬೇಡಿಕೆ (claim) ಮಂಡಿಸಬೇಕಾಗುತ್ತದೆ. ರಾಜ್ಯಪಾಲರಿಗೆ ಅವರು ಬಹುಮತ ಪಡೆದಿರುವುದು ಮನವರಿಕೆಯಾದರೆ ಅವರು ಅಂಥ ನಾಯಕರನ್ನು ಸರಕಾರ ರಚಿಸಲು ಆಹ್ವಾನಿಸುತ್ತಾರೆ ಮತ್ತು ನಂತರ ಹೊಸ ಮಂತ್ರಿಮಂಡಲ ರಚನೆಯಾಗುತದೆ. ಇದು ಕೇವಲ ಸಂಪ್ರದಾಯವಲ್ಲ, ಬದಲಾಗಿ ಸಂವಿಧಾನ ರೀತ್ಯಾ ಅನುಸರಿಸಬೇಕಾದ ಕ್ರಮ. ಆದರೆ, ಚುನಾವಣೆಯಲ್ಲಿ ಬಹುಮತವನ್ನೇ ಪಡೆಯದ ಪಕ್ಷದ ಮುಖ್ಯಮಂತ್ರಿಗಳು ತಾನು ರಾಜೀನಾಮೆ ನೀಡುವುದಿಲ್ಲ ಎಂದರೆ ಅದು ಕೇವಲ ರಾಜಕೀಯ ಕ್ರಮವೆನಿಸದು. ಅದು ಸಂವಿಧಾನದ ವಿಧಿಗಳ ಸ್ಪಷ್ಟ ಉಲ್ಲಂಘನೆ ಮತ್ತು ಅಧಿಕಾರ ವ್ಯಾಪ್ತಿಯನ್ನು ಮೀರಿದ ಕ್ರಮವೆನಿಸುತ್ತದೆ. ಮೇ 7ರ ನಂತರ ಅಧಿಕಾರದಲ್ಲಿರಲು ಹಕ್ಕು ಕಳೆದುಕೊಂಡ ನಾಯಕಿಯು ಮೊಂಡು ಹಠ ಮಾಡಿ ಕುರ್ಚಿ ಬಿಟ್ಟು ಕೊಡುವುದಿಲ್ಲವೆಂದರೆ ಕುರ್ಚಿಯಿಂದ ಎತ್ತು ಹೊರಗೆ ಹಾಕುವುದು ಅನಿವಾರ್ಯವಾಗುತ್ತದೆ ಎಂದು ಕೆಲವು

ನಾಯಕರು ಹೇಳುತ್ತಿದ್ದಾರೆ. ಆದರೆ ಸಂವಿಧಾನದಲ್ಲಿ ಮುಖ್ಯಮಂತ್ರಿಯನ್ನು ಕಿತ್ತುಹಾಕುವ (Dismissal) ವ್ಯವಸ್ಥೆ ಇಲ್ಲ. ಅವರು ಸಾಂವಿಧಾನಿಕವಾಗಿ ಅಧಿಕಾರ ಕಳೆದುಕೊಂಡರೆ ಅಧಿಕಾರ ಚಲಾಯಿಸುವಂತಿಲ್ಲ.

ಬಹುಮತ ಕಳೆದುಕೊಂಡ ಮುಖ್ಯಮಂತ್ರಿಯೊಬ್ಬರು ರಾಜೀನಾಮೆ ನೀಡದಿದ್ದರೆ ಏನು ಮಾಡಬೇಕೆಂದು ಸಂವಿಧಾನ ನೇರವಾಗಿ ಹೇಳುವದಿಲ್ಲ. ರಾಜ್ಯಪಾಲರು ಮುಖ್ಯಮಂತ್ರಿಯೊಬ್ಬರನ್ನು ಮುಂದುವರಿಸಲು ಇಚ್ಚಿಸದಿದ್ದರೆ ಏನು ಮಾಡಬೇಕೆಂಬುದೂ ಸ್ಪಷ್ಟವಿಲ್ಲ. ಪಶ್ಚಿಮ ಬಂಗಾಳದ ಪ್ರಸಕ್ತ ಸನ್ನಿವೇಶ ಕೆಲಮಟ್ಟಿಗೆ ಸಾಂವಿಧಾನಿಕ ಬಿಕ್ಕಟ್ಟು ಎಂದೇ ಹೇಳಬೇಕಾಗುತ್ತದೆ. ಕನಿಷ್ಠ ಪಕ್ಷ ಇದು ಹೊಸ ಮುಖ್ಯಮಂತ್ರಿ ಆಯ್ಕೆಯಾಗಿ ಪ್ರತಿಜ್ಞಾವಿಧಿ ನೆರವೇರುವ ವರೆಗಿನ ಮಧ್ಯಂತರ ಗೊಂದಲವಂತೂ ಹೌದು. 1997ರಲ್ಲಿ ಬಿಹಾರದ ಅಂದಿನ ಮುಖ್ಯಮಂತ್ರಿ ಲಲ್ಲೂ ಪ್ರಸಾದ ಯಾದವ ಅವರ ವಿರುದ್ಧ ಸಿಬಿಐ ಆರೋಪ ಪಟ್ಟಿ ಸಲ್ಲಿಸಿದಾಗ ತಾನು ರಾಜೀನಾಮೆ ನೀಡುವುದಿಲ್ಲವೆಂದು ಪಟ್ಟು ಹಿಡಿದಿದ್ದರು. ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ಜೈಲು ಸೇರಿದರೂ ರಾಜೀನಾಮೆ ನೀಡಲಿಲ್ಲ. ಈ ಎರಡೂ ಸಂದರ್ಭಗಳಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಎದುರಾಗಿತ್ತು. ಕೇಜ್ರಿವಾಲ್ ಪ್ರಕರಣದಲ್ಲಿ ಅವರನ್ನು ಕಿತ್ತೊಗೆಯಬೇಕೆಂಬ ಮನವಿಯನ್ನು ದಿಲ್ಲಿ ಉಚ್ಚ ನ್ಯಾಯಾಲಯ ಕೂಡಾ ಪುರಸ್ಕರಿಸದೆ ಅದು ಅವರ ವೈಯಕ್ತಿಕ ಇಚ್ಛೆ ಎಂದಿತ್ತು. 2011ರಲ್ಲಿ ಕರ್ನಾಟಕದ ಅಂದಿನ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪನವರು ತಮ್ಮ ವಿರುದ್ಧ ಲೋಕಾಯುಕ್ತ ವರದಿ ಬಂದ ನಂತರ ಆರಂಭದಲ್ಲಿ ನಿರಾಕರಿಸಿದರೂ ನಂತರ ರಾಜೀನಾಮೆ ನೀಡಿದ್ದರಿಂದ ಸಾಂವಿಧಾನಿಕ ಬಿಕ್ಕಟ್ಟು ತಲೆದೋರುವದು ತಪ್ಪಿತ್ತು. ಅಂಥ ಸಂದರ್ಭಗಳಲ್ಲಿ ಸಾಂವಿಧಾನಿಕ ಬಿಕ್ಕಟ್ಟು ಎದುರಾಗಲು ಕಾರಣವೆಂದರೆ ಸಂವಿಧಾನದಲ್ಲಿ ಚುನಾಯಿತ ಮುಖ್ಯಮಂತ್ರಿಯೊಬ್ಬರನ್ನು ಕಿತ್ತೊಗೆಯಲು ಅಂತರ್ಗತ ವ್ಯವಸ್ಥೆ ಇಲ್ಲ. ಅದು ಹೆಚ್ಚಾಗಿ ನೈತಿಕ ಹೊಣೆಗಾರಿಕೆ ಅಥವಾ ಕೋರ್ಟಿನ ಆದೇಶದ ಮೂಲಕವೇ ನಡೆಯಬೇಕಾಗುತ್ತದೆ. ರಾಜ್ಯಪಾಲರ Pleasure ಕೇವಲ ಅಲಂಕಾರಿಕ ಅಥವಾ ಔಪಚಾರಿಕ ವಿವೇಚನಾಧಿಕಾರವಾಗುತ್ತದೆ. ಇಂಥ ಸಂದರ್ಭಗಳನ್ನು ಬಹುಷಃ ಸಂವಿಧಾನ ನಿರ್ಮಾತೃಗಳು ಊಹಿಸಿರಲಿಕ್ಕಿಲ್ಲ. ಅಂಥ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಸಂವಿಧಾನದಲ್ಲಿ ಅಳವಡಿಸುವದು ಅನಿವಾರ್ಯವಾಗಬಹುದೇನೋ.

ಭಾರತದ ಸಂವಿಧಾನದ 164ನೇ ವಿಧಿಯ ಪ್ರಕಾರ ರಾಜ್ಯದ ಮಂತ್ರಿಗಳು ತಮ್ಮ ಹುದ್ದೆಯಲ್ಲಿ ರಾಜ್ಯಪಾಲರು ಇಚ್ಛಿಸುವವರೆಗೆ ಮಾತ್ರ ಇರಬಹುದು. (Ministers shall hold office during the pleasure of the Governor). ಇದು ಮುಖ್ಯಮಂತ್ರಿಗಳಿಗೂ ಅನ್ವಯಿಸುತ್ತದೆ. ಮೇಲ್ನೋಟಕ್ಕೆ ಇದು ಅನಿಯಮಿತ ಅಧಿಕಾರವೆನಿಸಿದರೂ ರಾಜ್ಯಪಾಲರ ಈ ವಿವೇಚನಾಧಿಕಾರಕ್ಕೆ ಅನೇಕ ಮಿತಿಗಳಿವೆ. ಸಾಮಾನ್ಯವಾಗಿ ಅವರು ಮುಖ್ಯಮಂತ್ರಿಗಳ ಸಲಹೆಯ ಮೇರೆಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಅಧಿಕಾರದ ಕುರಿತು ಅನೇಕ ಕಾನೂನು ಜಟಾಪಟಿಗಳು ನಡೆದಿವೆ. 310ನೇ ವಿಧಿಯೂ ರಾಜ್ಯಪಾಲರ Pleasure ಕುರಿತು ಹೇಳುತ್ತದೆ. ಅಲ್ಲಿರುವುದು ಸರಕಾರಿ ನೌಕರರ ಬಗ್ಗೆ. ಅಲ್ಲಿ ಕೂಡಾ ಮಂತ್ರಿ ಮಂಡಲದ ಸಲಹೆಯಿಲ್ಲದೆ ರಾಜ್ಯಪಾಲರು ಕ್ರಮ ಕೈಗೊಳ್ಳುವಂತಿಲ್ಲ. 155, 164 ಅಥವಾ 310ರಲ್ಲಿ ಹೇಳಲಾದ ರಾಷ್ಟ್ರಪತಿ/ರಾಜ್ಯಪಾಲರ pleasureನ ಮೂಲ ಬ್ರಿಟನ್ನಿನ ರಾಜ ಆಡಳಿತದ ವ್ಯವಸ್ಥೆ. ಆದರೆ ಅಲ್ಲಿಗಿಂತ ಭಾರತದಲ್ಲಿ ಈ ಅಧಿಕಾರಕ್ಕೆ ಹೆಚ್ಚಿನ ಮಿತಿಯಿದೆ. ಅಂಥ ನಿರ್ಣಯಗಳು ಕೋರ್ಟುಗಳ ವಿಮರ್ಶೆಗೆ ಒಳಪಡುತ್ತವೆ ಮತ್ತು ಸಾಮಾನ್ಯವಾಗಿ ಆ ಅಧಿಕಾರದ ಚಲಾವಣೆ ಮಂತ್ರಿಮಂಡಲದ ಸಲಹೆಯ ಮೇರೆಗೆ ಚಲಾಯಿಸಲ್ಪಡುತ್ತದೆ ಮತ್ತು ಮಂತ್ರಿಮಂಡಲವು ಸಂಸತ್ತಿಗೆ / ವಿಧಾನ ಮಂಡಲಕ್ಕೆ ಉತ್ತರದಾಯಿಯಾಗಿರುತ್ತದೆ. ಈ ಕಾರಣಕ್ಕೆ ಯಾವ ಹಂತದಲ್ಲೂ ಸರ್ವಾಧಿಕಾರಕ್ಕೆ ಅವಕಾಶವಿರುವದಿಲ್ಲ.

ಆದರೆ, ರಾಜ್ಯಪಾಲರು ತಮ್ಮ ವಿವೇಚನಾಧಿಕಾರವನ್ನು ಮುಖ್ಯಮಂತ್ರಿಯ ಕುರಿತಾಗಿಯೇ ಚಲಾಯಿಸಬೇಕಾಗಿ ಬಂದಾಗ ಅವರು ಮಂತ್ರಿಮಂಡಲದ ಸಲಹೆಯನ್ನು ಅವಲಂಬಿಸಲು ಸಾಧ್ಯವಾಗುವದಿಲ್ಲ. ಮಂತ್ರಿಮಂಡಲ ವಿಧಾನ ಸಭೆಯ ಬಹುಮತ ಹೊಂದಿದೆಯೋ ಇಲ್ಲವೋ ಎಂಬುದನ್ನು ಪರಿಗಣಿಸುವದು ರಾಜ್ಯಪಾಲರ ವಿವೇಚನಾಧಿಕಾರ. ಆ ಕುರಿತು ಅವರು ಸಮರ್ಪಕ ನಿಯಮಾವಳಿ ಪಾಲಿಸಬೇಕಾಗುತ್ತದೆ. ಆದರೆ ಇಲ್ಲಿ ಬಗೆಹರಿಸಬೇಕಾದ ಪ್ರಶ್ನೆ ಬಹುಮತದ್ದಲ್ಲ. ಮೇ 7ಕ್ಕೆ ವಿಧಾನ ಸಭೆಯ ಅವಧಿ ಮುಗಿದ ನಂತರ ಯಾರು ಮುಖ್ಯಮಂತ್ರಿಯಾಗಿರಬೇಕು ಎಂಬುದು ನಿರ್ಣಯವಾಗಬೇಕಾದ ಪ್ರಶ್ನೆ. ಹೊಸ ಮೂಖ್ಯಮಂತ್ರಿ ಆಯ್ಕೆಯಾಗುವ ವರೆಗೆ ಹಾಲಿ ಮುಖ್ಯಮಂತ್ರಿ ರಾಜೀನಾಮೆ ನೀಡಿದರೂ ಉಸ್ತುವಾರಿ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದು ಅವರನ್ನು ಸಾಮಾನ್ಯವಾಗಿ ವಿನಂತಿಸಲಾಗುತ್ತದೆ. ಆದರೆ ಮಮತಾ ಬ್ಯಾನರ್ಜಿಯವರು ರಾಜೀನಾಮೆ ನೀಡದೇ ಸೆಡ್ಡು ಹೊಡೆದರೆ ರಾಜ್ಯಪಾಲರು ಅವರನ್ನು ಉಸ್ತುವಾರಿ ಮುಖ್ಯಮಂತ್ರಿಯಾಗಿ ಮಂದುವರಿಸುವ ಸಾಧ್ಯತೆ ಕಡಿಮೆ. ಆಗ ತಾವೇ ಅಧಿಕಾರ ಕೈಗೆತ್ತಿಕೊಳ್ಳುವ ಅನಿವಾರ್ಯತೆ ಅವರಿಗೆ ಬರುತ್ತದೆ. ಹಾಗೆ ಮಾಡಬೇಕಾದಲ್ಲಿ ಅವರು ರಾಷ್ಟ್ರಪತಿ ಆಡಳಿತವನ್ನು ಮಧ್ಯಂತರವಾಗಿ ತರಲು ಉಪಕ್ರಮಿಸಬೇಕು ಮತ್ತು ಆ ಮೂಲಕ ರಾಜ್ಯದ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಳ್ಳಬೇಕಾಗುತ್ತದೆ.

ಟಿಎಂಸಿ ಪಕ್ಷದ ನಾಯಕಿ ಚುನಾವಣಾ ಆಯೋಗದ ವಿರುದ್ಧ ಆಪಾದನೆ ಮಾಡುತ್ತಿರುವುದು ಹೊಸದೇನಲ್ಲ. ಇನ್ನು ಕಾಂಗ್ರೆಸ್ ಪಕ್ಷದ ನಾಯಕರು ಕೂಡಾ ವೋಟ್ ಚೋರಿ ಎಂಬ ಹೆಸರಿನಲ್ಲಿ ದೇಶಾದ್ಯಂತ ಅಭಿಯಾನವನ್ನೇ ಮಾಡಿದ್ದರು. ಎಸ್‌ಐಆರ್ ವಿರುದ್ಧ ಕೂಡಾ ಈ ನಾಯಕರು ನೇರವಾಗಿ ಆಕ್ಷೇಪಿಸಿದ್ದರು. ಸುಪ್ರೀಂ ಕೋರ್ಟಿಗೆ ಕೂಡಾ ಪ್ರಕರಣ ದಾಖಲಾಗಿ ಎಸ್‌ಐಆರ್ ವಿರುದ್ಧ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತು. ಎಸ್‌ಐಆರ್ ಮೂಲಕ ಮತದಾರರ ಹೆಸರನ್ನು ಅಳಿಸಲಾದ ಹೆಚ್ಚಿನ ಕಡೆ ಟಿಎಂಸಿಯೇ ಗೆದ್ದು ಬಂದಿರುವುದನ್ನು ಕೆಲವು ರಾಜಕೀಯ ವಿಶ್ಲೇಷಕರು ಎತ್ತಿ ತೋರಿಸಿದ್ದಾರೆ. ಹಾಗಾಗಿ ಎಸ್‌ಐಆರ್‌ತಮ್ಮ ಸೋಲಿಗೆ ಕಾರಣ ಎಂಬುದನ್ನು ಸಾಬೀತು ಮಾಡಲು ಟಿಎಂಸಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರ ಆಕ್ಷೇಪಣೆ ಕೇವಲ ಮತ ಎಣಿಕೆಗೆ ಮಾತ್ರ ಸೀಮಿತವಾಗಿರಬೇಕಾದ್ದು ಅನಿವಾರ್ಯ. ಮತ ಎಣಿಕೆಯ ಕುರಿತು ಆಕ್ಷೇಪಣೆ ಸಲ್ಲಿಸಲು ಅವರಿಗೆ ಸಾಕಷ್ಟು ಅವಕಾಶಗಳಿವೆ. ಮರು ಎಣಿಕೆ ಅಥವಾ ಮರು ಚುನಾವಣೆಗೆ ಕೂಡಾ ಹೈಕೋರ್ಟಿಗೆ ಅರ್ಜಿ ಸಲ್ಲಿಸಬಹುದು. ಮರು ಚುನಾವಣೆ ನಡೆದ ಪೂರ್ವನಿದರ್ಶನಗಳು ಅನೇಕ ಇವೆ. ಅಂಥ ಅವಕಾಶಗಳನ್ನು ಉಪಯೋಗಿಸಿಕೊಂಡು ಸಂವಿಧಾನ ರೀತ್ಯಾ ನಡೆದುಕೊಂಡರೆ ಸುದೀರ್ಘ ರಾಜಕಾರಣದ ಹಿನ್ನೆಲೆಯಿರುವ ಮಮತಾ ಬ್ಯಾನರ್ಜಿಯವರ ಘನತೆ ಗೌರವಗಳು ಉಳಿಯಲಿವೆ ಎಂಬುದು ಜನರ ಭಾವನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾದ ಪ್ರಭುಗಳು ಮತದಾರರು ಎಂಬುದನ್ನು ರಾಜಕಾರಣಿಗಳು ತಿಳಿದಿರಬೇಕು. ಅವರು ಇಚ್ಛಿಸುವ ವರೆಗೆ ಮಾತ್ರ ತಮಗೆ ಅಧಿಕಾರವಿರುತ್ತದೆ ಹೊರತು ಅದು ಶಾಶ್ವತವಲ್ಲ ಎಂಬುದನ್ನು ಒಪ್ಪಿಕೊಳ್ಳುವ ವಿನಯ ತೋರಿಸಬೇಕು. ಇಲ್ಲವಾದರೆ ಅದು ಕಾನೂನುರಹಿತ (Lawlessness) ವ್ಯವಸ್ಥೆಯನ್ನು ಅಥವಾ ಅರಣ್ಯ ನ್ಯಾಯವನ್ನು ಸೃಷ್ಟಿಸ ಹೊರಟಿದ್ದಾರೆ ಎನ್ನಬೇಕಾಗುತ್ತದೆ. ಅದಕ್ಕೆ ಇನ್ನೊಂದು ಹೆಸರೇ ಗೂಂಡಾಗಿರಿ.

ಭಟ್ಟರ್ ಸ್ಕಾಚ್

- **ವಿ.ಸುಬ್ಬ ರಾವ್, ಬೆಂಗಳೂರು**
ಭಟ್ರೇ, ಮನುಷ್ಯನಿಗೆ ಕೆಲಸ ಮಾಡಲು ಇಷ್ಟವಿಲ್ಲದಿದ್ದರೂ ಯಾಕೆ ಕೆಲಸಕ್ಕೆ ಹೋಗುತ್ತಾನೆ?
– **ಅಲ್ಲಿ ನಿದ್ದೆ ಮಾಡಬಹುದಲ್ಲ?!**

- **ಅನಂತ ಹುಲಗಿ, ಗದಗ**
ಭಟ್ರೇ, ಜಿಮ್‌ಗೆ ಹೋಗುವವರು ಮೊದಲ ದಿನವೇ ಕನ್ನಡಿ ಮುಂದೆ ನಿಂತು ಬಾಡಿ ಚೆಕ್ ಮಾಡಿಕೊಳ್ಳುವುದು ಯಾಕೆ?
– **ಅಪ್ಪಿತಪ್ಪಿ ದಾರಿಯಲ್ಲಿ ಬರುವಾಗ ಒಂದೆರಡು ಗ್ರಾಂ ಬೊಜ್ಜು ಎಲ್ಲಿಯಾದರೂ ಬಿದ್ದು ಹೋಗಿದೆಯೇ ಎಂದು ನೋಡಲು!**

- **ಕೆ.ಸಿ.ಪಾಟೀಲ, ಬಾಗಲಕೋಟ**
ಭಟ್ರೇ, ಮದುವೆಯಾದ ಮೇಲೆ ಪುರುಷರು ಯಾಕೆ ಹೆಚ್ಚು ಸುಮ್ಮನಿರುತ್ತಾರೆ?
– **ಮನೆಯಲ್ಲಿ ಇಬ್ಬರು ಮಾತಾಡಿದರೆ 'ಚರ್ಚೆ', ಒಬ್ಬರೇ ಮಾತಾಡಿದರೆ 'ಉಪನ್ಯಾಸ', ಪತ್ನಿಯೊಂದಿಗೆ ಮಾತಾಡಿದರೆ 'ಯುದ್ಧ' ಅನ್ನೋದು ಅವರಿಗೆ ಗೊತ್ತಾಗಿರುತ್ತದೆ!**

- **ಬಾಲಚಂದ್ರ ಗಡಿ, (ಇಮೇಲ್ ಮೂಲಕ)**
ಭಟ್ರೇ, ಜನರು ಊಟ ಮಾಡುವ ಮೊದಲು ಫೋಟೋ ತೆಗೆಯುವುದು ಯಾಕೆ?
– **ತಾವು ಏನು ತಿಂದೆವು ಎಂಬುದು ಊರವರಿಗೆಲ್ಲ ಗೊತ್ತಾಗಲಿ ಎಂಬ ಉದಾರ ಮನೋಭಾವ!**

- **ನಿರ್ಮಲ ಮಠದ, ಹುಬ್ಬಳ್ಳಿ**
ಭಟ್ರೇ, ನಿದ್ದೆ ಬಾರದಿದ್ದಾಗ ಕುರಿಗಳನ್ನು ಎಣಿಸಿ ಅಂತಾರಲ್ಲ, ಅದರಿಂದ ನಿದ್ದೆ ಬರುತ್ತಾ?
– **ಎಣಿಸುತ್ತಾ ಹೋದಂತೆ 'ಒಂದು ಕುರಿ ಕಡಿಮೆ ಆಯ್ತಲ್ಲ, ಅದು ಎಲ್ಲಿ ಹೋಯ್ತು?' ಅಂತ ಯೋಚನೆ ಶುರುವಾಗಿ ಇರುವ ನಿದ್ದೆಯೂ ಹಾರಿಹೋಗುತ್ತದೆ!**

- **ಭರತ ಪಟ್ಟಣ, ಬೆಳಗಾವಿ**
ಭಟ್ರೇ, ಗೂಗಲ್ ಇರುವಾಗ ಗುರುಗಳು ಯಾಕೆ ಬೇಕು?
– **ದಾರಿಯಲ್ಲಿ ಬಿದ್ದಾಗ ಎಬ್ಬಿಸಲು ಒಬ್ಬ 'ದೋಸ್ತ' ಅಥವಾ 'ಗುರು' ಬೇಕೇ ಬೇಕಲ್ಲ?!**

- **ಹೇಮರೆಡ್ಡಿ, ಬಾಣಸವಾಡಿ**
ಭಟ್ರೇ, ಫ್ಯಾಮಿಲಿ ವಾಟ್ಸಾಪ್ ಗ್ರೂಪ್‌ಗಳು ಇರುವುದು ಯಾಕೆ?
– **ಬೆಳಗ್ಗೆ ಎದ್ದ ತಕ್ಷಣ ಯಾರು ಇನ್ನೂ ಬದುಕಿದ್ದಾರೆ ಎಂದು 'ಗುಡ್ ಮಾರ್ನಿಂಗ್' ಮೆಸೇಜ್ ಮೂಲಕ ಕನ್ಫರ್ಮ್ ಮಾಡಿಕೊಳ್ಳಲು!**

ಹೊರಗೆ ಬಿಸಿಗಾಳಿ, ಒಳಗೆ ಹಿಮಕೆನೆಯ ತಂಗಾಳಿ



ಕಾಡುದಾರಿ
ಹರೀಶ್ ಕೇರ
vveditoped@gmail.com

ಮಧ್ಯಾಹ್ನ ಒಂದು ಗಂಟೆಯ ಶಾಲೆಯ ಬೆಲ್ಲು ಬಾರಿಸುತ್ತಿದೆ. ಹೊರಗೆ ಬೇಸಿಗೆಯ ಧಗೆ ಸುರಿಯುತ್ತಿದೆ. ಎಲ್ಲ ಮಕ್ಕಳೂ ಜಗುಲಿಯಲ್ಲಿ ಬುತ್ತಿ ಬಿಚ್ಚಿ ಊಟ ಮಾಡುತ್ತಿದ್ದಾರೆ. ಸ್ವಲ್ಪ ಹೊತ್ತಿನಲ್ಲಿ ಸುಳ್ಯದ ಕಡೆಯಿಂದ ರಸ್ತೆಯಲ್ಲಿ ಕಿಣಿಕಿಣಿ ಸೈಕಲ್ ಬೆಲ್ ಕೇಳಿಸುತ್ತದೆ. ಶಬ್ದದ ಹಿಂದಿನಿಂದ ಸೈಕಲ್ಲನ್ನೇರಿದ ಪಾಯಸ್ ಕಾಣಿಸಿಕೊಳ್ಳುತ್ತಾನೆ. ಅವನು ಇದೀಗ ತಾನೆ ಸೈಕಲ್ಲಿನ ಹಿಂದಿನ ಭಾಗದಲ್ಲಿ ಕೂರಿಸಿದ ಮರದ ಪೆಟ್ಟಿಗೆಯೊಳಗೆ, ಥರ್ಮೋಕೋಲ್‌ನ ಆವರಣದಲ್ಲಿ ತುಂಬಿಸಿದ ತಂಪು ಸಂಗತಿಯೊಂದನ್ನು ಹೊತ್ತು ತಂದಿದ್ದಾನೆ. ಮಕ್ಕಳು ಅವನ ಸುತ್ತ ಮುಕುರಿಕೊಳ್ಳುತ್ತಿರುವಂತೆಯೇ ಜಾದೂಗಾರನಂತೆ ಕೋನ್ ಹೊರತೆಗೆದು ಅದಕ್ಕೆ ವೆನಿಲ್ಲಾ ಐಸ್‌ಕ್ರೀಂ ತುಂಬತೊಡಗುತ್ತಾನೆ. ಅವನ ಬಳಿ ಇರುವುದು ಅದೊಂದೇ. ಆ ಶುಭ್ರ ಶ್ವೇತ ಹಿಮತಿಂಡಿ ಮಕ್ಕಳ ನಾಲಿಗೆಯಲ್ಲಿ ಸಜ್ಜನರ ಮನಸ್ಸಿನಂತೆ ಕರಗುತ್ತಿದೆ. ಹೋಂವರ್ಕ್ ಮಾಡಿರದ ಚಿಂತೆಯನ್ನೆಲ್ಲ ಒಂದು ಕೋನ್ ನಿವಾಳಿಸಿದೆ. ಪಾಯಸ್ ಮುಂದಿನ ಶಾಲೆಗೆ ಹೋಗುತ್ತಾನೆ. ಬಹುಶಃ ಎಲ್ಲ ಶಾಲೆಗಳೂ ಇಂಥ ಒಬ್ಬನಲ್ಲ ಒಬ್ಬ ಪಾಯಸನನ್ನು ಕಂಡಿವೆ.

ವರ್ಷಗಳು ಕಳೆದಿವೆ. ಪಾಯಸ್ ಈಗ ಇದ್ದಾನೋ ಇಲ್ಲವೋ ಗೊತ್ತಿಲ್ಲ. ಊರೂರಲ್ಲೂ ಐಸ್‌ಕ್ರೀಂ ಪಾರ್ಲರ್‌ಗಳಿವೆ. ಮೊದಲಿನಂತೆ ತಾಲೂಕು ಕೇಂದ್ರದಿಂದ ಐಸ್‌ಕ್ರೀಂ ತುಂಬಿಕೊಂಡು ಬರಬೇಕಿಲ್ಲ. ಆದರೆ ಬೇಸಿಗೆಯಲ್ಲಿ ಪೇಟೆಗೆ ಹೋಗುವುದು ಎಂದರೆ ಒಂದು ಐಸ್‌ಕ್ರೀಂ ಸವಿಯುವುದು ಎಂಬ ನಿರೀಕ್ಷೆಯಿಂದಲೇ ಎಲ್ಲ ಹಳ್ಳಿ ಮಕ್ಕಳ ಕಣ್ಣುಗಳು ಅರಳಿಕೊಂಡಿರುತ್ತವೆ. ಪೇಟೆಗೆ ಹೋಗುವ ಸಂದರ್ಭದಲ್ಲಿ ಅಂದಿನ ನಮ್ಮ ದೊಡ್ಡ ನಿರೀಕ್ಷೆಗಳು ಎರಡು– ಹೋಟೆಲ್ ಮಸಾಲೆ ದೋಸೆ ಮತ್ತು ಐಸ್‌ಕ್ರೀಂ. ದೊಡ್ಡವರಿಗೂ ಇದರಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಸ್ಥಿತಿವಂತರ ಮನೆಗಳ ಫ್ರಿಜ್‌ಗಳಲ್ಲಿ ಐಸ್‌ಕ್ರೀಂ ಫ್ಯಾಮಿಲಿ ಪ್ಯಾಕ್‌ಗಳು ಜಾಗ ಕಂಡುಕೊಂಡಿರಬಹುದು. ಆದರೆ ಬೇಸಿಗೆಯ ಕಾದ ಹಗಲುಗಳಲ್ಲಿ ಹೊರ ಹೋದಾಗ, ಬೆವರು ಸುರಿಯುತ್ತಿರುವಾಗ ಒಂದು ತಾಜಾ ತಂಪುಕೆನೆಯನ್ನು ನಿರೀಕ್ಷಿಸುವ ಸೊಗಸೇ ಬೇರೆ. ಅದು ಅಪ್ಪಟ ಮನುಷ್ಯ ಗುಣ.

ಮಳೆ ಕಚ್ಚಿಕೊಳ್ಳುವ ಮುನ್ನವೇ ಐಸ್‌ಕ್ರೀಂ ಬಗ್ಗೆ ಬರೆಯಬೇಕು ಎಂದು ಕೂತಾಗ, ಏನೆಲ್ಲ ಹೊಳೆಯುತ್ತಿವೆ. ವಿಟ್ಲದ ಸಣ್ಣದೊಂದು ಐಸ್‌ಕ್ರೀಂ ಪಾರ್ಲರಿನಲ್ಲಿ ಅವಳೊಂದಿಗೆ ಮೊದಲ ಗಡ್‌ಬಡ್ ಹಂಚಿಕೊಂಡದ್ದು ನೆನಪಾಗುತ್ತಿದೆ. ಸುರಿವ ಮಳೆಯಲ್ಲೂ ಡಿಸೆಂಬರಿನ ಥಂಡಿಯಲ್ಲೂ ಐಸ್ಕ್ರೀಮ್ ಸವಿದು ಚಿಲ್ ಆಗುವ ಹುಡುಗಿಯರು ಕಣ್ಣು ಮುಂದೆ ಬರುತ್ತಿದ್ದಾರೆ. ಮೊದಲ ಪ್ರೀತಿಯ ಹಾಗೆ ಮೊದಲ ಮಿಲ್ಕ್ ಶೇಕ್, ಮೊದಲ ಕ್ಯೂಬ್, ಮೊದಲ ಕ್ರೀಮಿ ಕಾಫಿ, ಮೊದಲ ಗುವಾವಾ ಸ್ಲೈಸ್ ವಿದ್ ಚಿಲ್ಲಿ, ಸಂಡೇ, ಗೆಲಾಟೋ, ಸಾಫ್ಟಿ, ಫಲೂದಾ, ದಿಲ್ಖುಶ್. ಮತ್ತು ಎಷ್ಟೊಂದು ಫ್ಲೇವರ್‌ಗಳು– ಚಿಕ್ಕುವಿನಿಂದ ಚಾಕೊಲೇಟ್‌ವರೆಗೆ. ಈಗ ವೆನಿಲ್ಲಾ ಎಂಬ ಕ್ಲಾಸಿಕ್ ರುಚಿಯನ್ನು ಬಯಸುವವರೇ ಇಲ್ಲವೋ ಅಥವಾ ಇತರ ಫ್ಲೇವರ್‌ಗಳು ಅದರ ಮೇಲೆ ಸವಾರಿ ಮಾಡಿವೆಯೋ. ನೋಡುತ್ತ ಐಸ್‌ಕ್ರೀಂ ಎಂಬುದು ನಮ್ಮ ಭಾವಕೋಶದ ಭಾಗವಾಗಿದೆ ಎಂದು ಮನದಟ್ಟಾಗುತ್ತಿದೆ. ಹಾಗೇ ಒಮ್ಮೆ ಅರುಣಾಚಲದ ಸ್ಕಂದಾಶ್ರಮ ಬೆಟ್ಟ ಹತ್ತಿ ಬಿಸಿಲ ಧಗೆಯಲ್ಲಿ ದಣಿದು ಬೆವರಿ ಕೆಳಗಿಳಿದು ಬಂದು ಸವಿದ ಐಸ್ಕ್ರೀಮ್. ಬೆಟ್ಟದ ಮೇಲಿನ ಮೌನ–ಧ್ಯಾನವೂ ಐಸ್ಕ್ರೀಮ್ ನೀಡಿದ ದೈಹಿಕ ತಂಪೂ ಒಂದೇ ಎಂದಂತಾಗಿ, ಐಹಿಕವೂ ಅಲೌಕಿಕವೂ ಬೇರೆಯಲ್ಲ ಎಂಬಂತೆ ಕಾಣಿಸಿತ್ತು.

ಕರಾವಳಿಯ ಸೆಕೆಗೂ ಐಸ್ಕ್ರೀಮ್‌ಗೂ ಅವಿನಾಭಾವ. ಅದಕ್ಕೇ ಮಂಗಳೂರಿಗೆ ಐಸ್‌ಕ್ರೀಂ ಕ್ಯಾಪಿಟಲ್ ಆಫ್ ಇಂಡಿಯಾ ಎಂದು ಕರೆಯುವುದು. ಮಂಗಳೂರು– ಉಡುಪಿಗಳಲ್ಲಿ ಒಂದು ತಂಪು ಹಿಮಕೆನೆ ಸವಿಯದೇ ಒಂದು ಹಗಲು ಕಳೆಯುವುದು ಏಪ್ರಿಲ್– ಮೇ ತಿಂಗಳುಗಳಲ್ಲಿ ಅಸಾಧ್ಯ. ಅದರಲ್ಲೂ ಮಂಗಳೂರು! ಅದು ದೇಶದ ಅನೇಕ ವೈವಿಧ್ಯಮಯ ಐಸ್‌ಕ್ರೀಂ ಕಂಪನಿಗಳ ತವರೂರು. ಮುಖ್ಯವಾಗಿ ಐಡಿಯಲ್, ಹಾಂಗ್ಯೋ. ದೇಶಾದ್ಯಂತ ಹೆಸರು ಮಾಡಿದ ಪೋಲಾರ್ ಬೇರ್, ನ್ಯಾಚುರಲ್ಸ್ ಐಸ್‌ಕ್ರೀಂ ಕಂಪನಿಗಳ ಮೂಲಪುರುಷರೂ ದಕ್ಷಿಣ ಕನ್ನಡದವರೇ. ಅದೇಕೋ ಐಸ್ಕ್ರೀಂಗೂ ಮಂಗಳೂರಿಗೂ ಬಿಡದ ನಂಟು. ಮಂಗಳೂರಿಗೆ ಹೋದವನು ಅಲ್ಲಿನ ಲಾಲ್‌ಬಾಗ್‌ನಲ್ಲಿರುವ ಪಬ್ಬಾಸ್ ಪಾರ್ಲರ್‌ಗೆ ಒಂದು ವಿಸಿಟ್ ಹಾಕದೇ ಹಿಂತಿರುಗುವ ರೂಢಿಯಿಲ್ಲ. ಬೆಂಗಳೂರಿಗೆ ಇಲ್ಲಿನದೇ ಆದ ಕಾರ್ನರ್ ಹೌಸ್‌ನ ಅಪ್ಪಟ ನಂಟು ಇದೆ. ಬಾಸ್ಕಿನ್ ರಾಬಿನ್ಸ್, ಮಿಲಾನೋ, ಹಾಗೆನ್ ಡಾಝ್‌ಗಳು ಬೇರೆ ಕಡೆಯಿಂದ ಬಂದು ತಳವೂರಿವೆ.



ಇನ್ನು ಅಮುಲ್ ಅಂತೂ ದೇಶವಿಡೀ ಹಬ್ಬಿದ ತನ್ನ ಜಾಲದಲ್ಲಿ ಕರ್ನಾಟಕವನ್ನೂ ಸೆಳೆಯದೆ ಬಿಟ್ಟಿಲ್ಲ. ಆದರೆ ನಿಮಗೊಂದು ವಿಷಯ ಗೊತ್ತೆ? ನೀವು ಅಮುಲ್ ಐಸ್‌ಕ್ರೀಂ ಪ್ರಿಯರೇ ಇರಬಹುದು– ಆದರೆ ಅದನ್ನು ತಯಾರಿಸುವುದು ನಮ್ಮ ಕನ್ನಡದ ಮಣ್ಣಿನ ಕೆಎಂಎಫ್ ಅಲಿಯಾಸ್ ನಂದಿನಿ. ಬೆಂಗಳೂರು, ಬಳ್ಳಾರಿ, ಹಾಸನದ ಕೆಎಂಎಫ್ ಪ್ಲಾಂಟ್‌ಗಳಲ್ಲಿ ತಯಾರಾಗುವ ನಮ್ಮ ಕನ್ನಡದ ನೆಲದ ಹಾಲಿನ ಐಸ್‌ಕ್ರೀಂ ಉತ್ಪನ್ನಗಳು ಅಮುಲ್ ಬ್ರಾಂಡ್‌ನ ರ್ಯಾಪರ್ ಅಂಟಿಸಿಕೊಂಡು ಬರುತ್ತವೆ. ಹೀಗೆ ದಿನವೊಂದಕ್ಕೆ ಅಮುಲ್‌ಗೆ ನಂದಿನಿ ನೀಡುವ ಐಸ್‌ಕ್ರೀಂ ಪ್ರಮಾಣ 15000 ಲೀಟರ್.

ಅದಿರಲಿ. ಐಸ್‌ಕ್ರೀಂ ಎರಡನೇ ಮಹಾಯುದ್ಧದಲ್ಲಿ ಮಹತ್ವದ ಪಾತ್ರ ವಹಿಸಿದ ಕತೆ ನಿಮಗೆ ಗೊತ್ತೆ? ದ್ವಿತೀಯ ವಿಶ್ವಯುದ್ಧದ ಸಮಯದಲ್ಲಿ, ಯುರೋಪ್– ಪೆಸಿಫಿಕ್ ಸಮುದ್ರದ ಹಲವು ಕಡೆ ಸೆಟಲ್ ಆಗಿ ಹೋರಾಡುತ್ತಿದ್ದ ಅಮೆರಿಕದ ಸೈನಿಕರಿಗೆ ಬಹು ಬೇಗ ಹೋಂಸಿಕ್‌ನೆಸ್ ಬಂದುಬಿಡುತ್ತಿತ್ತು. ಜೊತೆಗೆ 1914ರಲ್ಲಿ ನೌಕಾಪಡೆಯ ಹಡಗುಗಳಲ್ಲಿ ಮದ್ಯಪಾನ ನಿಷೇಧಿಸಿದ ನಂತರ ಇನ್ನಷ್ಟು ಒಂಟಿತನ, ಖಿನ್ನತೆ, ಕಿರಿಕಿರಿ. ಇದನ್ನು ಹೋಗಲಾಡಿಸಿ, ಅವರ ಮನೋಬಲ ಹೆಚ್ಚಿಸಲು ಅಮೆರಿಕ ದೊಡ್ಡ ದೊಡ್ಡ ನೌಕೆಗಳಲ್ಲಿ ಲಕ್ಷಗಟ್ಟಲೆ ಟನ್ ಐಸ್‌ಕ್ರೀಂ ಕಳಿಸಲಾರಂಭಿಸಿತು. ನೌಕಾಪಡೆ ವಿಶೇಷ ಐಸ್‌ಕ್ರೀಂ ಬಾರ್ಜ್‌ಗಳನ್ನು ಕೂಡ ನಿರ್ಮಿಸಿತು. ಅವು ಸಮುದ್ರ ಮಧ್ಯದಲ್ಲಿ ದಿನಕ್ಕೆ 1500 ಗ್ಯಾಲನ್ ಐಸ್‌ಕ್ರೀಂ ತಯಾರಿಸುತ್ತಿದ್ದವು. ಅದನ್ನು ಟಾಪ್ ಸೀಕ್ರೆಟ್ ಲಾಜಿಸ್ಟಿಕ್ ಆದ್ಯತೆಯಾಗಿ ನೋಡಲಾಯಿತು.

ಅಮೆರಿಕ ಸೇನೆಯ ಲಾಜಿಸ್ಟಿಕ್ ವ್ಯವಸ್ಥೆ ಬಹಳ ಬಲವಾಗಿತ್ತು. ಹೀಗಾಗಿ ಇತರ ಶತ್ರು ರಾಷ್ಟ್ರಗಳಿಗಿಂತ ವಿಭಿನ್ನವಾಗಿ ಅವರು ಪೆಸಿಫಿಕ್ ಯುದ್ಧಭೂಮಿಗೆ ದೊಡ್ಡ ಪ್ರಮಾಣದಲ್ಲಿ ಐಸ್‌ಕ್ರೀಂ ಸರಬರಾಜು ಮಾಡಬಹುದಾಗಿತ್ತು. ಜಪಾನ್‌ನ ಉಪಾಧ್ಯಕ್ಷ ಅಡ್ಮಿರಲ್ ತಕಾಜಿರೋ ಓನಿಶಿ ಇದರಿಂದ ಗಾಬರಿ ಬಿದ್ದಿದ್ದ. ಅಮೆರಿಕದ ಸೈನಿಕರಿಗೆ ಲಭ್ಯವಾಗುತ್ತಿದ್ದ ಅಪಾರ ಐಸ್‌ಕ್ರೀಂ ಬಗ್ಗೆ ತಿಳಿದರೆ ತನ್ನ ಸೈನಿಕರ ಹೋರಾಟ ಮನೋಭಾವ ಕುಗ್ಗುತ್ತದೆ ಎಂದು ನಂಬಿದ್ದ. ಇನ್ನೊಂದು ವಿಶೇಷ ಅಂದರೆ ಅಮೆರಿಕದ ವಾಯುಸೇನೆ, ಐಸ್‌ಕ್ರೀಂ ತಯಾರಿಸಲು ವಿಚಿತ್ರ ವಿಧಾನವೊಂದನ್ನು ಆವಿಷ್ಕರಿಸಿತ್ತು. ಸಮರ ವಿಮಾನಗಳ ಪೈಲಟ್‌ಗಳು ಕ್ಯಾನ್ ಮಾಡಿದ ಹಾಲು ಮತ್ತು ಕೋಕೋ ಪುಡಿ ಮಿಶ್ರಣವನ್ನು ವಿಮಾನಕ್ಕೆ ಜೋಡಿಸಿದ ಪಾತ್ರೆಯಲ್ಲಿ ಇಟ್ಟುಕೊಂಡು ಎತ್ತರದ ಪ್ರದೇಶದಲ್ಲಿ ಹಾರಾಡುತ್ತಿದ್ದರು. ಅಲ್ಲಿನ ಚಳಿ ಮತ್ತು ಕಂಪನಗಳಿಂದ ಅದು ಐಸ್‌ಕ್ರೀಂ ಆಗಿಬಿಡುತ್ತಿತ್ತು. ಇದನ್ನು ಏರ್ ಚರ್ನ್ಡ್ ಐಸ್‌ಕ್ರೀಂ ಎನ್ನಲಾಗುತ್ತಿತ್ತು.

ಗಡ್‌ಬಡ್ ಎಂಬ ವಿಶೇಷ ಐಸ್ಕ್ರೀಮನ್ನು ಸವಿಯದವರು ಯಾರೂ ಇಲ್ಲ ಅನ್ನಬಹುದು. ಇದು ಹುಟ್ಟಿಕೊಂಡದ್ದು ಒನ್ಸ್ ಎಗೇನ್ ನಮ್ಮ ಹೆಮ್ಮೆಯ ಕರಾವಳಿಯಲ್ಲಿ. ಇದರ ಇತಿಹಾಸ ಸುಮಾರು ಅರುವತ್ತರ ದಶಕಕ್ಕೆ ಹೋಗುತ್ತದೆ. ಉಡುಪಿಯ ಡಯಾನಾ ರೆಸ್ಟೋರೆಂಟ್‌ನಲ್ಲಿ, ಗಡಿಬಿಡಿಯಿಂದ ಇದನ್ನು ಸೃಷ್ಟಿ ಮಾಡಿ ಗ್ರಾಹಕರಿಗೆ ಕೊಡಲಾಯಿತು. ಹಾಗಾಗಿ ಇದು ಗಡ್‌ಬಡ್ ಆಯಿತು ಎಂಬುದೊಂದು ಕತೆ. ಇದನ್ನು ಮುಂದೆ ಐಡಿಯಲ್ ಐಸ್‌ಕ್ರೀಂನ ಪ್ರಭಾಕರ ಕಾಮತರು ಜನಪ್ರಿಯಗೊಳಿಸಿದರು. ಇದನ್ನು ಮನೆಯಲ್ಲೂ ಮಾಡಿಕೊಳ್ಳಬಹುದು. ಮೂರು ಫ್ಲೇವರ್‌ನ ಐಸ್‌ಕ್ರೀಂಗಳಿರಬೇಕು– ಪಿಸ್ತಾ, ವೆನಿಲ್ಲಾ ಹಾಗೂ ಸ್ಟ್ರಾಬೆರಿ. ದೊಡ್ಡದೊಂದು ಗ್ಲಾಸ್ ಲೋಟದಲ್ಲಿ ಮೊದಲು ಪಿಸ್ತಾ ಐಸ್‌ಕ್ರೀಂ ಹಾಕಿಕೊಂಡು, ಅದರ ಮೇಲೆ ಬೇಕಾದಷ್ಟು ಜೆಲ್ಲಿ ಸುರಿದು, ಅದರ ಮೇಲೆ ನಿಮಗೆ ಬೇಕಾದ ಹಣ್ಣಿನ ಚೂರುಗಳನ್ನು ಸೇರಿಸಿ. ಮೇಲಿನಿಂದ ಸ್ಟ್ರಾಬೆರಿ ಐಸ್‌ಕ್ರೀಂ ತುಂಬಿಕೊಂಡು, ಅದರ ಮೇಲೆ ಒಣಹಣ್ಣುಗಳನ್ನು ಸೇರಿಸಿಕೊಂಡು, ಅದರ ಮೇಲೆ ವೆನಿಲ್ಲಾ ಐಸ್‌ಕ್ರೀಂ ಹಾಗೂ ಮೇಲಿನಿಂದ ಒಂದು ಚೆರ್ರಿ. ಇಷ್ಟಿದ್ದರೆ ಮುಗಿಯಿತು. ಒಂದೇ ಐಸ್‌ಕ್ರೀಂನಲ್ಲಿ ಹಲವು ಬಗೆಯ ಫ್ಲೇವರ್‌ಗಳನ್ನು ಸವಿಯುವ ಈ ಐಡಿಯಾ ಬಹುಬೇಗ ಜನಪ್ರಿಯವಾಯಿತು. ಗಡ್‌ಬಡ್ ಸವಿಯುವುದು ಎಂದರೆ ಗಡಿಬಿಡಿಯ ಸಂಗತಿಯಲ್ಲ. ಅದು ವಿವಾಹ ಭೋಜನದಂತೆ ಬಹು ಮನೋಮಗ್ನವಾಗಿ, ನಿಧಾನವಾಗಿ ನಡೆಸಬೇಕಾದ ಖಾದ್ಯಕ್ರಿಯೆ.

ಎಪ್ಪತ್ತು ಎಂಬತ್ತರ ದಶಕದಲ್ಲಿ ಕರಾವಳಿಯ ಮಂದಿ ಮುಂಬಯಿ, ಬೆಂಗಳೂರು ಮತ್ತಿತರೆಡೆಗೆ ಹೋಗಿ ಐಸ್‌ಕ್ರೀಂ ಕ್ರಾಂತಿಯೆಬ್ಬಿಸಿದರು. ಐಡಿಯಲ್‌ನ ಪ್ರಭಾಕರ ಕಾಮತರನ್ನು 'ಐಸ್ಕ್ರೀಂ ಮ್ಯಾನ್ ಆಫ್ ಇಂಡಿಯಾ' ಎಂದೂ ಕರೆಯಲಾಗುತ್ತದೆ. ಹಣ್ಣಿನ ಫ್ಲೇವರ್ ಏನೋ ಸರಿ, ಆದರೆ ನೈಜ ಹಣ್ಣುಗಳನ್ನೇ ಐಸ್ಕ್ರೀಂನಲ್ಲಿ ನೀಡಿದರೆ ಹೇಗೆ ಎಂಬ ಐಡಿಯಾವನ್ನು ವರ್ಕೌಟ್ ಮಾಡಿದ ಮಂಗಳೂರಿನ ರಘುನಂದನ ಕಾಮತ್ ಅವರು ಮುಂಬಯಿಯ ಜುಹೂನಲ್ಲಿ ಹುಟ್ಟುಹಾಕಿದ ನ್ಯಾಚುರಲ್ಸ್ ಬ್ರಾಂಡ್ ಈಗ ಹೆಸರುವಾಸಿ. ಪೋಲಾರ್ ಬೇರ್ ಸ್ಥಾಪಿಸಿದ ಕಿಶೋರ್ ರೈ ಕೂಡ ದಕ್ಷಿಣ ಕನ್ನಡದವರು. ಇದಲ್ಲದೇ ನೂರಾರು ಬ್ರಾಂಡ್‌ಗಳಿವೆ. ಪ್ರತಿಯೊಂದಕ್ಕೂ ಅದರದೇ ಸ್ಥಾನಮಾನ.

ಬೆಂಗಳೂರಿನ ಈ ಸಲದ ಬೇಸಿಗೆಯಂತೂ ಅಕ್ಷರಶಃ ಬೆವರಿಳಿಸುವಂತೆಯೇ ಇತ್ತು. ಪರಿಣಾಮ ಐಸ್‌ಕ್ರೀಂ ವ್ಯಾಪಾರದಲ್ಲಿಯೂ ಭರಪೂರ ಏರಿಕೆಯಾಯ್ತು. ಸಮ್ಮರ್ ಟ್ರೆಂಡ್ಸ್ ವರದಿ ಪ್ರಕಾರ, ಈ ವರ್ಷ ಐಸ್‌ಕ್ರೀಂ ಬಳಕೆಯಲ್ಲಿ ಬೆಂಗಳೂರು ಭಾರತದಲ್ಲಿ ಮೊದಲ ಸ್ಥಾನದಲ್ಲಿದೆ. ಭಾರತದಲ್ಲಿನ ಒಟ್ಟು ಐಸ್‌ಕ್ರೀಂ ಬೇಡಿಕೆಯಲ್ಲಿ ಸುಮಾರು 14% ಬೆಂಗಳೂರು ಒಂದೇ ಕಡೆ ಇದೆ. ಮಾರಾಟದ ದೃಷ್ಟಿಯಿಂದ ಇದೇ ಈಗ ಹೊಸ ಐಸ್‌ಕ್ರೀಂ ರಾಜಧಾನಿ. ಇತರ ಅತ್ಯಧಿಕ ಬೇಡಿಕೆಯ ನಗರಗಳು ಮುಂಬೈ, ಹೈದರಾಬಾದ್, ಚೆನ್ನೈ ಮತ್ತು ಪುಣೆ. ಆದರೆ ಐಸ್‌ಕ್ರೀಂ ಸಂಸ್ಕೃತಿ, ಫ್ಲೇವರ್‌ಗಳ ಆಧಿಕ್ಯ, ಐಸ್‌ಕ್ರೀಂ ಬ್ರಾಂಡ್‌ಗಳ ಸಾಮ್ರಾಜ್ಯ, ಸೃಷ್ಟಿಕರ್ತರು ಇದನ್ನೆಲ್ಲ ಗಮನಿಸಿದರೆ ಮಂಗಳೂರಿನ ಸ್ಥಾನ ಅಬಾಧಿತ.

ಬೆಂಗಳೂರಿನ ಕಾರ್ನರ್ ಹೌಸ್‌ಗೆ ನೀವು ಹೋದರೆ ಅಲ್ಲಿ ಐಸ್‌ಕ್ರೀಂ ಸವಿಯಲು ಬಂದ ಬ್ರಿಟನ್‌ನ ಮಾಜಿ ಪ್ರಧಾನಿ, ಅವರ ಪತ್ನಿ, ಅವರ ಅತ್ತೆ– ಮಾವನನ್ನೂ ಕಂಡರೆ ಆಶ್ಚರ್ಯವಿಲ್ಲ. ಧಗೆಯ ದಿನಗಳಲ್ಲಿ ಮೈಯೆಲ್ಲ ಕುದಿಯುತ್ತಿರುವಾಗ, ನಾಲಿಗೆಯ ಮೇಲೆ ತಂಪಿನ ತೆರೆ ಹರಿಸಿ, ಜೀವಚೈತನ್ಯ ಹೊಮ್ಮಿಸುವ ಮಂಜುಕೆನೆಯ ಸ್ವಾದವೇ ಮೋದ. ಅದು ನರಮನುಷ್ಯರು ನಮ್ಮಂತೆಯೇ ತುಸು ಆನಂದಪಡಲಿ ಎಂದು ದೇವರು ನೀಡಿದ ಅಮೃತದ ತುಣುಕು, ಸ್ವರ್ಗದ ಇಣುಕು.

ಆಧುನಿಕ ಕರ್ನಾಟಕದ ರಾಜಾಹುಲಿಯ ದೂರದೃಷ್ಟಿಯ ನಾಯಕತ್ವ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಐದು ದಶಕಗಳಿಂದ ಕರ್ನಾಟಕದ ರಾಜಕೀಯ ಒಬ್ಬರು ನಾಯಕರ ಜೊತೆ ಅವಿನಾಭಾವವಾಗಿ ಬೆಸೆದುಕೊಂಡಿದೆ ಎಂದರೆ ಅದು ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ. ರಾಜ್ಯ ರಾಜಕೀಯದಲ್ಲಿ ಯಡಿಯೂರಪ್ಪ ಎಂಬ ಹೆಸರು ಕೇವಲ ಒಬ್ಬ ನಾಯಕನದ್ದಲ್ಲ, ಅದು ಐದು ದಶಕಗಳ ಕಾಲ ನಡೆದ ಅವಿರತ ಹೋರಾಟದ ಸಂಕೇತ. ಶಿಕಾರಿಪುರದ ಪುರಸಭೆ ಅಧ್ಯಕ್ಷ ಸ್ಥಾನದಿಂದ ಪ್ರಾರಂಭವಾದ ಇವರ ಪಯಣ, ಇಂದು ದಕ್ಷಿಣ ಭಾರತದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಪ್ರಮುಖ ಶಕ್ತಿಯಾಗಿ ಬೆಳೆದು ನಿಂತಿದೆ. ಜನಸಾಮಾನ್ಯರು ಇವರನ್ನು ಪ್ರೀತಿಯಿಂದ 'ರಾಜಾಹುಲಿ' ಎಂದು ಕರೆಯುವುದು ಇವರ ಅಚಲ ನಿರ್ಧಾರಗಳು ಮತ್ತು ಹೋರಾಟದ ಗುಣಕ್ಕಾಗಿಯೇ ಹೊರತು ಕೇವಲ ರಾಜಕೀಯ ಕಾರಣಕ್ಕಲ್ಲ.

ಜನಸಾಮಾನ್ಯರ ಪಾಲಿಗೆ ದಾರಿದೀಪದಂತಿರುವ ಯಡಿಯೂರಪ್ಪನವರು ಅನೇಕರಿಗೆ ಮಾರ್ಗದರ್ಶಕರಾಗಿದ್ದಾರೆ. ಬೈಂದೂರು ವಿಧಾನಸಭಾ ಕ್ಷೇತ್ರವು ಶಿವಮೊಗ್ಗ ಜಿಲ್ಲೆಯ ನಿಕಟ ಸಂಪರ್ಕ ಹೊಂದಿದ್ದು, ಶಿವಮೊಗ್ಗ ಲೋಕಸಭಾ ವ್ಯಾಪ್ತಿಯಲ್ಲಿ ಬರುವುದರಿಂದ ಈ ಭಾಗದ ಜನರೊಂದಿಗೆ ಅವರಿಗೆ ಮತ್ತು ಅವರ ಪುತ್ರರಾದ ಸಂಸದ ಬಿ.ವೈ. ರಾಘವೇಂದ್ರ ಅವರಿಗೆ ಒಂದು ಅವಿನಾಭಾವ ಸಂಬಂಧವಿದೆ. ಒಂದು ಕಾಲದಲ್ಲಿ ಅಭಿವೃದ್ಧಿಯಿಂದ ವಂಚಿತವಾಗಿದ್ದ ಬೈಂದೂರು ಕ್ಷೇತ್ರವು, ಇಂದು ಇವರ ದೂರದೃಷ್ಟಿಯಿಂದ ಹಲವು ಅಭಿವೃದ್ಧಿ ಯೋಜನೆಗಳನ್ನು ಪಡೆದಿದೆ.

ಬಿಎಸ್‌ವೈ ಹಾಗೂ ಬೈಂದೂರು ನಂಟು

ಸಮಸ್ತ ಬೈಂದೂರು ಕ್ಷೇತ್ರದ ಅಭಿವೃದ್ಧಿಯ ವಿಷಯದಲ್ಲಿ ಯಡಿಯೂರಪ್ಪನವರು ತೋರಿರುವ ಕಾಳಜಿ ಸ್ತುತ್ಯರ್ಹ. ಅವರು ಪ್ರತಿ ಬಾರಿಯೂ ಕ್ಷೇತ್ರದ ಜನರ ಕ್ಷೇಮ ಸಮಾಚಾರ ಮತ್ತು ಇಲ್ಲಿನ ಪ್ರಗತಿ ಕಾರ್ಯಗಳ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಾರೆ. ಅವರ ಕಾರ್ಯದಕ್ಷತೆ, ಶಿಸ್ತು ಮತ್ತು ಸಾಮಾನ್ಯ ಜನರ ಬದುಕನ್ನು ಹಸನು ಮಾಡುವ ಅವರ ಛಲವು ಸಾರ್ವಜನಿಕ ಜೀವನದಲ್ಲಿರುವವರಿಗೆ ಮಾದರಿಯಾಗಿದೆ. ಸಂಸದ ಬಿ.ವೈ. ರಾಘವೇಂದ್ರ ಅವರು ಸಹ ಬಿಎಸ್‌ವೈ ಅವರ ಮಾರ್ಗದರ್ಶನದಲ್ಲಿ ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ನಾಯಕತ್ವದ ಜೋಡಿಯು ಕ್ಷೇತ್ರದ ಅಭಿವೃದ್ಧಿಗೆ ಹೊಸ ಆಯಾಮವನ್ನು ನೀಡಿದೆ ಎಂಬುದು ಸಾರ್ವಜನಿಕ ವಲಯದ ಅಭಿಪ್ರಾಯವಾಗಿದೆ.

ಬೈಂದೂರಿನ ಆರ್ಥಿಕತೆಯ ಬೆನ್ನೆಲುಬು ನಮ್ಮ ಮೀನುಗಾರರು. ಬಿಎಸ್‌ವೈ ಅವರು ಮುಖ್ಯಮಂತ್ರಿಯಾಗಿದ್ದಾಗ ಮತ್ತು ರಾಘವೇಂದ್ರ ಅವರು ಸಂಸದರಾಗಿ ನಮ್ಮ ಮೀನುಗಾರರಿಗೆ ಅಗಾಧ ಕೊಡುಗೆಗಳನ್ನು ನೀಡಿದ್ದಾರೆ. ಯಾಂತ್ರೀಕೃತ ದೋಣಿಗಳಿಗೆ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮನ್ನಾ ಮಾಡಿ, ನೇರವಾಗಿ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸುವ ಮೂಲಕ ಮೀನುಗಾರರ ಹೊರೆ ಕಡಿಮೆ ಮಾಡಿದ್ದಾರೆ. ಮರವಂತೆಯಲ್ಲಿ ಹೊರಬಂದರು, ಕೊಡೇರಿಯಲ್ಲಿ ಕಿರು ಬಂದರು ಮತ್ತು ಗಂಗೊಳ್ಳಿ ಜೆಟ್ಟಿ ಅಭಿವೃದ್ಧಿಗೆ ಅವರ ಕೊಡುಗೆ ಅಪಾರ.

ಬೈಂದೂರಿನಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 'ಸೀ ಫುಡ್ ಪಾರ್ಕ್' ನಿರ್ಮಿಸಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಇದು ನಮ್ಮ ಮೀನುಗಾರರಿಗೆ ಹೆಚ್ಚಿನ ಆದಾಯ ತಂದು ಕೊಡಲಿದೆ. ಕೋವಿಡ್ ಸಮಯದಲ್ಲಿ ಸಂಕಷ್ಟದಲ್ಲಿದ್ದ 26,414 ಮೀನುಗಾರರಿಗೆ ತಲಾ 3,000 ರೂ. ನಂತೆ ಪರಿಹಾರ ನೀಡಿದ್ದು ಅವರ ಮಾನವೀಯತೆಗೆ ಸಾಕ್ಷಿ.

ಬೈಂದೂರು ಕ್ಷೇತ್ರದ ಬಹುದೊಡ್ಡ ಸಮಸ್ಯೆ ಕುಡಿಯುವ ನೀರಾಗಿತ್ತು. ಇದನ್ನು ಮನಗಂಡ ರಾಘವೇಂದ್ರ ಅವರು ಮತ್ತು ಬಿಎಸ್‌ವೈ ಅವರು ಜಲಜೀವನ್ ಮಿಷನ್ ಮತ್ತು ನಬಾರ್ಡ್ ಅಡಿಯಲ್ಲಿ ಬರೋಬ್ಬರಿ 784.60 ಕೋಟಿ ರೂ. ವೆಚ್ಚದ ಬೃಹತ್ ಯೋಜನೆಯನ್ನು ತಂದಿದ್ದಾರೆ. ಹೊಸಂಗಡಿ ಮತ್ತು ಗುಲ್ವಾಡಿಯಲ್ಲಿ ನೀರನ್ನು ಶುದ್ಧೀಕರಿಸಿ, ನಮ್ಮ ಕ್ಷೇತ್ರದ 40 ಗ್ರಾಮ ಪಂಚಾಯತ್‌ಗಳ 60 ಸಾವಿರ ಮನೆಗಳಿಗೆ ಶುದ್ಧ ನೀರು ತಲುಪಿಸುವ ಕಾರ್ಯ ನಡೆಯುತ್ತಿದೆ. ಇದು ನಮ್ಮ ತಾಯಂದಿರ ನೀರಿನ ಬವಣೆಯನ್ನು ನೀಗಿಸುವ ಅತೀ ದೊಡ್ಡ ಪುಣ್ಯದ ಕೆಲಸವಾಗಿದೆ.

ಕೃಷಿಕರ ಹಿತ ಕಾಯುವಲ್ಲಿ ಬಿಎಸ್‌ವೈ ಅವರು ಯಾವಾಗಲೂ ಮುಂದು. ಬೈಂದೂರು ಕ್ಷೇತ್ರದಲ್ಲಿ ನೀರಾವರಿಗೆ ನೂರಾರು ಕೋಟಿ ಹಣ ಬಿಡುಗಡೆ ಮಾಡಿದ್ದು, ಸಾವಿರಾರು ಎಕರೆ ಭೂಮಿಗೆ ನೀರುಣಿಸುವ ಕನಸು ನನಸಾಗುತ್ತಿದೆ. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ. ಹೆಮ್ಮಾಡಿಯಿಂದ ಕೊಲ್ಲೂರು ರಸ್ತೆ ನಿರ್ಮಾಣಕ್ಕೆ 20 ಕೋಟಿ ರೂ., ಮತ್ತು ವಿವಿಧ ಮೀನುಗಾರಿಕಾ ರಸ್ತೆಗಳಿಗೆ 12 ಕೋಟಿ ರೂ. ನೀಡಲಾಗಿದೆ. ಸೌಡ–ಶಂಕರನಾರಾಯಣ ನಡುವೆ ಬೃಹತ್ ಸೇತುವೆ ನಿರ್ಮಾಣವಾಗಿರುವುದು ಜನರ ಬಹುಕಾಲದ ಬೇಡಿಕೆಯಾಗಿತ್ತು. ಬೈಂದೂರು ಒಂದು ಪವಿತ್ರ ಭೂಮಿ. ಬಿಎಸ್‌ವೈ ಮತ್ತು ರಾಘವೇಂದ್ರ ಅವರು ನಮ್ಮ ಸಂಸ್ಕೃತಿಯನ್ನು ಉಳಿಸಲು ಅಪಾರ ಶ್ರಮವಹಿಸಿದ್ದಾರೆ. ತಾಯಿ ಮೂಕಾಂಬಿಕೆ ಭಕ್ತರಾಗಿರುವ ಅವರು ಬೈಂದೂರು ಕ್ಷೇತ್ರಕ್ಕೆ ಅವಿನಾಭಾವ ಸಂಬಂಧ ಬೆಳೆಸಿಕೊಂಡಿದ್ದಾರೆ. ಬೈಂದೂರು ಕ್ಷೇತ್ರದ ವಿವಿಧ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ. ಖಾರ್ವಿ, ಕೊಂಕಣ ಖಾರ್ವಿ, ಮರಾಠಿ, ಕುಲಾಲ ಮತ್ತು ಬೋವಿ ಸೇರಿದಂತೆ ವಿವಿಧ ಸಮಾಜದ ಸಮುದಾಯ ಭವನಗಳಿಗೆ 27 ಕೋಟಿ ರೂ. ಅನುದಾನ ನೀಡುವ ಮೂಲಕ ಸಾಮಾಜಿಕ ನ್ಯಾಯ ಎತ್ತಿ ಹಿಡಿದಿದ್ದಾರೆ. ಆಡಳಿತಾತ್ಮಕವಾಗಿಯೂ ಬೈಂದೂರನ್ನು ಅಭಿವೃದ್ಧಿಪಡಿಸುವಲ್ಲಿ ಇವರ ಪಾತ್ರ ದೊಡ್ಡದು. 8 ಕೋಟಿ ರೂ. ವೆಚ್ಚದ ಹೊಸ ತಾಲೂಕು ಆಡಳಿತ ಸೌಧ, ನೂತನ ಅಗ್ನಿಶಾಮಕ ಠಾಣೆ, ನ್ಯಾಯಾಲಯ ಮತ್ತು ಬೈಂದೂರನ್ನು ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೇರಿಸಿದ್ದು ಇವರ ದೂರದೃಷ್ಟಿಯ ಫಲ. ಅಷ್ಟೇ ಅಲ್ಲದೆ ಪ್ರವಾಸೋದ್ಯಮ, ರೈಲು ಸಂಪರ್ಕ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿಯೂ ಕೂಡ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ.

ದಕ್ಷಿಣ ಭಾರತಕ್ಕೆ 'ಬಿಜೆಪಿ ಹೆಬ್ಬಾಗಿಲು' ತೆರೆದ ಶಿಲ್ಪಿ

ಬಿಎಸ್‌ವೈ ಅವರಿಗಿಂತ ಮೊದಲು, ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಕ್ಷದ (ಬಿಜೆಪಿ) ಅಸ್ತಿತ್ವವು ಕೇವಲ ಹೆಸರಿಗಷ್ಟೇ ಇತ್ತು. ಯಡಿಯೂರಪ್ಪನವರ ಅದಮ್ಯ ಉತ್ಸಾಹವೇ ಕರ್ನಾಟಕದಲ್ಲಿ ಪಕ್ಷವನ್ನು ಒಂದು ಬಲಿಷ್ಠ ಶಕ್ತಿಯಾಗಿ ರೂಪಿಸಿ, ಬಿಜೆಪಿಗೆ ದಕ್ಷಿಣ ಭಾರತದ 'ಹೆಬ್ಬಾಗಿಲು' ತೆರೆಯುವಂತೆ ಮಾಡಿತು. ಅವರ ಮುಖ್ಯಮಂತ್ರಿ ಪಟ್ಟವು ಅವರಿಗೆ ಸುಲಭವಾಗಿ ಸಿಕ್ಕಿದ್ದಲ್ಲ; ಇದು 45 ವರ್ಷಗಳ ದೀರ್ಘ ಹೋರಾಟದ ಫಲವಾಗಿದ್ದು, ಅದರಲ್ಲೂ ಹೆಚ್ಚಾಗಿ ಅವರು ಅಧಿಕ ಸಮಯವನ್ನು ವಿರೋಧ ಪಕ್ಷದಲ್ಲೇ ಕಳೆದಿದ್ದರು. ಅವರು ತಳಮಟ್ಟದಿಂದ ಏಕಾಂಗಿಯಾಗಿ ಪಕ್ಷವನ್ನು ಕಟ್ಟಿದರು, ದೂರದ ಹಳ್ಳಿಗಳಿಂದ ನಗರ ಕೇಂದ್ರಗಳವರೆಗೆ ರಾಜ್ಯಾದ್ಯಂತ ದಣಿವರಿಯದ ಪ್ರಯಾಣ ಬೆಳೆಸಿದರು. ಬಿಎಸ್‌ವೈ ಪ್ರತಿ ಮನೆಗೂ ಪಕ್ಷದ ಸಿದ್ಧಾಂತವನ್ನು ತಲುಪಿಸಿದರು, ಕಾರ್ಯಕರ್ತರನ್ನು ಒಗ್ಗೂಡಿಸಿ ಪಕ್ಷವನ್ನು ಅಲ್ಪ ಅಸ್ತಿತ್ವದಿಂದ ಪೂರ್ಣ ಬಹುಮತದವರೆಗೆ ಕೊಂಡೊಯ್ದರು. ಇಂದು, ಅವರ ಹೆಸರು ಕರ್ನಾಟಕದಲ್ಲಿ ಬಿಜೆಪಿಯ ಬೆಳವಣಿಗೆಯೊಂದಿಗೆ ಪರ್ಯಾಯವಾಗಿ ನಿಂತಿದೆ.

ಯಡಿಯೂರಪ್ಪನವರ ಕೆಲಸದ ಶೈಲಿ ಪ್ರೇರಣಾತ್ಮಕವಾಗಿದೆ, ಅದು ಬಸವಣ್ಣನವರ 'ಕಾಯಕವೇ ಕೈಲಾಸ' ತತ್ವದಲ್ಲಿ ಆಳವಾಗಿ ಬೇರೂರಿದೆ. ಸಾರ್ವಜನಿಕ ಸೇವೆಗೆ ಅವರ ಸಮರ್ಪಣೆಯು ಬೆಳಿಗ್ಗೆ 5:00 ಗಂಟೆಗೆ ಪ್ರಾರಂಭವಾಗುತ್ತಿತ್ತು, ಬೆಳಗಿನ ಸಭೆಗಳನ್ನು ನಡೆಸಿ ಸಾಮಾನ್ಯ ಜನರ ಕುಂದುಕೊರತೆಗಳನ್ನು ಪರಿಹರಿಸಲು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು.

ಈ ಸಮರ್ಪಣಾ ಮನೋಭಾವವು ಕೋವಿಡ್–19 ಸಾಂಕ್ರಾಮಿಕ ಸಮಯದಲ್ಲಿ ಸ್ಪಷ್ಟವಾಗಿ ನಾವು ಕಂಡಿದ್ದೇವೆ. ಇಡೀ ಜಗತ್ತು ಭಯಭೀತರಾಗಿದ್ದಾಗ, ಬಿಎಸ್‌ವೈ ಒಬ್ಬ



'ಮೇರು ನಾಯಕ'ನಾಗಿ ಮುಂಚೂಣಿಯಲ್ಲಿ ನಿಂತರು. ಅವರು ಆಸ್ಪತ್ರೆಗಳಿಗೆ ಭೇಟಿ ನೀಡಿದರು, ಆರೋಗ್ಯ ಮೂಲಸೌಕರ್ಯಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಿದರು ಮತ್ತು ಆರೋಗ್ಯ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ತುಂಬಿದರು. 2020ರ ಅಡೆತಡೆಗಳ ನಡುವೆಯೂ ಕರ್ನಾಟಕದ ಆರ್ಥಿಕತೆಯು 5% ಬೆಳವಣಿಗೆಯನ್ನು ಕಾಯ್ದುಕೊಳ್ಳುವಂತೆ ಮಾಡಿದರು. ಅಸಂಘಟಿತ ಕಾರ್ಮಿಕರಿಗೆ ₹1,610 ಕೋಟಿಗಳ ಪರಿಹಾರ ಪ್ಯಾಕೇಜ್ ನೀಡುವ ಜೊತೆಗೆ ಹೊಸ ಕೈಗಾರಿಕಾ ನೀತಿ 2020–25 ಅನ್ನು ಜಾರಿಗೆ ತಂದರು. ಈ ನೀತಿಯು ₹5 ಲಕ್ಷ ಕೋಟಿ ಹೂಡಿಕೆ ಆಕರ್ಷಿಸುವ ಮತ್ತು 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯನ್ನು ಹೊಂದಿತ್ತು.

ಗ್ರಾಮೀಣ ಹೃದಯದ ನಾಯಕ

'ರೈತ ಬಂಧು' ಎಂದೇ ಪ್ರೀತಿಯಿಂದ ಕರೆಯಲ್ಪಡುವ ಯಡಿಯೂರಪ್ಪನವರು ವಿವಿಧ ಸುಧಾರಣೆಗಳ ಮೂಲಕ ಕೃಷಿ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತರಿಗಾಗಿ ಪ್ರತ್ಯೇಕ 'ಕೃಷಿ ಬಜೆಟ್' ಮಂಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರ ಅವಧಿಯಲ್ಲಿ ಒಣ ಭೂಮಿಗೆ ನೀರುಣಿಸುವ ಹಲವು ನೀರಾವರಿ ಯೋಜನೆಗಳಿಗೆ ಕಾಯಕಲ್ಪ ದೊರೆಯಿತು. ಮತ್ತು ಸಾವಿರಾರು ರೈತರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಬೆಳೆ ಸಾಲ ಮನ್ನಾ ಮಾಡಿದರು. ಕೇಂದ್ರದ ಪಿಎಂ–ಕಿಸಾನ್ ಸಮ್ಮಾನ್ ನಿಧಿಗೆ ಪೂರಕವಾಗಿ ರೈತರಿಗೆ ಹೆಚ್ಚುವರಿ ₹4,000 ಸಹಾಯಧನವನ್ನು ಯಡಿಯೂರಪ್ಪನವರು ಘೋಷಿಸಿದರು, ದುರದೃಷ್ಟವಶಾತ್ ಕಾಂಗ್ರೆಸ್ ಸರ್ಕಾರ ಇದನ್ನು ನಿಲ್ಲಿಸಿತು. 2019ರ ಭೀಕರ ಪ್ರವಾಹದ ಸಮಯದಲ್ಲಿ, ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆಯಾಗುವ ಮೊದಲೇ ಅವರು ಸಂತ್ರಸ್ತರಿಗೆ ಮನೆ ನಿರ್ಮಿಸಲು ₹5 ಲಕ್ಷ ಪರಿಹಾರ ಘೋಷಿಸಿದ್ದರು. ಯಾವುದೇ ಆಡಳಿತಾತ್ಮಕ ಸಬೂಬು ನೀಡದೆ ಜನಪರ ಕೆಲಸ ಮಾಡುವುದೇ ಅವರ ವಿಶೇಷಣವಾಗಿದೆ.

ಯಡಿಯೂರಪ್ಪನವರು ಅಶಕ್ತರ ಹಾಗೂ ಹೆಣ್ಣು ಮಕ್ಕಳ ಬಗ್ಗೆ ಆಳವಾದ ಸಹಾನುಭೂತಿ ಹೊಂದಿದ್ದಾರೆ. 'ಭಾಗ್ಯಲಕ್ಷ್ಮಿ' ಯೋಜನೆಯು ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಒಂದು ಯಶಸ್ವಿ ಯೋಜನೆಯಾಗಿತ್ತು. ಹೆಣ್ಣುಮಕ್ಕಳನ್ನು ಭಾರವಾಗಿ ಪರಿಗಣಿಸಬಾರದು ಎನ್ನುವ ಅವರ ದೂರದೃಷ್ಟಿ ಇಂದು ನಮಗೆ ಕಾಣುತ್ತಿದೆ. ಕೇವಲ ತಕ್ಷಣದ ಅಧಿಕಾರ ಪಡೆಯಲು ಅಪ್ರಾಯೋಗಿಕ ಆಮಿಷಗಳನ್ನು ನೀಡದೆ, ಅವರ ಭವಿಷ್ಯಕ್ಕೆ ಭದ್ರ ಬುನಾದಿ ಒದಗಿಸಿದ್ದರು. ಅಷ್ಟೇ ಅಲ್ಲದೇ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಉಚಿತ ಸೈಕಲ್ ವಿತರಣಾ ಯೋಜನೆಯನ್ನು ಆರಂಭಿಸಿದರು.

ಬಸವಣ್ಣನವರ ಸಮಾನತೆಯ ತತ್ವಗಳಲ್ಲಿ ನಂಬಿಕೆಯಿಟ್ಟಿದ್ದ ಅವರು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿದರು. 2008ರಲ್ಲಿ ದೇವದಾಸಿ ಮಹಿಳೆಯರ ಕಷ್ಟಗಳನ್ನು ಕಂಡು ತಕ್ಷಣವೇ ವೇದಿಕೆಯಿಂದಲೇ ಮಾಶಾಸನ ಯೋಜನೆಯನ್ನು ಘೋಷಿಸಿ ಸಾವಿರಾರು ಮಹಿಳೆಯರ ಬದುಕಿಗೆ ಆಸರೆಯಾದರು. ನೇಯ್ಗೆಯವರಿಗೆ ವಿದ್ಯುತ್ ಮಗ್ಗಗಳ ಸಬ್ಸಿಡಿ ಮತ್ತು ಹಿರಿಯ ನಾಗರಿಕರಿಗಾಗಿ 'ಸಂಧ್ಯಾ ಸುರಕ್ಷಾ' ಯೋಜನೆಯನ್ನು ಸಹ ಜಾರಿಗೆ ತಂದರು.

ಕೈಗಾರಿಕಾ ಪುನರುಜ್ಜೀವನದ ಶಿಲ್ಪಿ

ತಮ್ಮ ಮೊದಲ ಪೂರ್ಣಾವಧಿಯ ಅಧಿಕಾರದಲ್ಲಿ, ಯಡಿಯೂರಪ್ಪ ಅವರು ಕರ್ನಾಟಕವನ್ನು ಜಾಗತಿಕ ಬಂಡವಾಳದ ಪ್ರಮುಖ ತಾಣವನ್ನಾಗಿ ಪರಿವರ್ತಿಸಿದರು. 2008–09ರ ಹಣಕಾಸು ವರ್ಷದಲ್ಲಿ 2 ಬಿಲಿಯನ್‌ಗಿಂತಲೂ ಹೆಚ್ಚು ನೇರ ವಿದೇಶಿ ಹೂಡಿಕೆಯನ್ನು ತರುವ ಮೂಲಕ ಕರ್ನಾಟಕವನ್ನು ಭಾರತದಲ್ಲಿ ಮೂರನೇ ಸ್ಥಾನಕ್ಕೆ ಏರಿಸಿದರು. ಅವರ ಹೆಗ್ಗುರುತಾದ ಜಾಗತಿಕ ಹೂಡಿಕೆದಾರರ ಸಮಾವೇಶ 2010 ಒಂದು ಐತಿಹಾಸಿಕ ಘಟ್ಟವಾಗಿದ್ದು, ₹4.5 ಲಕ್ಷ ಕೋಟಿ ಬಂಡವಾಳ ಹೂಡಿಕೆಯ ಭರವಸೆ ಮತ್ತು 8.5 ಲಕ್ಷ ಹೊಸ ಉದ್ಯೋಗಗಳ ಸೃಷ್ಟಿಯ ಗುರಿಯನ್ನು ಹೊಂದಿತ್ತು. ಹಲವು ಕೈಗಾರಿಕಾ ಕಾರಿಡಾರ್ ಹಾಗೂ ಕೈಗಾರಿಕಾ ಕ್ಲಸ್ಟರ್‌ಗಳನ್ನು ಪರಿಚಯಿಸುವ ಮೂಲಕ, ಅವರು ಅಭಿವೃದ್ಧಿಯನ್ನು ವಿಕೇಂದ್ರೀಕರಿಸಲು ಶ್ರಮಿಸಿದರು.

ಬಿ.ಎಸ್. ಯಡಿಯೂರಪ್ಪ ಅವರ ಕೈಗಾರಿಕಾ ಮತ್ತು ಅಭಿವೃದ್ಧಿ ದೃಷ್ಟಿಕೋನವು ಉತ್ತರ ಕರ್ನಾಟಕದ ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ಉದ್ದೇಶವನ್ನು ಕೂಡ ಹೊಂದಿತ್ತು. ಬೆಳಗಾವಿಯಲ್ಲಿ ಸುವರ್ಣ ವಿಧಾನ ಸೌಧ ನಿರ್ಮಿಸುವ ಮೂಲಕ ರಾಜಕೀಯ ಶಕ್ತಿಯನ್ನು ವಿಕೇಂದ್ರೀಕರಿಸಿದರು, ಇದು ಉತ್ತರ ಕರ್ನಾಟಕದ ಅಭಿವೃದ್ಧಿ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ನೀಡಲು ನೆರವಾಯಿತು. ಕೇವಲ ಆಡಳಿತಕ್ಕಷ್ಟೇ ಸೀಮಿತವಾಗದೆ, ಬೆಳಗಾವಿಯಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಮತ್ತು ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಸ್ಥಳೀಯ ಉದ್ಯೋಗ ಮತ್ತು ಜ್ಞಾನಾಧಾರಿತ ಆರ್ಥಿಕತೆಗೆ ನಾಂದಿ ಹಾಡಿದರು.

ಬಿ.ಎಸ್. ಯಡಿಯೂರಪ್ಪ ಅವರ 50 ವರ್ಷಗಳ ಸಾರ್ವಜನಿಕ ಜೀವನವು ಜನಸಾಮಾನ್ಯರ ನಾಯಕತ್ವ, ಸಹಾನುಭೂತಿ ಮತ್ತು ಅಭಿವೃದ್ಧಿ ರಾಜಕಾರಣದ ದಾರಿದೀಪವಾಗಿದೆ. ವಿಧಾನ ಸೌಧದಿಂದ ಹಳ್ಳಿಯ ಮೂಲೆಗಳವರೆಗೆ ಸೇತುವೆಯಾಗಿ ಕೆಲಸ ಮಾಡಿದ ಅವರು, ಆಧುನಿಕ ಕರ್ನಾಟಕವನ್ನು ರೂಪಿಸುವಲ್ಲಿ ಅಮೋಘ ಕೊಡುಗೆ ನೀಡಿದ್ದಾರೆ. ಯಡಿಯೂರಪ್ಪನವರು ಯಾವಾಗಲೂ 'ಜನನಾಯಕ'ನಾಗಿಯೇ ನೆನಪಿನಲ್ಲಿ ಉಳಿಯುತ್ತಾರೆ.

ಪ್ರಸ್ತುತ

ಸಿದ್ದಣ್ಣ ಮೇಳಕುಂದಾ

ಆಧುನಿಕ ನಾಗರಿಕತೆಯ ಡಿಜಿಟಲ್ ವಿಷ ಇ–ತ್ಯಾಜ್ಯ

ಇದು ಮಾಹಿತಿ ತಂತ್ರಜ್ಞಾನದ ಯುಗ. ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ನಾವು ಒಂದಲ್ಲ ಒಂದು ಎಲೆಕ್ಟ್ರಾನಿಕ್ ಸಾಧನ ಬಳಸುತ್ತೇವೆ. ಅದು ನಮ್ಮ ಅನಿವಾರ್ಯತೆ ಕೂಡ ಹೌದು. ಸ್ಮಾರ್ಟ್‌ಫೋನ್‌ಗಳು, ಲ್ಯಾಪ್ಟಾಪ್‌ಗಳು, ಸ್ಮಾರ್ಟ್‌ವಾಚ್‌ಗಳಿಂದ ಹಿಡಿದು ಮನೆಯಲ್ಲಿರುವ ಫ್ರಿಡ್ಜ್, ವಾಷಿಂಗ್ ಮಷಿನ್‌ಗಳವರೆಗೆ ತಂತ್ರಜ್ಞಾನ ಎಂಬುದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಪರಿವರ್ತನೆ ಹೊಂದಿದೆ. ತಂತ್ರಜ್ಞಾನದ ಬಳಕೆ ನಮ್ಮ ಕೆಲಸವನ್ನು

ಸುಲಭ ಹಾಗೂ ವೇಗ ಮಾಡಲು ಸಹಕಾರಿಯಾಗಿದೆ. ಇದರ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಅಭಿವೃದ್ಧಿಯತ್ತ ಸಾಗುವ ಕೆಲಸ ಮಾಡುವುದು ಅಗತ್ಯ. ಆದರೆ, ಈ ತಾಂತ್ರಿಕ ಕ್ರಾಂತಿಯ ಹಿಂದೆ ಒಂದು ಕರಾಳ ಮುಖವಿದೆ, ಅದೇ 'ಇ–ತ್ಯಾಜ್ಯ' ಅಥವಾ 'ಎಲೆಕ್ಟ್ರಾನಿಕ್ ತ್ಯಾಜ್ಯ'. ಇದು 21ನೇ ಶತಮಾನದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪರಿಸರ ಸಮಸ್ಯೆಯಾಗಿ ಜಗತ್ತನ್ನು ಕಾಡುತ್ತಿದೆ. ಈ ಸಮಸ್ಯೆ ಉಲ್ಬಣವಾಗದಂತೆ, ಮನುಷ್ಯನ ಜೀವನದ ಮೇಲೆ ದುಷ್ಪರಿಣಾಮ ಬೀರದಂತೆ ನಿರ್ವಹಣೆ ಮಾಡುವ ಅವಶ್ಯಕತೆ ಇದೆ.

ಇ–ತ್ಯಾಜ್ಯ ಎಂದರೆ, ಬಳಸದ, ಕೆಟ್ಟುಹೋದ ಅಥವಾ ಹಳೆಯದಾದ ಎಲೆಕ್ಟ್ರಾನಿಕ್ ಮತ್ತು ವಿದ್ಯುತ್ ಉಪಕರಣಗಳೇ 'ಇ–ತ್ಯಾಜ್ಯ'. ಇದರಲ್ಲಿ ಕೇವಲ ಕಂಪ್ಯೂಟರ್‌ಮತ್ತು ಮೊಬೈಲ್‌ಗಳಷ್ಟೇ ಅಲ್ಲದೆ, ಗೃಹೋಪಯೋಗಿ ವಸ್ತುಗಳಾದ ಟಿವಿ, ಮೈಕ್ರೋ ವೇವ್ ಓವನ್, ಎಸಿ, ವಿದ್ಯುತ್ ಆಟಿಕೆಗಳು ಮತ್ತು ಬ್ಯಾಟರಿಗಳು ಕೂಡ ಸೇರುತ್ತವೆ. ತಂತ್ರಜ್ಞಾನದ ಅತಿ ವೇಗದ ಬದಲಾವಣೆಯಿಂದಾಗಿ ಪ್ರತಿ ವರ್ಷ ಹೊಸ ಮಾದರಿಯ ಸಾಧನಗಳು ಮಾರುಕಟ್ಟೆಗೆ ಬರುತ್ತಿವೆ. ಇದು ಜನರು ಹಳೆಯ ಸಾಧನಗಳನ್ನು ಸುಸ್ಥಿತಿಯಲ್ಲಿದ್ದರೂ ಬಿಸಾಡಿ ಹೊಸತನ್ನು ಖರೀದಿಸಲು ಪ್ರೇರೇಪಿಸುತ್ತಿದೆ. ಇದರಿಂದ ಇ–ತ್ಯಾಜ್ಯದ ಪ್ರಮಾಣ ಬೆಟ್ಟದಂತೆ ಬೆಳೆಯುತ್ತಿದೆ. ಇ–ತ್ಯಾಜ್ಯವು ಸಾಮಾನ್ಯ ಕಸದಂತಲ್ಲ. ಇದರಲ್ಲಿ ಪರಿಸರಕ್ಕೆ ಮಾರಕವಾದ ಸೀಸ (Lead), ಪಾದರಸ (mercury), ಕ್ಯಾಡ್ಮಿಯಂ, ಬೆರಿಲಿಯಂ ಮತ್ತು ಬ್ರೋಮಿನೇಟೆಡ್ ಫ್ಲೇಮ್ ರಿಟಾರ್ಡೆಂಟ್‌ಗಳಂತಹ ಸುಮಾರು ಸಾವಿರಕ್ಕೂ ಹೆಚ್ಚು ವಿಷಕಾರಿ ರಾಸಾಯನಿಕಗಳಿವೆ. ಇವುಗಳು ಗಂಭೀರ ಪರಿಣಾಮ ಉಂಟು ಮಾಡುತ್ತವೆ.

ಮಣ್ಣಿನ ಮಾಲಿನ್ಯ: ಇ–ತ್ಯಾಜ್ಯವನ್ನು ಹೂತುಹಾಕುವುದರಿಂದ ಅದರಲ್ಲಿರುವ ವಿಷಕಾರಿ ಲೋಹಗಳು ಮಣ್ಣನ್ನು ಸೇರುತ್ತವೆ. ಇದರಿಂದ ಮಣ್ಣಿನ ಫಲವತ್ತತೆ ನಾಶವಾಗುವುದಲ್ಲದೆ, ಕೃಷಿ ಉತ್ಪನ್ನಗಳ ಮೂಲಕ ವಿಷವು ಮನುಷ್ಯನ ದೇಹಕ್ಕೆ ಸೇರುತ್ತದೆ. ಜಲ ಮಾಲಿನ್ಯ: ಮಳೆ ಬಂದಾಗ ಈ ತ್ಯಾಜ್ಯಗಳಿಂದ ಸೋರುವ ವಿಷಕಾರಿ ರಾಸಾಯನಿಕಗಳು ಅಂತರ್ಜಲ ಮತ್ತು ಹತ್ತಿರದ ಕೆರೆ–ನದಿಗಳನ್ನು ಸೇರುತ್ತವೆ. ಇದು ಜಲಚರಗಳ ಸಾವಿಗೆ ಮತ್ತು ಕುಡಿಯುವ ನೀರಿನ ಮಾಲಿನ್ಯಕ್ಕೆ ಕಾರಣವಾಗುತ್ತದೆ.

ವಾಯು ಮಾಲಿನ್ಯ: ಇ–ತ್ಯಾಜ್ಯದಿಂದ ಅಮೂಲ್ಯ ಲೋಹ ಗಳನ್ನು (ಚಿನ್ನ, ತಾಮ್ರ) ಹೊರತೆಗೆಯಲು ಇವುಗಳನ್ನು ಸುಡಲಾ ಗುತ್ತದೆ. ಈ ಸಂದರ್ಭದಲ್ಲಿ ಬಿಡುಗಡೆಯಾಗುವ ಡಯಾಕ್ಸಿನ್ ಮತ್ತು ಫ್ಯೂರಾನ್‌ಗಳಂತಹ ವಿಷಕಾರಿ ಹೊಗೆ ಗಾಳಿಯನ್ನು ಕಲುಷಿತಗೊಳಿಸಿ ಓಝೋನ್ ಪದರಕ್ಕೆ ಹಾನಿ ಮಾಡುತ್ತದೆ.

ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು: ಇ–ತ್ಯಾಜ್ಯದ ನೇರ ಸಂಪರ್ಕವು ಮನುಷ್ಯನ ಆರೋಗ್ಯದ ಮೇಲೆ ಘೋರ ಪರಿಣಾಮ ಬೀರುತ್ತದೆ. ಸೀಸವು ನರಮಂಡಲದ ಮೇಲೆ ಪರಿಣಾಮ ಬೀರಿದರೆ, ಪಾದರಸವು ಮಿದುಳಿನ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಮಕ್ಕಳು ಮತ್ತು ಗರ್ಭಿಣಿಯರು ಇದರ ಪ್ರಭಾವಕ್ಕೆ ಒಳಗಾದರೆ ಹುಟ್ಟುವ ಮಕ್ಕಳಲ್ಲಿ ವಿಕಲಚೇತನತೆ ಮತ್ತು ಬೆಳವಣಿಗೆಯ ಕುಂಠಿತವಾಗಬಹುದು. ದೀರ್ಘಕಾಲದವರೆಗೆ ಇವುಗಳ ಸಂಪರ್ಕದಲ್ಲಿದ್ದರೆ ಕ್ಯಾನ್ಸರ್,ಶ್ವಾಸಕೋಶದ ಕಾಯಿಲೆ ಮತ್ತು ಮೂತ್ರಪಿಂಡಗಳ ವೈಫಲ್ಯದ ಸಂಭವ ಹೆಚ್ಚಿರುತ್ತದೆ.

ಆರ್ಥಿಕ ನಷ್ಟ ಮತ್ತು ಅವಕಾಶ: ಇ–ತ್ಯಾಜ್ಯವು ಕೇವಲ ವಿಷವಲ್ಲ, ಅದೊಂದು 'ಗಣಿ'ಯೂ ಹೌದು. ಒಂದು ಟನ್ ಇ–ತ್ಯಾಜ್ಯದಿಂದ ಸುಮಾರು 17ಪಟ್ಟು ಹೆಚ್ಚು ಚಿನ್ನವನ್ನು ಪಡೆಯಬಹುದು ಎಂದು ಸಂಶೋಧನೆಗಳು ತಿಳಿಸಿವೆ. ಇದರಲ್ಲಿ ಬೆಳ್ಳಿ, ತಾಮ್ರ, ಪ್ಲಾಟಿನಂ ಮತ್ತು ಪ್ಯಾಲೇಡಿಯಂನಂತಹ ಬೆಲೆಬಾಳುವ ಲೋಹಗಳಿರುತ್ತವೆ. ಆದರೆ, ಭಾರತದಂತಹ ದೇಶಗಳಲ್ಲಿ ಶೇ.90ಕ್ಕಿಂತ ಹೆಚ್ಚು ಇ–ತ್ಯಾಜ್ಯವು ಅಸಂಘಟಿತ ವಲಯದಲ್ಲಿ ಅಂದರೆ ಗುಜರಿ ಅಂಗಡಿಗಳಲ್ಲಿ ವೈಜ್ಞಾನಿಕವಲ್ಲದ ರೀತಿಯಲ್ಲಿ ಸಂಸ್ಕರಿಸಲ್ಪಡುತ್ತಿದೆ. ಇದರಿಂದ ಅಮೂಲ್ಯ ಲೋಹಗಳು ವ್ಯರ್ಥವಾಗುವುದಲ್ಲದೆ ಕಾರ್ಮಿಕರ ಜೀವಕ್ಕೂ ಅಪಾಯವಾಗುತ್ತಿದೆ.

(ಲೇಖಕರು: ಶಿಕ್ಷಕರು, ಕಲಬುರಗಿ)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಪಕ್ಷಿ ವಲಸೆಯ ವಿಸ್ಮಯ

ವಿಶ್ವದ ಅತೀ ದೂರದ ವಲಸೆ ಹಕ್ಕಿ ಅಪಾಪಂಗ್ 4750 ಕಿ.ಮೀ. ದೂರವನ್ನು 95 ಗಂಟೆಗಳಲ್ಲಿ ಕ್ರಮಿಸಿರುವುದು ನಿಜಕ್ಕೂ ಸೋಜಿಗದ ಸಂಗತಿ. ಕೇವಲ 150 ಗ್ರಾಂ ತೂಕದ ಅತೀ ಪುಟ್ಟಹಕ್ಕಿ ಸೋಮಾಲಿಯದಿಂದ ಭಾರತಕ್ಕೆ ಕೇವಲ ದಿನಗಳಲ್ಲಿ ಆಗಮಿಸಿದೆ. ಇದು ಪಕ್ಷಿಪ್ರಪಂಚದ ಹಾಗು ವಿಜ್ಞಾನಿಗಳ ಪಾಲಿನ ವಿಸ್ಮಯ. ಚಳಿಗಾಲದ ಮಹಾವಲಸೆಗೆ ತೆರೆದುಕೊಳ್ಳುವ ಈ ಬೇಟೆಗಾರ ಪಕ್ಷಿ ಗಿಡುಗ ಜಾತಿಗೆ ಸೇರಿದೆ. ಪಕ್ಷಿ ಪ್ರಪಂಚದ ಈ ವಿಸ್ಮಯ ಹೊಸ ಸಂಶೋಧನೆಗಳಿಗೆ ದಾರಿ ಮಾಡಿ ಕೊಟ್ಟಿದೆ. ಕಾರವಾರದ ಸುತ್ತಮುತ್ತ ಹೆಚ್ಚಾಗಿ ಕಾಣಿಸುತ್ತಿರುವ ಈ ಪಕ್ಷಿಯನ್ನು ಸಮೀಪದಿಂದ ಗಮನಿಸುವ ಅದೃಷ್ಟ ಕಾರವಾರದ ಪಕ್ಷಿಪ್ರೇಮಿಗಳಿಗೆ ದೊರಕುತ್ತಿರುವುದು ನಿಜಕ್ಕೂ ಖುಷಿಯ ವಿಷಯ.

– ರಾ. ರಾಮಾರಾಧ್ಯ, ಮೈಸೂರು

ಸೌಜನ್ಯ ಕಲಿಯೋಣ

ಬೆಂಗಳೂರಿನ ವಸತಿ ಸಮುಚ್ಚಯವೊಂದರ ನಿವಾಸಿಯಾಗಿರುವ ನನ್ನ ಮಗನ ಮನೆಗೆ ಮೊನ್ನೆ ದಿನ ಕೇಂದ್ರ ಸರ್ಕಾರದ ವತಿಯಿಂದ ನಡೆಯುತ್ತಿರುವ ಜನಗಣತಿ ಮಾಹಿತಿ ಸಂಗ್ರಹಕ್ಕೆ ಉಪನ್ಯಾಸಕಿ ಒಬ್ಬರು ಬಂದಿದ್ದರು. ಒಳಗೆ ಬರಲು ಸಂಕೋಚಗೊಂಡ ಅವರನ್ನು ಮನೆ ಒಳಗೆ ಕರೆದು ಮಾಹಿತಿ ಸಂಗ್ರಹಣೆ ಕೆಲಸ ಮುಗಿದ ಮೇಲೆ ಸಂಜೆಯ ಟೀ ಸಮಯ ಆದ್ದರಿಂದ ಚಹಾ ಬಿಸ್ಕೆಟ್ ಕೊಟ್ಟೆವು. ದಣಿದ ಅವರ ಮುಖದಲ್ಲಿ ನಮ್ಮ ಅತ್ಯಂತ ಕಿರು ಆತಿಥ್ಯ ಧನ್ಯತಾಭಾವ ಮೂಡಿಸಿತು. ಈಗ ಮನೆ ಬಾಗಿಲು ತೆರೆಯುವುದೇ ಕಷ್ಟ. ನಿಮ್ಮ ಈ ರೀತಿಯ ಸೌಜನ್ಯಪೂರಿತ ಆತಿಥ್ಯ ನಮ್ಮ ನಿಮ್ಮ ಜನರೇಶನ್‌ನವರೆಗೆ ಬಹುಶಃ ಇರಬಹುದೇನೋ. ಈಗಿನ ಮಕ್ಕಳಂತೂ ಮನೆಗೆ ಬಂದ ಅತಿಥಿಗಳನ್ನು ಮಾತನಾಡಿಸುವ ಸಂಸ್ಕಾರವನ್ನು ಕಲಿತಿಲ್ಲ ಎಂದ ಅವರ ಮಾತುಗಳು ನನಗೂ ಸರಿ ಎನಿಸಿತು.

– ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು
ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 293

ಸಮಾಚಾರ ಸಣ್ಣದಲ್ಲ

ಕಚ್ ಕರಾವಳಿಯಲ್ಲಿ ಪಾಕ್ ದೋಣಿ ಪತ್ತೆ

ಜಲಂಧರ್: ಪಂಜಾಬ್ ರಾಜ್ಯದ ಜಲಂಧರ್‌ಮತ್ತು ಅಮೃತಸರದಲ್ಲಿನ ಸೇನೆಯ ಶಿಬಿರಗಳ ಬಳಿ ಸರಣಿ ಬಾಂಬ್ ಸ್ಫೋಟಗಳಾಗಿರುವ ಬೆನ್ನಲ್ಲೇ ಗುಜರಾತ್ ರಾಜ್ಯದ ಕಚ್ ಜಿಲ್ಲೆಯ ಕರಾವಳಿಯಲ್ಲಿ ಪಾಕಿಸ್ತಾನಿ ದೋಣಿ ಪತ್ತೆಯಾಗಿದೆ. ಆದರೆ ದೋಣಿ ನಿರ್ಜನವಾಗಿತ್ತು. ದೋಣಿಯನ್ನು ಪೂರ್ಣ ಶೋಧ ಮಾಡಿದಾಗ ಮೀನುಗಾರಿಕೆ ಉಪಕರಣಗಳಷ್ಟೇ ಕಂಡಿವೆ. ಅನುಮಾನಾಸ್ಪದ ವಸ್ತುಗಳು ಯಾವುದೂ ಪತ್ತೆಯಾಗಿಲ್ಲ. ಪ್ರದೇಶದಲ್ಲಿ ಭದ್ರತೆ ಹೆಚ್ಚಿಸಲಾಗಿದೆ ಮತ್ತು ವಾರಸುದಾರರಿಲ್ಲದ ದೋಣಿ ಬಗ್ಗೆ ತನಿಖೆ ಮುಂದುವರಿದಿದೆ ಎಂದು ಬಿಎಸ್‌ಎಫ್ ಮೂಲಗಳು ತಿಳಿಸಿವೆ.

ಟಿಎಂಸಿ ಕೌನ್ಸಿಲರ್‌ಸೆರೆ

ಕೋಲ್ಕತ್ತ: ಮದ್ದುಗುಂಡುಗಳನ್ನು ಹೊಂದಿದ್ದ ತೃಣ ಮೂಲ ಕಾಂಗ್ರೆಸ್ ಪಕ್ಷದ ಮುನ್ಸಿಪಲ್ ಕೌನ್ಸಿಲರ್ ಅಮೀರುಲ್ ಶೇಖ್ ಇಸ್ಲಾಂ ಎಂಬವರನ್ನು ಕೋಲ್ಕತ್ತದ ವಿಮಾನ ನಿಲ್ದಾಣದಲ್ಲಿ ಮಂಗಳವಾರ ರಾತ್ರಿ ಬಂಧಿಸಲಾಗಿದೆ. ಅಮೀರುಲ್ ಪುಜಲಿ ಪುರಸಭೆ ವಾರ್ಡ್ 14ರ ಸದಸ್ಯರಾಗಿದ್ದಾರೆ. 2025ರ ಸೆಪ್ಟೆಂಬರ್‌21ರಂದು ಶೇಖ್ ಪ್ರಯಾಣದಲ್ಲಿದ್ದಾಗ ಸುಭಾಷ್ ಚಂದ್ರ ಬೋಸ್ ವಿಮಾನ ನಿಲ್ದಾಣದಲ್ಲಿ ಅವರ ಲಗೇಜ್‌ಗಳನ್ನು ತಪಾಸಣೆಗೆ ಒಳಪಡಿಸಿದಾಗ ಮದ್ದುಗುಂಡುಗಳು ಪತ್ತೆಯಾಗಿದ್ದವು. ಆಗ ಆ ಗುಂಡುಗಳು ಲೈಸೆನ್ಸ್ ಹೊಂದಿರುವ ತಮ್ಮ ಪಿಸ್ತೂಲ್‌ಗೆ ಸಂಬಂಧಿಸಿದ್ದಾಗಿದೆ ಎಂದು ಶೇಖ್ ಹೇಳಿದ್ದರು. ಬಳಿಕ ಪಿಸ್ತೂಲ್ ಮತ್ತು ಗುಂಡುಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಹಾಜರುಪಡಿಸುವುದಾಗಿ ಹೇಳಿದ್ದರು. ಆದರೆ, ಈವರೆಗೂ ದಾಖಲೆಗಳನ್ನು ಶೇಖ್ ಹಾಜರುಪಡಿಸದ ಕಾರಣ ಅವರನ್ನು ಮಂಗಳವಾರ ರಾತ್ರಿ ಬಂಧಿಸಲಾಗಿದೆ ಎಂದು ಕೋಲ್ಕತ್ತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶೇ.11ರಷ್ಟು ಕುಸಿದ ಕಚ್ಚಾತೈಲ ಧಾರಣೆ

ದೆಹಲಿ: ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಬುಧವಾರದ ಫ್ಯೂಚರ್ಸ್ ವಹಿವಾಟಿನಲ್ಲಿ ಶೇ.11ರಷ್ಟು ಕುಸಿತ ಕಂಡು ಬ್ಯಾರೆಲ್‌ಗೆ 8,588 ರು.ಗೆ ತಲುಪಿದೆ. ಅಮೆರಿಕ-ಇರಾನ್ ನಡುವಿನ ಯುದ್ಧ ಕೊನೆಗೊಳ್ಳುವ ಕುರಿತ ಮಾತುಕತೆಯಲ್ಲಿ ಪ್ರಗತಿ ಯಾಗುವ ಲಕ್ಷಣಗಳು ಬುಧವಾರ ಕಂಡುಬಂದಿದ್ದರಿಂದ ಮಲ್ಟಿ ಕಮಾಡಿಟಿ ಎಕ್ಸ್‌ಚೇಂಜ್‌ನಲ್ಲಿ ಮೇ ತಿಂಗಳ ವಿತರಣೆಯ ಕಚ್ಚಾತೈಲ ಪ್ರತಿ ಬ್ಯಾರೆಲ್‌ಗೆ 1,110 ರು.(ಶೇ. 11.45)ಗಳಷ್ಟು ಇಳಿಕೆ ಕಂಡಿದೆ. ಬ್ಯಾರೆಲ್ ಧಾರಣೆ 8,588 ರು.ಗೆ ತಲುಪಿದೆ. ನ್ ಗೆ ಸರಬರಾಜಾಗುವ 4,274 ಲಾಟ್ಗಳಲ್ಲಿ ಬ್ಯಾರೆಲ್ಗೆ 1,098 ರು.ಗಳಷ್ಟು (ಶೇ. 11.69) ಧಾರಣೆ ಕುಸಿದಿದ್ದು ಬ್ಯಾರೆಲ್‌ಗೆ 8,298 ರು.ಗೆ ತಲುಪಿದೆ.

ಅಸ್ಸಾಂ ಸಿಎಂ ಸ್ಥಾನಕ್ಕೆ ಬಿಸ್ವಾ ರಾಜೀನಾಮೆ

ಗುವಾಹಟಿ: ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎ ಪಕ್ಷ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಸಂಪುಟ ಸಚಿವರೊಂದಿಗೆ ಬುಧವಾರ ಲೋಕಭವನದಲ್ಲಿ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ. ರಾಜ್ಯಪಾಲರು ಶರ್ಮಾ ಹಾಗೂ ಸಂಪುಟ ಸಚಿವರ ರಾಜೀನಾಮೆಯನ್ನು ಅಂಗೀಕರಿಸಿದ್ದು, ವಿಧಾನಸಭೆಯನ್ನು ವಿಸರ್ಜಿಸಿದ್ದಾರೆ. ಹೊಸ ಸರ್ಕಾರ ರಚನೆಯಾಗುವವರೆಗೆ ಅಧಿಕಾರದಲ್ಲಿ ಮುಂದುವರಿಯುವಂತೆ ರಾಜ್ಯಪಾಲರು ಹಿಮಂತ ಬಿಸ್ವಾ ಶರ್ಮಾ ಅವರಿಗೆ ಸೂಚಿಸಿದ್ದಾರೆ ಎಂದು ಲೋಕಭವನ ಪ್ರಕಟಣೆಯಲ್ಲಿ ತಿಳಿಸಿದೆ. ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 12ರಂದು ನಡೆಯುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. ಶರ್ಮಾ ಅವರೇ ಎರಡನೇ ಬಾರಿಗೆ ಸಿಎಂ ಆಗಿ ಪ್ರಮಾಣಚನ ಸ್ವೀಕರಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಾಲಕಿ ಮೇಲೆ ದೌರ್ಜನ್ಯ ಟಿವಿಕೆ ಸದಸ್ಯನ ಬಂಧನ

ಚೆನ್ನೈ: 10 ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ವಿಜಯ್ ಅವರ ತಮಿಳಗ ವೆಟ್ರಿ ಕಳಗ ಪಕ್ಷದ ಕಾರ್ಯಕರ್ತನನ್ನು ಬಂಧಿಸಲಾಗಿದೆ ಎಂದು ಚೆನ್ನೈ ಪೊಲೀಸರು ತಿಳಿಸಿದ್ದಾರೆ. ಸಂತ್ರಸ್ತೆಯ ಕುಟುಂಬವು ಈ ವಾರದ ಆರಂಭದಲ್ಲಿ ದೂರು ದಾಖಲಿಸಿದ ನಂತರ ಆರೋಪಿ ದಿನೇಶ್ ಆಲಿಯಾಸ್ ಪಂಬು ದಿನೇಶ್ ಅವರನ್ನು ವಶಕ್ಕೆ ಪಡೆಯಲಾಗಿದೆ. ಅಧಿಕಾರಿಗಳ ಪ್ರಕಾರ, ಕೆಲವು ದಿನಗಳ ಹಿಂದೆ ಮೈಲಾಪುರ ನಿವಾಸಿ, 10 ವರ್ಷದ ಬಾಲಕಿ ಆರ್.ಕೆ. ನಗರ ಕ್ಷೇತ್ರದ ಕಾಸಿ ಮೇಡು ಸಿಂಗಾರವೇಲನ್ ನಗರದಲ್ಲಿರುವ ಸಂಬಂಧಿಕರ ಮನೆಗೆ ಭೇಟಿ ನೀಡಿದಾಗ ಈ ಘಟನೆ ನಡೆದಿದೆ. ಮಗು ಹೊರಗೆ ಆಟವಾಡುತ್ತಿದ್ದಾಗ ಅದೇ ಪ್ರದೇಶದಲ್ಲಿ ವಾಸಿಸುವ ಆರೋಪಿ ಆಕೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದಾನೆ ಎಂದು ಆರೋಪಿಸಲಾಗಿದೆ.

{ ರಾಹುಲ್ ಗಾಂಧಿ } ಪ್ರತಿಪಕ್ಷ ನಾಯಕ

ಲೋಕಸಭೆಯ ಪ್ರತಿ 6ರಲ್ಲೊಬ್ಬ ಬಿಜೆಪಿ ಸಂಸದ ಮತ ಕಳವು ಮೂಲಕವೇ ಗೆಲುವು ಸಾಧಿಸಿದ್ದಾರೆ. ಬಿಜೆಪಿ ಭಾಷೆಯಲ್ಲೇ ಹೇಳುವುದಾದರೆ ಅಂತಹವರನ್ನು ನುಸುಳುಕೋರರು ಎನ್ನಬಹುದು. ನ್ಯಾಯಸಮ್ಮತ ಚುನಾವಣೆ ನಡೆದರೆ ಲೋಕಸಭೆಯಲ್ಲಿ ಬಿಜೆಪಿಗೆ 140 ಸದಸ್ಯರೂ ಇರುತ್ತಿರಲಿಲ್ಲ. ಮತ ಕಳವು ಮಾರ್ಗ ಇಡೀ ಸರಕಾರವನ್ನೇ ಕಳವು ಮಾಡಬಹುದು.

ಜಲಂಧರ್‌ನ ಬಿಎಸ್‌ಎಫ್ ಚೌಕ್ ಬಳಿ ರಾತ್ರಿ 8ಕ್ಕೆ ಸ್ಫೋಟಿಸಿದ ಸ್ಕೂಟರ್ | 300 ಮೀ.ವರೆಗೂ ಸ್ಫೋಟದ ತೀವ್ರತೆ, ಕಾರು, ಮನೆ ಗಾಜು ಛಿದ್ರ | ಕೊರಿಯರ್ ಬಾಯ್‌ಗೆ ಗಾಯ | ಅಮೃತಸರ ಸೇನಾ ಶಿಬಿರ ಬಳಿ ರಾತ್ರಿ 10.50ಕ್ಕೆ ಸ್ಫೋಟ | ಸೇನೆ ಶಿಬಿರದತ್ತ ಸ್ಫೋಟಕ ಎಸೆದ ಮೋಟಾರ್‌ಬೈಕ್ ಮುಸುಕುಧಾರಿಗಳು

ಪಂಜಾಬ್ ಸೇನೆ ಶಿಬಿರ ಬಳಿ 2 ಸರಣಿ ಸ್ಫೋಟ

ಜಲಂಧರ್: ಪಾಕಿಸ್ತಾನದ ಗಡಿಗೆ ಕೆಲವೇ ಕಿ.ಮೀ ದೂರವಿರುವ ಪಂಜಾಬ್‌ನ ಜಲಂಧರ್ ಮತ್ತು ಅಮೃತಸರದಲ್ಲಿ ಸೇನೆಗೆ ಸೇರಿದ 2 ಸ್ಥಳಗಳಲ್ಲಿ ಸ್ಫೋಟ ಸಂಭವಿಸಿದ್ದು ವಿಧ್ವಂಸಕ ಕೃತ್ಯದ ಶಂಕೆ ವ್ಯಕ್ತವಾಗಿದೆ. ಮಂಗಳವಾರ ರಾತ್ರಿ ಎರಡೂ ಮುಕ್ಕಾಲು ಗಂಟೆಗಳ ಅಂತರದಲ್ಲಿ ತೀವ್ರ ಸ್ವರೂಪದ ಅವಳಿ ಸ್ಫೋಟ ಸಂಭವಿಸಿದೆ. ಒಂದು ಘಟನೆಯಲ್ಲಿ ಹೋಂಡಾ ಆಕ್ಟಿವಾ ಸ್ಕೂಟರ್ ಸ್ಫೋಟಿಸಿದ್ದರೆ, ಮತ್ತೊಂದು ಸ್ಥಳದಲ್ಲಿ ಮೋಟಾರ್‌ಬೈಕ್‌ನಲ್ಲಿ ಬಂದ ಮುಸುಕುಧಾರಿಗಳು ಸೇನಾ ಶಿಬಿರದತ್ತ ಸ್ಫೋಟಕವನ್ನು ಎಸೆದಿದ್ದಾರೆ.

ಎರಡೂ ಘಟನೆಗಳಲ್ಲಿ ಯಾವುದೇ ಜೀವಹಾನಿ ಆಗಿಲ್ಲ, ಮೊದಲ ಸ್ಫೋಟ ಘಟನೆಯಲ್ಲಿ ಸ್ಕೂಟರ್ ಸವಾರ ಕೊರಿಯರ್‌ಬಾಯ್ ಗಾಯಗೊಂಡಿದ್ದು, ಆತನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಎರಡೂ ಸ್ಥಳಗಳಿಗೆ ಬಾಂಬ್ ನಿಷ್ಕ್ರಿಯ ದಳ(ಬಿಡಿಎಸ್)ವನ್ನು ಕರೆಸಲಾಗಿದೆ. ವಿಧಿವಿಜ್ಞಾನ ವಿಜ್ಞಾನ ಪ್ರಯೋಗಾಲಯದ ತಂಡ ಸ್ಥಳದಿಂದ ಸ್ಫೋಟದ ಮಾದರಿಗಳು ಮತ್ತು ಪುರಾವೆಗಳನ್ನು ಸಂಗ್ರಹಿಸಿದೆ. ತಂಡದಲ್ಲಿರುವ ತಜ್ಞರು ಸ್ಫೋಟದ ವೈಖರಿ ತಿಳಿಯಲು ತನಿಖೆ ಆರಂಭಿಸಿದ್ದಾರೆ ಎಂದು ಎರಡೂ ಜಿಲ್ಲೆಗಳ ಹಿರಿಯ ಪೊಲೀಸ್ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜಲಂಧರಲ್ಲಿ ಸ್ಕೂಟರ್‌ಸ್ಫೋಟ: ಮಂಗಳವಾರ ರಾತ್ರಿ 8ರ ವೇಳೆ ಮೊದಲ ಸ್ಫೋಟವಾಗಿದೆ. ಜಲಂಧರ್‌ಬಳಿ ಇರುವ ಬಿಎಸ್‌ಎಫ್ ಪ್ರಧಾನ ಕಚೇರಿ ಸಮೀಪ ಬಿಎಸ್‌ಎಫ್ ಚೌಕ್‌ನಲ್ಲಿ ರಸ್ತೆಬದಿ ನಿಲ್ಲಿಸಿದ್ದ ಸ್ಕೂಟರ್ ಒಮ್ಮಿಂದೊಮ್ಮೆಲೇ ದೊಡ್ಡದಾಗಿ ಸ್ಫೋಟಿಸಿ ಪೂರ್ಣ ಸುಟ್ಟು ಹೋಗಿದೆ. ಸ್ಕೂಟರ್‌ಚಲಾಯಿಸಿಕೊಂಡ ಬಂದಿದ್ದ ಕೊರಿಯರ್‌ಬಾಯ್ ಗುರುಪ್ರೀತ್ ಸಿಂಗ್ (22) ಸ್ಫೋಟದಲ್ಲಿ ಗಾಯಗೊಂಡಿದ್ದಾನೆ. ಗುರುಪ್ರೀತ್‌ನನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ನಿಲುಗಡೆಯಾಗದ್ದ ಸ್ಕೂಟರ್ ಪಕ್ಕದಲ್ಲೇ ನಿಂತಿದ್ದ ಗುರುಪ್ರೀತ್ ಸಿಂಗ್ ಸ್ಫೋಟದ ಸ್ಥಳದಿಂದ ಆತಂಕದಿಂದ ಓಡುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಗುರುಪ್ರೀತ್ ವರ್ಷಗಳಿಂದ ಪ್ರತಿದಿನವೂ ಈ ಪ್ರದೇಶಕ್ಕೆ ಕೊರಿಯರ್‌ವಿತರಣೆಗೆ ಬರುತ್ತಿರುತ್ತಾನೆ. ಮಂಗಳವಾರ ರಾತ್ರಿ ಕೊರಿಯರ್ ವಿತರಿಸಿ ಸ್ಕೂಟರ್‌ಬಳಿ ತೆರಳುತ್ತಿದ್ದಾಗಲೇ ಸ್ಕೂಟರ್ ಸ್ಫೋಟಿಸಿದೆ. ಆಗ ಆತ ಗಾಬರಿಗೊಂಡು ಸ್ಕೂಟರ್ ಸಮೀಪದಿಂದ ಓಡಿ ಬಂದಿದ್ದಾನೆ. ಬಳಿಕ ಅವರ ತಂದೆಗೆ ಕರೆ ಮಾಡಿ ಸ್ಕೂಟರ್ ಸ್ಫೋಟವಾದ ಬಗ್ಗೆ ತಿಳಿಸಿದ್ದಾನೆ.

ಸ್ಫೋಟದ ತೀವ್ರತೆ 300 ಮೀಟರ್‌ವರೆಗೂ ಉಂಟಾಗಿದೆ. ಸಮೀಪದಲ್ಲಿದ್ದ ಕಾರಿನ ಗಾಜು, ಮನೆಯೊಂದರ ಕಿಟಕಿ ಗಾಜು ಸ್ಫೋಟದ ತೀವ್ರತೆಗೆ ಛಿದ್ರವಾಗಿವೆ. ಕೆಲವು ಮನೆಗಳ ಕಿಟಕಿ ಗಾಜುಗಳಲ್ಲಿ ಬಿರುಕು ಮೂಡಿದೆ. ಸ್ಫೋಟ ಎಷ್ಟು ದೊಡ್ಡ ಮಟ್ಟದ್ದಾಗಿತ್ತೆಂದರೆ, ಅದರ ಸದ್ದು ಕಿಲೋಮೀಟರ್ ದೂರದವರೆಗೂ ಕೇಳಿಸಿದೆ.

ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಸ್ಕೂಟರ್‌ಸ್ಫೋಟದಿಂದ ಉಂಟಾಗಿದ್ದ ಬೆಂಕಿಯನ್ನು ನಿಯಂತ್ರಣಕ್ಕೆ ನಂದಿಸಿದರು. ಸ್ಫೋಟದಲ್ಲಿ ಯಾವುದೇ ಜೀವಹಾನಿ ಆಗಿಲ್ಲ. ಸ್ಕೂಟರ್ ಸ್ಫೋಟಿಸಿದ್ದೇಕೆ? ಏನಾದರೂ ಸ್ಫೋಟಕ ಅಳವಡಿಸಲಾಗಿತ್ತೆ? ಅಥವಾ ಸ್ಕೂಟರ್‌ಬ್ಯಾಟರಿ ಸ್ಫೋಟಿಸಿದೆಯೇ? ಅಥವಾ ಕೊರಿಯರ್‌ನಲ್ಲಿ ಬಂದಿರುವ ಪಾರ್ಸೆಲ್‌ಗಳಲ್ಲೇನಾದರೂ ಸ್ಫೋಟಕವಿತ್ತೆ? ಎಂಬುದರ ತನಿಖೆ ನಡೆದಿದೆ. ಸಮೀಪದ ಪ್ರದೇಶಗಳಲ್ಲಿನ ಎಲ್ಲಾ ಸಿಸಿಟಿವಿ ದೃಶ್ಯಾವಳಿಗಳನ್ನೂ ಪರಿಶೀಲಿಸಲಾಗುವುದು ಎಂದು ಜಲಂಧರ್ ಪೊಲೀಸ್ ಆಯುಕ್ತ ಧನ್‌ಪ್ರೀತ್ ಕೌರ್‌ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸ್ಫೋಟದಿಂದ ಉಂಟಾದ ಬೆಂಕಿ ಸಹಜವಾಗಿರಲಿಲ್ಲ. ಬೆಂಕಿ ಬಹಳ ತೀವ್ರವಾಗಿತ್ತು. ಅದನ್ನು ನಂದಿಸಲು ಹೆಚ್ಚು ಸಮಯ ಮತ್ತು ನೀರನ್ನು ತೆಗೆದುಕೊಂಡಿತು. ಈ ವಿಚಾರ ಸಂಶಯಕ್ಕೆ ಎಡೆಮಾಡಿದೆ ಎಂದು ಕೌರ್‌ಹೇಳಿದ್ದಾರೆ.

ಜಲಂಧರ್‌ನ ಬಿಎಸ್‌ಎಫ್ ಪ್ರಧಾನ ಕಚೇರಿ ಹೊರಗೆ ನಿಲ್ಲಿಸಿದ್ದ ಹೋಂಡಾ ಆಕ್ಟಿವಾ ಸ್ಕೂಟರ್‌ಸ್ಫೋಟವಾಗಿದ್ದು, ಸವಾರ ಓಡಿ ಬರುತ್ತಿರುವುದು ಚಿತ್ರದಲ್ಲಿದೆ.

ಕಾಂಗ್ರೆಸ್, ಬಿಜೆಪಿ ಟೀಕೆ

ದೇಶದ ಗಡಿ ಭಾಗದ ರಾಜ್ಯ ಪಂಜಾಬ್ ಬಹಳ ಸೂಕ್ಷ್ಮ ಪ್ರದೇಶವಾಗಿದೆ. ಒಂದೇ ರಾತ್ರಿಯಲ್ಲಿ ಎರಡು ಪ್ರತ್ಯೇಕ ಘಟನೆಗಳಲ್ಲಿ, ಅದೂ ಸೇನಾ ಶಿಬಿರಗಳ ಬಳಿಯೇ ಸ್ಫೋಟವಾಗಿರುವುದು ಆತಂಕಕಾರಿಯಾಗಿದೆ. ಸ್ಫೋಟದ ವಿಧಾನ ಗಮನಿಸಿದರೆ ಎಚ್ಚರಿಕೆ ಗಂಟೆಯಂತೆ ಕಾಣುತ್ತಿದೆ. ಎರಡೂ ಸ್ಫೋಟ ಘಟನೆಗಳ ಸಮಗ್ರ ತನಿಖೆಯ ಅಗತ್ಯವಿದೆ ಎಂದು ಕಾಂಗ್ರೆಸ್ ರಾಜ್ಯಾಧ್ಯಕ್ಷ ಅಮರಿಂದರ್‌ಸಿಂಗ್ ರಾಜಾ ಹೇಳಿದ್ದಾರೆ.
ಸೇನಾ ಶಿಬಿರಗಳ ಸಮೀಪದಲ್ಲಾಗಿರುವ ಸರಣಿ ಸ್ಫೋಟಗಳು ಆತಂಕಕ್ಕೆ ಕಾರಣವಾಗಿವೆ. ಆಮ್ ಆದ್ಮಿ ಪಕ್ಷದ ಸರಕಾರದಲ್ಲಿ ಪಂಜಾಬ್ ರಾಜ್ಯದಲ್ಲಿ ಸುರಕ್ಷತೆ, ಕಾನೂನು-ಸುವ್ಯವಸ್ಥೆ ಎಂಬುದು ಇಲ್ಲವಾಗಿದೆ. ಸರಕಾರ ಬದಲಾಗುವ ವರೆಗೂ ರಾಜ್ಯದಲ್ಲಿ ಇಂಥ ಘಟನೆಗಳನ್ನು ತಪ್ಪಿಸಲಾಗದು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪರಮಿಂದರ್‌ಸಿಂಗ್ ಬ್ರಾರ್ ,ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಿಎಂ, ಡಿಜಿಪಿ ಭಿನ್ನ ಹೇಳಿಕೆ

ಎರಡೂ ಸ್ಫೋಟಗಳ ವೈಖರಿ ನೋಡಿದರೆ ಪಾಕಿಸ್ತಾನದ ಕೈವಾಡ ಇರುವಂತೆ ಕಾಣುತ್ತಿದೆ.

ಸ್ಥಳೀಯರನ್ನೇ ಬಳಸಿಕೊಂಡು ಪಾಕಿಸ್ತಾನದ ಉಗ್ರ ಸಂಘಟನೆಗಳು ಗಡಿ ರಾಜ್ಯ ಪಂಜಾಬ್‌ನಲ್ಲಿ ಸ್ಫೋಟ ನಡೆಸಿರುವ ಸಾಧ್ಯತೆ ಇದೆ ಎಂದು ಪಂಜಾಬ್‌ನ ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಶಂಕೆ ವ್ಯಕ್ತಪಡಿಸಿದ್ದಾರೆ. ಈ ದಿಸೆಯಲ್ಲಿ ತನಿಖೆ ನಡೆಸುವುದಕ್ಕೂ ಸೂಚನೆ ನೀಡಲಾಗಿದೆ ಎಂದಿದ್ದಾರೆ.
ಆದರೆ, ಪಂಜಾಬ್ ಸಿಎಂ ಭಗವಂತ್ ಸಿಂಗ್ ಮಾನ್ ಬೇರೆಯದೇ ರೀತಿ ಪ್ರತಿಕ್ರಿಯಿಸಿದ್ದಾರೆ. ಎರಡೂ ಸ್ಫೋಟಗಳಲ್ಲಿ ಬಿಜೆಪಿಯ ಕೈವಾಡವಿದೆ. ಮುಂದಿನ ವರ್ಷ ಪಂಜಾಬ್ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ವಿರುದ್ಧವಾಗಿ ಜನರಲ್ಲಿ ಅಭಿಪ್ರಾಯ ಮೂಡಿಸಲು ಬಿಜೆಪಿ ಇಂಥ ಕೃತ್ಯ ಮಾಡಿಸಿರುವಂತಿದೆ ಎಂದು ಆರೋಪಿಸಿದ್ದಾರೆ.

ಅಮೃತಸರದಲ್ಲಿ ಸೇನಾ ಶಿಬಿರದ ಮೇಲೆ ಸ್ಫೋಟಕ ಎಸೆತ

ಜಲಂಧರ್‌ನಿಂದ 100 ಕಿ.ಮೀ. ದೂರದ ಅಮೃತಸರದಲ್ಲಿ ಮಂಗಳವಾರ ರಾತ್ರಿ 10.50ರಲ್ಲಿ 2ನೇ ಸ್ಫೋಟವಾಗಿದೆ. ಅಮೃತಸರದ ಕಂಟೋನ್ಮೆಂಟ್ ಪ್ರದೇಶ ಸಮೀಪದ ಖಾಸಾ ಎಂಬಲ್ಲಿ ಕಾಂಪೌಂಡ್ ಪಕ್ಕದ ಸ್ಥಳದಲ್ಲಿ ಸ್ಫೋಟವಾಗಿದೆ. ಇಲ್ಲಿಯೂ ಯಾವುದೇ ಸಾವು ನೋವು ಉಂಟಾಗಿಲ್ಲ. ಇಲ್ಲಿಂದ ಅಟ್ಟಾರಿ-ವಾಘಾ ಗಡಿ ಪ್ರದೇಶ ಕೇವಲ 15 ಕಿಮೀ ದೂರದಲ್ಲಿದೆ ಎಂಬುದು ಉಲ್ಲೇಖಾರ್ಹ. ರಾತ್ರಿ 10.50ರಲ್ಲಿ ಖಾಸಾ ಕಂಟೋನ್ಮೆಂಟ್ ಬಳಿ ಸ್ಫೋಟವಾಗಿದೆ ಎಂದು ಪೊಲೀಸರಿಗೆ ದೂರವಾಣಿ ಕರೆ ಬಂದಿದೆ. ಕಂಟೋನ್ಮೆಂಟ್ ಪ್ರದೇಶದಲ್ಲೇ ವಾಸಿಸುವ ಸೇನೆಯ ಹಿರಿಯ ಅಧಿಕಾರಿಗಳ ಜತೆಗೂಡಿ ಪೊಲೀಸ್ ತಂಡ ಸ್ಥಳಕ್ಕೆ ತಲುಪಿದೆ. ಬಾಂಬ್ ನಿಷ್ಕ್ರಿಯ ಪಡೆಯ ತಂಡವೊಂದನ್ನೂ ಸ್ಥಳಕ್ಕೆ ಕರೆಸಿಕೊಳ್ಳಲಾಗಿದೆ. ಸದ್ಯ ತನಿಖೆ ನಡೆಯುತ್ತಿದ್ದು, ಸ್ಫೋಟ ಹೇಗೆ, ಏಕೆ ಸಂಭವಿಸಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಅಮೃತಸರ ಎಸ್ಪಿ ಆದಿತ್ಯ ವಾರಿಯರ್ ತಿಳಿಸಿದ್ದಾರೆ.
ಸ್ಫೋಟ ಸ್ಥಳದಲ್ಲಿರುವ ಸೇನೆಯ ಖಾಸಾ ಶಿಬಿರದ ಹೊರಾವರಣದಲ್ಲಿ ಲೋಹದ ಮತ್ತು ತಗಡಿನ ಕೆಲವು ಚೂರುಗಳು ಸಿಲುಕಿಕೊಂಡಿವೆ. ಅದನ್ನು ಗಮನಿಸಿದರೆ ಯಾರೋ ಲೋಹದಿಂದ ಸುತ್ತುವರಿದಿ ರುವ ಪ್ರಬಲ ಸ್ಫೋಟಕ ಸಾಮಗ್ರಿಯನ್ನು ಶಿಬಿರದ ಒಳಕ್ಕೆ ಎಸೆಯುವ ದುಸ್ಸಾಹಸ ಮಾಡಿದ್ದಾರೆ. ಅದು ಗುರಿ ತಪ್ಪಿ ಕಾಂಪೌಂಡ್ನ ಆಚೆಯೇ ಸಿಡಿದಿದೆ ಎನಿಸುತ್ತದೆ ಎಂದು ಅಮೃತಸರ ಗ್ರಾಮೀಣ ವಿಭಾಗದ ಹಿರಿಯ ಎಸ್‌ಪಿ ಸುಹೇಲ್ ಖಾಸಿಂ ವಿಶ್ಲೇಷಣೆ ಮಾಡಿದ್ದಾರೆ. ಸಮೀಪದ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಮೋಟಾರ್‌ಬೈಕ್ನಲ್ಲಿ ಬಂದ ಮುಸುಕುಧಾರಿ ವ್ಯಕ್ತಿಗಳು ಸೇನೆಯ ಖಾಸಾ ಶಿಬಿರದ ಹೊರಗೆ ಸಂಚರಿಸಿರುವ, ಉಂಡೆಯಂತಹ ವಸ್ತುವನ್ನು ಕಾಂಪೌಂಡ್‌ನತ್ತ ಎಸೆದು ಪರಾರಿಯಾಗಿರುವುದು ಸಿಸಿಟಿವಿಯಲ್ಲಿ ದಾಖಲಾಗಿದೆ. ತನಿಖೆಯಿಂದ ನೈಜ ಸಂಗತಿ ತಿಳಿಯಲಿದೆ ಎಂದೂ ಖಾಸಿಂ ಹೇಳಿದ್ದಾರೆ.

ಅಮೃತಸರದ ಕಂಟೋನ್‌ಮೆಂಟ್ ಪ್ರದೇಶದ ಸೇನಾ ಶಿಬಿರದ ಕಾಂಪೌಂಡ್ ಬಳಿ ಸ್ಫೋಟ ಸ್ಥಳವನ್ನು ಸೇನೆ ಮತ್ತು ಪೊಲೀಸ್ ಅಧಿಕಾರಿಗಳು ಪರಿಶೀಲಿಸಿದರು.

ಇತಿಹಾಸ ಮರುಕಳಿಸಲಿದೆ: ಡಿಎಂಕೆ ಕಾರ್ಯದರ್ಶಿ ಭಾರತಿ ವಿಶ್ವಾಸ

ಸೋಲು ಸಹಜ, ಮುಂದೆ ಗೆಲ್ಲುತ್ತೇವೆ

ಚೆನ್ನೈ: ಚುನಾವಣೆಗಳಲ್ಲಿ ಸೋಲು-ಗೆಲುವು ಇದ್ದದ್ದೇ, ಒಮ್ಮೆ ಸೋತರೆ ಮುಂದೆ ಗೆಲುವು ಬರಲಿದೆ. ಇದೆಲ್ಲಾ ಅಸಾಮಾನ್ಯ ಏನಲ್ಲ ಎಂದು ಡಿಎಂಕೆ ಪಕ್ಷ ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿನ ಹೀನಾಯ ಸೋಲನ್ನು ವ್ಯಾಖ್ಯಾನಿಸಿದೆ.

ಡಿಎಂಕೆ ಪಕ್ಷ ಈ ಬಾರಿಯ ಚುನಾವಣೆಯಲ್ಲಿ ಶೇ.24.19ರಷ್ಟು ಮತ ಗಳಿಕೆ ಮಾಡಿದೆ. ವಿಜಯಿ ಪಕ್ಷ (ಟಿವಿಕೆ) ಶೇ.34.92ರಷ್ಟು ಮತ ಗಳಿಕೆ ಮಾಡಿದೆ. ಮತ ಹಂಚಿಕೆ ನಡುವಿನ ಈ ವ್ಯತ್ಯಾಸ ಬಹಳ ಹೆಚ್ಚೇನಿಲ್ಲ. ಮುಂದಿನ ದಿನಗಳಲ್ಲಿ ಪಕ್ಷವು ಮತೆ ಪುಟಿದೆದ್ದು ವಿಜಯಶಾಲಿಯಾಗಲಿದೆ ಎಂದು ಡಿಎಂಕೆ ಪಕ್ಷದ ಸಂಘಟನಾ ಕಾರ್ಯದರ್ಶಿ ಆರ್.ಎಸ್.ಭಾರತಿ ಸುದ್ದಿಸಂಸ್ಥೆಗೆ ಬುಧವಾರ ಹೇಳಿದ್ದಾರೆ. ಪಕ್ಷದ ತನ್ನ ಸುದೀರ್ಘ ಇತಿಹಾಸದಲ್ಲಿ ಹಲವು ಏರಿಳಿತಗಳನ್ನು ಕಂಡಿದೆ. ಪಕ್ಷದ ಕಾರ್ಯಕರ್ತರು-ಪದಾಧಿಕಾರಿಗಳು ಈಗಿನ ಸೋಲಿನ ಬಳಿಕವೂ ಉತ್ಸಾಹ ಕಳೆದುಕೊಂಡಿಲ್ಲ. ರಾಜ್ಯದ ಜನರ ಕಲ್ಯಾಣಕ್ಕಾಗಿ ಉತ್ತಮ ಕೆಲಸಗಳನ್ನು ಮುಂದುವರಿಸಲು ಬದ್ಧರಾಗಿದ್ದಾರೆ ಎಂದು ಭಾರತಿ ಹೇಳಿದ್ದಾರೆ.

1991ರ ವಿಧಾನಸಭಾ ಚುನಾವಣೆಯ ಫಲಿತಾಂಶಕ್ಕೆ ಹೋಲಿಸಿದರೆ ಈಗಿನ ಸೋಲು ಅಷ್ಟು ಆಘಾತಕಾರಿಯೇನಲ್ಲ. 1991ರ ಚುನಾವಣೆಯಲ್ಲಿ 234 ಕ್ಷೇತ್ರಗಳ ಪೈಕಿ ಕೇವಲ 2 ಕ್ಷೇತ್ರಗಳಲ್ಲಷ್ಟೇ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದರು. ಹಾರ್ಬರ್ ಮತ್ತು ಎಗ್ಮೋರ್‌ಕ್ಷೇತ್ರಗಳಲ್ಲಿ ಎಂ.ಕರುಣಾನಿಧಿ ಮತ್ತು ಪರಿತಿ ಇಲಂವಳತಿ ಮಾತ್ರ ಗೆದ್ದಿದ್ದರು. ಅದನ್ನು ಪಕ್ಷದ ಯಾರಾದರು ಮರೆಯಲು ಸಾಧ್ಯವೇ? ಎಂದು ಪ್ರಶ್ನೆ ಮಾಡಿದರು.

ಪಕ್ಷವು ಪುಟಿದೆದ್ದಿದೆ: ಕಾರ್ಯದರ್ಶಿ ಭಾರತಿ

7 ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಬಹಳಷ್ಟು ಏರಿಳಿತ ಕಂಡಿದ್ದೇವೆ. ಆ ಬಳಿಕ 1996ರಲ್ಲಿ ಮತ್ತೆ ಪುಟಿದೆದ್ದವು. 1996ರಲ್ಲಿ ಸರಕಾರ ರಚಿಸಿದೆವು. ಪಕ್ಷದ ಕಾರ್ಯಕರ್ತರು ಈಗ ಅಧಿಕಾರದಿಂದ ಹೊರಗಿರುವಂತಾಗಿದ್ದರೂ ದೃಢ ನಿಶ್ಚಯದಿಂದಿದ್ದಾರೆ, ಉತ್ತಮ ಕೆಲಸಗಳನ್ನು ಮುಂದುವರಿಸುತ್ತಾರೆ. ಸೋಲು ಗೆಲುವುಗಳಿಗಿಂತ ಸಿದ್ಧಾಂತ ಮುಖ್ಯ ಎಂಬುದು ಪಕ್ಷದ ಅಧ್ಯಕ್ಷ ಎಂಕೆ ಸ್ಟಾಲಿನ್ ಪ್ರತಿಪಾದನೆ ಎಂದು ಎಂದು ಡಿಎಂಕೆ ಪಕ್ಷದ ಸಂಘಟನಾ ಕಾರ್ಯದರ್ಶಿ ಆರ್.ಎಸ್.ಭಾರತಿ ಸುದ್ದಿಸಂಸ್ಥೆಗೆ ವಿವರಿಸಿದರು

ಬಿಜೆಪಿ-ಟಿಎಂಸಿಯ ನಾಲ್ವರು ಕಾರ್ಯಕರ್ತರು ಹತ್ಯೆ | ಪಕ್ಷದ ಕಚೇರಿಗಳಿಗೆ ಬೆಂಕಿ

ಪ.ಬಂಗಾಳದಲ್ಲಿ ನಿಲ್ಲದ ಹಿಂಸಾ ದಳ್ಳುರಿ

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಫಲಿತಾಂಶ ಪ್ರಕಟ ಬೆನ್ನಲ್ಲೇ ಹಿಂಸಾಚಾರ ಶುರುವಾಗಿದೆ. ಇಬ್ಬರು ಬಿಜೆಪಿ ಕಾರ್ಯಕರ್ತರು, ಮತ್ತೊಂದೆಡೆ ಇಬ್ಬರು ತೃಣಮೂಲ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಚುನಾವಣೋತ್ತರ ಹಿಂಸಾಕೃತ್ಯಗಳಲ್ಲಿ ಹತರಾಗಿದ್ದಾರೆ. ಪಕ್ಷಗಳ ಕಚೇರಿಗಳಿಗೆ ಬೆಂಕಿ ಹಚ್ಚಲಾಗಿದೆ.

ಪಶ್ಚಿಮ ಬಂಗಾಳದಲ್ಲಿನ ಚುನಾವಣೋತ್ತರ ಹಿಂಸಾಕೃತ್ಯಗಳ ಬಗ್ಗೆ ವರದಿ ಪಡೆದುಕೊಂಡಿರುವ ಭಾರತದ ಮುಖ್ಯ ಚುನಾವಣಾ ಆಯುಕ್ತ(ಸಿಇಸಿ) ಜ್ಞಾನೇಶ್ ಕುಮಾರ್ ಅವರು, ಈ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾಗಿರುವ ದುಷ್ಕರ್ಮಿಗಳನ್ನು ತಕ್ಷಣವೇ ಬಂಧಿಸಿ ಎಂದು ರಾಜ್ಯದ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ರಾಜ್ಯದ ಕೆಲವು ಭಾಗಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತವಾಗಿರುವ ಮಧ್ಯೆ ಈ ನಿರ್ದೇಶನ ಬಂದಿದ್ದು, ಚುನಾವಣಾ ಆಯೋಗವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಹಿಂಸಾಚಾರವನ್ನು ಪ್ರಚೋದಿಸುವ ಮತ್ತು ವಿಧ್ವಂಸಕ ಕೃತ್ಯಗಳನ್ನು ನಡೆಸುವವರನ್ನು ತಕ್ಷಣವೇ ಬಂಧಿಸಬೇಕು ಎಂದು ಸಿಇಸಿ ಸೂಚನೆ ನೀಡಿದ್ದಾರೆಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯದ ಕೆಲವೆಡೆ ಮಂಗಳವಾರ ಹಿಂಸಾಚಾರ ನಡೆದು ಇಬ್ಬರು ಸಾವಿಗೀಡಾಗಿದ್ದಾರೆ. ಕೆಲವೆಡೆ ರಾಜಕೀಯ ಪಕ್ಷಗಳ ಕಚೇರಿಗಳನ್ನು ಧ್ವಂಸಗೊಳಿಸಿರುವ ಬಗ್ಗೆ ವರದಿ ಬಂದಿದೆ. ಆ ಬಳಿಕ ಚುನಾವಣಾ ಆಯೋಗದಿಂದ ಈ ನಿರ್ದೇಶನ ನೀಡಿದೆ. ರಾಜ್ಯದಲ್ಲಿನ ಸೂಕ್ಷ್ಮ ಪ್ರದೇಶಗಳಲ್ಲಿ ನಿರಂತರ ಗಸ್ತು ವ್ಯವಸ್ಥೆ ಮಾಡುವಂತೆಯೂ ಪಶ್ಚಿಮ ಬಂಗಾಳ ಮುಖ್ಯ ಕಾರ್ಯದರ್ಶಿ,ಪೊಲೀಸ್ ಮಹಾನಿರ್ದೇಶಕರು, ಕೋಲ್ಕತ್ತ ಪೊಲೀಸ್ ಆಯುಕ್ತರು ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಮಹಾನಿರ್ದೇಶಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತಿತರ ಹಿರಿಯ ಅಧಿಕಾರಿಗಳಿಗೆ ಮುಖ್ಯ ಚುನಾವಣಾ ಆಯುಕ್ತರಿಂದ ಸೂಚನೆ ಬಂದಿದೆ ಎಂದು ಪಶ್ಚಿಮ ಬಂಗಾಳದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯದ ಕೆಲವು ಭಾಗಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಕಳವಳ ವ್ಯಕ್ತವಾಗಿರುವ ಮಧ್ಯೆ ಈ ನಿರ್ದೇಶನ ಬಂದಿದ್ದು, ಚುನಾವಣಾ ಆಯೋಗವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಪೊಲೀಸ್ ಇಲಾಖೆಗೆ ಹೆಚ್ಚು ಜಾಗರೂಕರಾಗಿರಲು ಮತ್ತು ಶಾಂತಿ ಕದಡುವ ಯತ್ನಗಳನ್ನು ತಡೆಯಲು ಸೂಚನೆ ಬಂದಿದೆ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಜುಮುರಿಯಾದಲ್ಲಿನ ಟಿಎಂಸಿ ಕಚೇರಿಗೆ ಬೆಂಕಿ ಹಚ್ಚಲಾಗಿದೆ.

ಅಮೆರಿಕದ ಪೆಂಟಗನ್ ಮುಖ್ಯಸ್ಥ ಪೀಟ್ ಹೆಗ್ಸೆತ್ ಸ್ಪಷ್ಟನುಡಿ

ಕದನ ವಿರಾಮ ಮುಗಿದಿಲ್ಲ, ಅಮೆರಿಕಕ್ಕೆ ಯುದ್ಧ ಬೇಕಿಲ್ಲ

ವಾಷಿಂಗ್ಟನ್: ಅಮೆರಿಕ-ಇರಾನ್ ನಡುವೆ ಸದ್ಯ ಯುದ್ಧ ನಡೆಯುತ್ತಿಲ್ಲ. ಕದನ ವಿರಾಮವೂ ಮುಗಿದಿಲ್ಲ ಎಂದಿರುವ ಅಮೆರಿಕದ ರಕ್ಷಣಾ ಇಲಾಖೆಯ ಪ್ರಧಾನ ಕಚೇರಿಯಾದ 'ಪೆಂಟಗನ್' ಮುಖ್ಯಸ್ಥ ಪೀಟ್ ಹೆಗ್ಸೆತ್, ಹಾಗೆಂದು ಅಮೆರಿಕವೂ ಯುದ್ಧವನ್ನು ಬಯಸುವುದಿಲ್ಲ ಎಂದು ಹೇಳಿದ್ದಾರೆ.



ಹೊರ್ಮುಜ್ ಜಲಸಂಧಿಯಲ್ಲಿ ಘರ್ಷಣೆಗಳ ಹೊರತಾಗಿಯೂ, ಇರಾನ್ ಜತೆಗಿನ ಕದನ ವಿರಾಮವಿನ್ನೂ ಕೊನೆಗೊಂಡಿಲ್ಲ ಎಂದರು.

ಅಮೆರಿಕ ನೇತೃತ್ವದಲ್ಲಿ ಆರಂಭಗೊಂಡಿರುವ ''ಪ್ರಾಜೆಕ್ಟ್ ಫ್ರೀಡಂ'' ಹೆಸರಿನ ಸಾಗರದಲ್ಲಿ ಸಶಸ್ತ್ರ ಕಾರ್ಯಾಚರಣೆಯು ಪ್ರಸ್ತುತ ಕೇವಲ ಸೀಮಿತ ವ್ಯಾಪ್ತಿಯಲ್ಲಿದೆ ಎಂದರು.

ಕೊಲ್ಲಿ ಪ್ರದೇಶದಲ್ಲಿ ಅಮೆರಿಕ ''ಯುದ್ಧವನ್ನು ಬಯಸುವುದಿಲ್ಲ. ಆದರೆ ವಾಣಿಜ್ಯ ಉದ್ದೇಶದ ಸರಕು ಸಾಗಣೆ ಹಡಗುಗಳು ಹಾಗೂ ಅಮೆರಿಕದ ನೌಕಾಪಡೆಗಳ ಮೇಲೆ ಇರಾನ್ ದಾಳಿಗೆ ಮುಂದಾದರೆ ಬಲವಾಗಿ ತಿರುಗೇಟು ನೀಡಲಾಗುವುದು. ಇರಾನ್ ಭಾರೀ ಪ್ರಮಾಣದ ಮತ್ತು ವಿನಾಶಕಾರಿ ದಾಳಿಯನ್ನು ಅಮೆರಿಕದಿಂದ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಪ್ರಾಜೆಕ್ಟ್ ಫ್ರೀಡಂ ಕಾರ್ಯಾಚರಣೆಯಲ್ಲಿ ಅಮೆರಿಕದ ಸಶಸ್ತ್ರ ಪಡೆಗಳು ಇರಾನ್ ಸಾಗರ ಅಥವಾ ವಾಯುಪ್ರದೇಶವನ್ನು ಪ್ರವೇಶಿಸುವುದಿಲ್ಲ ಎಂದು ಅಮೆರಿಕದ ಯುದ್ಧ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಹೇಳಿದ್ದಾರೆ.

ಫೆ.28ರಂದು ಆರಂಭಿಸಿದ 'ಆಪರೇಷನ್ ಎಪಿಕ್ ಫ್ಯೂರಿ'ಗಿಂತ ''ಪ್ರಾಜೆಕ್ಟ್ ಫ್ರೀಡಂ'''' ಪೂರ್ಣ ಭಿನ್ನವಾಗಿರಲಿದೆ. ಈ ಬಾರಿಯ ಮಿಷನ್ ರಕ್ಷಣಾತ್ಮಕ ಸ್ವರೂಪದ್ದಾಗಿರಲಿದೆ. ಅದರ ಉದ್ದೇಶ ಹೊರ್ಮುಜ್ ಜಲಸಂಧಿಯಲ್ಲಿ ಸಂಚರಿಸುವ ಹಡಗುಗಳನ್ನು ರಕ್ಷಿಸುವುದಾಗಿದೆ. ಪ್ರಾಜೆಕ್ಟ್ ಫ್ರೀಡಂನ ವ್ಯಾಪ್ತಿ ಸೀಮಿತ ಹಾಗೂ ಅವಧಿ ಅಲ್ಪಕಾಲದ್ದು ಎಂದು ವಿವರಿಸಿದರು.

ಇರಾನ್ ಜತೆಗಿನ ಮಾತುಕತೆಗಳು ಮುಂದುವರಿದಿವೆ. ನಿರಂತರ ರಾಜತಾಂತ್ರಿಕ ಪ್ರಯತ್ನಗಳಿಗೆ ಸ್ಥಳಾವಕಾಶವನ್ನು ಒದಗಿಸಲು ಈ ಮಿಷನ್ ವಿನ್ಯಾಸಗೊಳಿಸಲಾಗಿದೆ ಎಂದರು.

ರಾಜೀನಾಮೆ ನೀಡದವರನ್ನು ಒದ್ದು ಹೊರಹಾಕಿ: ಮಹೇಶ್ ಜೇಠ್ಮಲಾನಿ

ದೆಹಲಿ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಸೋಲು ಕಂಡ ಬಳಿಕವೂ ಮುಖ್ಯಮಂತ್ರಿ ಸ್ಥಾನ ಬಿಡಲೊಪ್ಪದ ಮಮತಾ ಬ್ಯಾನರ್ಜಿ ಅವರನ್ನು 'ಒದ್ದು ಹೊರಹಾಕಿ' ಎಂದು ಸುಪ್ರೀಂಕೋರ್ಟ್ ಹಿರಿಯ ವಕೀಲ, ರಾಜಕೀಯ ವಿಶ್ಲೇಷಕ ಮಹೇಶ್ ಜೇಠ್ಮಲಾನಿ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ.



ಹೊಸ ರಾಜ್ಯ ಸರಕಾರ ರಚನೆಗಾಗಿ ಮುಖ್ಯಮಂತ್ರಿ ಸ್ಥಾನ ತೆರವುಗೊಳಿಸುವ ವಿಚಾರದಲ್ಲಿ ರಾಜ್ಯಪಾಲರ ಮಧ್ಯಪ್ರವೇಶ ಈಗ ಅಗತ್ಯವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜ್ಯದ ಜನರು ನೀಡಿದ ತೀರ್ಪನ್ನು ಒಪ್ಪಿಕೊಳ್ಳದೇ ಅಧಿಕಾರದಲ್ಲೇ ಮುಂದುವರಿಯಲು ಪ್ರಯತ್ನಿಸುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಮಹೇಶ್ ಜೇಠ್ಮಲಾನಿ ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಸಂವಿಧಾನ ಪ್ರಕಾರ ಮುಖ್ಯಮಂತ್ರಿಗೆ ಸ್ಪಷ್ಟ ಬಹುಮತ ಇಲ್ಲದಿದ್ದರೆ ಅವರು ಪದವಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿಯೇ ರಾಜ್ಯಪಾಲರು ಮಧ್ಯಪ್ರವೇಶಿಸಿ ಬಹುಮತ ಸಾಬೀತುಪಡಿಸಲು ಸೂಚಿಸಬೇಕು ಅಥವಾ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕು. ಈಗ ಪಶ್ಚಿಮ ಬಂಗಾಳದ ರಾಜಕೀಯದಲ್ಲಿ ಮುಂದಿನ ಹಂತ ಏನು ಎನ್ನುವುದು ರಾಜ್ಯಪಾಲರ ನಿರ್ಧಾರ ಮತ್ತು ಸಂವಿಧಾನಾತ್ಮಕ ಪ್ರಕ್ರಿಯೆಗಳನ್ನು ಅವಲಂಬಿಸಿದೆ.

ಸಂಪುಟ ಸೇರಲು ನಿಶಾಂತ್ ಸಮ್ಮತಿ

ಪಟನಾ: ಸಂಯುಕ್ತ ಜನತಾ ದಳ(ಜೆಡಿಯು) ಪಕ್ಷದ ಅಧ್ಯಕ್ಷ, ಬಿಹಾರದ ಮಾಜಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್ ಅವರು ಬಿಜೆಪಿಯ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ನೇತೃತ್ವದ ಸಚಿವ ಸಂಪುಟ ಸೇರಲು ಸಮ್ಮತಿಸಿದ್ದಾರೆ. ಗುರುವಾರ ಸಚಿವ ಸಂಪುಟ ವಿಸ್ತರಣೆ ನಡೆಯಲಿದ್ದು, ನಿಶಾಂತ್ ಕುಮಾರ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದೆ ಎಂದು ಜೆಡಿಯು ಮೂಲಗಳು ಬುಧವಾರ ತಿಳಿಸಿವೆ. 45 ವರ್ಷದ ನಾಯಕ ನಿಶಾಂತ್ ತಂದೆ ಮುಖ್ಯಮಂತ್ರಿ ಆಗಿದ್ದಾಗಲೇ 2 ತಿಂಗಳ ಹಿಂದೆಯಷ್ಟೆ ಜೆಡಿಯು ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾಗಿದ್ದರು. ಮೊನ್ನೆಯಷ್ಟೇ ಜೆಡಿಯು ಸದ್ಭಾವನಾ ಯಾತ್ರೆ ಆರಂಭಿಸಿದ್ದಾರೆ. ಪಕ್ಷದ ಹಿರಿಯ ನಾಯಕರು, ಕಾರ್ಯಕರ್ತರ ಒತ್ತಾಯಕ್ಕೆ ಮಣಿದು, ನಿಶಾಂತ್ ಅವರು ಚೌಧರಿ ಅವರ ಸಚಿವ ಸಂಪುಟ ಸೇರಲು ಒಪ್ಪಿಕೊಂಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ನಿಶಾಂತ್ ಅವರು ಪಕ್ಷಕ್ಕೆ ಸೇರ್ಪಡೆ ಆದಾಗಿನಿಂದಲೂ ಅವರು ಸಚಿವರಾಗಬೇಕು ಎಂಬುದು ಜೆಡಿಯು ಕಾರ್ಯಕರ್ತರ ಆಶಯವಾಗಿತ್ತು. ಏಪ್ರಿಲ್‌ನ ಹೊಸ ಸರಕಾರ ರಚನೆ ಆದಾಗಲೇ ಅವರನ್ನು ಉಪ ಮುಖ್ಯಮಂತ್ರಿಯಾಗಿ ನೇಮಿಸಬಹುದಿತ್ತು. ಆದರೆ ಅವರು ಹಿಂಜರಿದರು ಎಂದು ಪಕ್ಷದ ನಾಯಕರೊಬ್ಬರು ತಿಳಿಸಿದ್ದಾರೆ.

ವಿಯೆಟ್ನಾಂ ಅಧ್ಯಕ್ಷ ಟೋ ಲ್ಯಾಮ್ ಭಾರತಕ್ಕೆ 3 ದಿನಗಳ ಪ್ರವಾಸ

ಭಾರತ-ವಿಯೆಟ್ನಾಂ ಕಾರ್ಯತಂತ್ರ ಒಪ್ಪಂದ

ದೆಹಲಿ: ಭಾರತ-ವಿಯೆಟ್ನಾಂ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯನ್ನು ಉನ್ನತೀಕರಿಸಿಕೊಳ್ಳಲು ಮುಂದಾಗಿವೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಮತ್ತು ವಿಯೆಟ್ನಾಂ ಅಧ್ಯಕ್ಷ ಟೋ ಲ್ಯಾಮ್ ನಡುವೆ ದ್ವಿಪಕ್ಷೀಯ ಮಾತುಕತೆ ಬುಧವಾರ ನಡೆದಿವೆ. ನಂತರ ರಕ್ಷಣಾ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಗಾಢಗೊಳಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ.

ನಂತರ ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟೋ ಲ್ಯಾಮ್ ಅವರು ಜಂಟಿ ಸುದ್ದಿಗೋಷ್ಠಿ ನಡೆಸಿದರು. ಇಂಡೋ-ಪೆಸಿಫಿಕ್ ವಿಚಾರದಲ್ಲಿ ಉಭಯ ದೇಶಗಳು ಸಾಮಾನ್ಯ ದೃಷ್ಟಿಕೋನ ಹೊಂದಿವೆ. ಕಾನೂನಿನ ನಿಯಮ, ಶಾಂತಿ, ಸ್ಥಿರತೆ ಮತ್ತು ಪ್ರಾದೇಶಿಕ ಸಮೃದ್ಧಿಯನ್ನು ಎತ್ತಿಹಿಡಿ ಯಲು ಒಟ್ಟಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತವೆ ಎಂದು ಮೋದಿ ಹೇಳಿ ದರು. ಚೀನಾದ ಮಿಲಿಟರಿ ಹಸ್ತಕ್ಷೇಪ ಹೆಚ್ಚುತ್ತಿರು ವುದರ ನಡುವೆಯೇ ಭಾರತ-ವಿಯೆಟ್ನಾಂ ನಡುವೆ ಮಾತುಕತೆ ನಡೆದಿರುವುದು ಗಮನಾರ್ಹ.

ಟೋ ಲ್ಯಾಮ್ ಅವರು ಇತ್ತೀಚೆಗಷ್ಟೇ ವಿಯೆಟ್ನಾಂ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದು, ಅದರ ಬೆನ್ನಲ್ಲೇ ಭಾರತಕ್ಕೆ 3 ದಿನಗಳ ಪ್ರವಾಸ ಹಮ್ಮಿಕೊಂಡಿರುವುದು ಭಾರತದ ಜತೆಗಿನ ಸಂಬಂಧಕ್ಕೆ ವಿಯೆಟ್ನಾಂ ಎಷ್ಟು ಮಹತ್ವ ನೀಡುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ವಿಯೆಟ್ನಾಂ ದೇಶವು ಭಾರತದ ಪೂರ್ವ ನೀತಿಗೆ ಪ್ರಮುಖ ಪಾಲುದಾರನಾಗಿದೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಎರಡೂ ದೇಶಗಳು ಸಾಮಾನ್ಯ ದೃಷ್ಟಿಕೋನ ಹಂಚಿಕೊಳ್ಳುತ್ತವೆ. ದೇಶದ ರಕ್ಷಣೆ ಬಲಪಡಿಸುವುದಕ್ಕೆ, ಭದ್ರತಾ ಸಹಕಾರಕ್ಕೆ, ನಿಯಮ, ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಗೆ ಎರಡೂ ದೇಶಗಳು ಕೊಡುಗೆ ನೀಡುವುದನ್ನು ಮುಂದುವರಿಸುತ್ತವೆ. ವಿಯೆಟ್ನಾಂನ ಸಹಕಾರದೊಂದಿಗೆ ಭಾರತ 'ಆಸಿಯಾನ್' (ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ) ಜತೆಗೆ ಸಂಬಂಧಗಳನ್ನು ವಿಸ್ತರಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ಆರ್ಥಿಕ ಸಂಪರ್ಕ ವೃದ್ಧಿಗಾಗಿ ಎರಡೂ ದೇಶಗಳ ಕೇಂದ್ರ ಬ್ಯಾಂಕ್ಗಳ ನಡುವಿನ ಸಹಕಾರವನ್ನು ಹೆಚ್ಚಿಸಲು ನಿರ್ಧರಿಸಿದ್ದೇವೆ. ಭಾರತದ ಯುಪಿಐ ಮತ್ತು ವಿಯೆಟ್ನಾಂನ ತ್ವರಿತ ಪಾವತಿ ವ್ಯವಸ್ಥೆಯನ್ನು ಶೀಘ್ರದಲ್ಲೇ ಪರಸ್ಪರ ಜೋಡಿಸಲಾಗುವುದು ಎಂದೂ ಮೋದಿ ಘೋಷಿಸಿದರು.

ರಾಜಕೀಯ ವಿಶ್ವಾಸ ವೃದ್ಧಿಗೆ ಮತ್ತು ಭದ್ರತಾ ಸಹಕಾರ ಹೆಚ್ಚಿಸಲು ಎರಡೂ ದೇಶಗಳು ಒಪ್ಪಿಕೊಂಡಿವೆ ಎಂದು ಲ್ಯಾಮ್ ಹೇಳಿದ್ದಾರೆ.

ಜಲಾಂತರ್ಗಾಮಿ ಶೋಧ, ರಕ್ಷಣೆ ಮತ್ತು ಬೆಂಬಲ ಕಾರ್ಯವಿಧಾನಕ್ಕಾಗಿ ನಿಯಮ ರೂಪಿಸುವ ಒಪ್ಪಂದಕ್ಕೆ ಉಭಯ ರಾಷ್ಟ್ರದ ಪ್ರತಿನಿಧಿಗಳು ಸಹಿ ಹಾಕಿದರು. ದ್ವಿಪಕ್ಷೀಯ ರಕ್ಷಣಾ ಉದ್ಯಮ ಸಹಯೋಗವನ್ನು ಬಲಪಡಿಸುವ ಪತ್ರಕ್ಕೂ ಅಂಕಿತ ಹಾಕಿದರು.

ಮಮತಾ ನಿವಾಸದ ಭದ್ರತಾ ವ್ಯವಸ್ಥೆ ಕಡಿತ

ಕೋಲ್ಕತ್ತ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಸೋಲು ಕಂಡಿದ್ದು, ಪಕ್ಷದ ಸತತ 3 ಅವಧಿಯ ಆಡಳಿತ ಕೊನೆಗೊಂಡಿದೆ. ಬಿಜೆಪಿ ಮೂರನೇ ಎರಡರಷ್ಟು ಸದಸ್ಯ ಬಲದೊಂದಿಗೆ ಭರ್ಜರಿ ಜಯ ದಾಖಲಿಸಿದೆ. ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ ರಾಜ್ಯದಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಿವಾಸದ ಸುತ್ತಮುತ್ತಲಿನ ಭದ್ರತೆಯಲ್ಲಿಯೂ ಬದಲಾವಣೆಯಾಗಿದೆ. ಕೋಲ್ಕತ್ತದ ಕಾಳಿಘಾಟ್ ಪ್ರದೇಶದಲ್ಲಿರುವ ಮಮತಾ ಬ್ಯಾನರ್ಜಿ ಅವರ ನಿವಾಸಕ್ಕೆ ನೀಡಿದ್ದ ಭದ್ರತೆಯನ್ನು ಕಡಿತಗೊಳಿಸಲಾಗಿದೆ. ಭದ್ರತೆ ಕಾರಣಕ್ಕೆ ನಿವಾಸದೆದುರಿನ ರಸ್ತೆಗೆ ಅಡ್ಡಲಾಗಿ ಹಾಕಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲಾಗಿದೆ. ಆ ಮೂಲಕ ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಇಪಿಎಫ್‌ಒ: ಮೇ 13ಕ್ಕೆ ಪಿಂಚಣಿ ಅದಾಲತ್

ಬಳ್ಳಾರಿ: ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಮೇ 13 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪ ಹಾಗೂ ಇತ್ಯಾದಿಗಳನ್ನು ಅಂಚೆ ಪತ್ರದ ಮೂಲಕ ಮೇ 10 ರೊಳಗಾಗಿ ರವಾನಿಸಬಹುದಾಗಿದೆ. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392-268943 ಗೆ ಸಂಪರ್ಕಿಸಬಹುದು ಎಂದು ಕ್ಷೇತ್ರಿಯ ಭವಿಷ್ಯ ನಿಧಿ ಆಯುಕ್ತ ಕೆ.ವಿ ಪ್ರವೀಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬಳ್ಳಾರಿ: 2025-26ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುವ ''ಶುಲ್ಕ ಮರುಪಾವತಿ'' ಸೌಲಭ್ಯಕ್ಕೆ ಅರ್ಜಿ ಸಲ್ಲಿಸಲು ದಿನಾಂಕವನ್ನು ವಿಸ್ತರಿಸಲಾಗಿದೆ. ಪೋಷಕರು, ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಮನವಿಯ ಮೇರೆಗೆ, ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ಹಿಂದೆ ನಿಗದಿಪಡಿಸಿದ್ದ ದಿನಾಂಕವನ್ನು ಮೇ 16 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಅಥವಾ ತಾಂತ್ರಿಕ ತೊಂದರೆಗಳಿದ್ದಲ್ಲಿ ಇಲಾಖಾ ಸಹಾಯವಾಣಿ ಮೊ.8050770004 ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ ಸಹಾಯವಾಣಿ 1902 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಿಷ್ಯವೇತನ ತರಬೇತಿಗೆ ಅರ್ಜಿ ಆಹ್ವಾನ

ಬಳ್ಳಾರಿ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಳ್ಳಾರಿ ವಿಭಾಗವು ಐ.ಟಿ.ಐ ಉತ್ತೀರ್ಣರಾದ ಅಭ್ಯರ್ಥಿಗಳಿಂದ ತಾಂತ್ರಿಕ ಶಿಷ್ಯವೇತನ (ಅಪ್ರೆಂಟಿಸ್) ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಬಳ್ಳಾರಿ ವಿಭಾಗದ ಘಟಕ-1, 2, 3 ಹಾಗೂ ಕುರುಗೋಡು, ಸಿರುಗುಪ್ಪ, ಸಂಡೂರು ಘಟಕಗಳಲ್ಲಿ ಎಲೆಕ್ಟ್ರೀಷಿಯನ್-8, ಡೀಸೆಲ್ ಮೆಕ್ಯಾನಿಕ್-20, ಮೋಟಾರ್ ವೆಹಿಕಲ್ ಮೆಕ್ಯಾನಿಕ್-15 ಸೇರಿ ಒಟ್ಟು 43 ಸ್ಥಾನಗಳಿಗೆ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಆಸಕ್ತ ಅಭ್ಯರ್ಥಿಗಳು ಮೊದಲು ಕೇಂದ್ರ ಸರಕಾರದ ಅಧಿಕೃತ ಪೋರ್ಟಲ್ಗಳಾದ www.apprenticeship.gov.in ಅಥವಾ www.ncvtmis.com ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಆನ್ಲೈನ್ನಲ್ಲಿ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳು ಮಾತ್ರ ನೇರ ಸಂದರ್ಶನಕ್ಕೆ ಅರ್ಹರಾಗಿರುತ್ತಾರೆ. ಮೇ 25 ರಂದು ಬೆಳಗ್ಗೆ 11 ಗಂಟೆಗೆ ನಗರದ ಸಿರುಗುಪ್ಪ ರಸ್ತೆಯ ಕೆ.ಕೆ.ಆರ್.ಟಿ.ಸಿ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿಯಲ್ಲಿ ಸಂದರ್ಶನದ ಮೂಲ ದಾಖಲಾತಿಗಳ ಪರಿಶೀಲನೆ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಬಳ್ಳಾರಿಯ ವಿಭಾಗೀಯ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೋಂ ಸ್ಟೇಗಳ ನೋಂದಣಿ ಕಡ್ಡಾಯ

ಹೊಸಪೇಟೆ: ಪ್ರವಾಸಿಗರ ಅನುಕೂಲಕ್ಕಾಗಿ ಹೋಂ ಸ್ಟೇ ಪ್ರಾರಂಭಿಸಲು ಕೆ.ಟಿ.ಟಿ.ಎಫ್-2015 ರ ಕಾಯ್ದೆಯಂತೆ ಪ್ರವಾಸೋದ್ಯಮ ಇಲಾಖೆಯಡಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಆದರೆ ಜಿಲ್ಲೆಯ ವಿಶ್ವ ಪಾರಂಪರಿಕ ತಾಣವಾದ ಹಂಪಿ, ಕಮಲಾಪುರ ವ್ಯಾಪ್ತಿಯಲ್ಲಿ ಹಾಗೂ ಜಿಲ್ಲೆಯ ಇತರೆ ಸ್ಥಳಗಳಲ್ಲಿ ಪ್ರವಾಸೋದ್ಯಮ ಇಲಾಖೆಯಡಿ ನೋಂದಣಿ ಮಾಡಿಕೊಳ್ಳದೇ ಹಲವು ಹೋಂ ಸ್ಟೇ ಗಳು ಕಾರ್ಯ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಪ್ರವಾಸೋದ್ಯಮ ಇಲಾಖೆಯಿಂದ ಯಾವುದೇ ಅಧಿಕೃತ ಅನುಮೋದನೆ ಅಥವಾ ನೋಂದಣಿ ಮಾಡಿಕೊಳ್ಳದೇ ಇರುವ ಹೋಂ ಸ್ಟೇಗಳನ್ನು ಅನಧೀಕೃತ ಹೋಂ ಸ್ಟೇಗಳೆಂದು ಪರಿಗಣಿಸಲಾಗುತ್ತದೆ. ಆದ್ದರಿಂದ ಹೋಂ ಸ್ಟೇಗಳನ್ನು ಕಾನೂನು ಬದ್ಧವಾಗಿ ಮುಂದುವರೆಸಲು ಆಸಕ್ತಿ ಇರುವ ಮಾಲೀಕರು ಅಗತ್ಯ ದಾಖಲೆಗಳೊಂದಿಗೆ ಕಮಲಾಪುರ ಉಪ ನಿರ್ದೇಶಕರ ಕಚೇರಿಗೆ ಭೇಟಿ ನೀಡಲು ತಿಳಿಸಿದ್ದಾರೆ.

{ಪರಮೇಶ್ವರ್} ಗೃಹ ಸಚಿವ

ಪಂಚರಾಜ್ಯ ಚುನಾವಣೆ ಮುಗಿದಿದ್ದು, ರಾಜ್ಯದ ಗೊಂದಲಗಳನ್ನ ಹೈಕಮಾಂಡ್ ಬಗೆಹರಿಸುವ ವಿಶ್ವಾಸ ಇದೆ. ಗೊಂದಲಗಳು ಬಗೆಹರಿಯಲೇಬೇಕು. ನಮ್ಮ ಉದ್ದೇಶ ಆಡಳಿತದ ಮೇಲೆ ಪರಿಣಾಮ ಬೀರಬಾರದು. ಅದಕ್ಕಾಗಿ ಗೊಂದಲ ಬಗೆಹರಿಯಲೇಬೇಕು. ಚುನಾವಣೆಯಲ್ಲಿ ಹೈಕಮಾಂಡ್ ನಾಯಕರು ಬ್ಯುಸಿ ಇದ್ದರು. ಈಗ ಚುನಾವಣೆ ಮುಗಿದಿದೆ. ಆದಷ್ಟು ಬೇಗ ಈ ಗೊಂದಲ ಒಂದು ಹಂತಕ್ಕೆ ಬರುತ್ತದೆ ಅಂತ ನನಗೆ ವಿಶ್ವಾಸ ಇದೆ.

ಅಧಿಕಾರಿಗಳ ಸಭೆ | ಉತ್ಸವ ಬಗ್ಗೆ ವ್ಯಾಪಕ ಪ್ರಚಾರ ನಡೆಸಿ: ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ

ಕನಕಗಿರಿ ಉತ್ಸವದ ಸಿದ್ಧತೆ ಚುರುಕುಗೊಳಿಸಿ

ಕನಕಗಿರಿ: ಉತ್ಸವದ ಹಿನ್ನೆಲೆ ರಚಿಸಲಾಗಿರುವ ವಿವಿಧ ಸಮಿತಿಗಳ ಅಧಿಕಾರಿಗಳು ತಮಗೆ ವಹಿಸಿದ ಕೆಲಸಗಳನ್ನು ಗೊಂದಲಕ್ಕೆ ಅವಕಾಶ ನೀಡದೇ ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಉತ್ಸವಕ್ಕೆ ಕೇವಲ ಒಂದು ವಾರ ಮಾತ್ರ ಬಾಕಿ ಇದ್ದು, ಸಿದ್ಧತೆ ಚುರುಕುಗೊಳ್ಳಬೇಕು ಎಂದು ಕನಕಗಿರಿ ಉತ್ಸವ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಡಾ. ಸುರೇಶ ಬಿ ಇಟ್ನಾಳ ಸೂಚಿಸಿದರು.

> **ಉತ್ಸವದ ಬಗ್ಗೆ ಬ್ಯಾನರ್, ಪೋಸ್ಟರ್ ಮಾಡಿಸಿ ವ್ಯಾಪಕ ಪ್ರಚಾರ ನಡೆಸಬೇಕು. ಹೆಲಿಕ್ಯಾಪ್ಟರ್‌ರೈಡಿಂಗ್ ಕಾರ್ಯವು ಸುರಕ್ಷಿತ ಕ್ರಮಗಳೊಂದಿಗೆ ನಡೆಸಬೇಕಿದೆ. ಉತ್ಸವ ವೇದಿಕೆ ವ್ಯಾಪ್ತಿಯಲ್ಲಿ ಆಸ್ಪತ್ರೆ ತೆರೆಯಲಾಗುವುದು. ಕನಕಗಿರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಔಷಧಿ ದಾಸ್ತಾನು ಮಾಡಿ, ದಿನವಿಡೀ ಆರೋಗ್ಯ ಸೇವೆ ಒದಗಿಸಲು ಮತ್ತು ಅಂಬ್ಯುಲೆನ್ಸ್ ವಾಹನ ಸಿದ್ಧವಿಟ್ಟುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.**
> **-ಡಾ.ಸುರೇಶ ಹಿಟ್ನಾಳ, ಜಿಲ್ಲಾಧಿಕಾರಿ**

ಕನಕಗಿರಿಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಕನಕಗಿರಿ ಉತ್ಸವ- 2026ರ ಆಚರಣೆ ಹಿನ್ನೆಲೆ ವಿವಿಧ ಸಮಿತಿಯ ಅಧಿಕಾರಿಗಳ ಸಭೆ ನಡೆಸಿ ಬುಧವಾರ ಮಾತನಾಡಿದರು.

ವಿವಿಧ ಇಲಾಖೆ ಅಧಿಕಾರಿಗಳನ್ನು ಒಳಗೊಂಡು ಉತ್ಸವ ಆಚರಣೆ ಸಮಿತಿಗಳ ಮೂರನೇ ಸಭೆ ಮಾಡುತ್ತಿದ್ದೇವೆ. ಅಧಿಕಾರಿಗಳು ನಿಮಗೆ ವಹಿಸಲಾಗಿರುವ ಕೆಲಸ- ಕಾರ್ಯಗಳ ಬಗ್ಗೆ ಪದೇ ಪದೇ ನೆನಪು ಮಾಡಿ ಕಾರ್ಯ ನಿರ್ವಹಣೆಗೆ ವೇಗ ನೀಡಲಾಗುತ್ತಿದೆ. ಜನಸಂದಣಿ ನಿಯಂತ್ರಣದ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ಶಿಸ್ತುಬದ್ಧವಾಗಿ ಬ್ಯಾರಿಕೆಡಿಂಗ್ ವ್ಯವಸ್ಥೆ ಮಾಡಬೇಕು. ಆಹಾರ ತಯಾರಿಕೆ ಸ್ಥಳದಲ್ಲಿ ಶುಚಿತ್ವ ಇರಬೇಕು. ಆಹಾರ ಶುಚಿ ಮತ್ತು ರುಚಿಯ ಬಗ್ಗೆ ಗಮನ ಕೊಡಬೇಕು. ಸ್ಥಳೀಯ ಸಂಸ್ಥೆಗಳ ಸಹಕಾರ ಪಡೆದು ತಂಡ ರಚಿಸಿ ಆಹಾರ ಪೂರೈಕೆಗೆ ಕ್ರಮ ವಹಿಸಬೇಕು ಎಂದು ಆಹಾರ ಸಮಿತಿಗೆ ಸೂಚನೆ ನೀಡಿದರು.

ಕ್ರೀಡಾ ತಂಡಗಳ ವಿವರ, ಪಾವತಿಸಬೇಕಾದ ಸಂಭಾವನೆ ಎಲ್ಲವೂ ಪಾರದರ್ಶಕವಾಗಿರಬೇಕು

ಕಲಾವಿದರು, ಕ್ರೀಡಾಪಟುಗಳು ಹಾಗೂ ಪತ್ರಕರ್ತರಿಗೆ ಉಳಿದುಕೊಳ್ಳಲು ರೂಂ ಕಾಯ್ದಿರಿಸಬೇಕು. ಇದಕ್ಕಾಗಿ ಎಲ್ಲ ಕಡೆಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು. ಅಚ್ಚುಕಟ್ಟಾಗಿ ವಾಹನ ಕಾರ್ಯಾಚರಣೆ ಮತ್ತು ಇಂಧನ ವ್ಯವಸ್ಥೆ ಮಾಡಲು ಸಾರಿಗೆ ಸಮಿತಿಗೆ ಸೂಚನೆ ನೀಡಿದರು.

ಕನಕಗಿರಿ ಗ್ರಾಮದ ರಸ್ತೆ ಸ್ವಚ್ಛತೆ ಮತ್ತು ವೇದಿಕೆ ಪ್ರದೇಶದಲ್ಲಿ ಮರಮ ಹಾಕಿಸಬೇಕು. ಕನಕಗಿರಿ ಉತ್ಸವ ಸ್ಥಳದ ಸಂಪರ್ಕ ರಸ್ತೆ ದುರಸ್ತಿ ಮಾಡಿಸಬೇಕು. ಸಾರ್ವಜನಿಕರ ಕುಡಿವ ನೀರಿಗಾಗಿ ನಳ ಮತ್ತು ತಾತ್ಕಾಲಿಕ ಶೌಚಾಲಯಗಳ ನಿರ್ಮಾಣಕ್ಕೆ ಮತ್ತು ವೇದಿಕೆಯ ಸ್ಥಳ ಲೆವೆಲ್ ಮಾಡಲು ಮೂಲಭೂತ ಸೌಕರ್ಯ ಸಮಿತಿಗೆ ಸೂಚನೆ ನೀಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತನುಶ್ರೀ ಟಿ.ಜೆ ರಾಮಚಂದ್ರ, ಉಪಾಧ್ಯಕ್ಷ ಕಂಠಿರಂಗಪ್ಪ ನಾಯಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಡಿವೈಎಸ್ಪಿ ಸಿದ್ದಲಿಂಗಪ್ಪಗೌಡ ಪಾಟೀಲ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ಕನಕಗಿರಿ ತಹಸೀಲ್ದಾರ ವಿಶ್ವನಾಥ ಮುರಡಿ, ತಾಪಂ ಇಒ ಕೆ.ರಾಜಶೇಖರ ಇದ್ದರು.

ಕನಕಗಿರಿಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಕನಕಗಿರಿ ಉತ್ಸವ- 2026ರ ಆಚರಣೆ ಹಿನ್ನೆಲೆ ವಿವಿಧ ಸಮಿತಿಯ ಅಧಿಕಾರಿಗಳ ಸಭೆ ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಸಮಿತಿ ಅಧ್ಯಕ್ಷರಿಗೆ ಸೂಚನೆ

ಸಮಿತಿವಾರು ಪ್ರಗತಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಅತಿಥಿಗಳ ಸ್ವಾಗತ, ವಸತಿ, ಊಟ, ಸಾರಿಗೆ, ಗಣ್ಯರು, ಕಲಾವಿದರಿಗೆ ಸನ್ಮಾನ ಸಾಮಗ್ರಿ ಹಾಗು ಶಿಷ್ಟಾಚಾರದ ಬಗ್ಗೆ ಗಮನ ಹರಿಸಬೇಕು ಎಂದು ಸಹಾಯಕ ಆಯುಕ್ತರ ಅಧ್ಯಕ್ಷತೆಯ ಸ್ವಾಗತ ಸಮಿತಿಗೆ ಸೂಚನೆ ನೀಡಿದರು. ಉತ್ಸವಕ್ಕೆ ಆಯ್ಕೆ ಆಗುವ ಕಲಾವಿದರಿಗೆ ಗೊಂದಲಕ್ಕೆ ಅವಕಾಶವಿಲ್ಲದಂತೆ ಸಂಭಾವಣೆ ಪಾವತಿಗೆ ಕ್ರಮ ವಹಿಸಬೇಕು ಎಂದು ಸಾಂಸ್ಕೃತಿಕ ಸಮಿತಿಗೆ ಸೂಚನೆ ನೀಡಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ | ಪಿಡಿಒಗಳಿಂದ ಜಿಪಂ ಸಿಇಒಗೆ ಮನವಿ

ಪಿಡಿಒ ಮುಕ್ತಂ ಹುಸೇನ್ ಸಾವಿನ ತನಿಖೆಗೆ ಒತ್ತಾಯ

ಕೊಪ್ಪಳ: ಗದಗ ಜಿಲ್ಲೆ ರೋಣ ತಾಲೂಕಿನ ಅಸೂಟಿ ಹಾಗೂ ಕೊತಬಾಲ ಎಂಬ ಎರಡು ಗ್ರಾಪಂಗೆ ಪಿಡಿಒ ಆಗಿದ್ದ ಮುಕ್ತಂ ಹುಸೇನ ಕರಡಿಗುಡ್ಡ ಸಾವಿನ ಬಗ್ಗೆ ಸೂಕ್ತ ತನಿಖೆ ಆಗ್ರಹಿಸಿ, ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಬುಧವಾರ ಮನವಿ ಸಲ್ಲಿಸಿದರು.

ಮಾನಸಿಕ ಕಿರುಕುಳಕ್ಕೆ ಒಳಗಾಗಿ ಪಿಡಿಒ ಮುಕ್ತಂ ಹುಸೇನ ಕರಡಿಗುಡ್ಡ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದ ದೂರುಗಳಿಗೆ. ಕೆಲಸದ ಒತ್ತಡ ಹಾಗೂ ಹಿಂದಿನ ಪ್ರಕರಣವೊಂದರ ಮೇಲಿದ್ದ ಲೋಕಾಯುಕ್ತ ತನಿಖೆ ಹಾಗೂ ವೇತನ ವಿಳಂಭದಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬುದರ ಬಗ್ಗೆ ಸಮಗ್ರ ತನಿಖೆ ಆಗಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಈ ಘಟನೆ ರಾಜ್ಯದ ಪಿಡಿಒಗಳನ್ನು ತೀವ್ರ ಆಘಾತಕ್ಕೆ ಒಳಗಾಗುವಂತೆ ಮಾಡಿದೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಪಿಡಿಒಗಳು ತೀವ್ರವಾದ ಕೆಲಸದ ಒತ್ತಡದಲ್ಲಿ ನಲುಗಿ ಹೋಗಿದ್ದಾರೆ. ಈ ಕುರಿತು ಅಧ್ಯಯನಕ್ಕೆ ಮೀನಾಕ್ಷಿ ಸುಂದರಂ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಈ ಸಮಿತಿ ಇದುವರೆಗೂ ಸರಕಾರಕ್ಕೆ ವರದಿ ಸಲ್ಲಿಸಿಲ್ಲ. ನೌಕರರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ಇಂತಹ ವ್ಯವಸ್ಥಿತ ಒತ್ತಡ ತಡೆಯಲು ಈ ವರದಿ ಅತ್ಯಂತ ಅವಶ್ಯಕವಾಗಿದೆ. ಕೂಡಲೇ ಸಮಿತಿ ವರದಿ ಸಲ್ಲಿಸುವಂತೆ ಒತ್ತಾಯಿಸಿದರು.

ವಿಚಾರಣಾ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಕಡ್ಡಾಯವಾಗಿ ಹಾಗೂ ಸಕಾಲದಲ್ಲಿ ಪಾವತಿಸಬೇಕು. ಕೂಡಲೇ ಮೀನಾಕ್ಷಿ ಸುಂದರಂ ಸಮಿತಿಯಿಂದ ವರದಿ ಪಡೆದು, ಅದರಲ್ಲಿನ ಶಿಫಾರಸುಗಳನ್ನು ಜಾರಿಗೊಳಿಸುವ ಮೂಲಕ ನೌಕರರ ಸುರಕ್ಷತೆ ಮತ್ತು ಹಿತರಕ್ಷಣೆಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂಬುದು ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು.

ಉಪ ಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಯೋಜನಾ ನಿರ್ದೇಶಕ ಎಸ್. ಎನ್. ಕಾಂಬ್ಳೆ, ರಾಜ್ಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಸುರೇಶ ಚಲವಾದಿ, ರಾಜ್ಯ ಪರಿಷತ್ ಸದಸ್ಯ ಶಿವಬಸಪ್ಪ, ಜಿಲ್ಲಾ ಖಜಾಂಚಿ ನಿಂಗಪ್ಪ ಮೂಲಿಮನಿ, ಜಿಲ್ಲಾ ಘಟಕದ ಪದಾಧಿಕಾರಿಗಳು, ಜಿಲ್ಲೆಯ ಪಿಡಿಒ, ಕಾರ್ಯದರ್ಶಿಗಳು ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಇದ್ದರು.

ಕೊಪ್ಪಳದ ಜಿಲ್ಲಾಡಳಿತ ಭವನದ ಮುಂದೆ ರೋಣ ತಾಲೂಕು ಅಸೂಟಿ ಹಾಗೂ ಕೊತಬಾಲ ಪಿಡಿಒ ಮುಕ್ತಂ ಹುಸೇನ ಕರಡಿಗುಡ್ಡ ಸಾವಿನ ಬಗ್ಗೆ ಸೂಕ್ತ ತನಿಖೆ ಆಗ್ರಹಿಸಿ, ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಬುಧವಾರ ಜಿಪಂ ಸಿಇಒಗೆ ಮನವಿ ಸಲ್ಲಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಹರಪನಹಳ್ಳಿಯ ಪ್ರಗತಿಪರ ಶಿಕ್ಷಕರ ವೇದಿಕೆಯ ತಂಡವು ಸೋಮವಾರ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರ ನಿವಾಸಕ್ಕೆ ತೆರಳಿ ಸನ್ಮಾನಿಸಿ ಗೌರವಿಸಿತು.

ಕುಡಿವ ನೀರಿನ ತೊಂದರೆ ಆಗದಿರಲಿ

ಲಿಂಗಸೂಗೂರು: ಬೇಸಿಗೆಯ ಹಿನ್ನೆಲೆಯಲ್ಲಿ ಪಟ್ಟಣದ ಜನತೆಗೆ ಕುಡಿಯುವ ನೀರಿನ ಯಾವುದೇ ರೀತಿಯ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪುರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ಸಮೀಪದ ಕಾಳಾಪುರ ಹತ್ತಿರದ ಕುಡಿಯುವ ನೀರಿನ ಕೆರೆಯನ್ನು ವೀಕ್ಷಣೆ ನೀರಿನ ಸಂಗ್ರಹಣೆ ಮತ್ತು ವಿತರಣೆಯ ವ್ಯವಸ್ಥೆಯನ್ನು ಪರಿಶೀಲಿಸಿದರು. ಕೆರೆಯಲ್ಲಿ ಪ್ರಸ್ತುತ ಇರುವ ನೀರಿನ ಪ್ರಮಾಣ ಮತ್ತು ಗುಣಮಟ್ಟ ಹಾಗೂ ನೀರು ಪಟ್ಟಣಕ್ಕೆ ಎಷ್ಟು ದಿನಗಳವರೆಗೆ ಪೂರೈಕೆಯಾಗಬಹುದು ಎಂಬ ಬಗ್ಗೆ ಮಾಹಿತಿ ಪಡೆದರು.

ಕೆರೆಯ ನೀರಿನ ಮಟ್ಟ ಕಡಿಮೆಯಾದಲ್ಲಿ ತಕ್ಷಣವೇ ಮುಖ್ಯ ಇಂಜಿನಿಯರ್ ಅವರೊಂದಿಗೆ ಮಾತನಾಡಿ, ಜಲಾಶಯದಿಂದ ನೀರು ಬಿಡಿಸುವ ಮೂಲಕ ಕೆರೆ ತುಂಬಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜನ ಸಾಮಾನ್ಯರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡುವುದು ನಮ್ಮ ಮೊದಲ ಆದ್ಯತೆ. ಈ ನಿಟ್ಟಿನಲ್ಲಿ ಪುರಸಭೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಿಸಬೇಕು ಎಂದು ಸೂಚಿದರು.

ಈ ಸಂದರ್ಭದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಭೂಪನಗೌಡ ಕರಡಕಲ್, ಜಿಲ್ಲಾ ಗ್ಯಾರಂಟಿ ಯೋಜನೆ ಅಧ್ಯಕ್ಷ ಪಾಮಯ್ಯ ಮುರಾರಿ, ಮುಖಂಡರಾದ ಬಸವರಾಜಗೌಡ ಗಣೇಕಲ್, ಅಮರೇಶ ನಾಡಗೌಡ್ರು, ಸೋಮಶೇಖರ್ ಐದನಾಳ, ಶರಣಬಸವ ವಾರದ, ಪ್ರಮೋದ್ ಕುಲಕರ್ಣಿ, ಅನಿಷಾ ಪಾಶ, ವಿಜಯಕುಮಾರ್ ಹೊಸಗೌಡ್ರು ಸೇರಿದಂತೆ ಪುರಸಭೆಯ ಮುಖ್ಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

ಕಾಳಾಪುರ ಹತ್ತಿರದ ಕುಡಿಯುವ ನೀರಿನ ಕೆರೆಯನ್ನು ವೀಕ್ಷಣೆ ನೀರಿನ ಸಂಗ್ರಹಣೆ ಮತ್ತು ವಿತರಣೆಯ ವ್ಯವಸ್ಥೆಯನ್ನು ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪು ಪರಿಶೀಲಿಸಿದರು.

ಮಕ್ಕಳಲ್ಲಿ ರಂಗ ಭೂಮಿ ಕಲೆ ಆಸಕ್ತಿ ಬೆಳೆಸಿ

ರಂಗಭಾರತಿ ಆಯೋಜಿಸಿರುವ ಬೇಸಿಗೆ ಚಿಣ್ಣರ ಮೇಳ 2026 ಸಮಾರೋಪ ಸಮಾರಂಭದಲ್ಲಿ ಪ್ರಾಧ್ಯಾಪಕ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಮಾತನಾಡಿದರು.

ಹೂವಿನಹಡಗಲಿ: ಆಧುನಿಕ ರಂಗ ಪರಂಪರೆಗೆ ವೇದಿಕೆಯನ್ನು ಕಲ್ಪಿಸಿಕೊಟ್ಟವರು ದಿವಂಗತ ಎಂಪಿ ಪ್ರಕಾಶ್ ಎಂದು ಕೃಷ್ಣದೇವರಾಯ ವಿಜಯನಗರ ವಿಶ್ವವಿದ್ಯಾಲಯದ ಕಲೆ ನಾಟಕ ವಿಭಾಗದ ಪ್ರಾಧ್ಯಾಪಕ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಹೇಳಿದರು.

ರಂಗಭಾರತಿ ಆಯೋಜಿಸಿರುವ ಬೇಸಿಗೆ ಚಿಣ್ಣರ ಮೇಳ 2026ಜ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಇಂದು ಸಾಂಸ್ಕೃತಿಕ ಕ್ಷೇತ್ರ ಬಡವಾಗುತ್ತಿದೆ ಮಕ್ಕಳಿಗೆ ಸೂಕ್ಷ್ಮತೆಯನ್ನು ಕಲಿಸಬೇಕಾಗಿದೆ, ಮಕ್ಕಳು ಬೀಳದಿದ್ದರೆ ಎದ್ದು ನಿಲ್ಲಲು ಸಾಧ್ಯವಿಲ್ಲ ಎಂದರು. ನಿರಂತರ ಕಲಿಕೆಯ ಮೂಲಕ ರಂಗಭೂಮಿಯನ್ನು ಮಕ್ಕಳಿಗೆ ಕಲಿಸುವ ಪ್ರಯತ್ನ ಮಾಡಬೇಕಾಗಿದೆ ಎಂದರು.

ವಿಶ್ರಾಂತ ಪ್ರಾಚಾರ್ಯ ಪ್ರೊ.ಶಾಂತಮೂರ್ತಿ .ಬಿ.ಕುಲಕರ್ಣಿ ಅಧ್ಯಕ್ಷತೆವಹಿಸಿ ಮಾತನಾಡಿ, ಕಲಿಕೆಗೆ ಅಂತ್ಯವಿಲ್ಲ ನಾಟಕ, ಸಂಗೀತ, ನೃತ್ಯ, ಸಾಂಸ್ಕೃತಿಕತೆ ಮನುಷ್ಯನ ಜೀವನಕ್ಕೆ ಬಹಳ ಅವಶ್ಯಕ. ತಂದೆ ತಾಯಿಗಳು ತಮ್ಮ ಕನಸುಗಳನ್ನು ಮಕ್ಕಳ ಮೇಲೆ ಹೇರಬಾರದು, ಅವರ ಆಸಕ್ತಿಯಂತೆ ಅವರ ಬೆಳವಣಿಗೆಯಲ್ಲಿ ಸಹಾಯ ಮಾಡಬೇಕು ಎಂದರು.

ಕಲಾವಿದರ ಪ್ರಪಂಚ ಭಿನ್ನವಾಗಿರುತ್ತದೆ ಪ್ರಕಾಶ್ರು ಹಾಕಿಕೊಟ್ಟಂತ ಪರಂಪರೆಯನ್ನ ಅವರ ಮಕ್ಕಳು ಮುಂದುವರಿಸಿದ್ದಾರೆ ಎಂದರು.

ರಂಗಭಾರತಿ ಕಾರ್ಯಾಧ್ಯಕ್ಷೆ ಎಂ.ಪಿ.ಸುಮಾ ವಿಜಯ್ ಮಾತನಾಡಿ ಮಕ್ಕಳಲ್ಲಿ ಕ್ರಿಯಾಶೀಲತೆ ಕಡಿಮೆಯಾಗುತ್ತಿದೆ, ಮಕ್ಕಳನ್ನು ಅತಿಯಾಗಿ ಮುದ್ದು ಮಾಡಬೇಡಿ ಶಿಸ್ತು ಕಲಿಸುವ ಕಡೆ ಗಮನ ಕೊಡಿ ಎಂದು ಹೇಳಿದರು. ಮಕ್ಕಳ ಬೆಳವಣಿಗೆಯಲ್ಲಿ ತಂದೆ ತಾಯಿಗಳ ಜವಾಬ್ದಾರಿಯು ಇದೆ. ನಮ್ಮ ತಂದೆಯವರು ಮಾಡಿ ಹೋದಂತಹ ಸಾಂಸ್ಕೃತಿಕ ಪರಂಪರೆಯನ್ನು ಉಳಿಸುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಪಿ. ಎಂ.. ಶಿವಪ್ರಕಾಶ್ ಮಾತನಾಡಿದರು.

ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ವಕೀಲರಾದ ಅಟವಾಳಗಿ ಕೊಟ್ರೇಶ್, ರಾಘವೇಂದ್ರ ರಾಯ್ಕರ್ ಇದ್ದರು.

ಮುದಗಲ್ ಪಟ್ಟಣ ಸಮೀಪದ ರಾಮತ್ನಾಳ ಗ್ರಾಮದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿ ಅಭಿನಂದಿಸಲಾಯಿತು. ಮೂದೇನೂರು ಸರಕಾರಿ ಪ್ರೌಢ ಶಾಲೆಯಲ್ಲಿ ದೀಪಾ ನಾಗಪ್ಪ ಮಾವಿನಭಾವಿ ಪ್ರಥಮ, ದ್ವಿತೀಯ ಶಿವಲೀಲಾ ಅಂದಪ್ಪ ಇಟಗಿ ದ್ವಿತಿಯ ಸ್ಥಾನ ಮತ್ತು ಶೇ. 80 ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಾದ , ಪ್ರದೀಪ್ ಪೊಲೀಸ್ ಪಾಟೀಲ್, ಶಂಕ್ರಮ್ಮ ಚೌದ್ರಿ, ಹೇಮಂತರಾಜ್ ಪೊಲೀಸ್ ಪಾಟೀಲ್ ಇವರನ್ನ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯಗುರು ಅಮರಪ್ಪ, ಸಂಗನಗೌಡ ಪೊಲೀಸ್ ಪಾಟೀಲ್, ರಮೇಶ್ ಇಟಗಿ, ಅಂದಪ್ಪ ನಾಯಕ, ಸಂಚಾಲಕ ಮಹಾಂತೇಶ್ ಬಳೂಟಗಿ, ಮಹಾಂತೇಶ ಅರಳಳ್ಳಿ, ಆಶಾ ಕಾರ್ಯಕರ್ತೆ ಶಾಂತಮ್ಮ ಬಡಿಗೇರ, ಅಂಗನವಾಡಿ ಕಾರ್ಯಕರ್ತೆ ಸಾವಿತ್ರಿ ಅರಳ್ಳಿ ಇದ್ದರು.

ಆರ್ಥಿಕ ಸಂಕಷ್ಟದ ನಡುವೆ ಖುದ್ದು ಮಾರಾಟಕ್ಕಿಳಿದ ರೈತರು | ಕಡಿಮೆ ದರದಲ್ಲಿ ಮಾರಾಟ

ಅಕಾಲಿಕ ಮಳೆ: ಮಾವಿನ ಇಳುವರಿ ಕುಂಠಿತ

ಬಸವರಾಜ ನಾಗಡದಿನ್ನಿ ರಾಯಚೂರು:

ಅಕಾಲಿಕ ಮಳೆ ಮತ್ತು ಅಧಿಕವಾಗಿದ್ದ ಬಿಸಿಲಿನ ತಾಪದಿಂದಾಗಿ ಮಾವಿನ ಹಣ್ಣಿನ ಇಳುವರಿ ಈ ಬಾರಿ ಕುಂಠಿತಗೊಂಡಿದೆ. ತಾಪಮಾನದ ಸಂಕಷ್ಟದ ನಡುವೆಯೂ ರೈತರಿಗೆ ಬೀದಿಗಿಳಿದು ಮಾರಾಟ ಮಾಡುತ್ತಿದ್ದು, ದಲ್ಲಾಳಿಗಳು ಬೇರೆ ಜಿಲ್ಲೆಗಳಿಂದ ಮಾವು ಖರೀದಿಸಿ ಮಾರುವಂತಾಗಿದೆ.

ಕಾಲಮಾನಕ್ಕೆ ತಕ್ಕಂತೆ ಹಣ್ಣುಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತವೆ. ಅದರಲ್ಲೂ ಬೇಸಿಗೆ ಶುರುವಾದರೆ ಹಣ್ಣುಗಳ ರಾಜ ಎಂದೇ ಕರೆಸಿಕೊಳ್ಳುವ ಮಾವಿನ ಹಣ್ಣಿನ ತರಹೇವಾರಿ ತಳಿಗಳಾದ ಮಲಗೋಬಾ, ತೋತಾಪುರಿ, ರಸಪುರಿ, ಸಿಂಧೂರಿ ಸೇರಿ ವಿವಿಧ ಹಣ್ಣುಗಳ ರುಚಿ ಸವಿಯಲು ಜನರು ಕಾದುಕುಳಿತಿರುತ್ತಾರೆ. ಆದರೆ ಈ ಬಾರಿ ಮಾವಿನ ಹಣ್ಣುಗಳ ಇಳುವರಿ ಕಡಿಮೆಯಾಗಿದೆ. ಹಾಗಾಗಿ ಮಾವು ಬೆಳೆದ ರೈತರು ದಲ್ಲಾಳಿಗಳಿಗೆ ಮಾವು ನೀಡದೆ, ತಾವೇ ಮಾವಿನ ಹಣ್ಣನ್ನು ನಗರ ಪ್ರದೇಶದ ರಸ್ತೆ ಬದಿಯಲ್ಲಿ ಗ್ರಾಹಕರ ಕೈ ಸುಡದಂತೆ ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿದ್ದಾರೆ.

ಇನ್ನೂ ರೈತರು ಹಳ್ಳಿ ಹಳ್ಳಿ ಸಂಚಾರ ಮಾಡಿ ಮಾವು ಮಾರಾಟಕ್ಕೆ ಮುಂದಾಗಿದ್ದಾರೆ. ಡಿಸೆಂಬರ್‌ಹಾಗೂ ಜನವರಿ ತಿಂಗಳಿನಲ್ಲಿ ಸುರಿದ ಅಕಾಲಿಕ ಮಳೆಯಿಂದ ಜಿಲ್ಲೆಯಲ್ಲಿ 1000 ಹೇಕ್ಟರ್‌ಪ್ರದೇಶದಲ್ಲಿ ಮಾವು ಬೆಳೆಯಲಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ರಾಯಚೂರು ತಾಲೂಕಿನಲ್ಲಿ ತುಂಗಭದ್ರಾ, ಮತ್ತು ಕೃಷ್ಣಾನದಿ ಪಾತ್ರ, ಗ್ರಾಮಗಳು ಹಾಗೂ ಚಂದ್ರಬಂಡಾ ಹೋಬಳಿ, ಯರಗೇರಾ ಸೇರಿದಂತೆ ಇತರೆ ಹಳ್ಳಿಗಳ ರೈತರು ಕೊಳವೆ ಬಾವಿ ಆಶ್ರಯಿಸಿ ಬೆಳೆದಿದ್ದಾರೆ. ಆದರೆ ಈ ಬಾರಿ ಮಾತ್ರ ಫಸಲು ಅಂದುಕೊಂಡಂತೆ ಬಂದಿಲ್ಲ. ಎಕರೆಗೆ ಕನಿಷ್ಠ 10 ಟನ್ನಿಂದ ನಿಂದ 15 ಟನ್ವರೆಗೆ ಇಳುವರಿ ಸಿಗುತಿತ್ತು. ಆದರೆ, ಈ ಬಾರಿ ಕೇವಲ 5 ರಿಂದ 6 ಟನ್ ಮಾತ್ರ ಇಳುವರಿ ಬಂದಿದೆ. ಇದರಿಂದ ರೈತರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವಂತಾಗಿದೆ. ಮಾವಿನ ತೋಟ ಹೊಂದಿದ ಮಾಲೀಕರು ತೋಟದಲ್ಲಿ 100 ಮಾವಿನ ಗಿಡಕ್ಕೆ ವರ್ಷಕ್ಕೆ 4 ಲಕ್ಷ ರು.ದಂತೆ ತೋಟವನ್ನು ಲಿಜ್ ಗೆ ನೀಡುತ್ತಿದ್ದು, ಈ ಬಾರಿ ಲಿಜ್ ಪಡೆದವರ ಪರಸ್ಥಿತಿ ಚಿಂತಾಜನಕವಾಗಿದೆ. ಒಂದು ಮಾವಿನ ತೋಟಕ್ಕೆ ಔಷಧ, ರಸಗೊಬ್ಬರ ಸೇರಿ ಸುಮಾರು 8 ಲಕ್ಷ ರು.ಖರ್ಚಾಗಿದ್ದು, ಹಾಕಿದ ಬಂಡವಾಳವೂ ಸಿಗದೆ ರೈತರು ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಜಿಲ್ಲೆಯಲ್ಲಿ ಶೇ.90 ಕ್ಕೂ ಹೆಚ್ಚು ರೈತರು ಬೆನ್‌ಶ್ಯಾನ್ ತಳಿಯ ಮಾವುಗಳನ್ನೇ ಬೆಳೆಯುತಿದ್ದು, ಇಲ್ಲಿನ ವಾತಾವರಣಕ್ಕೆ ಅದು ಹೆಚ್ಚು ಸೂಕ್ತವಾಗಿದೆ. ಅದು ಬಿಟ್ಟರೆ ಅಲ್ಲಲ್ಲಿ ಬ್ಲೇಸರಿ ತಳಿಯ ಮಾವು ಬೆಳೆಯಲಾಗುತ್ತಿದ್ದು, ರೈತರು ತಾವು ಬೆಳೆದ ಬೆಳೆಯನ್ನು ಮಾರುಕಟ್ಟೆಯಲ್ಲಿ ದಲ್ಲಾಳಿಗಳು 30 ರೂ. ಕೆ.ಜಿ.ಯಂತೆ ಖರೀದಿಸಿ ಗ್ರಾಹಕರಿಗೆ ಕೆ.ಜಿ.ಗೆ 100 ರು. ಮಾರಾಟ ಮಾಡುತ್ತಾರೆ. ಆದ್ದರಿಂದ ರೈತರು ದಲ್ಲಾಳಿಗಳಿಗೆ ಮಾವು ಮಾರಾಟ ಮಾಡದೆ, ಆಟೋದಲ್ಲಿ ಹಳ್ಳಿ ಹಳ್ಳಿಗೆ ತೆರಳಿ ಕೆ.ಜಿ.ಗೆ 70 ರು.ಯಂತೆ ಮಾರಾಟ ಮಾಡುತ್ತಿದ್ದಾರೆ.

ಆರ್ಥಿಕ ಸಂಕಷ್ಟದ ನಡುವೆ ಖುದ್ದು ಮಾರಾಟಕ್ಕಿಳಿದ ರೈತರು.

> **ಪ್ರತಿ ವರ್ಷ 3 ರಿಂದ 4 ಸಾವಿರ ಹೆಕ್ಟರ್‌ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿತ್ತು. ಆದರೆ ಈ ಬಾರಿ ಅಕಾಲಿಕ ಮಳೆ ಹಾಗೂ ಉಷ್ಣಾಂಶ ಹೆಚ್ಚಳದಿಂದ ಈ ಬಾರಿ ಮಾಹಿನ ಹಣ್ಣಿನ ಫಸಲು ಕಡಿಮೆ ಬಂದಿದ್ದು, ರೈತರಿಗೆ ಕಷ್ಟವಾಗಿದೆ. ಆದರಿಂದ ರೈತರು ಹಳ್ಳಿ ಹಳ್ಳಿಗೆ ತೆರಳಿ ಮಾವು ಮಾರಾಟ ಮಾಡಿ ಲಾಭ ಪಡೆಯಲು ಮುಂದಾಗಿದ್ದಾರೆ.**
> **-ಮಹ್ಮದ್ ಅಲಿ,** ಉಪ ನಿರ್ದೇಶಕ ತೋಟಗಾರಿಕೆ ಇಲಾಖೆ ರಾಯಚೂರು

ಸಮಾಚಾರ ಸಣ್ಣದಲ್ಲ

ಬಂಧಿತ ವೈದ್ಯರ ಪರ ಶಾಸಕ ಬ್ಯಾಟಿಂಗ್

ಮಂಡ್ಯ: ಬಾಲಗರ್ಭಿಣಿಯರ ಸ್ಕ್ಯಾನಿಂಗ್ ಪ್ರಕರಣದಲ್ಲಿ ವೈದ್ಯರನ್ನು ಬಂಧಿಸಿರುವುದು ಸರಿಯಲ್ಲ ಎಂದು ಹೇಳುವ ಮೂಲಕ ಜೆಡಿಎಸ್ ಶಾಸಕ ವಿವಾದ ಸೃಷ್ಟಿ ಮಾಡಿದ್ದಾರೆ. ಕಳೆದ ಒಂದು ವಾರದ ಹಿಂದೆ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ಬಾಲ ಗರ್ಭಿಣಿಯರನ್ನು ಕಾನೂನು

ಬಾಹಿರವಾಗಿ ಸ್ಕ್ಯಾನಿಂಗ್ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿತ್ತು. ಈ ಹಿನ್ನೆಲೆ ಪೊಲೀಸರು ಮೂವರು ವೈದ್ಯರನ್ನ ಬಂಧನ ಮಾಡಿದ್ದಾರೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಎಚ್.ಡಿ ಮಂಜು ವೈದ್ಯರ ಬೆಂಬಲಕ್ಕೆ ಬಂದಿದ್ದಾರೆ. ವೈದ್ಯರು ಯಾವುದೇ ತಪ್ಪು ಮಾಡಿಲ್ಲ, ಅಲ್ಲಿ ನೆಗ್ಲಿಜೆನ್ಸಿಯಷ್ಟೆ ಆಗಿದೆ. ಅಷ್ಟಕ್ಕೆ ಅವರನ್ನ ಬಂಧಿಸಿ ಜೈಲಿಗೆ ಹಾಕೋದು ಸರಿಯಲ್ಲ. ಇದರಿಂದ ವೈದ್ಯರನ್ನು ಮಾನಸಿಕವಾಗಿ ಕುಗ್ಗಿಸಿದಂತೆ ಆಗುತ್ತದೆ. ತಪ್ಪು ಯಾರು ಮಾಡಿದ್ದಾರೋ ಅವರ ವಿರುದ್ಧ ಕ್ರಮವಾಗಬೇಕು, ಅದನ್ನು ವೈದ್ಯರನ್ನು ಬಂಧಿಸುವುದು ಸರಿಯಲ್ಲ. ಈ ರೀತಿ ಪ್ರಕರಣಗಳು ಆದರೆ ವೈದ್ಯರು ಸೇವೆ ಸಲ್ಲಿಸಲು ಹಿಂದೇಟು ಹಾಕುತ್ತಾರೆ ಎಂದು ಎಚ್.ಟಿ ಮಂಜು ಬಂಧಿತ ವೈದ್ಯರ ಪರ ಬ್ಯಾಟಿಂಗ್ ಮಾಡಿದ್ದಾರೆ.

ವಿದೇಶದಿಂದ ಭಾರತಕ್ಕೆ 100 ಮೆ. ಟನ್ ಚಿನ್ನ

ದೆಹಲಿ: ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸತತ ಮೂರನೇ ಆರ್ಥಿಕ ವರ್ಷದಲ್ಲಿ 100 ಮೆಟ್ರಿಕ್ ಟನ್‌ಗಿಂತ ಹೆಚ್ಚು ಚಿನ್ನವನ್ನು ವಿದೇಶಿ ಕಮಾನುಗಳಿಂದ ಭಾರತಕ್ಕೆ ಸ್ಥಳಾಂತರಿಸಿ ಹ್ಯಾಟ್ರಿಕ್ ಸಾಧನೆ ಮಾಡಿದೆ. 2025-26ರ ಆರ್ಥಿಕ

ವರ್ಷದಲ್ಲಿ ಆರ್‌ಬಿಐ ಸುಮಾರು 168.06 ಮೆಟ್ರಿಕ್ ಟನ್ ಚಿನ್ನವನ್ನು ಯುನೈಟೆಡ್ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಸೆಟಲೆಂಟ್‌ನಿಂದ ಭಾರತಕ್ಕೆ ತಂದಿತ್ತು. 2023-24 ರಲ್ಲಿ 107.21 ಮೆಟ್ರಿಕ್ ಟನ್, 2024-25ರಲ್ಲಿ 103.68 ಮೆಟ್ರಿಕ್ ಟನ್ ಮತ್ತು 2025-26ರಲ್ಲಿ 168.06 ಮೆಟ್ರಿಕ್ ಟನ್ ಚಿನ್ನವನ್ನು ಮರಳಿ ತರಲಾಗಿದೆ. ಮಾರ್ಚ್ 2023ರಲ್ಲಿ ಕೇವಲ ಶೇ.38ರಷ್ಟಿದ್ದ ದೇಶೀಯ ಚಿನ್ನದ ಸಂಗ್ರಹವು, ಏಪ್ರಿಲ್ 2026ರ ಹೊತ್ತಿಗೆ ಶೇ.77ಕ್ಕೆ (880.52 ಮೆಟ್ರಿಕ್ ಟನ್, ಒಟ್ಟು ಸಂಗ್ರಹದಲ್ಲಿ 680 ಮೆಟ್ರಿಕ್ ಟನ್) ಏರಿಕೆಯಾಗಿದೆ. ಜಾಗತಿಕ ಭೌಗೋಳಿಕ-ರಾಜಕೀಯ ಅನಿಶ್ಚಿತತೆಗಳು ಮತ್ತು ದೇಶದ ಆರ್ಥಿಕ ಭದ್ರತೆಯನ್ನು ಬಲಪಡಿಸುವ ದೃಷ್ಟಿಯಿಂದ, ಚಿನ್ನವನ್ನು ಸ್ಥಳೀಯವಾಗಿ ಸಂಗ್ರಹಿಸಲು ಆರ್‌ಬಿಐ ಈ ನಿರ್ಧಾರ ತೆಗೆದುಕೊಂಡಿದೆ. ಈ ನಿರ್ಧಾರವು 1991ರ ನಂತರದ ಅತಿದೊಡ್ಡ ಚಿನ್ನದ ಸ್ಥಳಾಂತರವೆಂದು ಪರಿಗಣಿಸಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ತಾಕತ್ತಿದ್ದರೆ ಸಿಎಂ ಸ್ಥಾನದಿಂದ ವಜಾ ಮಾಡಿ: ದೀದಿ ಸವಾಲು

ಪಟ್ಟು ಬಿಡದ ಮಮತಾ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಣೆ

ಕೋಲ್ಕತ್ತಾ: ವಿಧಾನಸಭಾ ಚುನಾವಣೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಪುನರುಚ್ಚರಿಸಿರುವ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ಹೊಸದಾಗಿ ಆಯ್ಕೆಯಾದ ಶಾಸಕರ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಾವು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ, ಬೇಕಿದ್ದರೆ ಅವರು ನನ್ನನ್ನು ವಜಾ ಮಾಡಲಿ ಎಂದು ಕೇಂದ್ರ ಸರಕಾರಕ್ಕೆ ಸವಾಲು ಹಾಕಿದ್ದಾರೆ.

ಮಮತಾ ಅವರ ನಡೆ ಸಾಂವಿಧಾನಿಕ ಬಿಕ್ಕಟ್ಟನ್ನು ಸೃಷ್ಟಿಸುವ ಸಾಧ್ಯತೆ ಇದೆ. ಮಮತಾ ಸರಕಾರವನ್ನು ವಜಾ ಮಾಡುವ ಅವಕಾಶವಿದ್ದರೂ, ರಾಜ್ಯಪಾಲರು ಇದಕ್ಕೂ ಮುನ್ನ ಸುಪ್ರೀಂ ಕೋರ್ಟ್ ಮೊರೆ ಹೋಗುವ ಸಾಧ್ಯತೆ ಇದೆ. ಮಮತಾ ಬ್ಯಾನರ್ಜಿ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವು ಚುನಾವಣೆಯಲ್ಲಿ ಸೋತಿಲ್ಲ. ಇದು ಕೇಸರಿ ಪಕ್ಷದ ಜೊತೆಗೂಡಿ ಚುನಾವಣಾ ಆಯೋಗ ನಡೆಸಿರುವ ಅಕ್ರಮವಾಗಿದೆ. ಹೀಗಾಗಿ ನಾನು ರಾಜಭವನಕ್ಕೆ ಹೋಗುವುದಿಲ್ಲ. ನಾನು ರಾಜೀನಾಮೆ ನೀಡುವುದಿಲ್ಲ ಎಂದು ಪುನರುಚ್ಚರಿಸಿದ್ದಾರೆ.

ಮುಂದಿನ ನಡೆ ಏನು?: ಚುನಾವಣೆಯಲ್ಲಿ ಸೋತ ಮೇಲೆ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು ಎನ್ನುವ ನಿಯಮ ಸಂವಿಧಾನದಲ್ಲಿ ಇಲ್ಲ. ಇದು ನಿಯಮಕ್ಕಿಂತ ಹೆಚ್ಚಾಗಿ ಇದನ್ನು ಗೌರವಯುತ ಸಂಪ್ರದಾಯವಾಗಿ ಪಾಲಿಸಲಾಗುತ್ತದೆ. ಮುಖ್ಯಮಂತ್ರಿಯೊಬ್ಬರು ತಮ್ಮ ಸ್ಥಾನದಲ್ಲಿ ಮುಂದುವರಿಯಲು ಶಾಸಕಾಂಗ ಸಭೆಯ ವಿಶ್ವಾಸವನ್ನು ಹೊಂದಿರಬೇಕು. ಬಹುಮತದ ಬಲ ಇಲ್ಲದೇ ಹೋದರೆ ರಾಜೀನಾಮೆ ನೀಡಬೇಕಾಗುತ್ತದೆ. ಮಮತಾ ಬ್ಯಾನರ್ಜಿ ರಾಜೀನಾಮೆ ನೀಡಲು ನಿರಾಕರಿಸಿದರೆ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಿ ಶಾಸಕಾಂಗವನ್ನು ಅಮಾನತುಗೊಳಿಸುವುದು ಸೇರಿದಂತೆ ರಾಜ್ಯಪಾಲರ ಮುಂದೆ ಹಲವು ಆಯ್ಕೆಗಳಿವೆ. ಆದರೆ ಅದು ಕೊನೆಯ ಆಯ್ಕೆಯಾಗಿರುತ್ತದೆ.

ಸಂವಿಧಾನದ 164(1) ನೇ ವಿಧಿಯ ಪ್ರಕಾರ ರಾಜ್ಯಪಾಲರು ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಪಡೆದ ಪಕ್ಷವನ್ನು ಸರಕಾರ ರಚಿಸಲು ಆಹ್ವಾನಿಸುತ್ತಾರೆ. ಮುಖ್ಯಮಂತ್ರಿ ಮತ್ತು ಅವರ ಸಂಪುಟವು ರಾಜ್ಯಪಾಲರ ಸೂಚನೆಯ ಬಳಿಕ ಅಧಿಕಾರ ವಹಿಸಿಕೊಳ್ಳುತ್ತದೆ. ಚುನಾವಣಾ ಆಯೋಗದ ಫಲಿತಾಂಶಗಳ ಪ್ರಕಾರ ತೃಣಮೂಲ ಕಾಂಗ್ರೆಸ್ 80 ಸ್ಥಾನಗಳನ್ನು ಗೆದ್ದಿದ್ದು, ಬಿಜೆಪಿ 207 ಸ್ಥಾನಗಳಲ್ಲಿ ಜಯ ಗಳಿಸಿದೆ. ಇದರಿಂದ ಸ್ವಾಭಾವಿಕವಾಗಿ ರಾಜ್ಯಪಾಲರು, ಬಿಜೆಪಿಯನ್ನು ಸರಕಾರ ರಚಿಸಲು ಆಹ್ವಾನಿಸುವ ಸಾಧ್ಯತೆ ಇದೆ. ಹೊಸ ಸರಕಾರದ ಘೋಷಣೆಯಾದ ಬಳಿಕ ಮಮತಾ ಅವರ ಸ್ಥಾನ ತಾನೇ ತಾನಾಗಿ ಕೊನೆಗೊಳ್ಳಲಿದೆ. ಇದಕ್ಕೂ ಮುನ್ನ ರಾಜ್ಯಪಾಲರು ಅವಶ್ಯವೆನಿಸಿದರೆ ಮಮತಾ ಅವರನ್ನು ಸಿಎಂ ಸ್ಥಾನದಿಂದ ವಜಾಗೊಳಿಸಬಹುದು.

ಚುನಾವಣಾ ಫಲಿತಾಂಶದ ಬಳಿಕ ಮಾತನಾಡಿದ ಮಮತಾ ಬ್ಯಾನರ್ಜಿ, ಚುನಾವಣಾ ಆಯೋಗವು ಕೆಟ್ಟ ಆಟಗಳನ್ನು ಆಡುತ್ತಿದೆ. ಮಹಾರಾಷ್ಟ್ರ, ಹರಿಯಾಣ ಮತ್ತು ಬಿಹಾರದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿಯೇತರ ಮೈತ್ರಿಕೂಟಗಳ ಸೋತಿವೆ. ಇದು ಹೇಗೆ ಸಾಧ್ಯ? ಚುನಾವಣಾ ಆಯೋಗವು ಪಕ್ಷಪಾತದಿಂದ ವರ್ತಿಸಿದಾಗ ಮತ್ತು (ಕೇಂದ್ರ) ಸರ್ಕಾರವು ಏಕಪಕ್ಷೀಯ ಆಡಳಿತವನ್ನು ಬಯಸಿದಾಗ ಮಾತ್ರ ಇದು ನಡೆಯುತ್ತದೆ ಎಂದು ಆರೋಪಿಸಿರುವುದು ಮಾತ್ರವಲ್ಲದೆ ಮತಗಳನ್ನು ಎಣಿಕೆ ಮಾಡುತ್ತಿರುವಾಗ ಮತಗಟ್ಟೆಯಲ್ಲಿ ತನ್ನ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಆರೋಪಿಸಿದ್ದಾರೆ.

ಕರಾಳ ದಿನ ಆಚರಣೆ: ಚುನಾವಣಾ ಆಯೋಗ ಮತ್ತು ಕೇಂದ್ರ ಪಡೆಗಳು ನೇರವಾಗಿ ಬಿಜೆಪಿಯ ಪರವಾಗಿ ಕೆಲಸ ಮಾಡಿವೆ ಎಂದು ಆರೋಪಿಸಿರುವ ಅವರು, ವಿಧಾನಸಭೆಯ ಮೊದಲ ದಿನ ಎಲ್ಲರೂ ಕಪ್ಪು ಬಟ್ಟೆ ಧರಿಸುವ ಮೂಲಕ ಈ ದಿನವನ್ನು ಕರಾಳ ದಿನ ಎಂದು ಆಚರಿಸುವಂತೆ ಪಕ್ಷದ ಶಾಸಕರಿಗೆ ಕರೆ ನೀಡಿದ್ದಾರೆ.

'ನಮ್ಮನ್ನು ಬಲವಂತವಾಗಿ ಸೋಲಿಸಲಾಯಿತು. ಪಶ್ಚಿಮ ಬಂಗಾಳ ಪೊಲೀಸರು, ಸಿಆರ್‌ಪಿಎಫ್, ಬಿಜೆಪಿ ಪರ ಕೆಲಸ ಮಾಡುವ ಮುಖ್ಯ ಚುನಾವಣಾ ಅಧಿಕಾರಿ ಮತ್ತು ಇಸಿಐ ನಡೆಯನ್ನು ನಾನು ಖಂಡಿಸುತ್ತೇನೆ. 1500 ಕ್ಕೂ ಹೆಚ್ಚು ಪಕ್ಷದ ಕಚೇರಿಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲಾಯಿತು. ನನ್ನನ್ನು ಗದರಿಸಿ ತಳ್ಳಲಾಯಿತು. ನನಗೆ ಎದೆ ನೋವು ಇತ್ತು. ಇದು ಚುನಾವಣೆಯಲ್ಲ, ಆದರೆ ದೌರ್ಜನ್ಯ' ಎಂದು ಮಮತಾ ಬ್ಯಾನರ್ಜಿ ಪಕ್ಷದ ಸಭೆಯಲ್ಲಿ ಹೇಳಿದ್ದಾರೆ ಎಂದು ಎಐಟಿಸಿ ವರದಿ ಮಾಡಿದೆ.

ಮಮತಾ ಬ್ಯಾನರ್ಜಿ ಆರೋಪ ಸುಳ್ಳು: ಸಿಇಸಿ

ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶಗಳ ಬಗ್ಗೆ ಮಮತಾ ಬ್ಯಾನರ್ಜಿ ಮಾಡಿರುವ ಅಕ್ರಮದ ಆರೋಪಗಳನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ಸಂಪೂರ್ಣವಾಗಿ ತಳ್ಳಿ ಹಾಕಿದ್ದಾರೆ. ಯಾವುದೇ ಪುರಾವೆಗಳು ಅಥವಾ ಅಧಿಕೃತ ದೂರುಗಳು ಇಲ್ಲದೆ ಇಂತಹ ಆರೋಪಗಳನ್ನು ಪರಿಶೀಲಿಸಲು ಸಾಧ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಇವಿಎಂ ದುರುಪಯೋಗ, ದೈಹಿಕ ಹಲ್ಲೆ ಆರೋಪಗಳನ್ನೂ ಸಿಸಿಟಿವಿ ದೃಶ್ಯಾವಳಿಗಳನ್ನು ಉಲ್ಲೇಖಿಸಿ ನಿರಾಕರಿಸಿದರು.

ಯಾವುದೇ ನಿರ್ದಿಷ್ಟ ಮಾಹಿತಿ ಇಲ್ಲದಿದ್ದರೆ ನಾವು ಉತ್ತರಿಸಲು ಸಾಧ್ಯವಿಲ್ಲ. ಆ ಯಂತ್ರಗಳು ಯಾವುವು? ಅವು ಯಾವ ಟೇಬಲ್‌ಗಳ ಮೇಲೆ ಇದ್ದವು? ಅದು ಯಾವ ವಿಧಾನಸಭಾ ಕ್ಷೇತ್ರ? ಈ ವಿವರಗಳಿಲ್ಲದೆ ನಾವು ಹೇಗೆ ಸ್ಪಷ್ಟನೆ ನೀಡಲು ಸಾಧ್ಯ? ಅಸ್ಪಷ್ಟ ಆರೋಪಗಳನ್ನು ತನಿಖೆ ಮಾಡಲು ಸಾಧ್ಯವಿಲ್ಲ ಎಂದು ಒತ್ತಿ ಹೇಳಿದರು.

ಮತ ಎಣಿಕೆ ಕೇಂದ್ರದಲ್ಲಿ ತಮ್ಮ ಮೇಲೆ ದೈಹಿಕ ಹಲ್ಲೆ ನಡೆದಿದೆ ಎಂಬ ಮಮತಾ ಬ್ಯಾನರ್ಜಿ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಆಂತರಿಕ ವರದಿಗಳು ಮತ್ತು ಸಿಸಿಟಿವಿ ದೃಶ್ಯಾವಳಿಗಳು ಬೇರೆಯದೇ ಸತ್ಯವನ್ನು ಹೇಳುತ್ತಿವೆ. ಪ್ರಕ್ರಿಯೆಯ ಉದ್ದಕ್ಕೂ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿದ್ದವು ಎಂದು ಅವರು ಖಚಿತಪಡಿಸಿದರು. ಸಿಸಿಟಿವಿ ಕ್ಯಾಮೆರಾಗಳು ಎಂದಿಗೂ ಆಫ್ ಆಗಿರಲಿಲ್ಲ. ನಾನು ಜಿಲ್ಲಾ ಚುನಾವಣಾಧಿಕಾರಿಗಳೊಂದಿಗೆ (ಡಿಇಒ) ಮಾತನಾಡಿದ್ದೇನೆ. ಯಾರ ಮೇಲೆಯೂ ಹಲ್ಲೆ ನಡೆದಿಲ್ಲ. ಇಂತಹ ಘಟನೆಗಳು ಯಾವುದೇ ಅಭ್ಯರ್ಥಿಗೂ ಸಂಭವಿಸುವುದಿಲ್ಲ. ಒಂದು ವೇಳೆ ನಡೆದರೆ ತಕ್ಷಣ ಎಫ್‌ಐಆರ್ ದಾಖಲಾಗುತ್ತದೆ. ಆದರೆ ಈ ಬಗ್ಗೆ ಯಾವುದೇ ದೂರು ಬಂದಿಲ್ಲ. ಮತ ಎಣಿಕೆಯಲ್ಲಿ ಸಿಇಒ ಯಾವುದೇ ಪಾತ್ರವನ್ನು ವಹಿಸುವುದಿಲ್ಲ. ರಿಟರ್ನಿಂಗ್ ಆಫೀಸರ್ (ಆರ್‌ಒ) ಇದನ್ನು ಡಿಇಒ ಮಾರ್ಗದರ್ಶನದಲ್ಲಿ ನಿರ್ವಹಿಸುತ್ತಾರೆ ಎಂದು ಸ್ಪಷ್ಟಪಡಿಸಿದರು.

ಫಲ್ಟಾದಲ್ಲಿ ನಡೆಯಲಿರುವ ಮರುಮತದಾನಕ್ಕೆ ಎಲ್ಲ ಸಿದ್ಧತೆಗಳಾಗಿವೆ. ಮತಯಂತ್ರಗಳ ಮೇಲೆ ಟೇಪ್ ಅಥವಾ ಪರ್ಫ್ಯೂಮ್ ಹಚ್ಚುವಂತಹ ಯಾವುದೇ ಅಕ್ರಮಗಳು ನಡೆಯದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಬಂಗಾಳದಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆ ಕೇಂದ್ರ ಸಂಪುಟ ಮಹತ್ವದ ನಿರ್ಧಾರ

ವಂದೇ ಮಾತರಂಗೆ ರಾಷ್ಟ್ರಗೀತೆ ಸ್ಥಾನಮಾನ

ದೆಹಲಿ: ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಭರ್ಜರಿ ಜಯಗಳಿಸಿದ ನಂತರ, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು 'ವಂದೇ ಮಾತರಂ' ಗೀತೆಗೆ ಜನಗಣಮನಕ್ಕೆ ಸಮಾನವಾದ ಸ್ಥಾನಮಾನವನ್ನು ನೀಡುವ ಪ್ರಸ್ತಾಪವನ್ನು ಅನುಮೋದಿಸಿದೆ.

ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳಂ, ಅಸ್ಸಾಂ ಮತ್ತು ಪುದುಚೇರಿ ಚುನಾವಣಾ ಫಲಿತಾಂಶದ ನಂತರ ಮಂಗಳವಾರ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ರಾಷ್ಟ್ರೀಯ ಗೌರವಕ್ಕೆ ಅವಮಾನ ಮಾಡುವುದನ್ನು ತಡೆಯುವ ಕಾನೂನಾದ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ ಕಾಯ್ದೆಗೆ ತಿದ್ದುಪಡಿ ಮಾಡಲು ಸರಕಾರ ಅನುಮೋದನೆ ನೀಡಿದೆ. ಈ ತಿದ್ದುಪಡಿಯ ಮೂಲಕ ವಂದೇ ಮಾತರಂ ಅನ್ನು ಈಗಾಗಲೇ ರಾಷ್ಟ್ರೀಯ ಗೀತೆಯಾದ ಜನ ಗಣ ಮನಕ್ಕೆ ಇರುವ ಕಾನೂನು ಚೌಕಟ್ಟಿನ ಅಡಿಗೆ ತರಲಾಗುತ್ತದೆ. ಈ ತಿದ್ದುಪಡಿ ಜಾರಿಗೆ ಬಂದ ನಂತರ ವಂದೇ ಮಾತರಂ ಹಾಡುವ ಸಂದರ್ಭದಲ್ಲಿ ಅವಮಾನ ಮಾಡುವುದಾಗಲಿ, ಅಡ್ಡಿಪಡಿಸುವುದಾಗಲಿ ಮಾಡಿದರೆ ಅದನ್ನು ಗಂಭೀರ ಅಪರಾಧವೆಂದು ಪರಿಗಣಿಸಲಾಗುತ್ತದೆ.

ಪ್ರಸ್ತುತವಿರುವ ಕಾನೂನು ಪ್ರಕಾರ ರಾಷ್ಟ್ರಧ್ವಜ, ಸಂವಿಧಾನ ಅಥವಾ ರಾಷ್ಟ್ರಗೀತೆಗೆ ಅವಮಾನ ಮಾಡಿದ ಪ್ರಕರಣಗಳಲ್ಲಿ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸುವ ಸಾಧ್ಯತೆ ಇದೆ. ಈಗ ಪ್ರಸ್ತಾಪಿತ ತಿದ್ದುಪಡಿಯ ಮೂಲಕ ಇದೇ ನಿಯಮಗಳನ್ನು ವಂದೇ ಮಾತರಂಗೂ ವಿಸ್ತರಿಸಲಾಗುತ್ತದೆ. ಅದರ ಉಲ್ಲಂಘನೆಯು ಕಾನೂನು ಶಿಕ್ಷೆಗೆ ಕಾರಣವಾಗಬಹುದು.

ನಾಲ್ವರು ನ್ಯಾಯಮೂರ್ತಿಗಳ ನೇಮಕ

ನಾಲ್ವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಪುಟ ಅನುಮೋದನೆ ನೀಡಿದೆ. ಈ ವರ್ಷದ ಆರಂಭದಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಮಾಡಿದ ಔಪಚಾರಿಕ ಕೋರಿಕೆಯ ಮೇರೆಗೆ, ಕೇಂದ್ರ ಸಚಿವ ಸಂಪುಟವು ಸುಪ್ರೀಂ ಕೋರ್ಟ್‌ನಲ್ಲಿ ಸಿಜೆಐ ಹೊರತುಪಡಿಸಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 33ರಿಂದ 37ಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಅನುಮೋದಿಸಿದೆ. ಹೆಚ್ಚುತ್ತಿರುವ ಬಾಕಿ ಪ್ರಕರಣಗಳನ್ನು ಪರಿಹರಿಸಲು ಮತ್ತು ನ್ಯಾಯಾಲಯದ ಕಾರ್ಯನಿರ್ವಹಣೆಯನ್ನು ಬಲಪಡಿಸಲು ಈ ಪ್ರಸ್ತಾವನೆಯನ್ನು ಅನುಮೋದಿಸಲಾಗಿದೆ.

ಫೆಬ್ರವರಿ ತಿಂಗಳಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿಗಳು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದು, ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು ತಕ್ಷಣವೇ ನಾಲ್ಕರಷ್ಟು ಹೆಚ್ಚಿಸುವಂತೆ ಕೋರಿದ್ದರು ಎಂದು ಈ ಬೆಳವಣಿಗೆಯ ಬಗ್ಗೆ ತಿಳಿದಿರುವ ಮೂಲಗಳು ತಿಳಿಸಿವೆ.

ಸರಕಾರ ತನ್ನ ಹೇಳಿಕೆಯಲ್ಲಿ, ಹೆಚ್ಚುತ್ತಿರುವ ಪ್ರಕರಣಗಳ ಬಾಕಿ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ವೇಗವಾಗಿ ನ್ಯಾಯ ಒದಗಿಸುವ ಉದ್ದೇಶದಿಂದ ಈ ನ್ಯಾಯಾಮೂರ್ತಿಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ ಎಂದು ತಿಳಿಸಿದೆ. 2019ರಲ್ಲಿ ಸಂಸತ್ತು ನ್ಯಾಯಾಧೀಶರ ಸಂಖ್ಯೆಯನ್ನು 30ರಿಂದ 33ಕ್ಕೆ ಹೆಚ್ಚಿಸಿದ ನಂತರ, ಇದೀಗ ಆರು ವರ್ಷಕ್ಕೂ ಹೆಚ್ಚು ಕಾಲದ ಬಳಿಕ ಈ ಹೊಸ ವಿಸ್ತರಣೆ ಕೈಗೊಳ್ಳಲಾಗುತ್ತಿದೆ ಎಂದು ಹೇಳಲಾಗಿದೆ.

ಅಪಘಾತ: ಉ.ಪ್ರ.ದ ನಾಲ್ವರು ಪೊಲೀಸ್ ಅಧಿಕಾರಿಗಳ ದುರ್ಮರಣ

ಗುರುಗ್ರಾಮ: ಹರಿಯಾಣದ ನುಹ್ ಜಿಲ್ಲೆಯ ಕುಂಡ್ಲಿ ಮನೇಸರ್ ಪಲ್ವಾಲ್ ಎಕ್ಸ್‌ಪ್ರೆಸ್‌ವೇಯಲ್ಲಿ ಪಂಜಾಬ್‌ನಲ್ಲಿ ತನಿಖೆಗೆ ತೆರಳುತ್ತಿದ್ದ ಎಸ್‌ಯುವಿ ವಾಹಣ ನಿಯಂತ್ರಣ ತಪ್ಪಿ ಮತ್ತೊಂದು ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಉತ್ತರ ಪ್ರದೇಶದ ನಾಲ್ವರು ಪೊಲೀಸ್ ಸಿಬ್ಬಂದಿ ಮತ್ತು ಚಾಲಕ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧುಲಾವತ್ ಟೋಲ್ ಪ್ಲಾಜಾ ಬಳಿ ಈ ಅಪಘಾತ ಸಂಭವಿಸಿದೆ. ಅಧಿಕಾರಿಗಳ ಪ್ರಕಾರ, ಮೃತ ಪೊಲೀಸರನ್ನು ಕನ್ನೌಜ್ ಜಿಲ್ಲೆಯ ಆಡಂಪುರ ನಿವಾಸಿ ಸಬ್‌ಇನ್ಸ್‌ಪೆಕ್ಟರ್ ಮೋಹಿತ್ ಕುಮಾರ್ ಯಾದವ್ (32), ಕಾಸ್ಗಂಜ್ ಜಿಲ್ಲೆಯ ಅಲಿಪುರ ನಿವಾಸಿ ಸಬ್ ಇನ್ಸ್‌ಪೆಕ್ಟರ್ ಸತ್ಯಭನ್ ಸಿಂಗ್ (59), ಬಂದಾ ಜಿಲ್ಲೆಯ ಬಯೋಜಾ ನಿವಾಸಿ ಕಾನ್‌ಸ್ಟೆಬಲ್ ಅಶೋಕ್ ಕುಮಾರ್ (28) ಮತ್ತು ರಾಯ್‌ಬರೇಲಿ ಜಿಲ್ಲೆಯ ಅಂಬೇಡ್ಕರ್ ನಗರದ ನಿವಾಸಿ ಕಾನ್‌ಸ್ಟೆಬಲ್ ಪ್ರವೀಣ್ ಕುಮಾರ್ (30) ಎಂದು ಗುರುತಿಸಲಾಗಿದೆ.

ಸಬ್ ಇನ್ಸ್ ಪೆಕ್ಟರ್‌ಗಳು ಮತ್ತು ಕಾನ್ಸ್ ಟೇಬಲ್ ಅಶೋಕ್ ಕುಮಾರ್ ಇಬ್ಬರೂ ಜಲೌನ್ ಜಿಲ್ಲೆಯ ಒರೈ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ನಿಯೋಜನೆಗೊಂಡಿದ್ದಾರೆ. ಕಾನ್ಸ್ ಟೇಬಲ್ ಪ್ರವೀಣ್ ಕುಮಾರ್ ಅವರನ್ನು ಜಿಲ್ಲಾ ಪೊಲೀಸ್ ಕಣ್ಗಾವಲು ಸಿಬ್ಬಂದಿ ಘಟಕದಲ್ಲಿ ನಿಯೋಜನೆ ಮಾಡಲಾಗಿತ್ತು.

ಮೃತರಾದ ಐದನೇ ವ್ಯಕ್ತಿಯನ್ನು ಕಪ್ಪು ಮಹೀಂದ್ರಾ ಸ್ಕಾರ್ಪಿಯೋ ಚಾಲಕ ಅಮ್ರಿಕ್ ಸಿಂಗ್ (45) ಎಂದು ಗುರುತಿಸಲಾಗಿದೆ. ಅವರು ಪಂಜಾಬ್‌ನ ಸಂಗ್ರೂರ್ ಜಿಲ್ಲೆಯ ಜೋಗಿಯಾ ಪಟ್ಟಿಗೆ ಸೇರಿದವರು.ಪೊಲೀಸರು ಪ್ರಕರಣದ ತನಿಖೆಗಾಗಿ ಪಂಜಾಬ್‌ನ ಪಲ್ವಾಲ್‌ಗೆ ಹೋಗುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊನೆಗೂ ಅರ್ಜುನನ ಭವ್ಯ ಸ್ಮಾರಕ ಉದ್ಘಾಟನೆ

ಹಾಸನ: ಕನ್ನಡಿಗರ ಅಚ್ಚುಮೆಚ್ಚಿನ ಆನೆ 'ಅರ್ಜುನ'ನ ಭವ್ಯ ಸ್ಮಾರಕ ಸಲಕಲೇಶಪುರ ತಾಲೂಕಿನ ಯಳಸೂರಿನಲ್ಲಿ ಕೊನೆಗೂ ಲೋಕಾರ್ಪಣೆಗೊಂಡಿದೆ. ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ವೀರಮರಣವನ್ನಪ್ಪಿದ ಅರ್ಜುನನ ಸಾವಿನ ಸುಮಾರು ಎರಡೂವರೆ ವರ್ಷಗಳ ನಂತರ, ಆತನ ಸಮಾಧಿಯ ಮೇಲೆಯೇ ನಿರ್ಮಿಸಲಾದ ಆಕರ್ಷಕ ಪ್ರತಿಕೃತಿಯನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಉದ್ಘಾಟಿಸಿದ್ದಾರೆ.

ಅರ್ಜುನನೇ ಮೇಲೆದ್ದು ಬಂದಂತಿದೆ ಪ್ರತಿಕೃತಿ!: ಅರ್ಜುನನನ್ನು ಮಣ್ಣು ಮಾಡಿದ್ದ ಜಾಗದಲ್ಲಿ ಆತನ ನೆನಪನ್ನು ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ಫೈಬರ್ ಗ್ಲಾಸ್ ಬಳಸಿ ಈ ಭವ್ಯ ಮೂರ್ತಿಯನ್ನು ನಿರ್ಮಿಸಲಾಗಿದೆ. 10 ಅಡಿ ಎತ್ತರ ಹಾಗೂ 13 ಅಡಿ ಉದ್ದವಿರುವ ಈ ಮೂರ್ತಿ, ಅರ್ಜುನನ ಮೂಲ ಸ್ವರೂಪವನ್ನೇ ಹೋಲುವಂತಿದೆ. ಶಿಲ್ಪಿ ಧನಂಜಯ ವಡು ಅವರು ಈ ಸುಂದರಮೂರ್ತಿಯನ್ನು ನಿರ್ಮಿಸಿದ್ದು, ನೋಡಗರ ಕಣ್ಣಿಗೆ ಸಾಕ್ಷಾತ್ ಅರ್ಜುನನೇ ಮೇಲೆದ್ದು ನಿಂತಂತೆ ಭಾಸವಾಗುತ್ತಿದೆ.

ನನೆಗುದಿಗೆ ಬಿದ್ದಿದ್ದ ಯೋಜನೆಗೆ ಮುಕ್ತಿ: ಅರ್ಜುನನ ಈ ಸುಂದರ ಮೂರ್ತಿಯನ್ನು ಶಿಲ್ಪಿಗಳು ಒಂದು ವರ್ಷದ ಹಿಂದೆಯೇ ಸಿದ್ಧಪಡಿಸಿದ್ದರು. ಆದರೆ, ಸ್ಮಾರಕ ನಿರ್ಮಾಣ ಸ್ಥಳದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇದ್ದ ಕಾರಣ ಉದ್ಘಾಟನೆ ವಿಳಂಬವಾಗಿ, ಯೋಜನೆ ನನೆಗುದಿಗೆ ಬಿದ್ದಿತ್ತು. ಇದೀಗ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಅರ್ಜುನನ ಸಮಾಧಿ ಸ್ಥಳದಲ್ಲಿ ಸ್ಮಾರಕವನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಗಿದೆ.



ಸಕಲೇಶಪುರದ ಯಳಸೂರಿನಲ್ಲಿ ಅರ್ಜುನ ಆನೆಯ ಸ್ಮಾರಕವನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಲೋಕಾರ್ಪಣೆಗೊಳಿಸಿದರು. ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹಾಜರಿದ್ದರು.

ದಿಲೀಪ್ ನಿಟ್ಟೂರೆಗೆ ಅನಿರೀಕ್ಷಿತ ಆಘಾತ

ಐಟಿಎಫ್‌ಡಬ್ಲ್ಯೂ ತುಮಕೂರು ಓಪನ್ ಟೆನಿಸ್ ಟೂರ್ನಿ ಡಬಲ್ಸ್‌ನಲ್ಲಿ ಭಾರತೀಯ ವನಿತೆಯರಿಗೆ ಜಯ

ತುಮಕೂರು: ತುಮಕೂರು ವಿಶ್ವವಿದ್ಯಾಲಯದ ಟೆನಿಸ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಐಟಿಎಫ್‌ಡಬ್ಲ್ಯೂ15 ತುಮಕೂರು ಓಪನ್ ಟೆನ್ನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ 32ನೇ ಸುತ್ತಿನಲ್ಲಿ 8ನೇ ಶ್ರೇಯಾಂಕಿತೆ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಅಚ್ಚರಿ ಆಘಾತ ಕಂಡು ಟೂರ್ನಿಯಲ್ಲಿ ಹೋರಾಟ ಮುಗಿಸಿದರು.

ಎಂಟನೇ ಶ್ರೇಯಾಂಕಿತ ಆಟಗಾರ್ತಿ ಆಕಾಂಕ್ಷಾ ದಿಲೀಪ್ ನಿಟ್ಟೂರೆ 6-1, 6-1 ಗೇಮ್‌ಗಳಿಂದ ಏಕಪಕ್ಷೀಯ ಸೋಲಿನಲ್ಲಿ ಅರಿನಾ ಅರಿಫುಲ್ಲಿನಾ ವಿರುದ್ಧ ಸೋಲನುಭವಿಸಿದರು. ಟೂರ್ನಿಯ ಆಕರ್ಷಣೆಯ ಆಟಗಾರ್ತಿಯರಲ್ಲಿ ಒಬ್ಬರಾಗಿದ್ದ ನಿಟ್ಟೂರೆ, ಆಕ್ರಮಣಕಾರಿ ಮತ್ತು ಸ್ಥಿರ ಆಟವಾಡಿದ ಅರಿಫುಲ್ಲಿನಾ ವಿರುದ್ಧ ತನ್ನ ಲಯ ಕಂಡುಕೊಳ್ಳಲು ಹೆಣಗಾಡಿದರು. ಅಗ್ರ ಶ್ರೇಯಾಂಕಿತ ಲಿಥುವೇನಿಯಾದ ಜಸ್ಟಿನಾ ಮಿಕುಲ್ಸ್ಕೈಟ್ ಮತ್ತು ಎರಡನೇ ಶ್ರೇಯಾಂಕಿತ ಪೋಲೆಂಡ್‌ನ ಜುಝಾನ್ನಾ ಪಾವ್ಲಿಕೊವ್ಸ್ಕಾ ನೇರ ಸೆಟ್‌ಗಳಲ್ಲಿ ತಮ್ಮ ಭಾರತೀಯ ಎದುರಾಳಿಗಳನ್ನು ಸೋಲಿಸಿದರು.

ಇನ್ನೊಂದು ಪಂದ್ಯದಲ್ಲಿ ಲಕ್ಷ್ಮೀಸಿರಿ ದಂಡು 1-6, 7-5, 6-3 ಸೆಟ್‌ಗಳಿಂದ ಪ್ರತ್ಯುಷ ರಾಚಪುಡಿ ಅವರನ್ನು ಮಣಿಸಿದರು. ಕಶಿಶ್ ಭಾಟಿಯಾ 6-1, 6-1 ಸೆಟ್‌ಗಳಿಂದ ವೈಲ್ಡ್ ಕಾರ್ಡ್ ಪ್ರವೇಶಿಸಿ ಅಮೋದಿನಿ ನಾಯಕ್ ಅವರನ್ನು ಮಣಿಸಿ ಅದ್ಭುತ ಲಯ ಕಂಡುಕೊಂಡರು. ಜೆನ್ನಿಫರ್ ಲುಯಿಖಾಮ್ ಕೂಡ ಮೂರು ಸೆಟ್‌ಗಳ ಕಠಿಣ ಹೋರಾಟದಲ್ಲಿ 6-3, 4-6, 6-3 ಸೆಟ್ ಗಳಿಂದ ಚೆವಿಕಾ ರೆಡ್ಡಿ ಸಮಾ ಅವರನ್ನು ಸೋಲಿಸಿದರು.

ಶ್ರೇಯಾಂಕಿತ ಭಾರತೀಯರ ಪೈಕಿ ಮೂರನೇ ಶ್ರೇಯಾಂಕಿತ ವೈದೇಹಿ ಚೌಧರಿ 6-3, 6-4 ಸೆಟ್‌ಗಳಿಂದ ಸ್ಥಳೀಯ ಆಟಗಾರ್ತಿ ಸೋಹಾ ಸಾದಿಕ್ ಅವರನ್ನು ಮಣಿಸಿದರೆ, ನಾಲ್ಕನೇ ಶ್ರೇಯಾಂಕಿತೆ ಜೀಲ್ ದೇಸಾಯಿ 6-0, 6-0 ಸೆಟ್‌ಗಳಿಂದ ಜೀತೇಶ್ ಕುಮಾರಿ ಅವರನ್ನು ಮಣಿಸಿದರು.

ಆರನೇ ಶ್ರೇಯಾಂಕಿತ ಆಟಗಾರ್ತಿ ಎಕಟೆರಿನಾ ಯಾಶಿನಾ ಕೂಡ 6-2, 6-2 ಸೆಟ್ ಗಳಿಂದ ಬೇಲಾ ತಮ್ಹಾಂಕರ್ ಅವರನ್ನು ಸೋಲಿಸಿದರೆ, ಪೋಲೆಂಡ್ ನ ಜುಝಾನ್ನಾ ಕೊಲೊನಸ್ ಮನವರಿಕೆಯಾಗುವ ಗೆಲುವಿನೊಂದಿಗೆ ಮುನ್ನಡೆ ಸಾಧಿಸಿದರು.

ಡಬಲ್ಸ್‌ನಲ್ಲೂ ಭಾರತೀಯರಿಗೆ ಜಯ

ಮಹಿಳೆಯರ ಡಬಲ್ಸ್ ವಿಭಾಗದ 16ನೇ ಸುತ್ತಿನಲ್ಲಿ ಭಾರತೀಯ ಜೋಡಿಗಳಿಗೆ ನಿರೀಕ್ಷಿತ ಗೆಲುವು ದೊರೆಯಿತು. ಸೋಹಾ ಸಾದಿಕ್ ಮತ್ತು ಮಧುರಿಮಾ ಸಾವಂತ್ ಜೋಡಿ 6-3, 6-2 ಸೆಟ್‌ಗಳಿಂದ ಪೂಜಾ ಇಂಗಳೆ ಮತ್ತು ಪ್ರತ್ಯುಷಾ ರಾಚಪುಡಿ ವಿರುದ್ಧ ಜಯ ಸಾಧಿಸಿದರು. ಶ್ರೀಮಾನ್ಯ ರೆಡ್ಡಿ ಅನುಗೊಂಡ ಮತ್ತು ಸಾಹಿರಾ ಸಿಂಗ್ ಸಹ 3-6, 6-3, 10-6 ಸೆಟ್ ಗಳಿಂದ ಲಕ್ಷ್ಮೀಸಿರಿ ದಂಡು ಮತ್ತು ಚೆವಿಕಾ ರೆಡ್ಡಿ ಸಮಾ ವಿರುದ್ಧ ಗೆಲುವು ಸಾಧಿಸಿದರು. ಮೂರನೇ ಶ್ರೇಯಾಂಕದ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಮತ್ತು ಜಪಾನ್‌ನ ಮಿಚಿಕಾ ಒಜೆಕಿ 6-3, 4-6, 10-6 ಸೆಟ್‌ಗಳಿಂದ ಕಶಿಶ್ ಭಾಟಿಯಾ ಮತ್ತು ಸೋನಾಲ್ ಪಾಟೀಲ್ ಅವರನ್ನು ಮಣಿಸಿ ಮುನ್ನಡೆ ಸಾಧಿಸಿದರು.

ತುರುವೇಕೆರೆ ಮೂಲದ ಸುನಿಲ್ ಆನಂದ್ ಶಾಸಕ

ನಟ ವಿಜಯ್ ಟಿವಿಕೆ ಪಕ್ಷದಿಂದ ಮೆಟ್ಟುಪಾಳ್ಯಂ ಕ್ಷೇತ್ರದಿಂದ ಸ್ಪರ್ಧಿಸಿ ಜಯ

ರಂಗನಾಥ ಕೆ. ಹೊನ್ನಮರಡಿ ತುಮಕೂರು

ಜಿಲ್ಲೆಯ ತುರುವೇಕೆರೆ ಮೂಲದ ವ್ಯಕ್ತಿಯೊಬ್ಬರು ನಟ ವಿಜಯ್ ಪಕ್ಷ ಟಿವಿಕೆಯಿಂದ ಶಾಸಕರಾಗಿ ಆಯ್ಕೆ ಆಗಿದ್ದಾರೆ.

ಕೊಯಮತ್ತೂರು ಜಿಲ್ಲೆಯ ಮೆಟ್ಟುಪಾಳ್ಯಂ ವಿಧಾನಸಭಾ ಕ್ಷೇತ್ರದಿಂದ ಸುನೀಲ್ ಆನಂದ್ ಟಿವಿಕೆ ಪಕ್ಷದಿಂದ ಸ್ಪರ್ಧಿಸಿ ಜಯಗಳಿಸುವ ಮೂಲಕ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ. 75,664 ಮತ ಪಡೆದು ಇವರು ಡಿಎಂಕೆ ಹಾಗೂ

ಎಐಎಡಿಎಂಕೆ ಎರಡೂ ಪಕ್ಷದವರನ್ನು ಮಣಿಸಿ, 7778 ಮತಗಳ ಅಂತರದಿಂದ ವಿಜಯಿಶಾಲಿಯಾಗಿದ್ದಾರೆ.

ತುರುವೇಕೆರೆ ಮೂಲ: ಶಾಸಕ ಸುನಿಲ್ ಆನಂದ್ ಅವರು ತಮಿಳುನಾಡಿನ ಮೆಟ್ಟುಪ್ಪಾಳ್ಯಂನಲ್ಲಿ ನೆಲೆಸಿದ್ದಾರೆ. ಸುನೀಲ್ ಆನಂದ್ ಅವರ ತಾತ(ತಂದೆಯವರ ತಂದೆ) ನಿಂಗೇಗೌಡ. ಇವರ ಊರು ತುರುವೇಕೆರೆ ತಾಲೂಕಿನ ದಬ್ಬೇಘಟ್ಟ ಹೋಬಳಿಯ ಹೊಡಿಕೇಘಟ್ಟ. ಹಲವು ದಶಕಗಳ ಹಿಂದೆ ನಿಂಗೇಗೌಡರ ಅವರು ತಮಿಳುನಾಡಿಗೆ ವಲಸೆ ಹೋಗಿದ್ದರು. ನಂತರದ ದಿನಗಳಲ್ಲಿ ಅಲ್ಲೇ ತಮ್ಮ ಜೀವನ ಸಾಗಿಸಿದರು. ನಿಂಗೇಗೌಡರ ಮಗ ಎಚ್.ಎನ್.ನಾಗರಾಜು ಅವರ ಮಗನೇ ಈಗ ಮೆಟ್ಟುಪ್ಪಾಳ್ಯಂ ಕ್ಷೇತ್ರದ ಶಾಸಕ ಸುನಿಲ್ ಆನಂದ್. ಈಗಲೂ ಸಹ ಸ್ವಂತ ಗ್ರಾಮದಲ್ಲಿ ಯಾವುದಾದರೂ ಧಾರ್ಮಿಕ ಕಾರ್ಯಗಳು ನಡೆದಾಗ ಭಾಗವಹಿಸುವ ಮೂಲಕ ಗ್ರಾಮದ ಋಣ ಉಳಿಸಿಕೊಂಡಿದ್ದಾರೆ. ಆನಂದ್ ಗೆಲುವಿಗಾಗಿ ಮಣ್ಣಿನ ಗುಣ ಉಳಿಸಿಕೊಂಡಿದ್ದಾರೆ ಎಂದು ಗ್ರಾಮದ ಜನತೆ ಹರ್ಷ ವ್ಯಕ್ತಪಡಿಸಿದ್ದಾರೆ.

ಶಾಸಕ ಸುನಿಲ್ ಆನಂದ್ ಅವರ ತಾಯಿಯ ತಂದೆಯವರಾದ ಲಿಂಗಪ್ಪ ಮೈಸೂರಿನ ಮೇಯರ್ ಆಗಿ ಸೇವೆ ಸಲ್ಲಿಸಿದ್ದರು. ಅವರ ಸ್ಮರಣಾರ್ಥ ಮೈಸೂರಿನ ಒಂಟಿಕೊಪ್ಪಲ್ ಬಳಿ ಮೇಯರ್ ಲಿಂಗಪ್ಪ ವೃತ್ತವನ್ನು ನಿರ್ಮಿಸಲಾಗಿದೆ ಎಂದು ಸುನಿಲ್ ಆನಂದ್ ಅವರ ಸಂಬಂಧಿಕರಾದ ಮಾಜಿ ಶಾಸಕ ಎಚ್.ಬಿ.ನಂಜೇಗೌಡ ತಿಳಿಸಿದರು.

ತಮಿಳುನಾಡು ಸಿಎಂ ಆಕಾಂಕ್ಷಿ ನಟ ವಿಜಯ್ ಜತೆಯಲ್ಲಿ ಟಿವಿಕೆ ಶಾಸಕ ಸುನಿಲ್ ಆನಂದ್.

11ನೇ ತರಗತಿ ವ್ಯಾಸಂಗ

ಶಾಸಕ ಸುನಿಲ್ ಆನಂದ್ ಅವರು 11ನೇ ತರಗತಿಯವರೆಗೆ ವಿದ್ಯಾಭ್ಯಾಸ ಪೂರೈಸಿದ್ದು, ತಮಿಳುನಾಡಿನಲ್ಲಿಯೇ ರಿಯಲ್ ಎಸ್ಟೇಟ್, ಹೋಟೆಲ್ ಸೇರಿದಂತೆ ಹಲವು ಉದ್ಯಮದಲ್ಲಿ ತೊಡಗಿಕೊಂಡಿದ್ದಾರೆ. ಬಹುದೀರ್ಘಕಾಲದಿಂದಲೂ ನಟ ವಿಜಯ್ ಅವರ ಬೆಂಬಲಿಗರಾಗಿದ್ದು, ಹೊಸದಾಗಿ ಆರಂಭವಾದ ಟಿವಿಕೆ ಪಕ್ಷದಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ಪಕ್ಷ ಸಂಘಟಿಸುವ ಮೂಲಕ ಚುನಾವಣೆಗೆ ಮೊದಲು ಪಕ್ಷದಲ್ಲಿ ತಮ್ಮ ವರ್ಚಸ್ಸು ಬೆಳೆಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಕಲ್ಪತರು ನಾಡಿನ ಹಿರಿಮೆಯನ್ನು ಹೆಚ್ಚಿಸಿದ್ದಾರೆ.

ಸುನಿಲ್ ಆನಂದ್ ಅವರಿಗೆ ರಾಜಕೀಯಕ್ಕೆ ಧುಮುಕಿ ಪ್ರಥಮ ಪ್ರಯತ್ನದಲ್ಲೇ ಶಾಸಕರಾಗಿದ್ದಾರೆ. ಟಿವಿಕೆ ಪಕ್ಷದ ಮುಖ್ಯಸ್ಥ ವಿಜಯ್ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಆನಂದ್ ಅವರು ಸಚಿವ ಸಂಪುಟದಲ್ಲಿ ಮಂತ್ರಿಯಾದರೆ ತಾಲೂಕಿನ ಕುಡಿಯೊಂದು ಬೇರೊಂದು ರಾಜ್ಯದಲ್ಲಿ ಮಂತ್ರಿಯಾದ ಹೆಮ್ಮೆ ಆಗುತ್ತದೆ. ತುರುವೇಕೆರೆ ತಾಲೂಕಿನಲ್ಲಿ ಕಳೆದ ಐದಾರು ದಶಕಗಳ ಹಿಂದೆ ತಾಳಕೆರೆ ಸುಬ್ರಹ್ಮಣ್ಯಂ ಅವರು ಸಚಿವರಾಗಿದ್ದು, ಬಿಟ್ಟರೆ ಇವತ್ತಿನವರೆಗೂ ಯಾರೊಬ್ಬರೂ ಮಂತ್ರಿ ಆಗಿಲ್ಲ, ಸುನಿಲ್ ಆನಂದ್ ಅವರಿಗೆ ಮಂತ್ರಿಯಾಗುವ ಭಾಗ್ಯ ಒದಗಿ ಬರಲಿ ಎಂದು ಜಿಲ್ಲೆಯ ಜನತೆ ಆಶಿಸಿದ್ದಾರೆ.

ಮಂಗಳಜೋಡಿ ಸರೋವರದ ಹಸಿರು ಹಾಸಿಗೆಯಲ್ಲಿ ಕಪ್ಪು ಬಿಳಿ ಕಬ್ಬಕ್ಕಿ ಪೋಸು!

ಒಡಿಶಾದ ಮಂಗಳಜೋಡಿ ಎಂದರೆ ಅದು ಕೇವಲ ಹಕ್ಕಿಗಳ ತಾಣವಲ್ಲ, ಅದು ಫೋಟೋಗ್ರಾಫರ್‌ಗಳ ಪಾಲಿನ ಪಕ್ಷಿಗಳ ಸ್ವರ್ಗ. ಅಂದು ಬೆಳಗಿನ ಹೊತ್ತು, ಚಳಿ ಗಾಳಿಯ ನಡುವೆ ನಾನು ಮತ್ತು ಶ್ರೀನಿವಾಸ ಅವರು ಗಣೇಶ್ ಬೆಹರಾ ಅವರ ದೋಣಿ ಯನ್ನೇರಿದ್ದೆವು. ಗಣೇಶ್ ನಿಸ್ಸೀಮರು, ಅವರ ಕೈಚಳಕದಲ್ಲಿ ದೋಣಿ ಹಕ್ಕಿಗಳ ಹತ್ತಿರ ಅದೆಷ್ಟು ಸದ್ದಿಲ್ಲದೆ ಸಾಗುತ್ತಿತ್ತು ಎಂದರೆ, ಹಕ್ಕಿಗಳಿಗೆ ನಾವು ಬರುವುದು ಕೂಡ ಗೊತ್ತಾಗುತ್ತಿರಲಿಲ್ಲ. ದೋಣಿಯು ಮಂಗಳ ಜೋಡಿಯ ಉತ್ತರದ ದಡದ ಅಂತರಾಳಕ್ಕೆ ಸಾಗುತ್ತಿದ್ದಂತೆ, ನಮಗೆ ಕಂಡದ್ದು ನೀಲಿ ನೀರಲ್ಲ, ಬದಲಾಗಿ ಅದ್ಭುತವಾದ ಹಸಿರು ಪಾಚಿಯ ಹಾಸಿಗೆ!

ಅದು ಅದೆಷ್ಟು ದಟ್ಟವಾಗಿತ್ತೆಂದರೆ, ನಾವೆಲ್ಲೋ ಕ್ರಿಕೆಟ್ ಸ್ಟೇಡಿಯಂನ ಹುಲ್ಲು ಗಾವಲಿನಲ್ಲಿ ದೋಣಿ ನಡೆಸುತ್ತಿದ್ದೇವೇನೋ ಅನ್ನಿಸಿಬಿಟ್ಟಿತು. ಗಣೇಶ್ ಬೆಹರಾ ಅವರು ಹುಟ್ಟು ಹಾಕಿದಾಗ, ಆ ಹಸಿರು ಪಾಚಿಯ ನಡುವೆ ಮೂಡುವ ಹಾದಿ ಕಾಣಲು ತುಂಬಾ ಸೊಗಸಾಗಿತ್ತು. ಆದರೆ, ಆ ಹಸಿರು ಹಾಸಿಗೆಯ ಮೇಲೆ ಸಾಗುವ ದೋಣಿಯಲ್ಲಿ ಕುಳಿತು ಫೋಟೋ ತೆಗೆಯುವುದು ಮತ್ತದೇ ಕಸರತ್ತಿನ ಸಂಗತಿಯಾಗಿತ್ತು!

ಆ ಹಕ್ಕಿಯ ದರ್ಶನ ಮತ್ತು ಕ್ಯಾಮರಾ ಸರ್ಕಸ್

ದೂರದಲ್ಲೊಂದು ಎತ್ತರದ ಮಣ್ಣಿನ ದಿಣ್ಣೆ. ಅದರ ಮೇಲೆ ರಾಜಗಾಂಭೀರ್ಯದಿಂದ ಕುಳಿತಿದ್ದ ಆ ಕಪ್ಪು-ಬಿಳಿ ಬಣ್ಣದ ಸುಂದರ ಹಕ್ಕಿಯಾದ ಕಪ್ಪು- ಬಿಳಿ ಕಬ್ಬಕ್ಕಿ (Asian Pied Starling) ಕಂಡಾಗ ನಮಗೆಲ್ಲ ಎಲ್ಲಿಲ್ಲದ ಸಂಭ್ರಮ. ನಮ್ಮ ಕೈಯಲ್ಲಿದ್ದದ್ದು ಸಣ್ಣಪುಟ್ಟ ಕ್ಯಾಮರಾಗಳಲ್ಲ, ಮಾರುದ್ದದ ಲೆನ್ಸ್ ಹಾಕಿರುವ ಬಿಳಿ ಫಿರಂಗಿಗಳು! ಅಲುಗಾಡುವ ದೋಣಿಯಲ್ಲಿ ಆ ಭಾರಿ ತೂಕದ ಲೆನ್ಸ್ ಹಿಡಿದು ಸಮತೋಲನ ಕಾಪಾಡಿಕೊಳ್ಳುವುದು ಅಂತಿಂಥಾ ಸಾಹಸವಲ್ಲ. ಒಂದು ಕಡೆ ದೋಣಿಯ ಅಲುಗಾಟ, ಇನ್ನೊಂದೆಡೆ ಉಸಿರು ಬಿಟ್ಟರೆ ಹಕ್ಕಿ ಹಾರಿಹೋದೀತು ಎನ್ನುವ ಭಯ! ಕ್ಯಾಮರಾದ ವ್ಯೂ ಫೈಂಡರ್ನಲ್ಲಿ ಹಕ್ಕಿಯನ್ನು ಕೇಂದ್ರೀಕರಿಸಲು ನಾನಂತೂ ಜಿಮ್ನಾಸ್ಟಿಕ್ ಪಟುವಿನಂತೆ ನಾನಾ ಕಸರತ್ತು ಮಾಡಿದೆ. ಶ್ರೀನಿವಾಸ ಕೂಡ ಒಂದು ಕ್ಷಣ ಉಸಿರು ಬಿಗಿ ಹಿಡಿದು ಕ್ಲಿಕ್ಕಿಸುತ್ತಿದ್ದರು.

ಆ ನಾಲ್ಕು ಪೋಸ್‌ಗಳು!

ಹಕ್ಕಿ ಮಾತ್ರ ಅತೀ ವಿಧೇಯಳಂತೆ ಇತ್ತು. ನಮ್ಮ ಕ್ಲಿಕ್-ಕ್ಲಿಕ್ ಸದ್ದಿಗೆ ಹೆದರುವ ಬದಲು, ಯಾವುದೋ ದೊಡ್ಡ ಸಿನಿ ಸ್ಟಾರ್‌ನಂತೆ ಎಡಕ್ಕೆ ಒಮ್ಮೆ, ಬಲಕ್ಕೆ ಒಮ್ಮೆ ಕತ್ತು ತಿರುಗಿಸಿ ಪೋಸ್ ನೀಡತೊಡಗಿತು. ಬಹುಶಃ ಮನಸ್ಸಿನಲ್ಲೇ ಅಂದುಕೊಂಡಿರಬೇಕು ಹೋಗಲಿ ಪಾಪ, ಮಾರುದ್ದದ ಲೆನ್ಸ್ ಹೊತ್ತು ಅಲುಗಾಡುತ್ತಾ ಕುಳಿತಿದ್ದಾರೆ, ನಾಲ್ಕು ಫೋಟೋ ಕೊಟ್ಟರೆ ಆಯ್ತು ಎಂದು! ನಾನು ಆ ನಾಲ್ಕು ಪೋಸ್‌ಗಳನ್ನು ಸಖತ್ ಆಗಿ ಸೆರೆಹಿಡಿದೆ. ಹಕ್ಕಿಯ ಕಣ್ಣಿನ ಸುತ್ತಲಿನ ಕಿತ್ತಳೆ ಬಣ್ಣದ ರಿಂಗು ಮತ್ತು ಅದರ ಗರಿಗಳ ಹೊಳಪು ನಮಗೆ ಫೋಟೋದಲ್ಲಿ ಸ್ಪಷ್ಟವಾಗಿ ಕಂಡಾಗ ಆದ ಖುಷಿಯೇ ಬೇರೆ.

ಪುರ್... ಮತ್ತು ಮುಂದಿನ ಪಯಣ

ನಾಲ್ಕಾರು ಬಾರಿ ನಮ್ಮ ಕ್ಯಾಮರಾಕ್ಕೆ ಮಂದಹಾಸ ಬೀರಿದ ಆ ಹಕ್ಕಿ, ಕೊನೆಗೆ ಸಾಕಪ್ಪ ನಿಮ್ಮ ಸಹವಾಸ ಅಂದಂತೆ ಪುರ್ ಎಂದು ಹಾರಿ ಹೋಯಿತು. ಅದು ಹಾರುತ್ತಿದ್ದಂತೆಯೇ ನಮ್ಮ ದೋಣಿಯಲ್ಲೊಂದು ನಿಟ್ಟುಸಿರು! ಗಣೇಶ್ ಬೆಹರಾ ಅವರು ನಗುತ್ತಾ, ಸಾಹೇಬ್ರೆ, ಸಿಕ್ಕಿತೇ ಚಂದದ ಫೋಟೋ? ಎನ್ನುತ್ತಾ ಮತ್ತೆ ದೋಣಿಯ ಹುಟ್ಟು ಹಾಕಿದರು. ಇನ್ನೊಂದು ಅಪರೂಪದ ಹಕ್ಕಿಯ ಶೋಧದಲ್ಲಿ ನಮ್ಮ ದೋಣಿ ಮಂಗಳಜೋಡಿಯ ಹಸಿರು ನೀರಿನ ಮೇಲೆ ಮೆಲ್ಲನೆ ತೇಲತೊಡಗಿತು. ಫೋಟೋಗಳು ಕ್ಯಾಮರಾದಲ್ಲಿ ಭದ್ರವಾಗಿದ್ದವು, ನೆನಪುಗಳು ಮನಸ್ಸಿನಲ್ಲಿ ಅಚ್ಚೊತ್ತಿದ್ದವು!

ಕಪ್ಪು-ಬಿಳಿ ಕಬ್ಬಕ್ಕಿಯನ್ನು ಸಂಸ್ಕೃತದಲ್ಲಿ ಚಿತ್ರಸಾರಿಕಾ ಎಂದು ಕರೆಯುತ್ತಾರೆ. ಇಂಗ್ಲೀಷನಲ್ಲಿ ಏಷ್ಯನ್ ಪೈಡ್ ಸ್ಟಾರ್ಲಿಂಗ್ (Asian Pied Starling) ಎಂದು ಕರೆದು, ವೈಜ್ಞಾನಿಕವಾಗಿ ಗ್ರಾಕ್ಯುಪಿಕಾ ಕಾಂಟ್ರಾ (Gracupica contra) ಎಂದು ಹೆಸರಿಸಿ. ಪ್ಯಾಸೆರಿಫಾರ್ಮಿಸ್ ಗಣದ, ಸ್ಟರ್ನಿಡೇ ಕುಟುಂಬಕ್ಕೆ ಸೇರಿಸಲಾಗಿದೆ.



ಇದು ಸುಮಾರು 20ರಿಂದ 25 ಸೆಂ.ಮೀ ಉದ್ದವಿರುತ್ತದೆ. ಮೈನಾ ಹಕ್ಕಿಯ ಗಾತ್ರವನ್ನೇ ಹೋಲುವ ಈ ಹಕ್ಕಿಯು ಗಟ್ಟಿಮುಟ್ಟಾದ ದೇಹವನ್ನು ಹೊಂದಿದೆ. ಇದು ಕಪ್ಪು ಮತ್ತು ಬಿಳಿ ಬಣ್ಣಗಳ ಮಿಶ್ರಣವನ್ನು ಹೊಂದಿರುವ ಸುಂದರ ಹಕ್ಕಿ. ತಲೆ, ಕುತ್ತಿಗೆ ಮತ್ತು ಬೆನ್ನಿನ ಭಾಗ ಕಡು ಕಪ್ಪು ಬಣ್ಣದಲ್ಲಿದ್ದರೆ, ಕೆನ್ನೆ ಮತ್ತು ರೆಕ್ಕೆಗಳ ಮೇಲ್ಭಾಗದಲ್ಲಿ ಬಿಳಿ ಪಟ್ಟಿಗಳಿರುತ್ತವೆ. ಇದರ ಕಪ್ಪಾದ ಕಣ್ಣಿನ ಸುತ್ತಲೂ ಕಿತ್ತಳೆ ಅಥವಾ ಕೆಂಪು ಬಣ್ಣದ ವರ್ತುಲವಿರುವುದು ಇದರ ವಿಶೇಷ ಗುರುತು. ಹಳದಿ ಬಣ್ಣದ ತುದಿಯನ್ನು ಹೊಂದಿರುವ ಕೆಂಪು ಅಥವಾ ಕೇಸರಿ ಬಣ್ಣದ ಕೊಕ್ಕು ಈ ಹಕ್ಕಿಗೆ ಗಾಂಭೀರ್ಯವನ್ನು ನೀಡುತ್ತದೆ.

ಇವು ಸರ್ವಭಕ್ಷಕರು. ಹೆಚ್ಚಾಗಿ ಹಸಿರು ಹುಲ್ಲುಗಾವಲು ಅಥವಾ ನೀವು ನೋಡಿದಂತೆ ಪಾಚಿ ತುಂಬಿದ ನೀರಿನ ಅಂಚಿನಲ್ಲಿ ಹುಳು-ಹುಪ್ಪಟೆಗಳು, ಕೀಟಗಳು ಮತ್ತು ಬಸವನ ಹುಳುಗಳನ್ನು ಹುಡುಕುತ್ತವೆ. ಹಣ್ಣುಗಳು ಮತ್ತು ಧಾನ್ಯಗಳನ್ನೂ ಇವು ಸೇವಿಸುತ್ತವೆ. ಇವು ಹೆಚ್ಚಾಗಿ ಗುಂಪುಗಳಲ್ಲಿ ವಾಸಿಸುತ್ತವೆ. ಮನುಷ್ಯರ ವಾಸಸ್ಥಳದ ಹತ್ತಿರ, ಗದ್ದೆಗಳಲ್ಲಿ ಮತ್ತು ಜೌಗು ಪ್ರದೇಶಗಳಲ್ಲಿ ಇವು ಹೆಚ್ಚಾಗಿ ಕಂಡುಬರುತ್ತವೆ. ಇದು ಮೂಲತಃ ಭಾರತೀಯ ಉಪಖಂಡ ಮತ್ತು ಆಗ್ನೇಯ ಏಷ್ಯಾದಲ್ಲಿ ಕಂಡುಬರುವ ಹಕ್ಕಿ. ಇವು ದೂರದ ದೇಶಗಳಿಗೆ ವಲಸೆ ಹೋಗುವ ಹಕ್ಕಿಗಳಲ್ಲ (resident birds). ಆದರೆ, ಸ್ಥಳೀಯವಾಗಿ ಆಹಾರ ಮತ್ತು ಹವಾಮಾನಕ್ಕೆ ಅನುಗುಣವಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲ್ಪ ದೂರದ ವಲಸೆ ಹೋಗುತ್ತವೆ.

ಸಾಮಾನ್ಯವಾಗಿ ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳವರೆಗೆ ಇವುಗಳ ಸಂತಾನೋತ್ಪತ್ತಿಯ ಕಾಲ. ಮರದ ರೆಂಬೆಗಳ ಮೇಲೆ ಒಣಗಿದ ಹುಲ್ಲು, ಕಡ್ಡಿಗಳನ್ನು ಬಳಸಿ ದೊಡ್ಡದಾದ, ಗುಮ್ಮಟದ ಆಕಾರದ ಗೂಡುಗಳನ್ನು ಕಟ್ಟುತ್ತವೆ. ಹೆಣ್ಣು ಹಕ್ಕಿಯು ಸಾಮಾನ್ಯವಾಗಿ 4 ರಿಂದ 6 ತಿಳಿ ನೀಲಿ ಬಣ್ಣದ ಮೊಟ್ಟೆಗಳನ್ನು ಇಡುತ್ತದೆ. ಇವು ಯಾವಾಗಲೂ ಗುಂಪಿನಲ್ಲಿ ಇರಲು ಇಷ್ಟಪಡುತ್ತವೆ. ಆಹಾರ ಹುಡುಕುವಾಗ ಅಥವಾ ಮಲಗುವಾಗ ಹತ್ತಾರು ಹಕ್ಕಿಗಳು ಒಟ್ಟಿಗೆ ಸೇರಿ ದೊಡ್ಡ ಮಟ್ಟದ ಗದ್ದಲ ಅಥವಾ ಸಂವಹನ ನಡೆಸುತ್ತವೆ. ಇವು ಕೃಷಿ ಭೂಮಿಯಲ್ಲಿನ ಹಾನಿಕಾರಕ ಕೀಟಗಳನ್ನು ತಿನ್ನುವುದರಿಂದ ರೈತರ ಮಿತ್ರ ಎಂದು ಕರೆಸಿಕೊಳ್ಳುತ್ತವೆ.

● ಚಿತ್ರ-ಲೇಖನ
ಶಶಿಧರ ಸ್ವಾಮಿ ಆರ್. ಹಿರೇಮಠ



ಬೆಟ್ಟಿಂಗ್ ಎಂಬ ಬಣ್ಣದ ಬಲೆ ಕ್ಷಣಿಕ ಸುಖದ ಆಸೆಯ ಜಾಲ

● ಮೊಹಮ್ಮದ್ ಅಜರುದ್ದೀನ್ ಅಕ್ಕಿಹೆಬ್ಬಾಳು

ಇಂದಿನ ಡಿಜಿಟಲ್ ಕ್ರಾಂತಿಯ ಯುಗದಲ್ಲಿ ತಂತ್ರಜ್ಞಾನವು ನಮ್ಮ ಜೀವನವನ್ನು ಸುಗಮಗೊಳಿಸಿದೆ ಎಂಬುದು ಎಷ್ಟು ಸತ್ಯವೋ, ಅಷ್ಟೇ ವೇಗವಾಗಿ ಅದು ನಮ್ಮ ಯುವಜನತೆಯನ್ನು ದಾರಿ ತಪ್ಪಿಸುತ್ತಿದೆ ಎಂಬುದು ಕೂಡ ಅಷ್ಟೇ ಕಹಿ ಸತ್ಯ. ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ಸ್ಮಾರ್ಟ್‌ಫೋನ್ ಕೈಯಲ್ಲಿರುವ ಪ್ರತಿಯೊಬ್ಬ ಯುವಕನನ್ನೂ ಕಾಡುತ್ತಿರುವ ದೊಡ್ಡ ಪಿಡುಗು ಎಂದರೆ ಅದು ಆನ್‌ಲೈನ್ ಬೆಟ್ಟಿಂಗ್ ಆ್ಯಪ್‌ಗಳು. ಅತೀ ಆಸೆ ಗತಿಗೇಡು ಎಂಬ ಗಾದೆ ಮಾತಿನಂತೆ, ಒಂದೇ ದಿನದಲ್ಲಿ ಲಕ್ಷಾಂತರ ರೂಪಾಯಿ ಹಣ ಗಳಿಸಬಹುದು, ಸುಲಭವಾಗಿ ಶ್ರೀಮಂತರಾಗಬಹುದು ಎಂಬ ಭ್ರಮೆಯ ಲೋಕದಲ್ಲಿ ತೇಲುತ್ತಿರುವ ಯುವಕರು, ಇಂದು ತಮ್ಮ ಬೆವರಿನ ಹನಿ ಮತ್ತು ಪೋಷಕರ ಕಷ್ಟದ ಹಣವನ್ನು ಈ ಮಾಯಾ ಜಾಲಕ್ಕೆ ಬಲಿ ಕೊಡುತ್ತಿದ್ದಾರೆ. ಈ ಬೆಟ್ಟಿಂಗ್ ಆ್ಯಪ್‌ಗಳು ಕೇವಲ ಹಣವನ್ನು ಮಾತ್ರ ಕಸಿದುಕೊಳ್ಳುತ್ತಿಲ್ಲ, ಬದಲಾಗಿ ಒಂದು ಸುಂದರವಾದ ಭವಿಷ್ಯವನ್ನು, ನೆಮ್ಮದಿಯ ಜೀವನವನ್ನು ಮತ್ತು ಸಮಾಜದಲ್ಲಿನ ಗೌರವವನ್ನು ಮಣ್ಣು ಪಾಲು ಮಾಡುತ್ತಿವೆ.

ಈ ಬೆಟ್ಟಿಂಗ್ ಆ್ಯಪ್‌ಗಳ ಕಾರ್ಯವೈಖರಿಯೇ ಒಂದು ವಿಚಿತ್ರ ಮತ್ತು ಆಕರ್ಷಕ ತಂತ್ರಗಾರಿಕೆಯನ್ನು ಹೊಂದಿದೆ. ಆರಂಭದಲ್ಲಿ ಬಳಕೆದಾರರನ್ನು ಆಕರ್ಷಿಸಲು 'ಸೈನ್ ಅಪ್ ಬೋನಸ್' ಅಥವಾ 'ಕ್ಯಾಶ್‌ಬ್ಯಾಕ್' ಎಂಬ ಆಮಿಷಗಳನ್ನು ಒಡ್ಡುತ್ತವೆ. ನೂರು ರೂಪಾಯಿ ಹೂಡಿಕೆ ಮಾಡಿ ಸಾವಿರ ಗೆಲ್ಲಿರಿ ಎಂಬ ಆಕರ್ಷಕ ಜಾಹೀರಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ರಾರಾಜಿಸುತ್ತವೆ. ಕ್ರಿಕೆಟ್ ಆಟಗಾರರು ಅಥವಾ ಸಿನಿಮಾ ತಾರೆಯರನ್ನು ಬಳಸಿ ಈ ಆ್ಯಪ್‌ಗಳಿಗೆ ಪ್ರಚಾರ ನೀಡುವುದರಿಂದ, ಯುವಕರು ಇದನ್ನು ಒಂದು ಅಧಿಕೃತ ಮತ್ತು ಸುರಕ್ಷಿತವಾದ ಮಾರ್ಗವೆಂದು ನಂಬಿ ಬಿಡುತ್ತಾರೆ. ಮೊದಲ ಬಾರಿ ಆಡಿದಾಗ ಸಣ್ಣ ಮೊತ್ತದ ಹಣ ಕೈಗೆ ಬಂದಾಗ ಸಿಗುವ ಆ ಗೆಲುವಿನ ಅಮಲು, ಮುಂದಿನ ದೊಡ್ಡ ಗೆಲುವಿನ ಆಸೆಗೆ ನಾಂದಿ ಹಾಡುತ್ತದೆ. ಆದರೆ ಈ ಗೆಲುವು ಕೇವಲ ಆಮಿಷವಷ್ಟೇ ಎಂಬುದು ಅವರಿಗೆ ಅರಿವಾಗುವ ಹೊತ್ತಿಗೆ ಅವರು ಜೂಜಿನ ಚಟಕ್ಕೆ ಅಂಟಿಕೊಂಡಿರುತ್ತಾರೆ. ಸಣ್ಣ ಜಯದ ಹಿಂದೆ ಅಡಗಿರುವ ದೊಡ್ಡ ಸೋಲಿನ ಸುಳಿ ಅವರಿಗೆ ಗೋಚರಿಸುವುದೇ ಇಲ್ಲ.

ಯುವಕರು ಈ ಬೆಟ್ಟಿಂಗ್ ಆ್ಯಪ್‌ಗಳ ಬೆನ್ನು ಹತ್ತಲು ಪ್ರಮುಖ ಕಾರಣ ಇಂದಿನ ಕಾಲದ ಭೋಗಜೀವನದ ಹಂಬಲ ಮತ್ತು ಸಾಮಾಜಿಕ ಮಾಧ್ಯಮಗಳ ಪ್ರಭಾವ. ಎಲ್ಲವನ್ನೂ ತಕ್ಷಣವೇ ಪಡೆಯಬೇಕು, ಯಾವುದೇ ಶ್ರಮವಿಲ್ಲದೆ ಹಣ ಗಳಿಸಬೇಕು ಎಂಬ ಮನೋಭಾವ ಯುವಮನಸ್ಸುಗಳಲ್ಲಿ ಮನೆ ಮಾಡಿದೆ. ಕೈಗೆ ಬಂದ ಹಣವೆಲ್ಲವನ್ನೂ ಬೆಟ್ಟಿಂಗ್‌ನಲ್ಲಿ ತೊಡಗಿಸಿ, ಅದನ್ನು ಕಳೆದುಕೊಂಡಾಗ ಅದನ್ನು ಸರಿತೂಗಿಸಲು ಮತ್ತೆ ಸಾಲ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಮನೆಯಲ್ಲಿ ಅಪ್ಪ-ಅಮ್ಮ ಕಷ್ಟಪಟ್ಟು ಕೊಡಿಟ್ಟ ಹಣ, ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟ ಫೀಸು, ಅಷ್ಟೇ ಏಕೆ, ವೈಯಕ್ತಿಕ ಅಗತ್ಯಗಳಿಗಾಗಿ ತೆಗೆದುಕೊಂಡ ಸಾಲವನ್ನೂ ಈ ಬೆಟ್ಟಿಂಗ್ ಎನ್ನುವ ಹಳ್ಳಕ್ಕೆ ಸುರಿಯುತ್ತಿದ್ದಾರೆ. ಒಮ್ಮೆ ಈ ಸಾಲದ ಸುಳಿಗೆ ಸಿಲುಕಿದರೆ ಅಲ್ಲಿಂದ ಹೊರಬರುವುದು ಸುಲಭವಲ್ಲ. ಸಾಲ ನೀಡಿದವರ ಕಿರುಕುಳ, ಬ್ಯಾಂಕ್‌ಗಳ ನೋಟಿಸ್‌ಗಳು ಮತ್ತು ಸಮಾಜದಲ್ಲಿ ಎದುರಿಸಬೇಕಾದ ಅವಮಾನಗಳು ಯುವಕರನ್ನು ಮಾನಸಿಕವಾಗಿ ಜರ್ಜರಿತಗೊಳಿಸುತ್ತವೆ.

ಈ ಹಣದ ನಷ್ಟವು ಕೇವಲ ಆರ್ಥಿಕ ಬಿಕ್ಕಟ್ಟನ್ನು ಮಾತ್ರ ತರುವುದಿಲ್ಲ, ಅದು ಕುಟುಂಬಗಳನ್ನೇ ಬೀದಿಗೆ ತರುತ್ತಿದೆ. ಬೆಟ್ಟಿಂಗ್‌ನಿಂದಾಗಿ ಮಗ ಸಾಲಗಾರನಾದಾಗ ಆ ನೋವನ್ನು ತಡೆಯಲಾರದೆ ಪೋಷಕರು ಅನುಭವಿಸುವ ಯಾತನೆ ಹೇಳತೀರದು. ಅನೇಕ ಸಂದರ್ಭಗಳಲ್ಲಿ ಈ ಸಾಲದ ಹೊರೆ ತಾಳಲಾರದೆ ಯುವಕರು ಆತ್ಮಹತ್ಯೆಯಂತಹ ಭೀಕರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದು ಕೇವಲ ಒಬ್ಬ ವ್ಯಕ್ತಿಯ ಸಾವಲ್ಲ, ಬದಲಾಗಿ ಒಂದು ಕುಟುಂಬದ ಭರವಸೆಯ ಅಂತ್ಯ. ಗೆಲ್ಲುವ ಭ್ರಮೆಯಲ್ಲಿ ಕಳೆದುಕೊಳ್ಳುತ್ತಿರುವ ಈ ಲಕ್ಷಾಂತರ ರೂಪಾಯಿ ಹಣಕ್ಕಿಂತಲೂ ಅಮೂಲ್ಯವಾದದ್ದು ಕಳೆದುಹೋಗುತ್ತಿರುವ ಸಮಯ ಮತ್ತು ಮಾನಸಿಕ ಸ್ಥಿರತೆ. ಶ್ರಮಪಟ್ಟು ದುಡಿಯುವ ಮನಸ್ಥಿತಿಯನ್ನೇ ಈ ಆ್ಯಪ್‌ಗಳು ನಾಶಪಡಿಸುತ್ತಿವೆ. ಕಷ್ಟಪಟ್ಟು ಸಂಪಾದಿಸುವ ಹಣದಲ್ಲಿರುವ ತೃಪ್ತಿ, ಇಂತಹ ಜೂಜಿನ ಹಣದಲ್ಲಿ ಖಂಡಿತ ಸಿಗದು ಎಂಬ ವಾಸ್ತವವನ್ನು ಯುವಕರು ಮರೆಯುತ್ತಿದ್ದಾರೆ.

ಕೊನೆಯದಾಗಿ ಹೇಳಬೇಕೆಂದರೆ, ಹಣವನ್ನು ಬೆವರಿನ ಮೂಲಕ ಸಂಪಾದಿಸಬೇಕೇ ಹೊರತು ಬೆಟ್ಟಿಂಗ್‌ನಂತಹ ವಾಮಮಾರ್ಗಗಳ ಮೂಲಕವಲ್ಲ. ಈ ಆ್ಯಪ್‌ಗಳು ನೀಡುವ ಕ್ಯಾಶ್‌ಬ್ಯಾಕ್ ಮತ್ತು ಬೋನಸ್‌ಗಳು ಕೇವಲ ಬಲೆಗೆ ಹಾಕುವ ಆಮಿಷಗಳಷ್ಟೇ. ಯುವಜನತೆ ಎಚ್ಚೆತ್ತುಕೊಳ್ಳಬೇಕಾದ ಸಮಯವಿದು. ಆನ್‌ಲೈನ್ ಗೇಮ್‌ಗಳನ್ನು ಮನರಂಜನೆಯಾಗಿ ನೋಡುವ ಬದಲು ಅದನ್ನು ಜೀವನೋಪಾಯದ ಮಾರ್ಗವನ್ನಾಗಿ ಮಾಡಿಕೊಳ್ಳುವುದು ಆತ್ಮಹತ್ಯೆಗೆ ಸಮಾನ. ಸರ್ಕಾರಗಳು ಇಂತಹ ಆ್ಯಪ್‌ಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕಾದ ಅಗತ್ಯವಿದೆ ಮತ್ತು ಪೋಷಕರು ತಮ್ಮ ಮಕ್ಕಳ ಆರ್ಥಿಕ ವ್ಯವಹಾರಗಳ ಮೇಲೆ ನಿಗಾ ಇಡಬೇಕಾಗಿದೆ. ಸಮಾಜವು ಜೂಜಾಟವನ್ನು ಒಂದು ಕಲೆ ಎಂದು ಬಿಂಬಿಸುವ ಬದಲು ಅದೊಂದು ಕೆಟ್ಟ ಚಟ ಎಂದು ಸಾರಬೇಕಿದೆ. ನೆನಪಿರಲಿ, ಜೂಜಿನ ಅಖಾಡದಲ್ಲಿ ಅಂತಿಮವಾಗಿ ಗೆಲ್ಲುವುದು ಯಾವಾಗಲೂ ಆ್ಯಪ್ ಮಾಲೀಕರೇ ಹೊರತು ಆಡುವ ಸಾಮಾನ್ಯ ಜನ ಸಾಮಾನ್ಯರಲ್ಲ. ಕಷ್ಟಪಟ್ಟು ಗುರಿ ತಲುಪುವ ದಾರಿ ಮಾತ್ರ ನಮಗೆ ಶಾಶ್ವತ ಸುಖವನ್ನು ನೀಡಬಲ್ಲದು. ದಾರಿ ತಪ್ಪುವ ಮುನ್ನ ದೀಪವಾಗುವ ವಿವೇಚನೆ ನಮ್ಮಲ್ಲಿರಲಿ.

ತಾಯಿ ಪ್ರೀತಿ: ಸಾವೇ ಬಂದರೂ, ಮಣ್ಣೇ ಆದರೂ!

● ಸಿದ್ದೇಶ್ ಸಿದ್ದನಮಠ

'ಅಮ್ಮಾ ಎನ್ನಲು ಕೋಟಿ ಪುಣ್ಯವೋ.. ಅವಳ ತ್ಯಾಗಕೆ ಸಾಟಿಯಿಲ್ಲವೋ..' ಕುಂತೀಪುತ್ರ ಸಿನಿಮಾದ ಈ ಹಾಡು ಭೂಮಿಮೇಲೆ ತಾಯಿಯ ತ್ಯಾಗ ಮತ್ತು ಪ್ರೀತಿಯ ಮಹತ್ವವನ್ನು ಕುರಿತಾದ ಈ ಹಾಡನ್ನು ಕೇಳುತ್ತಿದ್ದರೆ ಇನ್ನೊಮ್ಮೆ ಕೇಳಬೇಕು ಎಂದೆನಿಸುತ್ತದೆ. ಜಗತ್ತಿನಲ್ಲಿ ಕಣ್ಣಿಗೆ ಕಾಣುವ ದೇವರು ಅಂತ ಇದ್ದರೆ ಅದು ತಾಯಿ ಮಾತ್ರ ಎನ್ನುವ ಮಾತು ಕಣ್ಣಿಗೆ ಕಾಣುವ ವಾಸ್ತವಿಕ ಸತ್ಯ. ನವಮಾಸ ಹೆತ್ತು ಹೊತ್ತು ತನ್ನ ರಕ್ತದಲ್ಲಿ ಅರ್ಧ ರಕ್ತ ಕೊಟ್ಟು ಕರುಳು ಬಳ್ಳಿಯೊಂದಿಗೆ ಬೆಸೆದುಕೊಂಡು ಇಡಿ ದೇಹವನ್ನು ಮಿಕ್ಸಿಗೆ ಹಾಕಿ ರುಬ್ಬಿದಾಗ ಆಗುವ ನೋವಿನಷ್ಟೇ ನೋವು ಸಂಕಟ ಪ್ರಸವ ವೇದನೆಯಲ್ಲಾಗುತ್ತದೆ. ಇಷ್ಟೆಲ್ಲಾ ನೋವು ಸಂಕಟಗಳ ಮಧ್ಯೆ ಮಗುವಿಗೆ ಜನ್ಮ ನೀಡಿದಾಗ ಆ ಮಗುವಿನ ಮುಖ ನೋಡಿ ತನ್ನ ನೋವು ಮರೆಯುವ ಏಕೈಕ ಜೀವಿ ಎಂದರೆ ಅದು ತಾಯಿ ಮಾತ್ರ.

ತಾನು ಉಣ್ಣದಿದ್ದರೂ ಉಪವಾಸವಿದ್ದು ತನ್ನ ಮಗುವಿಗೆ ಉಣಿಸುವ ಏಕೈಕ ದೇವರೇ ಈ ತಾಯಿ.ತಾಯಿಯ ಕೈತುತ್ತು ಪ್ರತಿ ಮಗುವಿಗೆ ಅಮೃತವೆಂದರೆ ತಪ್ಪಾಗಲಾರದು.

ಇಷ್ಟೆಲ್ಲಾ ತಾಯಿ ಹಾಗೂ ತಾಯಿ ಪ್ರೀತಿ ಬಗ್ಗೆ ಪೀಠಿಕೆ ಹಾಕಲು ಕಾರಣ ಇತ್ತೀಚಿಗೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಒಂದು ಹೃದಯ ವಿದ್ರಾವಕ ಘಟನೆ. ಮಧ್ಯಪ್ರದೇಶದ ಜಬಲ್ಪುರದಲ್ಲಿ ಏಪ್ರಿಲ್ 30ರಂದು ನರ್ಮದಾ ನದಿಗೆ ನಿರ್ಮಿಸಲಾಗಿರುವ ಬಾರ್ಗಿ ಅಣೆಕಟ್ಟೆಯಲ್ಲಿ ಪ್ರವಾಸಿಗರಿದ್ದ ಬೋಟ್ ಮಗುಚಿ 9 ಜನ ಮೃತಪಟ್ಟಿರುವುದಾಗಿ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಯನ್ನು ನೋಡಿದ್ದೇವೆ. ಆದರೆ ಅದರಲ್ಲಿ ಒಂದು ಫೋಟೋ ತಾಯಿ ಒಬ್ಬಳು ತನ್ನ ಮಗುವನ್ನು ಎದೆಗೆ ಅವಚಿಕೊಂಡು ಪ್ರಾಣ ಬಿಟ್ಟಿರುವ ಫೋಟೋ ಮಾತ್ರ ಎಂತಹ ಕಲ್ಲು ಮನಸ್ಸನ್ನು ಕರಗಿಸಬಲ್ಲದು. ನಿಜಕ್ಕೂ ಈ ದುರಂತ ನೋಡಿದಾಗ ಕರುಳು ಚುರ್ ಎನ್ನದೆ ಇರಲಾರದು. ಆದರೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಈ ಫೋಟೋ ಮಾತ್ರ ಅಸಲಿ ಅಲ್ಲ ನಕಲಿ ಎಂದು ಸ್ವತಹ ಜಬಲ್ಪೂರದ ಜಿಲ್ಲಾಧಿ ಕಾರಿಯೇ ತಮ್ಮ ಎಕ್ಸ್ ಖಾತೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಅಲ್ಲಿನ ಮುಳುಗು ತಜ್ಞರೊಬ್ಬರು ತಾಯಿಯೊಬ್ಬರು ಮಗುವನ್ನು ಅಪ್ಪಿಕೊಂಡೆ ದುರಂತಕ್ಕೀಡಾಗಿರುವುದನ್ನು ನೋಡಲು ತುಂಬಾ ದುಃಖವಾಯಿತು ಎಂದಿರುವುದು ಮಾತ್ರ ಸತ್ಯ. ಈ ಜಗತ್ತಿನಲ್ಲಿ ನನಗೇನೇ ಕಷ್ಟ ಬಂದರೂ ನಾನು ಸಹಿಸಿಕೊಳ್ಳುವೆ ಆದರೆ ತನ್ನ ಮಕ್ಕಳಿಗೆ ಮಾತ್ರ ಕಷ್ಟ ಕೊಡಬೇಡಪ್ಪ ದೇವರೇ ಎಂದು ಪ್ರತಿದಿನ ದೇವರ ಮನೆಯಲ್ಲಿ ದೀಪ ಹಚ್ಚುವಾಗಲು ಕೈ ಮುಗಿದು ಬೇಡಿಕೊಳ್ಳುವ ಏಕೈಕ ಜೀವ ಎಂದರೆ ಅದು ತಾಯಿ ಮಾತ್ರ. ಆದ್ದರಿಂದಲೇ ತಾಯಿ ಎಂದರೆ ಮೌಂಟ್ ಎವರೆಸ್ಟ್‌ಗಿಂತಲೂ ಎತ್ತರ, ಆಕಾಶಕ್ಕಿಂತಲೂ ವಿಶಾಲ. ಸಾಮಾಜಿಕ ಜಾಲತಾಣದಲ್ಲಿ ಹರಿಯುತ್ತಿರುವ ಫೋಟೋ ಸುಳ್ಳು ಇರಬಹುದು. ಆದರೆ ಜಗತ್ತಿನಲ್ಲಿ ತಾಯಿಯ ಪ್ರೀತಿ ತ್ಯಾಗ ಮಾತ್ರ ಸುಳ್ಳಲ್ಲ. ಭವಿಷ್ಯದಲ್ಲಿ ತನ್ನ ಮಗುವಿನ ಬಗ್ಗೆ ಸಾವಿರಾರು ಕನಸುಗಳನ್ನು ಕಟ್ಟಿಕೊಂಡಿದ್ದ ಆ ತಾಯಿಯ ಒಂದೊಂದೇ ಕನಸು ಸಹ ಆ ನರ್ಮದಾ ನದಿಯ ಆಳಕ್ಕೆ ಹೋಗಿ ಉಸಿರುಗಟ್ಟಿ ಮುಳುಗಿ ನೀರು ಪಾಲಾದಂತೆ, ಆ ತಾಯಿ ಮತ್ತು ಮಗುವಿನ ಜೀವಗಳೂ ಸಹ ನೀರುಪಾಲಾಗಿರುವುದು ದುರ್ದೈವ.

ತನ್ನ ತಾಯಿಯೇ ತನ್ನ ರಕ್ಷಾ ಕವಚವೆಂದು ತಾಯಿಯ ಮಡಿಲನ್ನು ಬೆಚ್ಚಗೆ ಅಪ್ಪಿಕೊಂಡಿದ್ದ ಮಗುವಿಗೂ ತಾಯಿ ಮಡಿಲು ಕೂಡ ತೇಲುವ ದೋಣಿಯಾಗಲಿಲ್ಲ; ಬದಲಾಗಿ ಸಾವಿನ ಟೈಟಾನಿಕ್ ಆಗಿ ಹೋಯಿತು. ಅದೇನೇ ಇರಲಿ, ತಾಯಿಗಿಂತ ಮಿಗಿಲಾದ ದೇವರಿಲ್ಲ; ಉಪ್ಪಿಗಿಂತ ರುಚಿಯಾದ ಊಟವಿಲ್ಲ ಎನ್ನುವುದು ಮಾತ್ರ ಅಕ್ಷರಶಃ ಸತ್ಯ. ಈ ದುರಂತ ನೋಡಿದಾಗಿನಿಂದ ಹೃದಯಾಂತರಾಳದಿಂದ ಈ ಹಾಡು ಪದೇ ಪದೇ ನೆನಪಿಗೆ ಬರುತ್ತಿರುವುದು ಮಾತ್ರ ಸುಳ್ಳಲ್ಲ: 'ಬ್ರಹ್ಮ ವಿಷ್ಣು ಶಿವ ಎದೆ ಹಾಲು ಕುಡಿದರೋ, ಅಮ್ಮ ನೀನೆ ದೈವ ಎಂದು ಕಾಲು ಮುಗಿದರೋ... ಭೂಮಿಗೆ ದೈವ ಒಂದೇನೆ ತಾಯಿ!'

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1		2	■	3	4		5
6		■	7	8	■		■	
	■	■	■	9			■	
10	11	■	■		■	■	12	
■	13			■	14			■
15		■	■	16	■	■	17	18
	■	19			■	■	■	
	■		■	20	21	■	22	
23				■	24			■

ಎಡದಿಂದ ಬಲಕ್ಕೆ

1. ಸಾರದ ನಡುವೆ ನಿಂತಿರುವ ಕಡಲು (3)
3. ಅನಿತಾಳ ಕೆಲಸ ನಿಶ್ಚಿತವಾದುದಲ್ಲ (4)
6. ರೆಕ್ಕೆಯುಳ್ಳ ಹಕ್ಕಿಯ ಮತ್ತೊಂದು ಹೆಸರು (2)
7. ಮದುವೆಯ ಗಂಡು (2)
9. ಜನಗಳ ನಡುವೆ ಬರುವ ಕಲಹ (3)
10. ಬಗೆ ಅಥವಾ ರೀತಿ (2)
12. ಮಹಾಂತ ದಾಟದ ಘಟ್ಟ (2)
13. ತಪ್ಪಿಸಿಕೊಳ್ಳುವ ಮಾರ್ಗ (3)
14. ಕುರಿ ಸಾಕುವವನು (3)
15. ಸಣ್ಣ ಸೇತುವೆ (2)
17. ಕುಶನ ಅವಳಿ ಸಹೋದರ (2)
19. ಸಂಪೂರ್ಣವಾದುದು ಎಂದರ್ಥ (3)
20. ಎರಡಕ್ಷರದ ಗೆಲುವು (2)
22. ಇನ್ನೊಂದು ಸಮಯ (2)
23. ಪ್ರಯೋಜನವಿಲ್ಲದ ಎಂದರ್ಥ (4)
24. ದೇಹವು ಶರದ ನಡುವೆ ಸಿಲುಕಿದೆ (3)

ಮೇಲಿಂದ ಕೆಳಕ್ಕೆ

1. ಪ್ರಮಾಣ ಅಥವಾ ಸಾಬೀತು (2)
2. ಧ್ವನಿಗೆ ಮತ್ತೊಂದು ಹೆಸರು (2)
4. ಏನೂ ಚಿಂತೆಯಿಲ್ಲದ (3)
5. ಬುದ್ಧನ ಮತ್ತೊಂದು ಹೆಸರು (4)
6. ಹಾಡಿನ ಆರಂಭದಲ್ಲಿದ್ದುಕೊಂಡು ಪುನರಾರ್ತನೆ ಯಾಗುವ ಭಾಗ (3)
8. ನಿಜವಾಗಿಯೂ ಇರುಳಿನ ಮತ್ತೊಂದು ಹೆಸರು (3)
11. ಸಾಕಷ್ಟು ಹಣವಿರುವವನು, ಶ್ರೀಮಂತ (3)
12. ತೀವ್ರವಾದ ಆಸೆಯಲ್ಲಿ ಮತ್ತೊಂದು ಶಕ್ತಿಯಿದೆ (3)
15. ಸತ್ತವರನ್ನು ಬದುಕಿಸುವುದೆಂದು ನಂಬಲಾಗಿರುವ ಮೂಲಿಕೆ (4)
16. ಮೊದಲು ಹುಟ್ಟಿದವನು (3)
18. ಕಕ್ಷಿದಾರನ ಪರವಾಗಿ ವಕಾಲತ್ತು ಮಾಡುವವನು (3)
19. ದಕ್ಷತೆಯಿಂದ ಕೂಡಿದ ಎಂದರ್ಥ (3)
21. ಇನ್ನೊಂದು ಕೀರ್ತಿ (2)
22. ಮತ್ತೊಂದು ಕೈ ಆರಂಭದಲ್ಲೇ ದೀರ್ಘವಾಗಿ ಬಂದಿದೆ (2)

ಸರಿಯುತ್ತರಗಳು

ರಾಮಚರಿತ ಮಾನಸ: ಪ್ರಜಾ ಪ್ರಿಯ ರಾಮ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾಮನು ಕೈಕೇಯಿಯ ಭವನದಿಂದ ಹೊರಬಂದಾಗ ಅವನ ಮುಖದಲ್ಲಿ ಎಂದಿನಂತೆ ಪ್ರಸನ್ನತೆ ಇತ್ತು. ಆದರೆ ಕೈಕೇಯಿಯ ಕಣ್ಣಲ್ಲಿ ಹರಿಯುತ್ತಿದ್ದ ಕಣ್ಣೀರು ಅವಳ ಅಂತರಂಗದ ಕಲ್ಮಶವನ್ನೆಲ್ಲ ತೊಳೆದು ಹಾಕಿತ್ತು. ಅಯೋಧ್ಯೆಯ ರಾಜಬೀದಿಗಳಲ್ಲಿ ಸಂಭ್ರಮವೋ ಸಂಭ್ರಮ. ಹದಿನಾಲ್ಕು ವರ್ಷಗಳ ಕಾಲ ಕತ್ತಲೆಯಲ್ಲಿದ್ದ ನಗರಕ್ಕೆ ಚೈತನ್ಯ ಬಂದಿತ್ತು. ರಾಮನು ಪಟ್ಟಾಭಿಷೇಕಕ್ಕೆ ಸಿದ್ಧನಾಗಬೇಕಿತ್ತು.

ರಾಮನು ಸಿಂಹಾಸನವನ್ನೇರುವ ಮುನ್ನ ಭರತನ ಕೈ ಹಿಡಿದು ಕರೆದುಕೊಂಡು ಬಂದನು. ಭರತನು ಅಣ್ಣನ ಪಾದಗಳಿಗೆರಗಿ, ಅಣ್ಣಾ, ಈ ರಾಜ್ಯ ನಿನ್ನದು. ಈ ಪಾಪಿಯ ಕೈಯಿಂದ ರಾಜ್ಯದ ಅಧಿಕಾರವನ್ನು ತೆಗೆದುಕೊ ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದನು. ರಾಮನು ಅವನನ್ನು ಎತ್ತಿ ಅಪ್ಪಿಕೊಂಡು, ಭರತಾ, ನೀನು ರಾಜ್ಯವಾಳಿದ್ದು ಪಾಪದಿಂದಲ್ಲ, ತ್ಯಾಗದಿಂದ. ನಿನ್ನ ನಿಷ್ಕಲ್ಮಶ ಸೇವೆ ಈ ರಾಜ್ಯಕ್ಕೆ ಸಿಕ್ಕಿದೆ ಎಂದಾದರೆ ಧರ್ಮವೇ ಇಲ್ಲಿ ನೆಲೆಸಿತ್ತು ಎಂದರ್ಥ ಎಂದು ಸಮಾಧಾನ ಪಡಿಸಿದನು. ತುಳಸೀದಾಸರು ಈ ಭಾವನಾತ್ಮಕ ಐಕ್ಯತೆಯನ್ನು ಒಂದು ಸುಂದರ ಚೌಪದಿಯಲ್ಲಿ ಹೀಗೆ ವಿವರಿಸುತ್ತಾರೆ:

ರಘುಕುಲ ರೀತಿ ಸದಾ ಚಲಿ ಆಯೀ।
ಪ್ರಾಣ ಜಾಯಿ ಬರು ಬಚನು ನ ಜಾಯಿ॥
ಸೇವಕ ಸಖಾ ಸಮಾನ ಪ್ರಿಯ ಮೋರೇ।
ಅನುಜ ಭರತ ಗತಿ ಜೌ ನಹಿಂ ಹೋರೇ।

ಭಾವಾರ್ಥ: ರಘುಕುಲದ ಸಂಪ್ರದಾಯವು ಪ್ರಾಣ ಹೋದರೂ ಕೊಟ್ಟ ಮಾತನ್ನು ತಪ್ಪದಂತಹುದು. ರಾಮನು ತನ್ನ ಸೇವಕರನ್ನು ಮತ್ತು ಮಿತ್ರರನ್ನು ಸಮಾನವಾಗಿ ಪ್ರೀತಿಸುತ್ತಿದ್ದನು, ಅದರಲ್ಲೂ ಭರತನ ಭಕ್ತಿಯು ಅವನಿಗೆ ಅತ್ಯಂತ ಪ್ರಿಯವಾಗಿತ್ತು. ಪಟ್ಟಾಭಿಷೇಕದ ನಂತರ ರಾಮನು ಕೇವಲ ಅರಮನೆಯ ಒಳಗೆ ಉಳಿಯಲಿಲ್ಲ. ಪ್ರತಿ ದಿನ ಸಂಜೆ ಸರಯೂ ನದಿಯ ತೀರದಲ್ಲಿ ಒಂದು ಸಭೆ ಸೇರುತ್ತಿತ್ತು. ಅಲ್ಲಿ ಮಂತ್ರಿಗಳಿರಲಿಲ್ಲ, ಕೇವಲ ಪ್ರಜೆಗಳಿದ್ದರು. ರಾಮನು ಸಿಂಹಾಸನದಿಂದ ಇಳಿದು ನೆಲದ ಮೇಲೆ ಕುಳಿತು ಜನರ ಕಷ್ಟಗಳನ್ನು ಆಲಿಸುತ್ತಿದ್ದನು.

ಒಮ್ಮೆ ಒಬ್ಬ ವೃದ್ಧೆ ತನ್ನ ಮೊಮ್ಮಗನಿಗೆ ತುತ್ತು ನೀಡುತ್ತಾ ರಾಮನನ್ನು ನೋಡಿ ಕೇಳಿದಳು, ರಾಮಾ, ನೀನು ಕಾಡಿಗೆ ಹೋದಾಗ ನಮಗೆ ದಿಕ್ಕೇ ಇಲ್ಲದಂತಾಗಿತ್ತು. ಈಗ ನೀನು ಬಂದಿದ್ದೀಯೆ, ನಮಗೆ ಎಂದೂ ಹಸಿವಾಗದಂತೆ ನೋಡಿಕೊಳ್ಳುತ್ತೀಯಾ? ರಾಮನು ನಸುನಗುತ್ತಾ ಆ ಮಗುವಿನ ತಲೆಯ ಮೇಲೆ ಕೈಯಿಟ್ಟು, ತಾಯಿ, ಈ ರಾಜ್ಯದಲ್ಲಿ ಯಾರೂ ಹಸಿದು ಮಲಗಬಾರದು ಎಂಬುದು ನನ್ನ ಆಜ್ಞೆಯಲ್ಲ, ಅದು ನನ್ನ ಸಂಕಲ್ಪ. ಧಾನ್ಯದ ರಾಶಿಗಳಿಗಿಂತ ಹಂಚಿ ತಿನ್ನುವ ಗುಣ ಬೆಳೆಯಲಿ ಎಂದನು.

ರಾಮರಾಜ್ಯದಲ್ಲಿ ಪ್ರಕೃತಿಯೂ ಸಹಕಾರ ನೀಡುತ್ತಿತ್ತು. ಮರಗಳು ಯಾವಾಗಲೂ ಹಣ್ಣುಗಳಿಂದ ಬಾಗಿರುತ್ತಿದ್ದವು, ಹಸುಗಳು ಅಪಾರ ಹಾಲು ನೀಡುತ್ತಿದ್ದವು.



ತುಳಸೀದಾಸರು ವರ್ಣಿಸುವಂತೆ:

ಫೂಲಹಿಂ ಫರಹಿಂ ಸದಾ ತರು ಕಾನನ।
ರಹಿ ಏಕ ಸಂಗ ಗಜ ಪಂಚಾನನ॥

ಭಾವಾರ್ಥ: ಕಾಡಿನ ಮರಗಳು ಯಾವಾಗಲೂ ಹೂವು ಮತ್ತು ಹಣ್ಣುಗಳಿಂದ ತುಂಬಿರುತ್ತಿದ್ದವು. ಆನೆ ಮತ್ತು ಸಿಂಹದಂತಹ ಪರಸ್ಪರ ವೈರಿ ಪ್ರಾಣಿಗಳು ಕೂಡ ಸ್ನೇಹದಿಂದ ಒಟ್ಟಿಗೆ ಇರುತ್ತಿದ್ದವು.

ರಾಮನ ಆಳ್ವಿಕೆಯಲ್ಲಿ 'ದಂಡ' ಎನ್ನುವುದು ಕೇವಲ ಸಾಧು-ಸಂತರು ಹಿಡಿಯುವ ಕೋಲಾಗಿತ್ತು ಹೊರತು ಶಿಕ್ಷಿಸುವ ಆಯುಧವಾಗಿರಲಿಲ್ಲ. ಜನರ ಮನಸ್ಸಿನಲ್ಲಿ ಭಯದ ಬದಲು ಭಕ್ತಿ ಇತ್ತು. ಅಹಂಕಾರದ ಬದಲು ವಿನಯವಿತ್ತು. ಕೈಕೇಯಿಯ ಮೇಲಿದ್ದ ಕೋಪ ಅಯೋಧ್ಯೆಯ ಜನರಲ್ಲಿ ಮಾಯವಾಗಿತ್ತು, ಏಕೆಂದರೆ ರಾಮನು ಅವಳನ್ನು ಪೂಜಿಸುವ ಮೂಲಕ ಕ್ಷಮೆಯ ಶಕ್ತಿಯನ್ನು ತೋರಿಸಿಕೊಟ್ಟಿದ್ದನು.

ಕೊನೆಯಲ್ಲಿ, ರಾಮರಾಜ್ಯವೆಂದರೆ ಕೇವಲ ವ್ಯವಸ್ಥೆಯಲ್ಲ, ಅದು ಒಂದು ಸುಸಂಸ್ಕೃತ ಸಮಾಜದ ಪ್ರತಿಬಿಂಬ. ನಮ್ಮ ಅಂತರಂಗದಲ್ಲಿರುವ ರಾವಣ ರೂಪೀ ಅರಿಷಡ್ವರ್ಗಗಳನ್ನು ಗೆದ್ದು, ರಾಮ ರೂಪೀ ಸತ್ಯವನ್ನು ಪ್ರತಿಷ್ಠಾಪಿಸಿದಾಗ ಮಾತ್ರ ನೈಜ ಸುಖ ಶಾಂತಿ ಲಭ್ಯ. ಸತ್ಯ, ಶೌಚ, ದಯೆ ಮತ್ತು ದಾನ ಎಂಬ ನಾಲ್ಕು ಪಾದಗಳ ಮೇಲೆ ಧರ್ಮವು ರಾಮರಾಜ್ಯದಲ್ಲಿ ಸುಸ್ಥಿರವಾಗಿತ್ತು. ಕ್ಷಮೆಯೆಂಬ ಚಂದನವನ್ನು ಮನಸ್ಸಿಗೆ ಲೇಪಿಸಿದಾಗ, ಅದರ ತಂಪು ಹೃದಯಕ್ಕೂ ನಾಟಿ ನಾವು ಬದುಕನ್ನು ಕಹಿ ಇಲ್ಲದೆ ಸವಿಯಲು ಸಂತೃಪ್ತಿಯಿಂದ ಜೀವನ ನಡೆಸಲು ಅದೇ ಅಮೃತ ಸದೃಶದಂತೆ ನೆರವಾಗುತ್ತದೆ. ಇಂತಹ ಕ್ಷಮೆಯನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳೋಣ.

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಅಭಿಷೇಕ್ ಶರ್ಮಾ
ಹೈದರಾಬಾದ್

ಪರ್ಪಲ್ ಕ್ಯಾಪ್
ಭುವನೇಶ್ವರ್
ಬೆಂಗಳೂರು

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
ಪಂಜಾಬ್	9	6	2	13
ಬೆಂಗಳೂರು	9	6	3	12
ಹೈದರಾಬಾದ್	10	6	4	12
ರಾಜಸ್ಥಾನ್	10	6	4	12
ಗುಜರಾತ್	10	6	4	12
ಚೆನ್ನೈ	10	5	5	12
ಡೆಲ್ಲಿ	10	4	6	8
ಕೋಲ್ಕತಾ	9	3	5	7
ಮುಂಬೈ	10	3	7	6
ಲಖನೌ	9	2	7	4

ಅಂಕಪಟ್ಟಿಯಲ್ಲಿ ಮೇಲೇರುವ ನಿರೀಕ್ಷೆಯಲ್ಲಿ ಪಾಟೀದಾರ್ ಪಡೆ

ಇಂದು ಆರ್‌ಸಿಬಿ-ಲಖನೌ ಹಣಾಹಣಿ

ಲಖನೌ: ಗುಜರಾತ್ ಟೈಟನ್ಸ್ ಎದುರು ಕೊನೆಯ ಪಂದ್ಯದಲ್ಲಿ ಸೋಲು ಅನುಭವಿಸಿದ್ದ ಆರ್‌ಸಿಬಿ ತಂಡವು ಇಂದು ಇಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಈ ಋತುವಿನ ಐಪಿಎಲ್ ಟೂರ್ನಿಯ 50ನೇ ಪಂದ್ಯದಲ್ಲಿ ಲಖನೌ ಸೂಪರ್ ಜಯಂಟ್ಸ್ ವಿರುದ್ಧ ಕಾದಾಟ ನಡೆಸಲಿದೆ. ಟೂರ್ನಿಯ ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರ ಸ್ಥಾನದ ಮೇಲೆ ಕಣ್ಣಿಟ್ಟಿರುವ ರಜತ್ ಪಾಟೀದಾರ್ ನಾಯಕತ್ವದ ಆರ್‌ಸಿಬಿ ತಂಡವು ರಿಷಬ್ ಪಂತ್ ಪಡೆಯನ್ನು ಸತತ ಎರಡನೇ ಬಾರಿಯೂ ಸೋಲಿಸುವ ವಿಶ್ವಾಸವನ್ನು ಹೊಂದಿದೆ.

ಇಲ್ಲಿಯವರೆಗೂ ಆಡಿದ 9 ಪಂದ್ಯಗಳಲ್ಲಿ ಆರ್‌ಸಿಬಿ ಆರರಲ್ಲಿ ಗೆಲುವು ಪಡೆದಿದ್ದು, ಇನ್ನುಳಿದ ಮೂರರಲ್ಲಿ ಸೋಲು ಅನುಭವಿಸಿ ಒಟ್ಟು 12 ಅಂಕಗಳನ್ನು ಕಲೆ ಹಾಕಿದೆ. ಈ ಆವೃತ್ತಿಯ ಹಿಂದಿನ ಪಂದ್ಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಾಗ ಲಖನೌ ತಂಡವನ್ನು ಆರ್‌ಸಿಬಿ ಐದು ವಿಕೆಟ್‌ಗಳಿಂದ ಮಣಿಸಿತ್ತು. ಇದೀಗ ಇಂದೂ ಅದೇ ಲಯವನ್ನು ಮುಂದುವರಿಸಲು ಬೆಂಗಳೂರು ತಂಡ ಎದುರು ನೋಡುತ್ತಿದೆ. ತಂಡದ ನಾಯಕ ಪಾಟೀದಾರ್, ಹಿರಿಯ ಆಟಗಾರ ವಿರಾಟ್

ಇಂದಿನ ಪಂದ್ಯ

ಆರ್‌ಸಿಬಿ vs ಲಖನೌ

ಸ್ಥಳ	: ಏಕನಾ ಕ್ರಿಕೆಟ್ ಕ್ರೀಡಾಂಗಣ ಲಖನೌ
ಸಮಯ	: ರಾತ್ರಿ 7.30
ನೇರಪ್ರಸಾರ	: ಸ್ಟಾರ್ ಸ್ಪೋರ್ಟ್ಸ್
ಲೈವ್‌ಸ್ಟ್ರೀಮಿಂಗ್	: ಜಿಯೊ ಹಾಟ್‌ಸ್ಟಾರ್

ಮುಖಾ ಮುಖಿ

7 ಒಟ್ಟು ಪಂದ್ಯಗಳು
5 ಆರ್‌ಸಿಬಿ ಗೆಲುವು
2 ಲಖನೌ ಗೆಲುವು

ಲಖನೌ ಸೂಪರ್ ಜೈಂಟ್ಸ್ ತಂಡವು ಇಲ್ಲಿಯವರೆಗೂ ಆಡಿದ 9 ಪಂದ್ಯಗಳಲ್ಲಿ ಗೆದ್ದಿರುವುದು ಕೇವಲ ಎರಡು ಪಂದ್ಯಗಳಲ್ಲಿ ಮಾತ್ರ, ಇನ್ನುಳಿದ 7 ಪಂದ್ಯಗಳಲ್ಲಿ ಸೋಲು ಅನುಭವಿಸಿದೆ. ಆ ಮೂಲಕ ಟೂರ್ನಿಯ ಪಾಯಿಂಟ್ಸ್ ಟೇಬಲ್‌ನಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿದೆ.

ಕಳೆದ ಪಂದ್ಯದಲ್ಲಿ ಲಖನೌ ತಂಡವು ಮುಂಬೈ ಇಂಡಿಯನ್ಸ್ ಎದುರು ಆರು ವಿಕೆಟ್‌ಗಳಿಂದ ಸೋಲು ಅನುಭವಿಸಿತ್ತು. ಹಾಗಾಗಿ ಪ್ಲೇಆಫ್ಸ್ ಹಾದಿ ಅತ್ಯಂತ ಕಠಿಣವಾಗಿದೆ.

ಪಿಚ್ ರಿಪೋರ್ಟ್: ಪಂದ್ಯ ನಡೆಯುವ ಲಖನೌದ ಏಕನಾ ಕ್ರೀಡಾಂಗಣದ ಪಿಚ್ ಬೌಲರ್ ಸ್ನೇಹಿಯಾಗಿದೆ. ಇಲ್ಲಿನ ಪಿಚ್ ನಿಧಾನಗತಿಯಿಂದ ಕೂಡಿದೆ. ಈ ಕ್ರೀಡಾಂಗಣದಲ್ಲಿ 140-160 ರನ್ ಈ ಆವೃತ್ತಿಯ ಸರಾಸರಿ ಮೊತ್ತವಾಗಿದೆ. ಬೌಲರ್‌ಗಳು ಉತ್ತಮ ಲೈನ್ ಅಂಡ್ ಲೆನ್ತ್ ಕಾಪಾಡಿಕೊಂಡರೆ, ಬ್ಯಾಟ್ಸ್‌ಮನ್‌ಗಳಿಗೆ ರನ್ ಗಳಿಸುವುದು ಸವಾಲಾಗಲಿದೆ.

ಸಮಾಚಾರ ಸಣ್ಣದಲ್ಲ

ಸ್ವಾರ್ಥ ಯೋಚನೆಗಿಂತ ತಂಡದ ಗೆಲುವು ಮುಖ್ಯ

ದೆಹಲಿ: ವೈಯಕ್ತಿಕ ದಾಖಲೆಗಿಂತ ನನಗೆ ತಂಡದ ಗೆಲುವು ಬಹಳ ಮುಖ್ಯ ಎಂದು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆರಂಭಿಕ ಆಟಗಾರ ಸಂಜು ಸ್ಯಾಮ್ಸನ್ ಹೇಳಿದ್ದಾರೆ. ದೆಹಲಿಯಲ್ಲಿ ಮಂಗಳವಾರ ಅತಿಥೇಯ ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಸಂಜು, 52 ಎಸೆತಗಳಲ್ಲಿ 6 ಸಿಕ್ಸರ್ ಹಾಗೂ 7 ಬೌಂಡರಿಗಳೊಂದಿಗೆ ಅಜೇಯ 87 ರನ್‌ಗಳನ್ನು ಕಲೆ ಹಾಕಿದ್ದರು. ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದ ಬಳಿಕ ಮಾತನಾಡಿದ ಸಂಜು ಸ್ಯಾಮ್ಸನ್, ಶತಕ ಸಾಧಿಸಲು ನಾನು ಕ್ರೀಡಾಂಗಣದಲ್ಲಿ ಸ್ವಾರ್ಥಿಯಾಗಿರಬೇಕಾಗುತ್ತಿತ್ತು. ಇನ್ನೊಬ್ಬ ಬ್ಯಾಟ್ಸ್‌ಮನ್ ಚೆನ್ನಾಗಿ ಆಡುತ್ತಿದ್ದರಿಂದ, ಶತಕಕ್ಕಾಗಿ ನಾನು ಸ್ಟ್ರೈಕ್ ಕೇಳಲಿಲ್ಲ. ಇನ್ನೂ ಹಲವು ಪಂದ್ಯಗಳು ಬಾಕಿಯಿವೆ, ಮುಂದಿನ ಸಂದರ್ಭಗಳಲ್ಲಿ ಅದನ್ನು ಸಾಧಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ.

ಪಲಾಶ್ ಮುಚ್ಚಲ್ ವಿರುದ್ಧ ದೂರು

ದೆಹಲಿ: ದೂರು ದಾಖಲಾದ ಹಿನ್ನೆಲೆಯಲ್ಲಿ ಸ್ಮೃತಿ ಮಂಧಾನಾ ಅವರ ಮಾಜಿ ಗೆಳೆಯ ಪಲಾಶ್ ಮುಚ್ಚಲ್ ಕಾನೂನು ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಅವರ ವಿರುದ್ಧ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ದೂರು ವನ್ನು ಸಂಗ್ಲಿ ನಿವಾಸಿ ಹಾಗೂ ಸ್ಮೃತಿ ಮಂಧಾನಾ ಅವರ ಬಾಲ್ಯದ ಸ್ನೇಹಿತನಾದ ವಿಜ್ಞಾನ ಪ್ರಕಾಶ್ ಮಾನೆ ದಾಖಲಿಸಿದ್ದಾರೆ. ದೂರಿನ ಪ್ರಕಾರ, ನ.22ರಂದು ಸಂಗ್ಲಿ ಅಷ್ಟಾ ರಸ್ತೆಯ ಟೋಲ್ ಪ್ಲಾಜಾದಲ್ಲಿ ಈ ಘಟನೆ ನಡೆದಿದೆ. ವಾಗ್ವಾದದ ವೇಳೆ ಪಾಲಾಶ್ ಮಚ್ಚಲ್ ಅವರು ಜಾತಿ ಸಂಬಂಧಿತ ಅವಹೇಳನಕಾರಿ ಮಾತುಗಳನ್ನು ಬಳಸಿದ್ದಾರೆ ಎಂದು ವಿಜ್ಞಾನ ಪ್ರಕಾಶ್ ಮಾನೆ ಆರೋಪಿಸಿದ್ದಾರೆ. ಪೊಲೀಸರು ಎಸ್‌ಸಿ/ಎಸ್‌ಟಿ ಕಾಯ್ದೆಯ ಸೆಕ್ಷನ್ 3(1) ಜೊತೆಗೆ ಐಪಿಸಿ ಸೆಕ್ಷನ್ 351(2) ಮತ್ತು 352 ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಇಶಾನ್ ಕಿಶನ್, ಹೆನ್ರಿಕ್ ಕ್ಲಾಸೆನ್ ಸ್ಫೋಟಕ ಆಟ | ಉತ್ತಮ ಮೊತ್ತ ಕಲೆ ಹಾಕಿದ ಸನ್ ರೈಸರ್ಸ್ ಹೈದರಾಬಾದ್

ಪಂಜಾಬ್‌ಗೆ 236 ರನ್‌ಗಳ ಗೆಲುವಿನ ಗುರಿ

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅತಿಥೇಯ ಸನ್ ರೈಸರ್ಸ್ ಹೈದರಾಬಾದ್ ತಂಡವು ಪಂಜಾಬ್ ಕಿಂಗ್ಸ್ ಎದುರು 235 ರನ್‌ಗಳನ್ನು ಗಳಿಸಿತು.

ಇಶಾನ್ ಕಿಶನ್ (55) ಹಾಗೂ ಹೆನ್ರಿಕ್ ಕ್ಲಾಸೆನ್ (69) ಅರ್ಧಶತಕ ಸಿಡಿಸಿದರೆ, ಅಭಿಷೇಕ್ ಶರ್ಮಾ 35, ಟ್ರಾವಿಸ್ ಹೆಡ್ 38 ರನ್ ಗಳಿಸಿ, ಪಂಜಾಬ್ ಕಿಂಗ್ಸ್‌ಗೆ 236 ರನ್‌ಗಳ ಬೃಹತ್ ಗುರಿ ನೀಡಲು ನೆರವಾದರು.

ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿದ ಸನ್ ರೈಸರ್ಸ್ ಹೈದರಾಬಾದ್ ತಂಡ ಸ್ಫೋಟಕ ಆರಂಭ ಪಡೆದುಕೊಂಡಿತು. ಮೊದಲ ವಿಕೆಟ್ ಜತೆಯಾಟದಲ್ಲಿ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮಾ 54 ರನ್‌ಗಳನ್ನು ಗಳಿಸಿದರು. ಅಭಿಷೇಕ್ ಶರ್ಮಾ ಕೇವಲ 13 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್‌ಗಳ ಸಹಿತ 35 ರನ್ ಗಳಿಸಿ ಲಾಕಿ ಫರ್ಗ್ಯುಸನ್ ಬೌಲಿಂಗ್‌ನಲ್ಲಿ ಶ್ರೇಯಸ್ ಅಯ್ಯರ್‌ಗೆ ಕ್ಯಾಚ್ ನೀಡಿ ಔಟ್ ಆದರು.



ಹೆನ್ರಿಕ್ ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್.

ಅರ್ಧ ಶತಕ ಬಾರಿಸಿದ ಇಶಾನ್ ಕಿಶನ್.

ನಂತರ ಟ್ರಾವಿಸ್ ಹೆಡ್ ಜತೆಗೂಡಿದ ಇಶಾನ್ ಕಿಶನ್ 2ನೇ ವಿಕೆಟ್ ಜತೆಯಾಟದಲ್ಲಿ 30 ರನ್ ಸೇರಿಸಿದರು. ಟ್ರಾವಿಸ್ ಹೆಡ್ 19 ಎಸೆತಗಳಲ್ಲಿ ತಲಾ 3 ಬೌಂಡರಿ, 3 ಸಿಕ್ಸರ್‌ಗಳ ಸಹಿತ 38 ರನ್ ಗಳಿಸಿ ಚಹಲ್ ಬೌಲಿಂಗ್‌ನಲ್ಲಿ ಮಾರ್ಕೊ ಯಾನ್ಸನ್‌ಗೆ ಕ್ಯಾಚ್ ನೀಡಿ ಔಟ್ ಆದರು. 4ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಹೆನ್ರಿಕ್ ಕ್ಲಾಸೆನ್ 3ನೇ ವಿಕೆಟ್‌ಗೆ ಇಶಾನ್ ಕಿಶನ್ ಜತೆಗೂಡಿ 88 ರನ್ ಜತೆಯಾಟ ಪ್ರದರ್ಶಿಸಿದರು.

ಇಶಾನ್ ಕಿಶನ್ ಕೇವಲ 32 ಎಸೆತಗಳಲ್ಲಿ 2 ಬೌಂಡರಿ, 4 ಸಿಕ್ಸರ್‌ಗಳ ಸಹಿತ 55 ರನ್ ಗಳಿಸಿದರು. ಇದು ಅವರ ಈ ವರ್ಷದ 4ನೇ ಅರ್ಧಶತಕವಾಗಿದೆ. ಕಿಶನ್ ಅವರು ಅರ್ಷದೀಪ್ ಸಿಂಗ್‌ಗೆ ಅವರು ತನ್ನ ವಿಕೆಟ್ ಒಪ್ಪಿಸಿದರು.

ಕೊನೆಯಲ್ಲಿ ಅಬ್ಬರಿಸಿದ ಹೆನ್ರಿಕ್ ಕ್ಲಾಸೆನ್ ಕೊನೆಯ ಎಸೆತದಲ್ಲಿ ಔಟ್ ಆಗುವ ಮುನ್ನ 43 ಎಸೆತಗಳಲ್ಲಿ 3 ಬೌಂಡರಿ, 4 ಸಿಕ್ಸರ್‌ಗಳ ಸಹಿತ 69 ರನ್ ಗಳಿಸಿದರೆ, ನಿತೀಶ್ ಕುಮಾರ್ ರೆಡ್ಡಿ 13 ಎಸೆತಗಳಲ್ಲಿ ತಲಾ 2 ಬೌಂಡರಿ, 2 ಸಿಕ್ಸರ್‌ಗಳ ಸಹಿತ ಅಜೇಯ 29 ರನ್ ಗಳಿಸಿದರು, ಈ ಜೋಡಿ 5ನೇ ವಿಕೆಟ್‌ಗೆ 63 ರನ್ ಸೇರಿಸಿದರು.

ಆರ್‌ಸಿಬಿ ವಿರುದ್ಧದ ಪಂದ್ಯಕ್ಕೆ ಹಾರ್ದಿಕ್ ಪಾಂಡ್ಯ ಅಲಭ್ಯ

ಮುಂಬೈ: ಮುಂಬೈ ಇಂಡಿಯನ್ಸ್ ತಂಡವು ರಾಯ್‌ಪುರದಲ್ಲಿ ತನ್ನ ಮುಂದಿನ ಪಂದ್ಯವನ್ನು ಆರ್‌ಸಿಬಿ ವಿರುದ್ಧ ಮೇ 10ರಂದು ಆಡಲಿದೆ. ಆದರೆ ಈ ಪಂದ್ಯಕ್ಕೂ ಮುನ್ನ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಆ ಪಂದ್ಯದಲ್ಲಿ ಅಲಭ್ಯತೆ ಬಗ್ಗೆ ಬಗ್ಗೆ ಸುದ್ದಿಯೊಂದು ಹೊರಬಿದ್ದಿದೆ. ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಭಾಗವಹಿಸುವ ಸಾಧ್ಯತೆ ಕಡಿಮೆ ಇದ್ದು, ಅದಕ್ಕೆ ಪೂರಕವಾಗಿ ಅವರು ಮುಂಬೈ ಇಂಡಿಯನ್ಸ್ ತಂಡದೊಂದಿಗೆ ರಾಯ್‌ಪುರಕ್ಕೆ ಪ್ರಯಾಣಿಸಿಲ್ಲ ಎಂದು ವರದಿಯಾಗಿದೆ. ಆರ್‌ಸಿಬಿ ವಿರುದ್ಧದ ಪಂದ್ಯಕ್ಕಾಗಿ ಮುಂಬೈ ತಂಡವು ಬುಧವಾರ ಮಧ್ಯಾಹ್ನ ರಾಯ್‌ಪುರಕ್ಕೆ ತೆರಳಿದೆ. ನಾಯಕ ಹಾರ್ದಿಕ್ ಪಾಂಡ್ಯ ತಂಡದೊಂದಿಗೆ ಕಾಣಿಸಿಕೊಂಡಿಲ್ಲ ಮಾತ್ರವಲ್ಲ ಶೀಘ್ರದಲ್ಲೇ ತಂಡವನ್ನು ಸೇರುವ ಯಾವುದೇ ಸೂಚನೆ ಇನ್ನೂ ಇಲ್ಲ. ಗಾಯದ ಕಾರಣದಿಂದಾಗಿ ಐಪಿಎಲ್‌ನಿಂದ ಹೊರಗುಳಿದಿರುವ ಹಾರ್ದಿಕ್ ಪಾಂಡ್ಯ, ತಂಡದಿಂದ ಹೊರಗಿದ್ದು, ತಮ್ಮ ಗೆಳತಿ ಮಹಿಕಾ ಅವರೊಂದಿಗೆ ಸುತ್ತಾಟ ನಡೆಸುತ್ತಿದ್ದಾರೆ. ತಮ್ಮ ಗೆಳತಿಯೊಂದಿಗೆ ಅವರು ಫೆರಾರಿ ಕಾರಿನಲ್ಲಿ ಕಾಣಿಸಿಕೊಂಡಿರುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಪ್ಲೇಆಫ್ ಪಂದ್ಯಗಳು ಬೆಂಗಳೂರಿನಲ್ಲಿಲ್ಲ: ಅಭಿಮಾನಿಗಳಿಗೆ ನಿರಾಸೆ

ಬೆಂಗಳೂರು: ಈ ಸಲದ ಐಪಿಎಲ್ ಪ್ಲೇಆಫ್ ಪಂದ್ಯಗಳ ವೇಳಾಪಟ್ಟಿ ಪ್ರಕಟವಾಗಿದೆ. ಮೊದಲ ಕ್ವಾಲಿಫೈಯರ್ ಪಂದ್ಯ ಮೇ 26ರಂದು ಧರ್ಮಶಾಲಾದಲ್ಲಿ, ಎಲಿಮಿನೇಟರ್ ಹಾಗೂ ದ್ವಿತೀಯ ಕ್ವಾಲಿಫೈಯರ್ ಪಂದ್ಯಗಳು ಮೇ 27 ಮತ್ತು 29ರಂದು ನ್ಯೂ ಚಂಡೀಗಢದಲ್ಲಿ ನಿಗದಿಯಾಗಿವೆ. ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮೇ 31ರಂದು ಫೈನಲ್ ಪಂದ್ಯ ನಡೆಯಲಿದೆ.

ಫೈನಲ್ ಪಂದ್ಯವನ್ನು ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆಯೋಜಿಸಲು ನಿರ್ಧರಿಸಲಾಗಿತ್ತು, ಆದರೆ ಇದೀಗ ಫೈನಲ್ ಪಂದ್ಯ ಅಹಮದಾಬಾದ್‌ಗೆ ಸ್ಥಳಾಂತರ ಆಗಿದೆ. ಸ್ಥಳೀಯ ಸಂಸ್ಥೆ ಮತ್ತು ಅಧಿಕಾರಿಗಳ ಕೆಲ ಅವಶ್ಯಕತೆಗಳು ಬಿಸಿಸಿಐ ಮಾರ್ಗಸೂಚಿ ಹಾಗೂ ಶಿಷ್ಟಾಚಾರಗಳ ವ್ಯಾಪ್ತಿಯನ್ನು ಮೀರಿರುವ ಕಾರಣದಿಂದ ಬೆಂಗಳೂರಿನಿಂದ ಪಂದ್ಯವನ್ನು ಸ್ಥಳಾಂತರಿಸಲಾಗಿದೆ ಎಂದು ಬಿಸಿಸಿಐ ತನ್ನ ಮಾಧ್ಯಮ ಪ್ರಕಟಣೆಯಲ್ಲಿ ಈ ಕುರಿತಾಗಿ ತಿಳಿಸಿದೆ.

ಭದ್ರತಾ ವೈಫಲ್ಯ ಕಾರಣ: ಶಾಸಕರಿಗೆ ಐಪಿಎಲ್ ಪಂದ್ಯಗಳ ಟಿಕೆಟ್ ಹಂಚಿಕೆ ವಿಚಾರವಾಗಿ ರಾಜ್ಯ ಸರಕಾರ ಮತ್ತು ಕೆಎಸ್‌ಸಿಎ ನಡುವೆ ಒಮ್ಮತ ಮೂಡದಿರುವುದು ಫೈನಲ್ ಪಂದ್ಯದ ಸ್ಥಳಾಂತರಕ್ಕೆ ಪ್ರಮುಖ ಕಾರಣ ಎನ್ನಲಾಗುತ್ತಿದೆ. ಇದಲ್ಲದೆ ಇತ್ತೀಚೆಗೆ ನಡೆದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದ ವೇಳೆ ಭದ್ರತಾ ಲೋಪವುಂಟಾಗಿದ್ದು, ಅದು ಚರ್ಚೆಗೆ ಗ್ರಾಸವಾಗಿತ್ತು. ಮೈದಾನದ ಸಿಸಿಟಿವಿ ನಿರ್ವಹಣೆಯ ಹೊಣೆ ಹೊತ್ತಿದ್ದ ಕಂಪನಿಯ ಸಿಬ್ಬಂದಿಗಳೇ ಸುಮಾರು 240 ಸಿಸಿ ಕ್ಯಾಮರಾಗಳ ಸಂಪರ್ಕ ಕಡಿತಗೊಳಿಸಿದ್ದರ ಬಗ್ಗೆ ವರದಿಯಾಗಿತ್ತು. ಈ ಬಾರಿ ಐಪಿಎಲ್ ಫೈನಲ್ ಪಂದ್ಯದ ಆತಿಥ್ಯ ಚಿನ್ನಸ್ವಾಮಿ ಕ್ರೀಡಾಂಗ ಣದ ಕೈತಪ್ಪಿರುವುದು ಬೆಂಗಳೂರಿನ ಕ್ರಿಕೆಟ್ ಅಭಿಮಾನಿಗಳ ನಿರಾಸೆಗೆ ಕಾರಣ ವಾಗಿದೆ.

ಕೆಎಸ್‌ಸಿಎ ಪ್ರತಿಕ್ರಿಯೆ: ಲೀಗ್ ಹಂತದ ಪಂದ್ಯಗಳು ಬೆಂಗಳೂರಿನಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆದಿದ್ದವು. ಸುಗಮ ನಿರ್ವಹಣೆ, ಜನಸಂದಣಿ ನಿಯಂತ್ರಣ ಮತ್ತು ಪ್ರೇಕ್ಷಕರಿಗೆ ನೀಡಲಾದ ಸೌಲಭ್ಯಗಳ ಬಗ್ಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿತ್ತು. ಬಿಸಿಸಿಐ ಇತರೆ ಕ್ರೀಡಾಂಗಣಗಳಿಗೆ ಪಂದ್ಯಗಳನ್ನು ಹಂಚಿಕೆ ಮಾಡುವ ನಿರ್ಧಾರವನ್ನು ತೆಗೆದುಕೊಂಡಿದೆ. ಇದಕ್ಕೆ ಸಂಬಂಧಿಸಿದ ನಿಖರವಾದ ಕಾರಣಗಳನ್ನು ಅಧಿಕೃತವಾಗಿ ತಿಳಿಸಿಲ್ಲವಾದರೂ, ಬಿಸಿಸಿಐನ ನಿರ್ಧಾರ ಮತ್ತು ವಿವೇಚನಾ ಅಧಿಕಾರವನ್ನು ನಾವು ಸಂಪೂರ್ಣವಾಗಿ ಗೌರವಿಸುತ್ತೇವೆ ಎಂದು ಕೆಎಸ್‌ಸಿಎ ತನ್ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದಲ್ಲಿ ಆಡಲು ಪಾಕಿಸ್ತಾನಕ್ಕೆ ಅವಕಾಶ

ದೆಹಲಿ: ಪಹಲ್ಗಾಮ್‌ನಲ್ಲಿ ಪಾಕಿಸ್ತಾನ ಬೆಂಬಲಿತ ಭಯೋತ್ಪಾದಕರು ಅಮಾಯಕ ಭಾರತೀಯರ ಹತ್ಯೆ ಮಾಡಿದ ಬಳಿಕ ಪಾಕಿಸ್ತಾನದೊಂದಿಗಿನ ಎಲ್ಲಾ ಸಂಬಂಧಗಳಿಗೂ ಭಾರತ ಅಂತ್ಯ ಹಾಡಿತ್ತು, ಇದರಿಂದಾಗಿ ಎರಡೂ ದೇಶಗಳ ಕ್ರಿಕೆಟ್ ತಂಡಗಳ ನಡುವಿನ ಪಂದ್ಯಗಳೂ ಸ್ಥಗಿತವಾಗಿದ್ದವು. ಈ ಮಧ್ಯೆ ಭಾರತ ಸರಕಾರವು ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದ್ದು, ಪಾಕಿಸ್ತಾನಿ ಆಟಗಾರರು ಭಾರತಕ್ಕೆ ಪ್ರಯಾಣಿಸಲು ಅವಕಾಶ ನೀಡಿದೆ. ಭಾರತ ಸರಕಾರದ ಪ್ರಕಾರ, ಪಾಕಿಸ್ತಾನಿ ಆಟಗಾರರು ಬಹು ದೇಶಗಳನ್ನು ಒಳಗೊಂಡ ಅಂತಾರಾಷ್ಟ್ರೀಯ ಐಸಿಸಿ ಟೂರ್ನಿಗಳಲ್ಲಿ ಆಡಲು ಭಾರತಕ್ಕೆ ಪ್ರಯಾಣಿಸಲು ಅನುಮತಿ ನೀಡಿದೆ.

ವಿಟಾಕೀಸ್

ಮದನಿಕಳಾಗಿ ಮಿಂಚಿದ ರಾಗಿಣಿ

ನಟಿ ರಾಗಿಣಿ ದ್ವಿವೇದಿ ಮದನಿಕ ಚಿತ್ರದಲ್ಲಿ ನಟಿಸಿದ್ದು, ಈ ಚಿತ್ರ ಶೀರ್ಷಿಕೆಯಲ್ಲಿಯೇ ಗಮನ ಸೆಳೆಯುತ್ತಿದೆ. ಬಿ.ಎಸ್.ಸಂಜಯ್ ನಿರ್ದೇಶನದ ಚಿತ್ರ ಇದಾಗಿದ್ದು, ಸದ್ಯ ಈ ಸಿನಿಮಾದ ಹಾಡು ಬಿಡುಗಡೆಯಾಗಿದೆ. ಹಳೆ ಗನ್ನಡದ ಸಾಹಿತ್ಯ ಸಿನಿಪ್ರಿಯರ ಮನ ಗೆದ್ದಿದೆ. ಮದನಿಕ ನಾನೂರು ವರ್ಷಗಳ ಹಿಂದಿನ ಕಥೆ. ರಾಗಿಣಿ, ಮದನಿಕ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಸಿನಿಮಾದ ಕಥೆ ಕಾಲ್ಪನಿಕ ವಾದರೂ ಸ್ಟೋರಿ ಬರೆಯುವಾಗ ಇದೇ ಕಥೆಗೆ ಹೋಲುವ ಒಂದಷ್ಟು ಘಟನೆಗಳು ನಡೆದವು. ಅದು ಚಿತ್ರದ ಕಥೆಗೆ ಮತ್ತಷ್ಟು ಶಕ್ತಿ ತುಂಬಿತು. ಸಿನಿಮಾದಲ್ಲಿ ಹತ್ತು ಹಾಡು ಗಳಿವೆ ಎಂದು ನಿರ್ದೇಶಕ ಸಂಜಯ್ ಹೇಳಿದರು. ಗ್ಲಿಂಪ್ಸ್‌ನಲ್ಲಿ ಮದನಿಕ ನೋಡಿದ್ದೀವಿ, ಆದರೆ ಅದರ ಹಿಂದೆ ಅದ್ಭುತ ಕಥೆಯಿದೆ. ಇದು ಎರಡೂವರೆ ವರ್ಷದ ಜರ್ನಿ. ಎಲ್ಲರಿಗೂ ಗೊತ್ತಿರುವ ಹಾಗೇ, ಟೆಕ್ನಾಲಜಿ, ಮೇಕಿಂಗ್, ಮ್ಯೂಸಿಕ್ ಎಲ್ಲವೂ ಬದಲಾಗಿದೆ. ನಾವೂ ಅಂದುಕೊಂಡಿ ರಲಿಲ್ಲ ಇಷ್ಟೊಂದು ಬದಲಾವಣೆ ಆಗುತ್ತೆ ಅಂತ. ಭಾವನೆಗಳು ಮಾತ್ರ ಬದಲಾಗಿಲ್ಲ. ಅದ್ಭುತ ಸಾಹಸ ಕಥನವೂ ಚಿತ್ರದಲ್ಲಿದೆ ಎಂದು ರಾಗಿಣಿ ಹೇಳಿದರು. ಮದನಿಕ ಹೆಸರೇ ಒಂದು ಆಕರ್ಷಕ, ಸುಂದರ ಹುಡುಗಿ. ಅದಕ್ಕೆ ರಾಗಿಣಿ ಅವರು ಜೀವ ತುಂಬಿದ್ದಾರೆ. ಸಂಜಯ್ ಮತ್ತು ನನ್ನದು ಇಪ್ಪತ್ತು ವರ್ಷಗಳ ಸ್ನೇಹ. ಈ ಸಿನಿಮಾಗೆ ಗೆಲುವು ಸಿಗಲಿ ಎಂದು ವಿಕ್ಟರಿ ವಾಸು ಹೇಳಿದರು. ಧರ್ಮ ಕೀರ್ತಿರಾಜ್, ಹರೀಶ್ ರಾಜ್, ಅಶ್ವಿನ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ಸುಜಾತ ಲಕ್ಷ್ಮೀ ಹಾಗೂ ಕುಮಾರಸ್ವಾಮಿ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಂಗೀತ ಕಲಾಂ ಕೇರಳ, ಛಾಯಾಗ್ರಹಣ ಆರ್ ಗಿರಿ, ಸಾಹಸ ಥ್ರಿಲ್ಲರ್ ಮಂಜು, ಕೌರವ ವೆಂಕಟೇಶ್ ಅವರದಾಗಿದೆ.

ತೆರೆಗೆ ಸಿದ್ಧವಾದ ಶಿಖಂಡಿ

ಗುರುಮೂರ್ತಿ ನಿರ್ದೇಶನದ ಶಿಖಂಡಿ ಚಿತ್ರ ಇದೇ ಮೇ 15 ರಂದು ಬಿಡುಗಡೆಯಾಗುತ್ತಿದೆ. ಅದಕ್ಕು ಮೊದಲು ಚಿತ್ರದ ಹಾಡು ಹಾಗೂ ಟ್ರೇಲರ್ ಬಿಡುಗಡೆಯಾಗಿದೆ. ಇದು ಮಹಾಭಾರತದ ಶಿಖಂಡಿಯನ್ನು ಹೋಲು ಕಥಯಾಗಿದ್ದು,ಅದನ್ನು ಇಂದಿನ ಕಾಲ ಘಟ್ಟಕ್ಕೆ ಹೊಂದುವಂತೆ ಕಟ್ಟಿಕೊಡಲಾಗಿದೆ. ಯುವರಾಜ್ ನಾಯಕನಾಗಿ ನಟಿಸಿದ್ದು, ಖ್ಯಾತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಬಿಗ್ ಬಾಸ್ ಖ್ಯಾತಿಯ ನೀತು ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ.

ಮಹಾಭಾರತದಲ್ಲಿ ಬರುವ ಶಿಖಂಡಿ ಪಾತ್ರವನ್ನು ಆಧರಿಸಿರುವ ಕಥಾಹಂದರ ಚಿತ್ರದಲ್ಲಿದೆ. ನಿರ್ಮಾಪಕ ಪೋಲಾ ಪ್ರವೀಣ್ ಕುಮಾರ್ ಯಾವುದೇ ಕೊರತೆ ಬಾರದ ಹಾಗೆ ಚಿತ್ರ ನಿರ್ಮಾಣ ಮಾಡಿದ್ದಾರೆ. ನಮ್ಮ ಸಿನಿಮಾ ಮೊದಲು ಕನ್ನಡದಲ್ಲಿ ಬಿಡುಗಡೆಯಾಗಲಿದೆ. ಬಳಿಕ ಉಳಿದ ಭಾಷೆಗಳಲ್ಲಿ ಪ್ಯಾನ್ ಇಂಡಿಯಾ ಚಿತ್ರವಾಗಿ ತೆರೆಗೆ ಬರಲಿದೆ. ಮಾಲಾಶ್ರೀ ಅಭಿನಯದ ಮಾರಕಾಸ್ತ್ರ ನಂತರ ನಾನು ನಿರ್ದೇಶಿಸಿರುವ ಎರಡನೇ ಚಿತ್ರವಿದು ಎಂದು ನಿರ್ದೇಶಕ ಗುರುಮೂರ್ತಿ ಹೇಳಿದರು. ಸಿನಿಮಾ ನಿರ್ಮಾಣ ಮಾಡಬೇಕು ಎಂಬ ಕನಸು ಈ ಚಿತ್ರದ ಮೂಲಕ ನನಸಾಗಿದೆ. ನಿರ್ದೇಶಕರು ಈ ಕಥೆ ಹೇಳುವ ಮೊದಲು, ಯಲ್ಲಮ್ಮ ತಾಯಿಯ ಹಾಡನ್ನು ಕೇಳಿಸಿದರು. ಹಾಡು ಕೇಳಿದ ತಕ್ಷಣ ಸಿನಿಮಾ ನಿರ್ಮಾಣಕ್ಕೆ ಒಪ್ಪಿಕೊಂಡೆ. ನನ್ನ ಕುಟುಂಬ ಹಾಗೂ ಚಿತ್ರತಂಡದ ಸಹಕಾರದಿಂದ ಚಿತ್ರ ಚೆನ್ನಾಗಿ ಮೂಡಿಬಂದಿದೆ. ನಾನು ಕೂಡ ಈ ಚಿತ್ರದಲ್ಲಿ ನಟಿಸಿದ್ದೇನೆ. ಇದೇ ಮೇ 15 ರಂದು ಚಿತ್ರ ತೆರೆಗೆ ಬರುತ್ತಿದೆ ಎಂದು ನಿರ್ಮಾಪಕ ಪೋಲಾ ಪ್ರವೀಣ್ ಕುಮಾರ್ ತಿಳಿಸಿದರು. ಮೂಲತಃ ಮೈಸೂರಿನವನಾದ ನನಗೆ ನಾಯಕನಾಗಬೇಕೆಂಬ ಹಂಬಲವಿತ್ತು. ಆ ಆಸೆ ಈ ಚಿತ್ರದ ಮೂಲಕ ಈಡೇರಿದೆ. ಸೂರ್ಯ ನನ್ನ ಪಾತ್ರದ ಹೆಸರು ಎಂದು ನಾಯಕ ನಟ ಯುವರಾಜ್ ಗೌಡ ಹೇಳಿದರು.

ಶಿಖಂಡಿ ನನಗೂ ಸಹ ಮೊದಲ ಚಿತ್ರ ಎಂದು ನಾಯಕಿ ಖ್ಯಾತಿ ತಿಳಿಸಿದರು. ಉತ್ತಮ ಪಾತ್ರದಲ್ಲಿ ನಟಿಸಿರುವುದಕ್ಕೆ ಖುಷಿಯಾಗಿದೆ ಎಂದು ನಟಿ ನಿಖಿತಾಸ್ವಾಮಿ ಹೇಳಿದರು.

ಸಿಟಿಲೈಟ್ಸ್‌ನ ಮಧುರಗಾನ

ಲ್ಯಾಂಡ್ ಲಾರ್ಡ್ ಯಶಸ್ಸಿನ ಖುಷಿಯಲ್ಲಿರುವ ದುನಿಯಾ ವಿಜಯ್ ಮತ್ತೆ ನಿರ್ದೇಶನದಲ್ಲಿ ಬ್ಯುಸಿಯಾಗಿದ್ದಾರೆ. ವಿಜಯ್, ಸಿಟಿಲೈಟ್ಸ್ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಸಿಟಿಲೈಟ್ಸ್ ಸಿನಿಮಾದ ಮೊದಲ ಹಾಡು ಬಿಡುಗಡೆಯಾಗಿದೆ.. ಬಾವ ಬಾವ ಹಾಡಿನ ಮೂಲಕ ದುನಿಯಾ ವಿಜಯ್ ಮತ್ತೆ ಟ್ರೆಂಡಿ ಸಾಂಗ್ ಅನ್ನು ಪ್ರೇಕ್ಷಕರ ಮುಂದೆ ತಂದಿದ್ದಾರೆ. ಅಂಕಿತ್ ಕುಮಾರ್ ಸಾಹಿತ್ಯದ ಈ ಹಾಡಿಗೆ ಚರಣ್ ರಾಜ್ ಹಾಡಿಗೆ ಸಂಗೀತ ಸಂಯೋಜಿಸಿದ್ದಾರೆ.

ಸಿಟಿ ಲೈಟ್ಸ್ ಚಿತ್ರಕ್ಕೆ ಜವಾಬ್ ದಾರಿದೀಪಗಳು ಎಂಬ ಅಡಿಬರಹವಿದೆ. ಹಳ್ಳಿಯಿಂದ ಬೆಂಗಳೂರಿಗೆ ಬಂದ ಇಬ್ಬರು ಏನೆಲ್ಲ ಕಷ್ಟಗಳನ್ನು ಎದಿರಿಸುತ್ತಾರೆ ಎನ್ನುವ ಕಥೆ ಚಿತ್ರದಲ್ಲಿದೆ. ನನ್ನ ಹಳೆಯ ಹಾಡುಗಳನ್ನು ನೋಡಿ ನಮ್ಮ ತಂಡವನ್ನ ಕರೆಸಿ ಅವಕಾಶ ನೀಡಿದರು. ಇದು ನಿಜವಾಗಿಯೂ ಖುಷಿ ಕೊಟ್ಟಿದೆ ಎಂದು ಅಂಕಿತ್ ಕುಮಾರ್ ಹೇಳಿದರು.

ಸಿಟಿಲೈಟ್ಸ್ ವಿಭಿನ್ನವಾದ ಕಥೆಯ ಚಿತ್ರ, ಈ ಸಿನಿಮಾದಲ್ಲಿ ನಟಿಸಿರುವುದು ಖುಷಿ ಕೊಟ್ಟಿದೆ. ಚರಣ್ ರಾಜ್ ಅವರು ಒಳ್ಳೆಯ ಹಾಡು ಕೊಟ್ಟಿದ್ದಾರೆ. ಎಲ್ಲಾ ಹಾಡುಗಳು ಅದ್ಭುತವಾಗಿ ಮೂಡಿಬಂದಿವೆ ಎಂದು ವಿಜಯ್ ರಾಜ್ ಕುಮಾರ್ ಹೇಳಿದರು. ವಿನಯ್ ರಾಜ್ ಕುಮಾರ್ ಜತೆಗೆ ಅಭಿನಯಿಸಿದ್ದು, ಖುಷಿ ಕೊಟ್ಟಿದೆ. ಅವರಿಂದ ತುಂಬಾ ವಿಚಾರಗಳನ್ನು ಕಲಿತಿದ್ದೇನೆ . ಒಳ್ಳೆಯ ಸಿನಿಮಾದಲ್ಲಿ ನಟಿಸಿದ ಖುಷಿ ಇದೆ ಎಂದು ಮೋನಿಷಾ ತಿಳಿಸಿದರು.

ಇದು ಕಷ್ಟಗಳನ್ನ ಹೇಳಿಕೊಳ್ಳಲು ಬಳಸುವ ಹಾಡಾಗಿದೆ. ಸಿಟಿಲೈಟ್ಸ್ ನಲ್ಲಿ ನೋವು ಎನ್ನಿಸುವ ವಿಚಾರವನ್ನ ಹೇಳಲು ಹೊರಟಿದ್ದೇನೆ. ಈ ಕಥೆಗೆ ವಿನಯ್ ಅವರೇ ಬೇಕಿತ್ತು. ವಿನಯ್ ಚಿತ್ರದ ಕಥೆಗೆ ಜೀವತುಂಬಿದ್ದಾರೆ ಎಂದು ದುನಿಯಾ ವಿಜಯ್ ಸಂತಸದಿಂದ ನುಡಿದರು. ಶಿವಸೇನಾ ಛಾಯಾಚಿತ್ರಗ್ರಹಣ, ದೀಪು ಎಸ್.ಕುಮಾರ್ ಸಂಕಲನ, ಮಾಸ್ತಿ ಅವರ ಸಂಭಾಷಣೆ ಮತ್ತು ಚರಣ್ ರಾಜ್ ಸಂಗೀತ ಈ ಚಿತ್ರಕ್ಕಿದೆ.

ಅಯೋಗ್ಯ 2 ಹಾಡಿಗೆ ಬಲು ಬೇಡಿಕೆ

ಈ ಹಿಂದೆ ತೆರೆಗೆ ಬಂದ ಅಯೋಗ್ಯ ಭರ್ಜರಿ ಯಶಸ್ಸು ಕಂಡಿತ್ತು. ಈಗ ಅದೇ ಚಿತ್ರದ ಸೀಕ್ವೆಲ್ ಆಧರಿಸಿ ಅಯೋಗ್ಯ 2 ಮೂಡಿಬರುತ್ತಿದೆ. ಈ ಚಿತ್ರದಲ್ಲಿಯೂ ಸತೀಶ್ ನೀನಾಸಂ, ರಚಿತಾ ರಾಮ್ ಚಿತ್ರದಲ್ಲಿ ನಟಿಸಿದ್ದಾರೆ. ಮಹೇಶ್ ಕುಮಾರ್ ನಿರ್ದೇಶನದಲ್ಲಿಯೇ ಈ ಸಿನಿಮಾ ಕೂಡ ಸಿದ್ಧವಾಗಿದೆ. ಅಯೋಗ್ಯ 2 ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು, ಆರಂಭದಿಂದಲೂ ಸಖತ್ ಸದ್ದು ಮಾಡುತ್ತಿದೆ.ಈ ಸಿನಿಮಾದ ಹಾಡುಗಳಿಗೆ ಬಲು ಬೇಡಿಕೆ ಇದೆ. ಅಯೋಗ್ಯ ಚಿತ್ರದ ಏನಮ್ಮಿ ಏನಮ್ಮಿ...ಹಾಡು ಕನ್ನಡದ ಮೊದಲ ನೂರು ಮಿಲಿಯನ್ ಗಡಿ ದಾಟಿದ ಹಾಡು ಎಂಬ ದಾಖಲೆ ಹೊಂದಿತ್ತು. ಇದೀಗ ಅದೇ ತಂಡದಿಂದ ಮತ್ತೊಂದು ಮ್ಯೂಸಿಕಲ್ ಮ್ಯಾಜಿಕ್ ಹೊರಬರಲು ಸಿದ್ಧವಾಗಿದೆ. ಅಯೋಗ್ಯ ಚಿತ್ರದ ಆಡಿಯೋ ಹಕ್ಕು ಒಂಬತ್ತು ಲಕ್ಷಕ್ಕೆ ಮಾರಾಟವಗಿತ್ತು. ಇದೀಗ ಅಯೋಗ್ಯ 2 ಆಡಿಯೋ ಹಕ್ಕು ಬರೋಬ್ಬರಿ ಎರಡು ಕೋಟಿ ನೀಡಿ ಆನಂದ್ ಆಡಿಯೋ ಸಂಸ್ಥೆ ಖರೀದಿಸಿದೆ. ಅಯೋಗ್ಯ ಚಿತ್ರದ ಎಲ್ಲಾ ಹಾಡುಗಳೂ ದೊಡ್ಡ ಮಟ್ಟದಲ್ಲಿ ಹಿಟ್ ಆಗಿದ್ದವು. ಅದರಲ್ಲೂ ಏನಮ್ಮಿ ಏನಮ್ಮಿ ಹಾಡು ನೂರು ಮಿಲಿಯನ್ ವೀಕ್ಷಣೆ ಕಂಡಿತ್ತು. ಅಯೋಗ್ಯ 2 ಹಾಡುಗಳು ಕೂಡ ಒಂದಕ್ಕಿಂತ ಒಂದು ಅದ್ಭುತವಾಗಿ ಮೂಡಿಬಂದಿವೆ. ಚೇತನ್ ಕುಮಾರ್ ಸಾಹಿತ್ಯದ ಹಾಡುಗಳಿಗೆ ಅರ್ಜುನ್ ಜನ್ಯ ಅದ್ಭುತ ಸಂಗೀತ ಸಂಯೋಜಿಸಿದ್ದಾರೆ. ಎಂದು ನಿರ್ದೇಶಕ ಮಹೇಶ್ ಕುಮಾರ್ ತಿಳಿಸಿದರು. ಅಯೋಗ್ಯ ಮೊದಲ ಭಾಗ ಎಲ್ಲಿಗೆ ಮುಗಿದಿತ್ತೋ, ಅದರ ಮರು ದಿನದಿಂದ ಚಿತ್ರ ಶುರುವಾಗುತ್ತದೆ. ಮೂರು ಹೊಸ ಪಾತ್ರಗಳು ಚಿತ್ರದಲ್ಲಿವೆ. ಗ್ರಾಮ ಪಂಚಾಯಿತಿ ಸದಸ್ಯನಾಗುವ ಸಿದ್ದೇಗೌಡ ಮುಂದೆ ಏನೆಲ್ಲಾ ಸವಾಲುಗಳನ್ನು ಎದಿರಿಸುತ್ತಾನೆ ಎನ್ನುವುದು ಚಿತ್ರದ ಕಥೆಯಾಗಿದೆ ಎಂದು ನಿರ್ದೇಶಕ ಮಹೇಶ್ ಕುಮಾರ್ ಹೇಳಿದರು. ಅಯೋಗ್ಯ 2 ಚಿತ್ರಕ್ಕೆ ಎಂ.ಮುನೇಗೌಡ ಬಂಡವಾಳ ಹೂಡಿದ್ದಾರೆ. ಸುಂದರ್ ರಾಜ್, ಶಿವರಾಜ್ ಕೆ.ಆರ್.ಪೇಟೆ, ಅರುಣಾ ಬಾಲರಾಜ್, ಮಂಜು ಪಾವಗಡ ಮುಂತಾದವರು ತಾರಾಗಣದಲ್ಲಿದ್ದಾರೆ. ಮಾಸ್ತಿ ಉಪ್ಪಾರಳ್ಳಿ ಸಂಭಾಷಣೆ, ವಿಶ್ವಜಿತ್ ರಾವ್ ಛಾಯಾಗ್ರಹಣ ಈ ಚಿತ್ರಕ್ಕಿದೆ.